ಮೈಸೂರು ವಿಶ್ವವಿದ್ಯಾನಿಲಯ ಕನ್ನಡ ಗ್ರಂಥಮಾಲೆ—೩೮

ಪ್ರಧಾನ ಸಂಪಾದಕ

ಡಾ|| ಕೆ. ವಿ. ಪುಟ್ಟಪ್ಪ, ಎಂ. ಎ., ಡಿ. ಲಿಟ್.,

ಕಮ್ಯೂನಿಸಂ

ಲೇಖಕರು :


ಶ್ರೀ. ಎಲ್. ಶ್ರೀಕಂಠಯ್ಯ, ಎಂ.ಎ., ಎಂ.ಎಸ್.ಸಿ., (ಲಂಡನ್)

ಬಾರ್-ಅಟ್-ಲಾ

ಮೈಸೂರು

ಮೈಸೂರು ವಿಶ್ವವಿದ್ಯಾನಿಲಯ.

೧೯೫೭



ಕಾರ್ಲ್ ಮಾರ್ಕ್ಸ್

ಮೊದಲನೆಯ ಮುದ್ರಣ ೧೯೫೭

ಬೆಲೆ :

ಸಾದಾ ಪ್ರತಿ : ರೂ. ೨-೦-೦ ಉತ್ತಮ ಪ್ರತಿ : ೩-೦-೦

ಮುದ್ರಕರು :
ಹಿಂದೂಸ್ಥಾನ್ ಪ್ರೆಸ್, ಮೈಸೂರು.

ಮುನ್ನುಡಿ

ವಿದ್ಯಾಭ್ಯಾಸದ ಸರ್ವಶ್ರೇಣಿಗಳಲ್ಲಿಯೂ ದೇಶಭಾಷೆ ಶಿಕ್ಷಣಮಾಧ್ಯ
ಮವಾಗಬೇಕಾದುದು ಅತ್ಯವಶ್ಯವಾಗಿದೆ. ಇದು ಒಬ್ಬಿಬ್ಬರು ಭಾಷಾಭಿ
ಮಾನಿಗಳು ದುರುದ್ದೇಶದಿಂದಾಗಲಿ ಪಕ್ಷಪಾತ ಮನೋಭಾವದಿಂದಾಗಲಿ
ಹೇಳುವ ಮಾತಲ್ಲ. ರಾಷ್ಟ್ರದ ಸರ್ವತೋಮುಖವಾದ ಪ್ರಗತಿ ಮತ್ತು
ವಿದ್ಯಾರ್ಥಿಗಳ ಸರ್ವಾಂಗೀಣವಾದ ವಿಕಾಸ—ಇವುಗಳ ಹಿನ್ನೆಲೆಯಲ್ಲಿ
ನಡೆಸಿದ ಕೂಲಂಕಷವಾದ ಚರ್ಚೆ ಮತ್ತು ಸರ್ವಂಕಷವಾದ ವಿಚಾರ
ಮಂಥನಗಳ ಫಲವಾಗಿ ಸಿದ್ಧಿಸಿದ ತತ್ತ್ವವಿದು. ಡಾ|| ಅಮರನಾಥಝಾ
ರಂಥ ಶ್ರೇಷ್ಠ ಶಿಕ್ಷಣತಜ್ಞರಿಂದ ಹಿಡಿದು ಮಹಾತ್ಮಗಾಂಧಿಜಿಯಂಥ
ರಾಷ್ಟ್ರನಾಯಕರವರೆಗೆ ಎಲ್ಲರೂ ದೇಶಭಾಷಾಮಾಧ್ಯಮದ ಸಾರ್ಥಕತೆ
ಯನ್ನು ಒತ್ತಿ ಹೇಳಿದ್ದಾರೆ. ಹಿಂದಿನ ಆಂಗ್ಲ ಸರ್ಕಾರ ನೇಮಿಸಿದ್ದ
ಸ್ಯಾಡ್ಲರ್ ವಿಚಾರಣಾಸಮಿತಿ ಮತ್ತು ಹಾರ್ಟೋಗ್ ಸಮಿತಿಗಳೂ ಸರ್
ಚಾರ್ಲ್ಸ್‌ವುಡ್, ಸರ್ ಸಾರ್ಜಂಟ್ ಮೊದಲಾದ ವಿದೇಶೀಯ ಶಿಕ್ಷಣ
ತಜ್ಞರೂ ದೇಶಭಾಷಾಮಾಧ್ಯಮದಿಂದಲ್ಲದೆ ಭಾರತೀಯರ ಶಿಕ್ಷಣ ಸಫಲ
ವಾಗದೆಂದೂ ಸಮರ್ಪಕವಾಗದೆಂದೂ ಏಕಕಂಠದಿಂದ ಸಾರಿದ್ದಾರೆ.

ಈ ಶಿಕ್ಷಣ ಸೂತ್ರವನ್ನು ದೃಷ್ಟಿಯಲ್ಲಿಟ್ಟುಕೊಂಡೇ ಭರತಖಂಡದ
ಅನೇಕ ವಿಶ್ವವಿದ್ಯಾನಿಲಯಗಳಲ್ಲಿ ದೇಶಭಾಷಾಮಾಧ್ಯಮ ಯಶಸ್ವಿಯಾಗಿ
ಕಾರ್ಯಗತವಾಗುತ್ತಿದೆ. ನಾಗಪುರ, ಅಲಹಾಬಾದ್, ಕಾಶಿ ಮೊದಲಾದ
ವಿಶ್ವವಿದ್ಯಾನಿಲಯಗಳಿಂದ ಅಧಿಕೃತವಾಗಿ ದೊರೆತ ವರದಿಗಳಿಂದ ವಿದ್ಯಾರ್ಥಿ
ಗಳು ಆದರಪೂರ್ವಕವಾಗಿ ಅನಿರ್ಬಂಧವಾಗಿ ದೇಶಭಾಷಾ ಮಾಧ್ಯಮವನ್ನು
ಆರಿಸಿಕೊಳ್ಳುತ್ತಿರುವುದೂ, ಅದರಿಂದ ಪರೀಕ್ಷೆಗಳಲ್ಲಿ ಫಲಿತಾಂಶ ತುಂಬ
ಆಶಾದಾಯಕವಾಗಿ ಗೋಚರಿಸುತ್ತಿರುವುದೂ ಸುಸ್ಪಷ್ಟವಾಗುತ್ತದೆ.

ದೇಶಭಾಷಾಮಾಧ್ಯಮ ಬೇಡವೆನ್ನುವ ಸಂಪ್ರದಾಯಶರಣರ ಸಂಖ್ಯೆ
ಈಗೀಗ ಬಹುಮಟ್ಟಿಗೆ ಇಳಿಮುಖವಾಗುತ್ತಿದ್ದರೂ ಅಲ್ಲೊಬ್ಬರು ಇಲ್ಲೊ
ಬ್ಬರು ಇನ್ನೂ ಇದ್ದಾರೆ. ಅವರು ತಮ್ಮ ನಿಲುವನ್ನು ಸಾಧಿಸಲು ಕೊಡುವ
ಮುಖ್ಯಕಾರಣಗಳಿವು.

1. ದೇಶಭಾಷೆಗಳಲ್ಲಿ ಪಾರಿಭಾಷಿಕ ಅಥವಾ ವೈಜ್ಞಾನಿಕ ಪದಗಳ ದಾರಿದ್ರ್ಯ.
2. ಗ್ರಂಥಗಳ ಅಭಾವ.
3. ವಿವಿಧ ಪ್ರಾಂತಗಳ ವಿದ್ವಾಂಸರ ಸಂಪರ್ಕಕ್ಕೆ ಮತ್ತು ಸರ್ಕಾರಿ ನೌಕರರ ಪರಸ್ಪರ ವಿನಿಮಯಕ್ಕೆ ಅಡಚಣೆ.

ಈ ಕಾರಣಗಳು ಸಂಪೂರ್ಣ ನಿರಾಧಾರವೆಂಬುದು ಕೆಳಗಣ ವಿವರಣೆಯಿಂದ ವ್ಯಕ್ತವಾಗುತ್ತದೆ.

1. ವೈಜ್ಞಾನಿಕ ಅಥವಾ ಪಾರಿಭಾಷಿಕ ವಿಷಯಗಳಿಗೆ ಹೊಸ ಹೊಸ ಶಬ್ದಗಳನ್ನು ಸೃಷ್ಟಿಸುವ ಸಂಕಟಕ್ಕೆ ಗುರಿಯಾಗಬೇಕಾಗಿಲ್ಲ. ಅಂತರ ರಾಷ್ಟ್ರೀಯ ಶಬ್ದಗಳನ್ನೇ ಇದ್ದಕ್ಕಿದ್ದ ಹಾಗೆಯೆ ಬಳಸಿಕೊಳ್ಳಬಹುದು. ಆವಶ್ಯಕತೆ ಕಂಡುಬಂದರೆ ಮಾತ್ರ ವಿವರಣಾತ್ಮಕವಾಗಿ ದೇಶಭಾಷೆಯ ಶಬ್ದಗಳನ್ನು ಉಪಯೋಗಿಸಬಹುದು. ಪಾರಿಭಾಷಿಕ ಶಬ್ದಗಳು ವಾಸ್ತವವಾಗಿ ಅಂಕಿತನಾಮಗಳು ತಾನೆ ! ಕೇಂದ್ರಸರ್ಕಾರದ ವಿದ್ಯಾಖಾತೆ ತಯಾರಿಸಿರುವ ಪಾರಿಭಾಷಿಕ ಪದಗಳ ಕೋಶ ಈ ತತ್ತ್ವವನ್ನೆ ಅವಲಂಬಿಸಿದೆ. ಮೈಸೂರು ವಿಶ್ವವಿದ್ಯಾನಿಲಯವೂ ಈ ಮಾರ್ಗವನ್ನೆ ಸಂಪೂರ್ಣವಾಗಿ ಅಂಗೀಕರಿಸಿದೆ.

2. ಈಗಾಗಲೆ ಎಲ್ಲ ಭಾಷೆಗಳಲ್ಲಿಯೂ ವೈಜ್ಞಾನಿಕ ಗ್ರಂಥಗಳು ಹೊರಬೀಳುತ್ತಿವೆ ಆವಶ್ಯಕತೆ ಹೆಚ್ಚಿದಂತೆಲ್ಲ ಅವುಗಳ ಸಂಖ್ಯೆಯೂ ಬೆಳೆಯುತ್ತದೆ. ಪೇಟೆಯಲ್ಲಿ ಗಿರಾಕಿಯಿದೆಯೆಂದು ತಿಳಿದರೆ ಸಾಕು, ಗ್ರಂಥಗಳು ಲೆಕ್ಕವಿಲ್ಲದೆ ಹೊರಬರುತ್ತವೆ.

3. ಅಂತರರಾಷ್ಟ್ರೀಯ ಪಾರಿಭಾಷಿಕ ಶಬ್ದಗಳನ್ನು ಬಿಡುವುದಿಲ್ಲವಾದುದರಿಂದಲೂ ಹಿಂದಿ ಅಥವಾ ಇಂಗ್ಲಿಷ್ ಭಾಷೆಯನ್ನು ಕಡ್ಡಾಯವಾಗಿ ಎಲ್ಲ ವಿದ್ಯಾರ್ಥಿಗಳೂ ಒಂದಲ್ಲ ಒಂದು ರೀತಿಯಲ್ಲಿ ಕಲಿಯಬೇಕಾಗಿರುವುದರಿಂದಲೂ ವಿದ್ವಾಂಸರ ಸಂಪರ್ಕಕ್ಕಾಗಲಿ ಸರ್ಕಾರಿ ನೌಕರರ ವಿನಿಮಯಕ್ಕಾಗಲಿ ಅಡಚಣೆ ಆಗುವುದಿಲ್ಲ. ಈ ದೊಡ್ಡ ರಾಷ್ಟ್ರದಲ್ಲಿ ಸರ್ಕಾರಿ ನೌಕರರ ಸಂಖ್ಯೆ ಅತ್ಯಲ್ಪಭಾಗವೆನ್ನುವುದನ್ನೂ ಈ ಅತ್ಯಲ್ಪಸಂಖ್ಯೆಯು

ಸರ್ಕಾರಿ ನೌಕರಿ ಜನರ ಹಿತಕ್ಕಾಗಿ ಇಡೀ ರಾಷ್ಟ್ರದ ಕಲ್ಯಾಣವನ್ನು ಬಲಿಗೊಡುವುದು ಸರಿಯಲ್ಲವೆಂಬುದನ್ನೂ ಮರೆಯಬಾರದು.

ಮೈಸೂರು ವಿಶ್ವವಿದ್ಯಾನಿಲಯವು ಕನ್ನಡ ಮಾಧ್ಯಮವನ್ನು ಈಗ ತಾನೆ ಕಾರ್ಯರೂಪಕ್ಕೆ ತಂದಿದೆ. ಇದಕ್ಕೆ ಸಹಾಯಕವಾಗುವಂತೆ ಈಗಾಗಲೇ ವಿಜ್ಞಾನ ಸಂಬಂಧವಾದ ನಾಲ್ಕಾರು ಗ್ರಂಥಗಳನ್ನು ಪ್ರಕಟಿಸಿರುವುದಲ್ಲದೆ ಎಲ್ಲ ವಿಷಯಗಳ ಮೇಲೂ ಗ್ರಂಥಗಳನ್ನು ಬರೆಸಲು ಯೋಜನೆಯನ್ನು ಸಿದ್ಧಪಡಿಸಿದೆ. ಬ್ಯಾರಿಸ್ಟರ್ ಎಲ್. ಶ್ರೀಕಂಠಯ್ಯನವರ "ಕಮ್ಯೂನಿಸಂ" ಈ ಯೋಜನೆಯ ಅಂಗವಾಗಿ ಹೊರಬರುತ್ತಿದೆ. ಇನ್ನೂ ನಾಲ್ಕಾರು ಹೊತ್ತಿಗೆಗಳು ಇದೇ ರೀತಿಯಲ್ಲಿ ಪ್ರಕಟಣೆಗೆ ಸಿದ್ಧವಾಗಿವೆಯೆಂದು ಹೇಳಲು ಸಂತೋಷವಾಗುತ್ತದೆ.

ಶ್ರೀಮಾನ್ ಶ್ರೀಕಂಠಯ್ಯನವರು ಪಾಶ್ಚಾತ್ಯ ವಿಶ್ವವಿದ್ಯಾನಿಲಯಗಳಲ್ಲಿ ಪ್ರೌಢವ್ಯಾಸಂಗವನ್ನು ಮಾಡಿ, ಕೆಲವುಕಾಲ ಮೈಸೂರು ವಿಶ್ವವಿದ್ಯಾನಿಲಯದಲ್ಲಿ ರಾಜ್ಯಶಾಸ್ತ್ರದ ಪ್ರಾಧ್ಯಾಪಕರಾಗಿದ್ದು, ಅನೇಕ ವಿದ್ಯಾರ್ಥಿಗಳಿಗೆ ಆ ಶಾಸ್ತ್ರವನ್ನು ಬೋಧಿಸಿ, ಗಾಢವೂ ಅಗಾಧವೂ ಆದ ಅನುಭವವನ್ನು ಪಡೆದಿದ್ದಾರೆ. ಇವರ ಈ ಗ್ರಂಥ ಸರ್ವಮಾನ್ಯವಾಗುವುದರಲ್ಲಿ ಸಂದೇಹವಿಲ್ಲ.

ಕೆ. ವಿ. ಪುಟ್ಟಪ್ಪ

ಪ್ರಧಾನ ಸಂಪಾದಕ

ಮತ್ತು

ಪ್ರಕಟನ ಸಮಿತಿಯ ಅಧ್ಯಕ್ಷ.

ಮೈಸೂರು,

೧೫—೧೦—೧೯೪೭.

ಸಮಾಜವಾದದ ಜನನ

ಅಧ್ಯಾಯ—1.

ಮಾನವ ಸಮಾಜ ಜನಿಸಿದಾರಂಭದಿಂದ ಎಷ್ಟೇ ಕಷ್ಟಪರಂಪರೆಗಳು ಬಂದರೂ ತಾನು ಬದುಕುವುದೇ ಮಾನವನ ಪ್ರಥಮ ಪ್ರಯತ್ನವಾಗಿದೆ. ಹಾಗೆ ಬಾಳಿ ಬದುಕಲು ಯತ್ನಿಸಿದ ಮಾನವನನ್ನು ಎರಡು ವಿಧವಾದ ಪ್ರತಿಬಂಧಕ ಬಾಧಿಸಿವೆ. ಒಂದು ಭೌತಿಕ, ಮತ್ತೊಂದು ಸಾಮಾಜಿಕ. ಭೌತಿಕವಾಗಿ ಪ್ರಕೃತಿ ತಂದೊಡ್ಡಿದ ತೊಡರುಗಳನ್ನು ಎದುರಿಸಿ ನಾಗರಿಕತೆಯನ್ನು ಸ್ಥಾಪಿಸಿದ ಮಹತ್ಕಾರ್ಯದ ಗೌರವ ಮಾನವನಿಗೆ ಸಲ್ಲತಕ್ಕದ್ದಾಗಿದೆ ; ಮಾನವವರ್ಗವನ್ನು ಮೃಗವರ್ಗದಿಂದ ಬೇರ್ಪಡಿಸುವ ವೈಶಿಷ್ಟ್ಯವೂ ಇದೇ ಆಗಿದೆ. ಮಾನವ ತನ್ನ ಬುದ್ಧಿ ವಿಶೇಷದಿಂದ ಪ್ರಕೃತಿಯ ಚಲನವಲನಗಳ ಮೇಲೆ ಹತೋಟಿಯನ್ನು ಹೊಂದಿದ್ದಾನೆ. ಇದೇ ವಿಜ್ಞಾನದ ಸಾಧನೆ. ವಿಜ್ಞಾನವನ್ನು ಬೆಳೆಸುವುದರ ಮೂಲಕ ಮಾನವನು ಪ್ರಾಕೃತಿಕ ಪ್ರತಿಬಂಧಕಗಳನ್ನು ಪರಿಹರಿಸಿಕೊಂಡಿದ್ದಾನೆ ; ಪರಿಹರಿಸುತ್ತಿದ್ದಾನೆ ; ಮತ್ತು ಉಳಿದಿರುವ ಸಮಸ್ಯೆಗಳ ಪರಿಹಾರಕ್ಕೆ ಶ್ರಮಿಸುತ್ತಿದ್ದಾನೆ.

ಪ್ರಕೃತಿಯಿಂದ ಉದ್ಭವವಾದ ಮಾನವರು ತಮ್ಮ ಬದುಕನ್ನು ಸಾಗಿಸಲು ಸಮಾಜ ಜೀವಿಗಳಾದರು. ಆದರೆ ಪ್ರಕೃತಿಯಮೇಲೆ ಹೋರಾಡಿ ಸಾಧಿಸಿದಷ್ಟು ವಿಜಯವನ್ನು ತಮ್ಮ ಸಮಾಜಜೀವನದಲ್ಲಿ ಗಳಿಸಿಲ್ಲ. ಪ್ರಕೃತಿಯಿಂದುಂಟಾದ ಸಂಕಟಗಳನ್ನು ಅನುಭವಿಸುವುದರ ಜೊತೆಗೆ ಮಾನವ ತಾನು ಬಾಳಲು ನಿರ್ಮಿಸಿಕೊಂಡ ಸಮಾಜದಿಂದಲೂ ಬೇರೊಂದು ವಿಧವಾದ ಕಷ್ಟಗಳನ್ನು ಅನುಭವಿಸಿದ್ದಾನೆ. ಆದಿ ಮಾನವನ ಮತ್ತು ಅನಾಗರಿಕಕಾಲದ ಸಮಾಜಗಳ ಇತಿಹಾಸವನ್ನು ಬಿಟ್ಟರೆ (ಆದಿಯುಗ : Primitive Period), ಈ ವರೆಗೆ ಮಾನವ ಸಮಾಜಗಳಲ್ಲಿ ಬದುಕು ಸಾಗಿಸುತ್ತಿರುವ ಮಾನವ ಜೀವಿಗಳು ಮಾನವ ನಿರ್ಮಿತ ಉಪಟಳಗಳಿಗೇ ಹೆಚ್ಚು ತುತ್ತಾಗಿದ್ದಾರೆ. ಮಾನವ ಸಮಾಜಗಳ ವ್ಯವಸ್ಥೆ, ನಿಯಮಗಳು, ಕಟ್ಟುಪಾಡುಗಳೇ ಮೊದಲಾದುವು ಚೆನ್ನಾಗಿ ಬದುಕಲು, ಸುಖಸಂಪತ್ತುಗಳನ್ನನುಭವಿಸಲು ಹಾತೊರೆದ ಮಾನವ ಜೀವಿಗಳ ಸ್ವಪ್ನವನ್ನು ಭಗ್ನ

ಮಾಡಿವೆ. ಹಸಿವು, ಬಡತನ, ಆಕ್ರಮಣ, ಶೋಷಣೆ, ದಬ್ಬಾಳಿಕೆ, ಭೇದ ಭಾವ—ಇವು ಈವರೆಗೆ ಮಾನವ ಸಮಾಜಗಳನ್ನು ಕಾಡಿವೆ. ಪ್ರಕೃತಿಯ ಮೇಲಣ ಜಯಲಾಭಕ್ಕಾಗಿ ನಿರ್ದೇಶಗೊಂಡ ಮಾನವ ಪ್ರಯತ್ನ ಪರಂಪರೆಗಳೇ ಒಂದು ಇತಿಹಾಸ. ಮನುಷ್ಯ ಮನುಷ್ಯರಲ್ಲೇ ಯಾದವೀಕಲಹ, ಯುದ್ಧ, ಉಪಟಳ ; ಇದರಿಂದ ನುಚ್ಚುನುರಿಯಾದ ಜೀವನ; ಅದನ್ನು ಎದುರಿಸಲು ಕೈಕೊಂಡ ಕ್ರಮಗಳು, ಹೊಸ ಕಟ್ಟುಪಾಡುಗಳು, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯಲ್ಲಿ ಬದಲಾವಣೆಗಳು ಇವುಗಳೇ ಮಾನವ ಸಮಾಜದ ಮತ್ತೊಂದು ಇತಿಹಾಸ.

ಶೋಷಣೆ, ದಬ್ಬಾಳಿಕೆ ಮುಂತಾದವುಗಳು ಪ್ರಾಚೀನ ಸಮಾಜಗಳಲ್ಲಿ ಬಲಪ್ರಯೋಗದಿಂದ ಹಲವುವೇಳೆ ನಡೆದಿದ್ದುವು. ಆದರೆ, ಸಾಮಾನ್ಯವಾಗಿ ಅಂದಿನಿಂದ ಈವರೆಗೆ ಶೋಷಣೆ ಮುಂತಾದವು ಅವ್ಯಕ್ತವಾಗಿ ಪರೋಕ್ಷವಾಗಿ ನಡೆಯುತ್ತಿವೆ; ಸಮಾಜ ಅದಕ್ಕೆ ತನ್ನ ಅಂಗೀಕಾರ ಮುದ್ರೆಯನ್ನು ಒತ್ತಿದೆ. ಪ್ರಾಚೀನಕಾಲದಲ್ಲಿ ಸ್ವಾಮ್ಯವರ್ಗ ಗುಲಾಮರಿಂದ ದುಡಿಸಿಕೊಳ್ಳುತ್ತಿದ್ದುದರಿಂದ, ಮಾನವ ಮಾನವನಮೇಲೆ ಮಾಡುತ್ತಿದ್ದ ಅತ್ಯಾಚಾರ ಎದ್ದು ಕಾಣುತ್ತಿತ್ತು. ಆದರೆ ಗುಲಾಮಗಿರಿ ವ್ಯಕ್ತರೂಪದಲ್ಲಿಲ್ಲದಿದ್ದಾಗಲೂ ಆರ್ಥಿಕ ವ್ಯವಸ್ಥೆ ಪರೋಕ್ಷವಾಗಿ ಗುಲಾಮಗಿರಿ ಮತ್ತು ಶೋಷಣೆಗೆ ಅವಕಾಶವಿತ್ತಿದೆ. ಅತ್ಯಂತ ಅನಾಗರಿಕ ಸಮಾಜಗಳನ್ನು ಬಿಟ್ಟರೆ ಪ್ರಾಚೀನ ಕಾಲದಿಂದಲೂ ಉತ್ಪಾದನಾಸಾಧನಗಳಾದ ಭೂಮಿ, ಗಣಿ ಇತ್ಯಾದಿಗಳು ಖಾಸಗೀ ಸ್ವಾಮ್ಯಕ್ಕೆ ಸೇರಿವೆ. ಸ್ವಾಮ್ಯವಿಲ್ಲದವರು ದುಡಿಮೆಯನ್ನೆ ಅವಲಂಬಿಸಿ ಸ್ವಾಮ್ಯವನ್ನು ಹೊಂದಿರುವವರ ಅಧೀನದಲ್ಲೇ ದುಡಿದು ದುಡಿದು ಜೀವಶವಗಳಂತೆ ಬದುಕಿದ್ದಾರೆ.

ಖಾಸಗೀ ಸ್ವಾಮ್ಯವಿರುವ ವ್ಯವಸ್ಥೆಯಲ್ಲಿ ಯಾವ ಶೋಷಣೆಯೂ ಮೇಲ್ನೋಟಕ್ಕೆ ಕಂಡುಬರುವುದಿಲ್ಲ. ಉತ್ಪಾದನಾ ವಸ್ತುಗಳಿವೆ, ಉತ್ಪಾದನಾ ವಸ್ತುಗಳನ್ನು ಖಾಸಗಿಯಾಗಿ ಹೊಂದಿರುವ ವರ್ಗವಿದೆ. ದುಡಿಮೆ ಮಾಡುವವರು ಪ್ರತಿಫಲವಾಗಿ ಕೂಲಿ ಅಥವ ವೇತನವನ್ನು ಪಡೆಯುತ್ತಿರುವಂತೆಯೂ, ಬೇಸಾಯಗಾರರು ಗುತ್ತಿಗೆ ಅಥವ ವಾರಕ್ಕೋ ದುಡಿಯುತ್ತಿರುವಂತೆಯೂ ಕಂಡುಬರುತ್ತದೆ. ಆದರೆ ಈ ಪ್ರತಿಫಲವಾದ ಕೂಲಿ ಮತ್ತು ಗುತ್ತಿಗೆಗಳನ್ನು ನಿರ್ಧರಿಸುವವರೆಲ್ಲರೂ ಸ್ವಾಮ್ಯವರ್ಗದವರು. ಶೋಷಣೆಯ

ರಹಸ್ಯ ಅಡಗಿರುವುದೇ ಇಲ್ಲಿ. ಉತ್ಪಾದನಾ ವಸ್ತುಗಳನ್ನು ಖಾಸಗಿಯಾಗಿ ಹೊಂದಿರುವವರು ದುಡಿಯದೆಯೇ ಇನ್ನೊಬ್ಬರಿಂದ ದುಡಿಸಿಕೊಂಡು ಜೀವಿಸುತ್ತಾರೆ. ಹೆಚ್ಚು ಹೆಚ್ಚು ಸ್ವಾಮ್ಯಹೊಂದಿದಷ್ಟೂ ಆದಾಯ ಹೆಚ್ಚುತ್ತದೆ. ಖಾಸಗೀ ಸಂಪತ್ತು ವೃದ್ಧಿಯಾಗುತ್ತದೆ. ದುಡಿಮೆಗಾರರು ಎಷ್ಟು ಹೆಚ್ಚಾಗಿ ದುಡಿದರೂ ಅವರ ಸಂಪತ್ತು ಮಾತ್ರ ಹೆಚ್ಚುವುದಿಲ್ಲ. ಹೊಟ್ಟೆಗಿದ್ದರೆ ಬಟ್ಟೆಗೆ ಎಟುಕದು ; ಬಟ್ಟೆಗಿದ್ದರೆ ಹೊಟ್ಟೆಗೆ ಎಟುಕದು. ದುಡಿಮೆಗಾರರು ತಮ್ಮ ದುಡಿಮೆಯಿಂದಲೇ ಜೀವನ ಸಾಗಿಸಬೇಕು. ಅವರು ಸದಾ ತಮ್ಮ ಮತ್ತು ತಮ್ಮ ಮಾಲೀಕರ ಎರಡು ಸಂಸಾರಗಳನ್ನೂ ಬದುಕಿಸುವುದಕ್ಕೆ ಕೆಲಸ ಮಾಡುತ್ತಿರಬೇಕು. ಮಾಲೀಕನ ಅಭಿವೃದ್ಧಿಗಾಗಿ, ಅವನ ಕಣಜವನ್ನು ಭರ್ತಿಮಾಡುವುದಕ್ಕಾಗಿ ಬೆವರು ಸುರಿಸಿ, ರಕ್ತಬಸಿಯಬೇಕು. ಬೇಸಾಯ ರಂಗದಲ್ಲಿ ದುಡಿಮೆಗಾರರ ಪಾಡು ಹೇಳತೀರದು. ಮಳೆ ಬಾರದಿರಲಿ, ಫಸಲಿಗೆ ರೋಗ ತಗುಲಿ ನಷ್ಟಹೊಂದಲಿ ಅಥವಾ ಇನ್ನಾವ ಕಾರಣವೇ ಆಗಲಿ ನಿಗದಿಯಾದ ಮೊತ್ತವನ್ನು ಹಣದ ರೂಪದಲ್ಲೋ ಅಥವಾ ಧಾನ್ಯದ ರೂಪದಲ್ಲೋ ಸಲ್ಲಿಸಬೇಕು. ಹೆಚ್ಚು ಸ್ವಾಮ್ಯವಿರುವವರಿಗೆ ನಷ್ಟ ಅಷ್ಟು ಪರಿಣಾಮಕಾರಿಯಾದದ್ದಲ್ಲ. ಹಲವೆಡೆಗಳಿಂದ ಆದಾಯ ಬರುತ್ತಿರುವಾಗ ಮಾಲೀಕರು ಜೀವಿಸುವುದು ಅಷ್ಟು ಕಷ್ಟವಾಗುವುದಿಲ್ಲ. ಆದರೆ ದುಡಿಮೆಗಾರರ ಪರಿಸ್ಥಿತಿಯೇ ಬೇರೆ. ಉಣ ಹೊರಟರೆ ಸಾಲತೀರುವುದಿಲ್ಲ ; ಸಾಲ ತೀರಿಸಲು ಹೊರಟರೆ ಹೊಟ್ಟೆಯಮೇಲೆ ಒದ್ದೆಯ ಬಟ್ಟೆ.

ವ್ಯವಸಾಯವೇ ಮುಖ್ಯ ಕಸಬಾಗುಳ್ಳ ಎಲ್ಲ ಸಮಾಜಗಳ ಜೀವನ ಕ್ರಮ ಇದೇ ಆಗಿದೆ. ಪ್ರಾಚೀನ ಕಾಲದಿಂದ ಇಲ್ಲಿಯವರೆಗೆ ಭಾರತೀಯ ಇತಿಹಾಸದಲ್ಲಿ ಕಾಣುವ ಚಿತ್ರವೂ ಇದೇ. ಆದರೆ ಪ್ರಪಂಚದ ನಾನಾ ಭಾಗದ ನಾನಾ ಸಮಾಜಗಳಲ್ಲಿ ಖಾಸಗೀ ಸ್ವಾಮ್ಯ, ಶೋಷಣೆ ಮತ್ತು ದುಡಿಮೆ ವಿವಿಧ ರೂಪದಲ್ಲಿವೆ. ಹಿಂದಿನಿಂದ ಇಂದಿನವರೆಗೆ ಇವುಗಳಲ್ಲಿ ಅನೇಕ ಮಾರ್ಪಾಡುಗಳು ಕ್ರಮವಾಗಿ ಉದ್ಭವಿಸಿವೆ.

ಆದಿಕಾಲದಲ್ಲಿ ಸೂರೆ, ಗುಲಾಮಗಿರಿಗಳಿಂದ ಪ್ರಾರಂಭವಾದ ಶೋಷಣೆ, ವ್ಯವಸಾಯವೇ ಮುಖ್ಯಕಸಬಾದನಂತರ ಜೀತ, ಕೂಲಿಕಂಬಳ, ವಾರ ಮತ್ತು ಗುತ್ತಿಗೆ ರೂಪಗಳಲ್ಲಿ ಎಲ್ಲ ದೇಶಗಳಲ್ಲೂ ನಡೆದಿದೆ. ಹದಿನಾರು ಮತ್ತು ಹದಿನೇಳನೇ ಶತಮಾನಗಳಲ್ಲಿ ವಾಣಿಜ್ಯ, ವ್ಯಾಪಾರ ಮತ್ತು

ಕೈಗಾರಿಕೆಗಳ ಅಭಿವೃದ್ಧಿ ದೊಡ್ಡ ಪ್ರಮಾಣದಲ್ಲಿ ನಡೆದು ಶೋಷಣೆ ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳಿಗೂ ಹಬ್ಬಿ, ಕೂಲಿಗಾಗಿ, ವೇತನಕ್ಕಾಗಿ ದುಡಿಯುವ ದುಡಿಮೆಗಾರರನ್ನೆಲ್ಲ ಬಾಚಿ ಅಪ್ಪಿಕೊಂಡಿತು. ವ್ಯವಸಾಯವೇ ಮುಖ್ಯ ಕಸಬಾಗುಳ್ಳ ಸಮಾಜಗಳಲ್ಲಿ ಭೂಸ್ವಾಮ್ಯವುಳ್ಳವರು ಐಶ್ವರ್ಯವಂತರಾಗಿದ್ದರೆ, ಅವರಿಗೆ ಸರಿಸಮಾನ ರೀತಿಯಲ್ಲಿ, ಅವರಿಗಿಂತಲೂ ಮಿಗಿಲಾಗಿ, ವ್ಯಾಪಾರ ಮತ್ತು ಕೈಗಾರಿಕೆ ಉದ್ಯಮಗಳನ್ನು ಕೈಕೊಂಡವರು ಐಶ್ವರ್ಯವಂತರಾಗಿದ್ದಾರೆ. ಶೋಷಣೆ ಜನಸಮುದಾಯವನ್ನು ಎಲ್ಲ ಕಡೆಯಿಂದಲೂ ಆವರಿಸಿದೆ.

ಶೋಷಣೆಗೆ ಒಳಪಟ್ಟ ಜನರು ತಮ್ಮ ಪಾಡನ್ನು ಮೂಕ ಜಂತುಗಳಂತೆ ಸಹಿಸಿಕೊಂಡೂ ಇಲ್ಲ. ನೊಂದಿರುವ, ಬೇಸತ್ತಿರುವ ಸಿರ್ಗತಿಕ ಜನರ ಪ್ರತಿಭಟನೆಯೂ ಸಹ ಆದಿಯಿಂದಲೂ ನಡೆದಿದೆ. ಮನುಷ್ಯ ಸಾಮಾನ್ಯವಾಗಿ ಶಾಂತಿಪ್ರಿಯ. ಜೀವಿಸುವುದಕ್ಕೆ ಯಾವುದೋ ಒಂದು ಮಾರ್ಗವನ್ನು ಅನುಸರಿಸಿರುತ್ತಾನೆ. ಎಷ್ಟೇ ಕಷ್ಟಬರಲಿ ಅದನ್ನೇ ಅಪ್ಪಿಕೊಂಡು, ಒದಗುವ ಕಷ್ಟನಷ್ಟಗಳನ್ನು ಸಹಿಸಿಕೊಂಡು, ತಾಳ್ಮೆಯಿಂದ ಜೀವನ ಸಾಗಿಸುತ್ತಾನೆ. ಜಾಡುಬಿದ್ದ ಜೀವನಕ್ರಮವನ್ನು ಬಿಡಲಿಚ್ಛಿಸುವುದಿಲ್ಲ. ದಿನಂಪ್ರತಿ ಬದಲಾವಣೆಗೆ ಅವನ ಮನಸ್ಸು ಒಪ್ಪುವುದಿಲ್ಲ. ತೊಂದರೆಗಳು ಎಷ್ಟೇ ಇದ್ದರೂ ಒಂದು ಜೀವನಕ್ರಮಕ್ಕೆ ಒಗ್ಗಿಕೊಂಡಿರುವಾಗ ಸ್ವಸ್ಥಾನ ಪ್ರೀತಿ, ಸ್ವಜನ ಪ್ರೇಮ ಇವುಗಳನ್ನು ಬಿಟ್ಟು ಬೇರೆ ಕಡೆಗೆ ಹೋಗುವುದಕ್ಕಾಗಲಿ ಅಥವಾ ವಿರೋಧಿಸುವುದಕ್ಕಾಗಲಿ ಸಾಮಾನ್ಯವಾಗಿ ಇಚ್ಛಿಸುವುದಿಲ್ಲ. ಕಷ್ಟಸಹಿಷ್ಣುತೆ ಮಾನವನ ದೊಡ್ಡ ಗುಣವಾಗಿದೆ. ಸಹನೆ ಇಲ್ಲದಿದ್ದರೆ ವಿಜ್ಞಾನವಾಗಲಿ ನಾಗರಿಕತೆಯಾಗಲಿ ಬೆಳೆಯುತ್ತಲೇ ಇರಲಿಲ್ಲ. ಆದರೆ ಯಾವುದಕ್ಕೂ ಮಿತಿಯುಂಟು.

ಪ್ರಾರಂಭದಲ್ಲಿ ಪ್ರಕೃತಿ ಒಡ್ಡಿದ ಆಸರೆ ಅತ್ಯಲ್ಪವಾಗಿತ್ತು. ಆಸರೆಯನ್ನು ಪಡೆದಿದ್ದ ಒಂದು ಗುಂಪಿನ ಜನರಿಂದ ಇನ್ನೊಂದು ಗುಂಪಿನ ಜನರು ಕಸಿದುಕೊಳ್ಳಲು ಯುದ್ಧಹೂಡುತ್ತಿದ್ದರು. ಪ್ರಕೃತಿ ನೀಡಿದ ಈ ಅಲ್ಪಾಶ್ರಯ ಗೆದ್ದವರ ಕೈಸೇರಿ, ಸೋತ ಗುಂಪಿನ ಸಮಾಜ ಕ್ಷೀಣಿಸಿತು. ಸೋತ ಗುಂಪಿನ ಹೆಂಗಸರು ಗೆದ್ದವರಿಗೆ ಉಪ ಪತ್ನಿಯರಾಗಿಯೂ, ದಾಸಿಯರಾಗಿಯೂ, ಗಂಡಸರು ಗುಲಾಮರಾಗಿಯೂ ಸೇವೆ ಸಲ್ಲಿಸಿದ್ದಾರೆ. ಈ

ಉಪಟಳಗಳಿಂದ ತಪ್ಪಿಸಿಕೊಳ್ಳಲು ಯುದ್ಧ ಸಿದ್ಧತೆ, ಕೋಟೆ ಕೊತ್ತಲುಗಳ ಕಟ್ಟಡ ಆ ಸಮಾಜಗಳ ಪ್ರಥಮ ಕರ್ತವ್ಯವಾಗಿತ್ತು. ಈಗಲೂ ಸಹ ಇದು ತಪ್ಪಿಲ್ಲ. ಗುಲಾಮರಾಗಿ ಬಂದವರು ಒಡೆಯನಿಗಾಗಿ ದುಡಿಯ ಬೇಕು. ಅವನಿಗೆ ಯಾವ ಹಕ್ಕು ಬಾಧ್ಯತೆಗಳೂ ಸಹ ಇರುವುದಿಲ್ಲ. ಅವರು ಒಡೆಯನ ಸ್ವತ್ತು. ಅವರನ್ನು ಒಡೆಯ ಏನು ಬೇಕಾದರೂ ಮಾಡ ಬಹುದು. ಆದರೂ ಗುಲಾಮರ ದುಡಿಮೆಯ ಮೇಲೆಯೇ ನಾಗರಿಕತೆಯನ್ನು ಕಟ್ಟಿದ ಪ್ರಾಚೀನ ಸಮಾಜಗಳಲ್ಲಿ (ಈಜಿಪ್ಟ್, ಗ್ರೀಸ್, ರೋಮ್, ಇಂಡಿಯಾ)[1] ಒಡೆಯರ ಕ್ರೂರ ವರ್ತನೆಯನ್ನು ತಾಳಲಾರದೆ ಗುಲಾಮರು ಅನೇಕವೇಳೆ ದಂಗೆ ಎದ್ದಿದ್ದಾರೆ. ಹೀಗೆ ಎದ್ದ ದಂಗೆಗಳಲ್ಲಿ ರೋಮ್ ಸಾಮ್ರಾಜ್ಯದಲ್ಲಿ "ಸ್ಪಾರ್ಟಕಸ್" ಎಂಬ ಗುಲಾಮನ ನೇತೃತ್ವದಲ್ಲಿ ನಡೆದ ದಂಗೆ ಬಹಳ ಮುಖ್ಯವಾದದ್ದು. ಪ್ರಾಚೀನ ಕಾಲದಲ್ಲಿ ಪ್ರತಿಭಟನೆ ಗುಲಾಮರಿಂದ ಮಾತ್ರವಲ್ಲದೆ, ಅದೇ ಸಮಾಜದಲ್ಲಿ ಕೀಳು ವರ್ಗದವ ರಿಂದಲೂ ಸಹ ಬಂದಿದೆ. ಇದಕ್ಕೆ ಕೀಳು ವರ್ಗದವರಿಗೂ ಮೇಲು ವರ್ಗದವರಿಗೂ ಇದ್ದ ವೈಷಮ್ಯವೇ ಕಾರಣವೆಂದು ಅನೇಕ ನಿದರ್ಶನಗಳಿಂದ ವೇದ್ಯವಾಗುತ್ತದೆ. ಉತ್ತಮ ವರ್ಗದವರೊಡನೆ ಕೀಳು ವರ್ಗದವರು ಹೋರಾಟ ನಡೆಸಿ ಸಮಾನ ಹಕ್ಕುಗಳನ್ನು ಪಡೆದಿದ್ದಾರೆ. ಗ್ರೀಸ್ ದೇಶದಲ್ಲಿ ಅನೇಕ ಸಮಾಜ ಸುಧಾರಕರು (ಸೋಲನ್ ಮತ್ತು ಕ್ಲೈಸ್ಥನೀಸ್) ಅಸಮಾಧಾನಕ್ಕೆ ಕಾರಣವಾಗಿದ್ದ ವರ್ಗಭೇದವನ್ನೂ ಇತರ ಭಿನ್ನತೆಗಳನ್ನೂ ಸುಧಾರಣೆಗಳ ಮೂಲಕ ಪರಿಹರಿಸಿದರು. ರೋಮ್ ದೇಶದಲ್ಲಿ ಪ್ಲೆಬಿಯನರು (ಕೀಳುವರ್ಗ) ಪೆಟ್ರೀಶಿಯನರೊಡನೆ (ಉತ್ತಮ ವರ್ಗ) ಹೋರಾಡಿ ಸಮಾನ ಹಕ್ಕುಗಳನ್ನು ಪಡೆದಿದ್ದಾರೆ. ಪ್ರಾಚೀನ ಭಾರತ ದಲ್ಲೂ ಶೋಷಣೆಗೆ ಆವಾಸಸ್ಥಾನವಾಗಿದ್ದ ಜಾತಿ ಪದ್ಧತಿಯನ್ನು (caste system) ಬಹು ಮಟ್ಟಿಗೆ ವಿರೋಧಿಸಿ ಜೈನ, ಬೌದ್ಧ ಸುಧಾರಕರು ಚಳ ವಳಿಗಳನ್ನು ನಡಸಿದ್ದಾರೆ.

ಪಾಶ್ಚಾತ್ಯ ಮತ್ತು ಪೌರ್ವಾತ್ಯ ದೇಶಗಳಲ್ಲಿ ಭೂಸ್ವಾಮ್ಯ ಉಳ್ಳ

(1) ಭಾರತದಲ್ಲಿ ಗುಲಾಮಗಿರಿ ಇತ್ತೆಂಬುದಕ್ಕೆ ಕೌಟಿಲ್ಯನ 'ಅರ್ಥಶಾಸ್ತ್ರ' ದಲ್ಲಿ ಸಮರ್ಥನೆ ದೊರೆಯುತ್ತದೆ. ಕೌಟಿಲ್ಯನ 'ಅರ್ಥಶಾಸ್ತ್ರ': ಡಾ. ಶಾಮಾ ಶಾಸ್ತ್ರಿಗಳ ಸಂಪುಟ. (ಹತ್ತನೇ ಅಧ್ಯಾಯ ನೋಡಿ.)

ಮಾಲೀಕರಿಂದ ಒದಗಿದ ಉಪಟಳ, ಶೋಷಣೆ ಮುಂತಾದವುಗಳನ್ನು ಮತ್ತು ನಿರಂಕುಶ ಪ್ರಭುವಾದ ರಾಜ ವಿಧಿಸುವ ಕಂದಾಯ, ತೆರಿಗೆ ಮತ್ತು ಸುಲಿಗೆಗಳನ್ನು ತಡೆಯಲಾರದೆ ಸಾಮಾನ್ಯ ಜನರು ದಂಗೆ ಎದ್ದಿರುವ ನಿದರ್ಶನಗಳಿವೆ. 1347 ರಲ್ಲಿ ರೋಮ್‌ನಲ್ಲಿ, 1357 ರಲ್ಲಿ ಫ್ರಾನ್ಸ್‌ನಲ್ಲಿ, 1381 ರಲ್ಲಿ ಇಂಗ್ಲೆಂಡ್‌ನಲ್ಲಿ ರೈತರು ಕಿರುಕುಳ ಮತ್ತು ಶೋಷಣೆಯನ್ನು ತಡೆಯಲಾರದೆ ದಂಗೆ ಎದ್ದರು. 1520 ರಲ್ಲಿ ಜರ್ಮನಿ ದೇಶದಲ್ಲಿ ರೈತರು ದಂಗೆ ಎದ್ದರು. ಇವು ಆಗ ನಡೆದ ಹಲವು ದಂಗೆಗಳಲ್ಲಿ ಮುಖ್ಯವಾದವು.

ಎಷ್ಟೇ ಕಷ್ಟ ಬಂದರೂ ಮೌನವಾಗಿ ಸಹಿಸಬಹುದು. ಆದರೆ ಸಹಿಸಲಾಗುವುದಿಲ್ಲವೆಂದು ಹೇಳಿ ಪ್ರತಿಭಟನೆ ಸೂಚಿಸಿ ಅದರಲ್ಲಿ ಅಪಜಯ ಹೊಂದಿದರೆ ಉಂಟಾಗುವ ಪರಿಣಾಮಗಳು ಅಷ್ಟಿಷ್ಟಲ್ಲ. ಮೂಕ ಜಂತುಗಳಂತಿದ್ದ ಮಾನವರಿಂದ ಅನುಕೂಲಗಳನ್ನು ಪಡೆಯುತ್ತಿದ್ದ ಸ್ವಾಮ್ಯ ವರ್ಗ ಕೋಪಗೊಂಡು ಸೇಡು ತೀರಿಸಿಕೊಳ್ಳುತ್ತದೆ. ಹೀಗೆ ಅನೇಕ ದಂಗೆಗಳನ್ನು ಸ್ವಾಮ್ಯವರ್ಗ ತನ್ನ ಕ್ರೂರತನದಿಂದ ಅಡಗಿಸಿದೆ. ನಿರ್ದಯವಾಗಿ ಪಾತಕಲಿಸುವ ರೀತಿಯಲ್ಲಿ ದಂಗೆ ಎದ್ದವರನ್ನು ದಂಡಿಸಿದೆ. ಇದರಿಂದ ಅನೇಕವೇಳೆ ದಂಗೆಯ ಪ್ರಕರಣಗಳು ಕಂಡು ಬರದಿದ್ದರೆ ದಂಗೆ ಇರಲಿಲ್ಲವೆಂದಲ್ಲ. ಸ್ವಾಮ್ಯವರ್ಗದ ಕ್ರೂರ ವರ್ತನೆಯನ್ನು ನೋಡಿ ಜನರು ಹೆದರುತ್ತಿದ್ದರು ; ಹತಾಶರಾಗಿ ತಮ್ಮ ಹಣೆಯ ಬರಹವನ್ನು ಹಳಿದುಕೊಂಡರು. ವಿಧಿವಿಲಾಸವೆಂದೂ, ದೇವರ ನಿಯಾಮಕವೆಂದೂ ದೇವರಲ್ಲಿ ಮರೆ ಹೊಕ್ಕರು. ತಮ್ಮ ಬಾಳೇ ದುಡಿಮೆಯ ಬಾಳು, ದೇವರು ಬಹುಶಃ ಹಾಗೆಯೇ ನಿಯಾಮಕವಾಡಿದ್ದರೂ ಇರಬಹುದು ಅಥವಾ ಇಹದ ಕಾರ್ಪಣ್ಯದ ಬಾಳು ಪೂರ್ವಜನ್ಮದ ತಪ್ಪಿಗಾಗಿ ಅನುಭವಿಸುವ ದಂಡ ಎಂಬ ಭಾವನೆ ಮೂಡಿತು. ಇಹ ಲೋಕದಲ್ಲಿ ಸುಖವನ್ನು ಕಾಣದೆ ಪರಲೋಕದ ಕಲ್ಪನೆ ಬೆಳೆಯಿತು. ಸ್ವಾಮ್ಯವರ್ಗ ಮತ್ತು ಸ್ವಾಮ್ಯವರ್ಗದ ಮುಖಂಡನಾದ ರಾಜನಿಂದ ಪೋಷಿತರಾದ ಸಾಮಂತರು, ಪುರೋಹಿತರು, ಪಂಡಿತರು ಪೂಜಾರಿಗಳು ಮತ್ತು ಊಳಿಗವರ್ಗದವರು ಪ್ರತಿಭಟನೆ ತಪ್ಪೆಂದು ಬೋಧೆ ಮಾಡಿದರು.

ಶೋಷಣೆ, ದುಸ್ಥಿತಿ, ದಾರಿದ್ರ್ಯ, ಮೇಲುವರ್ಗದವರಿಂದ ಕೀಳು ವರ್ಗದವರು ಅನುಭವಿಸಿದ ತಾತ್ಸಾರ, ತಾರತಮ್ಯ, ನಿರ್ಲಕ್ಷತೆಗಳು ಸಮಾಜ

ದಲ್ಲಿ ಅಲ್ಲೋಲಕಲ್ಲೋಲವನ್ನೂ, ರಾಜಕೀಯ ವಿಪ್ಲವಗಳನ್ನೂ ಉಂಟುಮಾಡಿವೆ. ಸಮಾಜವನ್ನು ಅವ್ಯವಸ್ಥೆಯಿಂದ ಪಾರುಮಾಡುವುದು ವಿಚಾರವೇತ್ತರ ಮುಖ್ಯ ಕರ್ತವ್ಯವಾಯಿತು. ಯಾವ ವಿಧವಾದ ಕಲಹ ವೈಷಮ್ಯವಿಲ್ಲದ ಸಮಾಜ ವ್ಯವಸ್ಥೆಯ ಬಗ್ಗೆ ಚಿಂತನೆ ನಡೆದು ಅಂತಹ ಸಮಾಜವ್ಯವಸ್ಥೆ ಅತ್ಯಂತ ಪ್ರಾಚೀನ ಕಾಲದಲ್ಲಿ ಇತ್ತೆಂಬ ಭಾವನೆ ಬೇರೂರಿತು. ಪ್ರಾಚೀನ ಕಾಲವನ್ನು ಸ್ವರ್ಣಯುಗದ ಕಾಲವೆಂದು ಕರೆದರು.[1] ಸ್ವರ್ಣಯುಗದ ಕಾಲದಲ್ಲಿ ಸುವ್ಯವಸ್ಥಿತ ಸಮಾಜವೂ ಸುಖಶಾಂತಿಗಳೂ ಇದ್ದವೆಂದು ನೆನೆದುಕೊಂಡರು. ಸುಖಶಾಂತಿಗಳಿಂದ ಕೂಡಿದ ಸುವ್ಯವಸ್ಥಿತ ಸಮಾಜವೊಂದರ ದರ್ಶನಕ್ಕಾಗಿ ಹಂಬಲಿಸಿದರು. ಇಂತಹ ಆದರ್ಶಸಮಾಜದ ರಚನೆಗೆ ಸಿದ್ಧರಾದವರಲ್ಲಿ ಗ್ರೀಸ್ ದೇಶದ ರಾಜಕಾರಣಿ ಮತ್ತು ತತ್ತ್ವವೇತ್ತನಾದ ಪ್ಲೇಟೋ ಎಂಬುವನು ಬಹು ಮುಖ್ಯನಾದವನು.

ಪ್ಲೇಟೋ ತಾನು ವಾಸಿಸುತ್ತಿದ್ದ ಅಥೆನ್ಸ್‌ನಗರದ ರಾಜಕೀಯ ವೈಪರೀತ್ಯ, ಕಲಹ ಮತ್ತು ದೊಂಬಿಗಳನ್ನು ನೋಡಿ ಸರಿಪಡಿಸಲೋಸುಗ ಆದರ್ಶರಾಜ್ಯದ ಚಿತ್ರವೊಂದನ್ನು "ರಿಪಬ್ಲಿಕ್" ಎಂಬ ಗ್ರಂಥದಲ್ಲಿ ಚಿತ್ರಿಸಿದನು. ರಾಜ್ಯವನ್ನು ಉತ್ತಮ ಸ್ಥಿತಿಯಲ್ಲಿಡಬೇಕಾದರೆ ತತ್ತ್ವವೇತ್ತರಾದ ಆಳುವ ವರ್ಗದಿಂದ (Philosopher Kings) ಮಾತ್ರ ಸಾಧ್ಯವೆಂದು

---

(1) ಭಾರತದಲ್ಲಿ ಸ್ವರ್ಣಯುಗದ ಭಾವನೆ 'ರಾಮರಾಜ್ಯ' ದ ನೆನಪಿನ ರೂಪವನ್ನು ತಾಳಿದೆ. ಭಾರತವು ಸ್ವಾತಂತ್ರ್ಯ ಗಳಿಸಿದ ನಂತರ ರಾಮರಾಜ್ಯದೋಪಾದಿಯ ಸಮಾಜ ವ್ಯವಸ್ಥೆಯನ್ನು ಸ್ಥಾಪಿಸುವುದು ಹಲವು ರಾಜಕೀಯ ಪಕ್ಷಗಳ ಹೆಗ್ಗುರಿಯಾಗಿದೆ. ರಾಮರಾಜ್ಯದೋಪಾದಿಯ ಸಮಾಜ ವ್ಯವಸ್ಥೆಯ ಸ್ಥಾಪನೆಗಾಗಿ ಗಾಂಧೀಜಿ ಅವರು ಪ್ರಥಮವಾಗಿ ಕರೆಕೊಟ್ಟರು. 'ರಾಮರಾಜ್ಯ' ದಲ್ಲಿ ಸುಖ ಶಾಂತಿಗಳು ಇದ್ದವೆಂದು ವಿವರಣೆ ಇದೆಯೇ ಹೊರತು ಆ ಕಾಲದಲ್ಲಿ ಆರ್ಥಿಕ, ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆ ಹೇಗಿತ್ತೆಂಬುದರ ಬಗ್ಗೆ ವಿವರಣೆಯಿಲ್ಲ. ಅಂದಿನ ವ್ಯವಸ್ಥೆಯ ಮೂಲಕ ಸುಖ ಶಾಂತಿಗಳು ಸಾಧ್ಯವೆನ್ನುವುದಾದರೆ ಇಂದಿನ ವ್ಯವಸ್ಥೆಯನ್ನು ಅಳಿಸಿ ಹಿಂದಿನ ವ್ಯವಸ್ಥೆಯನ್ನು ತರಬೇಕೇ ಅಥವ ಆಧುನಿಕ ವ್ಯವಸ್ಥೆಯನ್ನು ರಾಮರಾಜ್ಯದ ವ್ಯವಸ್ಥೆಯಂತೆ ಮಾಡಬೇಕೇ ಎಂಬುದರ ವಿಚಾರವಾಗಿ ವಿವರಣೆಯಿಲ್ಲ. ಯಾವ ಮಾರ್ಪಾಡುಗಳು ಆಗಬೇಕಾಗಿದೆ-ಕೇವಲ ಧಾರ್ಮಿಕ ಪರಿವರ್ತನೆಯೇ ಅಥವ ವ್ಯವಸ್ಥೆಯಲ್ಲೂ ಪರಿವರ್ತನೆಯೇ–ಎಂಬುದರ ಬಗ್ಗೆ ಖಚಿತವಾದ ವಿವರಣೆಯಿಲ್ಲ. ಎಲ್ಲವೂ ಭಾವನಾ ಮತ್ತು ಕಾಲ್ಪನಿಕ ಪ್ರಪಂಚವಾಗಿದೆ.

ಸೂಚಿಸಿದನು. ಆಳುವ ಕೆಲಸವನ್ನು ಅವರ ಮುಖ್ಯಕರ್ತವ್ಯವನ್ನಾಗಿ ಮಾಡುವುದರಿಂದ ರಾಜ್ಯಕ್ಕೆ ಕ್ಷೇಮ ಲಭಿಸುತ್ತದೆಂದು ಭಾವಿಸಿದನು. ಸ್ವಾಮ್ಯ ಅಥವ ಒಡೆತನ ಕಾರ್ಯತತ್ಪರತೆಗೆ ಭಂಗವನ್ನೂ ಸ್ವಾರ್ಥವನ್ನೂ ತರುವುದರಿಂದ ಆಳುವ ವರ್ಗವನ್ನು ಅವುಗಳಿಂದ ಪಾರುಮಾಡಲು ಯತ್ನಿಸಿದನು. "ಕಮ್ಯೂನಿಸಂ" ಎಂಬ ಶಿರೋನಾಮೆಯಲ್ಲಿ ಆಳುವ ವರ್ಗಕ್ಕೆ ತನ್ನದೆಂದು ಹೇಳಿಕೊಳ್ಳುವ ಯಾವ ಸ್ವಾಮ್ಯವೂ ಇರಕೂಡದೆಂದನು. ಆದರೆ ತನ್ನ "ಕಮ್ಯೂನಿಸಂ" ಅನ್ನು ರಾಜ್ಯದ ಇನ್ನಾವ ವರ್ಗಕ್ಕೂ ಅನ್ವಯಿಸಲು ಇಷ್ಟಪಡಲಿಲ್ಲ. ಸಮಾಜದಲಿ ಕರ್ತವ್ಯಶೂನ್ಯತೆಯಿಂದ ಆಯಾ ಮನುಷ್ಯನು ತನ್ನ ಸ್ವಭಾವಕ್ಕೆ ಅನುಗುಣವಾದ ಕಾರ್ಯವನ್ನು ಮಾಡದೇ ಇರುವುದರಿಂದ ಮತ್ತು ಈ ಬಗೆಯ ತಿಳಿವಳಿಕೆಯನ್ನು ವಿದ್ಯಾಭ್ಯಾಸದಮೂಲಕ ಕೊಡದೆ ಇರುವುದರಿಂದ ಸಮಾಜದಲ್ಲಿ ಅಶಾಂತಿ, ಜಗಳ, ಸ್ವಾರ್ಥತೆ ಉಂಟಾಗಿವೆ ಎಂದು ತಿಳಿಸಿದನು.

ಪ್ಲೇಟೋ ತನ್ನ ಜೀವಿತಕಾಲದಲ್ಲಿಯೇ ತನ್ನ ಆದರ್ಶರಾಜ್ಯದ ನಿಷ್ಪ್ರಯೋಜಕತೆಯನ್ನು ಕಂಡನು. ಆದರ್ಶಸಮಾಜವನ್ನು ಪ್ರಯೋಗರೂಪದಲ್ಲಿ ತರಲು ಯತ್ನಿಸಿ ವಿಫಲನಾದನು. ಆಥೆನ್ಸ್‌ನಗರದ ವೈಪರೀತ್ಯಗಳು ಪ್ಲೇಟೋ ಭಾವಿಸಿದಂತೆ "ತನ್ನದು" "ನನ್ನದು" ಎಂಬ ಸ್ವಾರ್ಥದಿಂದಾಗಲೀ ಅಥವಾ ಪ್ರತಿಯೊಬ್ಬನೂ ತನ್ನ ಸ್ವಭಾವಕ್ಕೆ ಅನುಗುಣವಾದ ಕಾರ್ಯವನ್ನು ಮಾಡದೇ ಇರುವುದರಿಂದಾಗಲೀ ಉಂಟಾಗಿರಲಿಲ್ಲ. ಆಥೆನ್ಸ್ ನಗರದ ಸಮಾಜವ್ಯವಸ್ಥೆ ಗುಲಾಮರ ದುಡಿಮೆಯನ್ನವಲಂಬಿಸಿದ್ದಿತು. ಶೋಷಣೆಯ ಮೂಲಕ ಜೀವನ ನಡೆಸುತ್ತಿದ್ದ ಆಥೆನ್ಸ್‌ನಗರದ ಪೌರರು ಆರ್ಥಿಕಾಭಿವೃದ್ಧಿಯನ್ನು ಕೈಗೊಳ್ಳಲಿಲ್ಲ. ಸಮಾಜದ ಆರ್ಥಿಕವ್ಯವಸ್ಥೆ ಕ್ಷೀಣಿಸತೊಡಗಿತು. ಮುಳುಗುತ್ತಿರುವ ಹಡಗಿನಿಂದ ಇಲಿಗಳು ಚದರುವಂತೆ ಪೌರರು ಅಳಿದುಳಿದ ಸಂಪತ್ತಿನ ಲೂಟಿಯಲ್ಲಿ ನಿರತರಾದರು. ಸ್ಥಿತಿಗತಿಗಳು ಹೀಗಿರುವಲ್ಲಿ ಆದರ್ಶಸಮಾಜದ ರಚನೆಯನ್ನು ಆಥೆನ್ಸ್‌ನಗರದ ಯಾವ ಪೌರನೂ ಒಪ್ಪುವಂತಿರಲಿಲ್ಲ. ಪ್ಲೇಟೋವಿನ ಆದರ್ಶಸಮಾಜ ಆಥೆನ್ಸ್‌ನಗರ ಶ್ರೀಮಂತರ ನೇತೃತ್ವದಲ್ಲಿ ಗಳಿಸಿದ್ದ ಉಚ್ಛ್ರಾಯಸ್ಥಿತಿಯ ಚರಮಗೀತೆಯಾಯಿತು. ಆದರೂ, ಪ್ಲೇಟೋ ಪ್ರತಿಪಾದಿಸಿದ ರಾಜ್ಯನೀತಿ ಇಲ್ಲಿಯವರೆಗೂ ಕಲ್ಪನಾ ಸಾಹಿತ್ಯವಾಗಿ ಉಳಿದಿದೆ. ಆತನ "ಕಮ್ಯೂ

ನಿಸಂ" ರಾಜ್ಯದ ಕ್ಷೇಮಕ್ಕೂ ಸ್ವಾಮ್ಯಕ್ಕೂ ನಿಕಟಸಂಬಂಧವಿದೆಯೆಂದು ತೋರಿಸುವ ಶಬ್ದವಾಗಿ ಉಳಿದಿದೆ.[1]

ಪ್ಲೇಟೋ ಪ್ರಾಚೀನಕಾಲದ ಸಮಾಜಕ್ಕೆ ಸೇರಿದವನು. ಈತನ ನಂತರ ಸಮಾಜವ್ಯವಸ್ಥೆಯ ಒಗ್ಗೆ ಪ್ರತಿಭಟನೆಯನ್ನೂ ಟೀಕೆಯನ್ನೂ ಸೂಚಿಸುವ ಬರೆಹಗಳು ಹೇರಳವಾಗಿ ಹೊರಬಿದ್ದಿವೆ. ಆದರೆ ಇವುಗಳ ದೃಷ್ಟಿಕೋನ ವಿರಕ್ತಿಯನ್ನು ಬೋಧಿಸುವ, ಪ್ರಕೃತಿಗೆ ಅನುಗುಣವಾಗಿ ಬಾಳು ನಡೆಸು ಎಂದು ಹೇಳುವ, ದೈವನಿಯಾಮಕ್ಕೆ ಕೈತೋರಿಸುವ, ನಿಸ್ಸಾಹಯಕತೆಯನ್ನು ಪ್ರತಿಬಿಂಬಿಸುವ, ಇಹಲೋಕವನ್ನು ಮಾಯೆ, ಮಿಥ್ಯ, ಇಹಲೋಕದ ವಸ್ತುಗಳಿಗೆ ಅಂಟಿಕೊಂಡಷ್ಟೂ ಮುಕ್ತಿ ಅಸಾಧ್ಯವೆಂದು ತಿಳಿಸುವ ರೀತಿಯದಾಗಿದೆ. ಇಂತಹ ಬರೆಹಗಾರರು ಪೌರ್ವಾತ್ಯರಲ್ಲಿಯೂ ಪಾಶ್ಚಿಮಾತ್ಯರಲ್ಲಿಯೂ ಕಂಡು ಬರುತ್ತಾರೆ. ಪೌರ್ವಾತ್ಯರನ್ನು ತೆಗೆದು ಕೊಂಡರೆ ಭಾರತದಲ್ಲಿ ಪ್ರಥಮವಾಗಿ ಮಹಾವೀರ, ಬುದ್ಧ ಇವರು ಬರುತ್ತಾರೆ ಚೀಣದಲ್ಲಿ ಕನ್‌ಫ್ಯೂಷಿಯಸ್, ಲೋಟ್ಸೀ ಮುಂತಾದವರು ಬರುತ್ತಾರೆ. ಇವರಲ್ಲದೆ ಕಾಲಕ್ರಮೇಣ ಭಾರತದಲ್ಲಿ ಸಾಧುಸಂತರಾದ ರಾಮದಾಸ್,

---

(1) ಪ್ಲೇಟೋ ತನ್ನ 'ಕಮ್ಯೂನಿಸಂ' ಅನ್ನು ಆಳುವ ವರ್ಗಕ್ಕೆ ಮಾತ್ರ ಅನ್ವಯಿಸಿ, ಆಳಲ್ಪಟ್ಟ ವರ್ಗಕ್ಕೆ ಅನ್ವಯಿಸದಿರುವುದರಿಂದ ಆಳಲ್ಪಡುವ ವರ್ಗದ ಆರ್ಥಿಕ ಜೀವನವನ್ನು ಅಂಗೀಕರಿಸುತ್ತಾನೆ. ಅಂದು ಆಳಲ್ಪಟ್ಟ ವರ್ಗವ ಆರ್ಥಿಕ ಜೀವನ ಗುಲಾಮರ ದುಡಿಮೆಯನ್ನವಲಂಬಿಸಿದ್ದುದರಿಂದ ಪ್ಲೇಟೋ ಪರೋಕ್ಷವಾಗಿ ಗುಲಾಮಗಿರಿಯನ್ನು ಸಮರ್ಥಿಸಿದ ಹಾಗೆಯೇ ಆಗುತ್ತದೆ.

ಪ್ಲೇಟೋವಿನ 'ಕಮ್ಯೂನಿಸಂ' ಅನ್ನು ಅತಿ ಸುಲಭವಾಗಿ ವಿವರಿಸುವುದಾದರೆ, ಅದಕ್ಕೆ ಹತ್ತಿರವ ಹೋಲಿಕೆ ಭಾರತದಲ್ಲಿ ಸಿಗುತ್ತದೆ. ಸಾಧುಸಂತರ ಆಶ್ರಮವಾಸಿಗಳ ಜೀವನವನ್ನು ನೋಡಿದ್ದೇವೆ. ಇವರು ಯಾವ ಸ್ವಾಮ್ಯವನ್ನೂ ಬಯಸುವುದಿಲ್ಲ ಆವರಿವರು ಕೊಟ್ಟ ಭಿಕ್ಷೆ ದಾನಗಳಿಂದ ಜೀವನ ಸಾಗಿಸುತ್ತಾರೆ. ತತ್ತ್ವಾನ್ವೇಷಣೆಯೇ, ಸಾಮಾನ್ಯಜನರಿಗೆ ಅದರ ಬೋಧನೆಯೇ ಇವರ ಗುರಿ. ಆದರೆ ಸಾಮಾನ್ಯಜನರು ನಿತ್ಯಕರ್ಮಗಳಲ್ಲಿ ತೊಡಗಿರಬೇಕು. ಆಶ್ರಮವಾಸಿಗಳಾಗಬೇಕಾಗಿಲ್ಲ, ಸ್ವಾಮ್ಯವನ್ನು ತ್ಯಜಿಸಬೇಕಾಗಿಯೂ ಇಲ್ಲ.

ಮಾರ್ಕ್ಸ್-ಏಂಗೆಲ್ಸ್‌ರಿಗೆ ಮುನ್ನ 'ಕಮ್ಯೂನಿಸಂ' ಎಂಬ ಶಬ್ದ ಪ್ರಯೋಗದಲ್ಲಿತ್ತೇ ವಿನಾ ಮಾರ್ಕ್ಸ್-ಏಂಗೆಲ್ಸ್‌ರ ಕಮ್ಯೂನಿಸಂ ವಾದಕ್ಕೂ ಪ್ಲೇಟೋವಿನ ವಾದಕ್ಕೂ ಯಾವ ಸಂಬಂಧವಾಗಲೀ ಹೋಲಿಕೆಯಾಗಲೀ ಇಲ್ಲ.

ತುಳಸೀದಾಸ್, ಚೈತನ್ಯ, ಪುರಂದರದಾಸ್, ಮುಂತಾದವರು ಬರುತ್ತಾರೆ. ಪಾಶ್ಚಿಮಾತ್ಯ ದೇಶಗಳನ್ನು ತೆಗೆದುಕೊಂಡರೆ ಪ್ಲೇಟೋವಿನ ನಂತರ ಸ್ಟೋಯಿಕ್ (Stoics) ಗಳೆಂಬ ವಿರಕ್ತರೂ, ತರುವಾಯ ಏಸುಕ್ರಿಸ್ತ, ಮಹಮದ್ ಪೈಗಂಬರರು ಬರುತ್ತಾರೆ. ಇವರನಂತರ ಅಸಂಖ್ಯಾತ ಸಾಧು ಸಂತರು ಮೇಲೆ ಹೇಳಿದ ಗುರುಗಳ ಉಪದೇಶವನ್ನು ಪುನಃ ಪುನಃ ಹೇಳಿದ್ದಾರೆ.

ಸಾಧುಸಂತರು ಸಮಾಜದ ಆಗುಹೋಗುಗಳನ್ನು ಕಣ್ಣಾರನೋಡಿ ಮನದಲ್ಲಿ ಮರುಗಿದವರು. ಒಂದುಕಡೆ ಕಂಡದ್ದು ಅಟ್ಟಹಾಸ, ವೈಭವ, ವಿಲಾಸ, ಇನ್ನೊಂದುಕಡೆ ಯಾತನೆ, ದಾರಿದ್ರ್ಯ, ಕ್ಷುಬ್ಧಜೀವನ. ಜೀವನ ನಡೆಸುವುದಕ್ಕೋಸ್ಕರ ಮಾನವರು ಮಾನವರ ಮೇಲೆ ಯುದ್ಧ, ಮೋಸ, ಕಪಟ, ಕುಹಕಗಳಲ್ಲಿ ನಿರತರಾಗಿರುವುದನ್ನು ಕಂಡರು. ಸ್ವಾಮ್ಯವರ್ಗ ತನ್ನ ಸ್ವಾರ್ಥದ ಕೂಪದಲ್ಲಿ ಮುಳುಗಿ ದಯೆ, ಕರುಣೆ, ಅನ್ಯಪ್ರಾಣಿ ಚಿಂತನೆ ಸಹಾಯ, ಸಹಕಾರ ಇವುಗಳನ್ನು ತೊರೆದಿರುವುದನ್ನು ಕಂಡರು. ಮಾನವ ವ್ಯಕ್ತಿಗಳು ಇದೇ ಕೂಪದಲ್ಲಿ ಬಹುಕಾಲವಿರುವುದಾದರೆ ಮಾನವತ್ವವೇ ಹೋಗುವುದಾಗಿ ಬಗೆದು ಇವುಗಳೆಲ್ಲಕ್ಕೂ ಸ್ವಾರ್ಥ ಮತ್ತು ದುರಾಸೆಯೇ ಕಾರಣವೆಂದು ತಿಳಿಸಿದರು. ವೈರಾಗ್ಯ, ವಿರಕ್ತಜೀವನ, ಇಂದ್ರಿಯ ನಿಗ್ರಹ ಇವುಗಳಿಂದ ಮುಕ್ತಿ ಸಿಕ್ಕುವುದೆಂದು ಬೋಧಿಸಿದರು. ವಸ್ತುಗಳ ಬಂಧನವೇ ಅವನತಿಗೆ ಕಾರಣವೆಂದು ಹೇಳಿ, ವಸ್ತು ನಿಗ್ರಹ ಮಾಡಬೇಕೆಂದರು. ಇಹದ ಬಂಧನ ದೇವರ ಕೃಪೆಯನ್ನು ದೂರಮಾಡುವುದಾಗಿ ತಿಳಿಸಿದರು. ದೇವರಲ್ಲಿ ಮರೆಹೋಗುವುದಾದರೆ ಬಂದ ಕಷ್ಟನಷ್ಟಗಳಿಗೆ ಪರಿಹಾರಸಿಗುವುದೆಂದು ತಿಳಿಸಿದರು.

ಪ್ರಾರಂಭದಲ್ಲಿ ಸಾಧು ಸಂತರ ಹಿತವಚನಗಳು ಅನೇಕರನ್ನು ಆಕರ್ಷಿಸಿದವು. ಶಿಷ್ಯಮಂಡಳಿಗಳು ಹುಟ್ಟಿದವು ಮತ್ತು ಸಾಧು ಸಂತರ ಹೆಸರಿನಲ್ಲಿ ಪಂಥಗಳು ಹುಟ್ಟಿದವು. ಭಾರತದಲ್ಲಿ ಇವು ದಾಸಪಂಥಗಳೆಂದೂ, ಶಿವಶರಣರ ಪಂಥಗಳೆಂದೂ ಹೆಸರು ಪಡೆದಿವೆ. ಎಷ್ಟೇ ಉಪದೇಶನಡೆದರೂ ಸಮಾಜದ ಸ್ಥಿತಿಗ'ಗಳು ಪೂರ್ವದಲ್ಲಿದ್ದಂತೆಯೇ ಮುಂದುವರಿದವು. ನೊಂದ ಬೇಸತ್ತ ಜನರು ದಿಕ್ಕುಕಾಣದೆ ಮತ್ತಷ್ಟು ವಿಧಿವಿಲಾಸದಕಡೆ ಕೈತೋರಿಸುವಂತಾಯಿತು, ಹಿತವಚನಗಳಿಂದ ಸಮಾಜ ಅಲುಗಲಿಲ್ಲ; ವಚನಗಳು ಶುಷ್ಕ

ಪಂಕ್ತಿಗಳಾಗಿ ಉಳಿದವು. ನೊಂದವರು, ಇಂಥ ಭೀಕರ ದೃಶ್ಯ ನೋಡ ಲಾರದವರು, ಜಿಗುಪ್ಸೆಗೊಂಡು ಆಶ್ರಮ, ಕುಟೀರ ಮುಂತಾದವುಗಳನ್ನು ರಚಿಸಿಕೊಂಡು ಆತ್ಮಶುದ್ಧಿಯನ್ನು ಇನ್ನೂ ಮಾಡಿಕೊಳ್ಳುತ್ತಲೇ ಇದ್ದಾರೆ. ಅವರುಗಳ ಆತ್ಮಶುದ್ಧಿಯ ತಪಶ್ಚರ್ಯೆಯ ಫಲ ಸಮಾಜಕ್ಕೆ ತಟ್ಟುತ್ತದೆಂಬ ಆಶಾಭಾವನೆ ಅನೇಕರಲ್ಲಿ ಇನ್ನೂ ನಶಿಸಿಲ್ಲ. ಸಮಾಜ ಮಾತ್ರ ಪೂರ್ವದಂತೆ ಮುಂದುವರಿಯುತ್ತಲೇ ಇದೆ.

15 ನೇ ಶತಮಾನದನಂತರ ಪಾಶ್ಚಿಮಾತ್ಯ ದೇಶಗಳಲ್ಲಿ ರೂಪ ತಾಳಿದ ನಡೆವಳಿಕೆಗಳು ಸಮಾಜವಾದದ ಇತಿಹಾಸದಲ್ಲಿ ಬಹು ಮುಖ್ಯ ವಾದವು. ಸಮಾಜ ಸುಧಾರಣೆ ಹಿತವಚನಗಳಲ್ಲೇ ಪರ್ಯವಸಾನ ಹೊಂದದೆ ಸುಧಾರಿತ ಸಮಾಜದ ಸಾಧನೆಗಾಗಿ ಶೋಷಿತವರ್ಗ ಚಳವಳಿಯನ್ನು ಆರಂಭಿಸಿತು. ಬರೆಹಗಾರರು ಚಳವಳಿಗೆ ಬೆಂಬಲವಿತ್ತರು. ಕಷ್ಟಮಯ ಬಾಳಿನಿಂದ ಕೂಡಿದ ಸಮಾಜಕ್ಕೆ ಪ್ರತಿಯಾಗಿ ಸುಖೀ ರಾಜ್ಯವೊಂದು ಇದೆ ಎಂದು ಹೇಳುವ ಗ್ರಂಥಗಳು ಹೇರಳವಾಗಿ ಹೊರಬಿದ್ದವು. ಇಂತಹ ಗ್ರಂಥ ವೊಂದನ್ನು ಬರೆದು ಪ್ರಸಿದ್ಧಿಯಾದವನೆಂದರೆ ಇಂಗ್ಲೆಂಡ್ ದೇಶದ ಥಾಮಸ್ ಮೋರ್ ಎಂಬಾತನು. ಈತನು 'ಎಲ್ಲೂ ಇಲ್ಲದ ಆದರ್ಶರಾಜ್ಯ' (Utopia) ಎಂಬ ಗ್ರಂಥವನ್ನು 1516 ರಲ್ಲಿ ರಚಿಸಿ ತಾನಿದ್ದ ಸಮಾಜವನ್ನು ಕಟುವಾಗಿ ಮೂದಲಿಕೆಗೆ ಗುರಿಪಡಿಸಿದನು. ಆದರೆ ಅಂತಹ ರಾಜ್ಯ ಎಲ್ಲಿದೆ, ಅದನ್ನು ಪಡೆಯುವುದು ಹೇಗೆ ಎಂಬ ವಿಷಯಗಳ ಚರ್ಚೆಗೆ ಪ್ರವೇಶಿಸಲಿಲ್ಲ. ಆದು ದರಿಂದ ಥಾಮಸ್ ಮೋರ್‌ನ ಗ್ರಂಥ ಕಲ್ಪನಾ ಸಾಹಿತ್ಯವಾಗಿಯೇ ಉಳಿ ದಿದೆ. ಇಂತಹ ಗ್ರಂಥಗಳು ಜನಸಮುದಾಯದಲ್ಲಿ ಸುಖಮಯ ಸಮಾಜ ವೊಂದು ಸಾಧ್ಯವೆಂದೂ ಅಂತಹ ಸಮಾಜವೊಂದು ಇರುವುದೆಂಬ ಭಾವ ನೆಗೂ ಆಸರೆ ಕೊಟ್ಟವು.

ಇಂಗ್ಲೆಂಡಿನಲ್ಲಿ 1640 ರಲ್ಲಿ ಉಂಟಾದ ಕ್ರಾಂತಿ ನೊಂದ ಜನಸಮು ದಾಯದ ಚಳವಳಿಗೆ ಬೆಂಬಲ ನೀಡಿತು. ಕ್ರಾಂತಿ ಉಂಟಾಗಲು ಅನೇಕ ಕಾರಣಗಳಿದ್ದವು. ಶೋಷಣೆಗೆ ಒಳಪಟ್ಟ ಜನಸಮುದಾಯವಿದ್ದಿತು. ರಾಜನ ನಿರಂಕುಶವರ್ತನೆ ವ್ಯಾಪಾರೀ ಮತ್ತು ಜಮೀನ್ದಾರ ವರ್ಗದವ ರನ್ನು ಉದ್ರೇಕಗೊಳಿಸಿತ್ತು. ಆಚರಣೆಯಲ್ಲಿದ್ದ ಕಟ್ಟಳೆ ಕಾನೂನುಗಳು ವ್ಯಾಪಾರಿವರ್ಗ ಅಡ್ಡಿ ಆತಂಕಗಳಿಲ್ಲದೆ, ರಾಜನ ಮತ್ತು ರಾಜನ ಆಶ್ರಯ

ದಲ್ಲಿರುವ ಸಾಮಂತರ ಉಪಟಳವಿಲ್ಲದೆ, ವ್ಯಾಪಾರ ಮಾಡುವುದಕ್ಕೂ, ಹಣ ಕೂಡಿಡುವುದಕ್ಕೂ, ಉದ್ಯಮಗಳಲ್ಲಿ ನಿರತರಾಗುವುದಕ್ಕೂ ಅಡ್ಡಿ ಬಂದಿದ್ದವು. ರಾಜನ ನಿರಂಕುಶ ಪ್ರಭುತ್ವವನ್ನು, ವ್ಯಾಪಾರ ಮತ್ತು ಉದ್ಯಮಕ್ಕೆ ಅಡ್ಡಿ ಬರುವ ಕಟ್ಟಳೆ ಕಾನೂನುಗಳನ್ನು ಬದಿಗೊತ್ತಿದ ಹೊರತು ವ್ಯಾಪಾರೀ ವರ್ಗದ ಏಳಿಗೆಗೆ ಅವಕಾಶವಿರಲಿಲ್ಲ. ಬದಲಾವಣೆಯಿಂದ ರಾಜನ ಮತ್ತು ಆತನ ಹಿಂಬಾಲಕ ವರ್ಗದವರ ಹಕ್ಕುಬಾಧ್ಯತೆಗಳಿಗೆ ಧಕ್ಕೆ ಬರುತ್ತಿತ್ತು. ಅವರು ಬದಲಾವಣೆಯನ್ನು ವಿರೋಧಿಸಿದರು. ಸಂಧಾನದ ಮೂಲಕ ಬಗೆ ಹರಿಯದ ವಿರಸ ಒಳ ಯುದ್ಧದಲ್ಲಿ ಪರ್ಯವಸಾನ ಹೊಂದಿತು. ಜನರು ಚಾರೆಲ್ಸ್ ಎಂಬ ದೊರೆಯ ಶಿರಚ್ಛೇದನಮಾಡಿದರು. ಮತ್ತೊಬ್ಬ ದೊರೆಯನ್ನು ಬೇರೆಕಡೆಯಿಂದ ಕರೆತಂದು ಪಟ್ಟಕಟ್ಟಿದರು. ಒಳ ಯುದ್ಧ ದಲ್ಲಿ ವಿಜಯಶಾಲಿಗಳಾದ ವ್ಯಾಪಾರೀ ಮತ್ತು ಜಮೀನ್ದಾರವರ್ಗ ತಮ್ಮ ಹಕ್ಕುಗಳನ್ನು ಘೋಷಿಸಿದರು. ವ್ಯಾಪಾರ ಮತ್ತು ಉದ್ಯಮಗಳಲ್ಲಿ ಸರ್ಕಾರ ಕಾನೂನುಗಳ ಮೂಲಕ ಅಡ್ಡಿ ಆತಂಕಗಳನ್ನು ಒಡ್ಡದ ಹಾಗೆ ನಿಯಾಮಕ ಮಾಡಿದರು. ಸ್ವಾಮ್ಯ ಮತ್ತು ವ್ಯಾಪಾರ ವರ್ಗದವರಿಂದ ಚುನಾಯಿತ ರಾದ ಪ್ರತಿನಿಧಿಗಳ ಸಮ್ಮತವಿಲ್ಲದೆ ಶಾಸನ ಮಾಡಕೂಡದೆಂಬ ಸಂಪ್ರದಾ ಯಕ್ಕೆ ರಾಜನು ಒಪ್ಪುವಂತೆ ಮಾಡಿದರು. ಸಾಂಕುಶಪ್ರಭುತ್ವ ಸ್ಥಾಪನೆ ಯಾಯಿತು.

ಕ್ರಾಂತಿಯ ಕಾಲದಲ್ಲಿ ವ್ಯಾಪಾರೀ ಮತ್ತು ಜಮೀನ್ದಾರವರ್ಗ ಕೇಳಿದುದು ಮತನೀಡುವ ಹಕ್ಕು, ಪ್ರತಿನಿಧಿಗಳ ಒಪ್ಪಿಗೆ ಪಡೆದು ಶಾಸನ ವಾಗುವ ಭರವಸೆ, ವ್ಯಕ್ತಿಸ್ವಾತಂತ್ರ್ಯ, ಪೌರರ ಹಕ್ಕುಗಳು, ಶಾಸನ ಸಮ್ಮುಖದಲ್ಲಿ ಸಮಾನತೆ, ಆರ್ಥಿಕವಾಗಿ ಖಾಸಗೀ ಸ್ವಾಮ್ಯಕ್ಕೆ ರಕ್ಷಣೆ ಮತ್ತು ಉದ್ಯಮ ಸ್ವಾತಂತ್ರ್ಯ. ಆದರೆ ಈ ಮಧ್ಯೆ ಒಡಕು ಶಬ್ದವೆಂಬಂತೆ ಒಂದು ವಾದ ಆಂದೋಳನದ ರಂಗದಲ್ಲಿ ಕಾಲಿಟ್ಟಿತು. ಅದು ವ್ಯಾಪಾರೀ ಮತ್ತು ಸ್ವಾಮ್ಯ ವರ್ಗದವರನ್ನು ಸ್ತಬ್ಧರನ್ನಾಗಿ ಮಾಡಿತು. ಹೊಸವಾದದ ಪ್ರತಿಪಾದಕರೆಂದರೆ ಜರಾಲ್ಡ್ ವಿನ್‌ಸ್ಟಾನ್‌ಲೇ ಮತ್ತು ಲಿಲ್‌ಬರ್ನ್ನೀ. ಇವರ ವಾದಸರಣಿ ಅತಿಸುಲಭವಾಗಿದ್ದು ಮನಸ್ಸಿಗೆ ನಾಟುವಂತಿತ್ತು. ಅವರ ಪ್ರಕಾರ ಜನಸಮುದಾಯವೆಲ್ಲಾ ದೇವರ ಮಕ್ಕಳು, ಎಲ್ಲರೂ ಅಣ್ಣ ತಮ್ಮಂದಿರು, ಅಕ್ಕತಂಗಿಯರು, ಎಲ್ಲರೂ ಒಂದೇ ಸಮಾಜಕ್ಕೆ ಸೇರಿದವರು.

ದೇವರು ತನ್ನ ಮಕ್ಕಳಲ್ಲಿ ಹೇಗೆ ಭೇದ ಭಾವವನ್ನು ಮಾಡುವುದಿಲ್ಲವೋ ಹಾಗೆಯೇ ಭೇದ ಭಾವ, ತಾರತಮ್ಯ, ಅಸಮಾನತೆ ಇರುವ ಸಮಾಜ ದೇವರ ದೃಷ್ಟಿಯಲ್ಲಿ ಸರಿಯಲ್ಲ; ಎಲ್ಲರೂ ಸಮಾನರು. ಆದುದರಿಂದ ಸಾಮಾಜಿಕ ಮತ್ತು ರಾಜಕೀಯ ರಂಗದಲ್ಲಿ ಹೇಗೆ ಸಮಾನತೆ ಆವಶ್ಯಕ ವೆಂದು (ವ್ಯಾಪಾರೀ ಮತ್ತು ಜಮೀನ್ದಾರವರ್ಗ) ಹೇಳುವುದುಂಟೋ ಹಾಗೆಯೇ ಆರ್ಥಿಕ ರಂಗದಲ್ಲೂ ಸಹ ಸಮಾನತೆ ಆವಶ್ಯಕವಾಗಿದೆ. ಆರ್ಥಿಕ ಸಮಾನತೆ ಜನಸಮುದಾಯಕ್ಕೆ ಲಭಿಸಿದ ಹೊರತೂ ಸಾಮಾಜಿಕ ಮತ್ತು ರಾಜಕೀಯ ಕ್ಷೇತ್ರದಲ್ಲಿ ಲಭಿಸಿರುವ ಸಮಾನತೆ ಮಿಥ್ಯ, ಹುರುಡಿಲ್ಲದ್ದು ಎಂದರು. ಆರ್ಥಿಕ ಸಮಾನತೆ ಲಭಿಸುವವರೆಗೂ ಹೋರಾಟ ಮುಂದು ವರಿಯುವ ಅಗತ್ಯವನ್ನು ಸಾರಿದರು.

ಹೊಸವಾದಕ್ಕೆ ವ್ಯಾಪಾರೀ ಮತ್ತು ಸ್ವಾಮ್ಯವರ್ಗದ ಪ್ರತಿಕ್ರಿಯೆ ಬೇರೆಯಾಗಿತ್ತು. ವ್ಯಾಪಾರೀ ಮತ್ತು ಸಾಮ್ಯವರ್ಗ ಈ ಹೊಸವಾದದಲ್ಲಿ ಹಕ್ಕು ಬಾಧ್ಯತೆಗಳಿಗೆ ಅಪಾಯವನ್ನೂ ಖಾಸಗೀ ಸ್ವಾಮ್ಯಕ್ಕೆ ಧಕ್ಕೆಯನ್ನೂ ಕಂಡಿತು. ಜನಸಮುದಾಯದಲ್ಲಿ ಹೊಸವಾದದ ಹರಡುವಿಕೆಯನ್ನು ತಡೆ ಗಟ್ಟಲು ಕಂಕಣಬದ್ಧರಾದರು. ಆರ್ಥಿಕ ಸಮಾನತೆಯ ಸ್ಥಾಪನೆ ಎಂದೂ ಕ್ರಾಂತಿಯ ಧ್ಯೇಯವಲ್ಲವೆಂದೂ, ದೇವರು ಎಂದೂ ಎಲ್ಲರನ್ನೂ ಒಂದೇ ಸಮನಾಗಿ ಸೃಷ್ಟಿಸಿಲ್ಲವೆಂದೂ, ಸ್ವಾಮ್ಯ ಅವರವರ ದುಡಿಮೆಯ ಫಲವೆಂದೂ, ಆರ್ಥಿಕ ಅಸಮಾನತೆ ಸ್ವಾಭಾವಿಕವೆಂದೂ, ಆರ್ಥಿಕ ಸಮಾನತೆಗಾಗಿ ಆಶಿಸು ವುದು ಹಗಲುಗನಸಾಗಿ ಸಮಾಜ ಭದ್ರತೆಗೆ ಕಂಟಕವಾಗುತ್ತದೆಂದೂ ತಿಳಿಸಿ ದರು. ಹೊಸವಾದ ಮೂದಲಿಕೆಗೆ ಗುರಿಯಾಯಿತು. ಇಷ್ಟಾದರೂ, ಹೊಸ ವಾದದಲ್ಲಿ ಅಡಗಿದ್ದ ತರ್ಕವನ್ನು ಭೇದಿಸುವುದಕ್ಕೆ ಸ್ವಾಮ್ಯವರ್ಗಕ್ಕೆ ಶಕ್ತಿ ಸಾಲದೇ ಹೋಯಿತು. ಪ್ರತಿವಾದದಿಂದ ಭೇದಿಸಲಾರದ್ದನ್ನು ಶಕ್ತಿಪ್ರಯೋ ಗದ ಮೂಲಕ ಅಡಗಿಸಲು ಸ್ವಾಮ್ಯವರ್ಗ ನಿರ್ಧರಿಸಿತು. ಆದರೂ, ಮೊಟ್ಟ ಮೊದಲನೆಯಬಾರಿಗೆ, ಆರ್ಥಿಕ ಸಮಾನತೆ ಇದ್ದಹೊರತು ಜನಸಮುದಾ ಯಕ್ಕೆ ಕ್ಷೇಮವಿಲ್ಲವೆಂದು ಹೇಳಿ ಜನಸಮುದಾಯದ ಗಮನವನ್ನು ಆರ್ಥಿಕ ರಂಗದಲ್ಲಿರುವ ಅಸಮಾನತೆಗೆ ಸೆಳದದ್ದು 1640 ರ ಕ್ರಾಂತಿಯ ಮಹತ್ಕಾರ್ಯ.

ಆರ್ಥಿಕ ಸಮಾನತೆಗಾಗಿ ನಡೆದ ಹೋರಾಟ ಇಂಗ್ಲಿಷ್ ಕ್ರಾಂತಿಗೇ ಕೊನೆಗೊಳ್ಳಲಿಲ್ಲ. ಹಾಗಾಗುವುದೆಂದು ನಿರೀಕ್ಷಿಸಿದ್ದವರು ಹತಾಶರಾದರು. ಹೊರ ದೇಶಗಳಿಗೆ ಇಂಗ್ಲಿಷ್ ಆರ್ಥಿಕ ಸಮಾನತೆಯವಾದ ಹರಡಿತ್ತೊ ಇಲ್ಲವೋ ತಿಳಿಯದು. ಆದರೆ, 18 ನೇ ಶತಮಾನದ ಕೊನೆಯ ಭಾಗದಲ್ಲಿ ಫ್ರಾನ್ಸ್ ದೇಶದಲ್ಲಿ ನಡೆದ ಮಹಾಕ್ರಾಂತಿ (1789) ಕಾಲದಲ್ಲಿ ಆರ್ಥಿಕ ಸಮಾನತೆಯ ಪ್ರಶ್ನೆ ಪುನಃ ಜನ್ಮ ತಾಳಿತು. ಫ್ರಾನ್ಸಿನ ಮಹಾಕ್ರಾಂತಿ ಇಂಗ್ಲಿಷ್ ಕ್ರಾಂತಿಯಂತೆ ವ್ಯಾಪಾರೀ ಮತ್ತು ಜಮೀನ್ದಾರ ವರ್ಗಗಳ ಮುಂದಾಳತ್ವದಲ್ಲಿ ನಿರಂಕುಶ ಪ್ರಭುತ್ವದ ನಾಶಕ್ಕೂ ಖಾಸಗೀ ಸ್ವಾಮ್ಯದ ಆಧಾರದಮೇಲೆ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳ ಸ್ಥಾಪನೆಗೂ ನಡೆಯಿತು. ಕ್ರಾಂತಿಯ ಕಾಲದಲ್ಲಿ ಆರ್ಥಿಕ ಪ್ರಶ್ನೆ ಪ್ರಾಮುಖ್ಯತೆಗೆ ಬರುತ್ತದೆಂದು ಯಾರೂ ಯೋಚಿಸಿರಲಿಲ್ಲ. ಆದರೆ ಕ್ರಾಂತಿಯ ಹುರುಪಿನಲ್ಲಿ ಘೋಷಣೆಯಾದ "ಸ್ವಾತಂತ್ರ್ಯ, ಸಮಾನತೆ ಮತ್ತು ಭ್ರಾತೃತ್ವ" (Liberty, Equality and Fraternity) ಧ್ಯೇಯಗಳು ಆರ್ಥಿಕ ಸಮಾನತೆಯ ಪ್ರಶ್ನೆ ಪುನಃ ಕಾಣಿಸಿಕೊಳ್ಳುವಂತೆ ಪ್ರಚೋದಿಸಿದುವು. ಕ್ರಾಂತಿಯ ಸಮಯದಲ್ಲಿ ಬೆಬ್ಯೂಫ್ ಎಂಬುವನ ಮುಖಂಡತ್ವದಲ್ಲಿ "ಸಮಾನತೆಗಾರರ ಪಿತೂರಿ" ಎಂಬ ರಂಗವೊಂದು ರಚಿತವಾದದ್ದಲ್ಲದೆ ಆರ್ಥಿಕ ಸಮಾನತೆಯ ವಾದ "ನ್ಯಾಯ" ದ ಹೆಸರಿನಲ್ಲಿ ಪ್ರತಿಪಾದಿತವಾಯಿತು. ಅಧಿಕಪ್ರಮಾಣದಲ್ಲಿ ಮತ್ತು ಅತ್ಯಂತ ಶೀಘ್ರಕಾಲದಲ್ಲಿ ಆರ್ಥಿಕ ಸಮಾನತೆಯ ವಾದ ಜನಸಮುದಾಯವನ್ನು ಆಕರ್ಷಿಸಿತು. ಸ್ವಾಮ್ಯವರ್ಗ ನಿಧಾನಿಸದೆ ಬೆಬ್ಯೂಫ್ ಮತ್ತು ಆತನ ಸಹಪಾಠಿಗಳನ್ನು ಸದೆಬಡಿಯಿತು.

ಬೆಬ್ಯೂಫ್ ಮತ್ತು ಆತನ ಸಹವರ್ತಿಗಳು ಮಂಡಿಸಿದ ವಾದಕ್ಕೂ ಇಂಗ್ಲಿಷ್ ಕ್ರಾಂತಿಯ ಸಮಯದಲ್ಲಿ ಮಂಡಿತವಾದ ಸಮಾನತೆಯವಾದಕ್ಕೂ ಕೆಲವು ವ್ಯತ್ಯಾಸಗಳಿವೆ. ಇಂಗ್ಲಿಷ್ ಕ್ರಾಂತಿಕಾರರು ಆರ್ಥಿಕ ಸಮಾನತೆಯನ್ನು ದೇವರ ಹೆಸರಿನಲ್ಲಿ ಕೇಳಿದರು; ಫ್ರೆಂಚ್ ಕ್ರಾಂತಿಕಾರರು ನ್ಯಾಯ ಮತ್ತು ವಿವೇಚನೆಗಳ (Justice and Reason) ಹೆಸರಿನಲ್ಲಿ ಮಂಡಿಸಿದರು. ನಿರಂಕುಶಪ್ರಭುತ್ವ, ಸಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ಅಸಮಾನತೆ, ಹಕ್ಕುರಹಿತ ಕರ್ತವ್ಯಗಳು ಹೇಗೆ ಅನ್ಯಾಯವೋ ವಿವೇಚನಾರಹಿತವೋ ಹಾಗೆಯೇ ವಾಸ್ತವಿಕವಾಗಿರುವ ಆರ್ಥಿಕ ಅಸಮಾನತೆ ಸಹ

ಅನ್ಯಾಯವೆಂದೂ ವಿವೇಚನಾರಹಿತವೆಂದೂ ಸಾರಿದರು. ಎರಡನೆಯದಾಗಿ, ಫ್ರೆಂಚ್ ಕ್ರಾಂತಿಕಾರರು ನ್ಯಾಯಾನ್ಯಾಯಗಳ ಹೆಸರಿನಲ್ಲಿ ಸಾರಿದ ಸಂದೇಶ ಬಹು ಮಹತ್ತರವಾದ ಪ್ರಭಾವವನ್ನು ಬೀರುವಂತಹುದಾಗಿತ್ತು. ನ್ಯಾಯಾನ್ಯಾಯಗಳ ಪ್ರಶ್ನೆ ವಿವೇಕ ಬುದ್ಧಿಯ ತೀರ್ಮಾನಕ್ಕೆ ಒಳಪಟ್ಟದ್ದರಿಂದ ಸಮಸ್ಯೆಗಳ ಬಗ್ಗೆ ತೀರ್ಮಾನ ದೈವ ಪ್ರಭಾವದಿಂದ ಪ್ರತ್ಯೇಕಿಸಲ್ಪಟ್ಟವು. ದೈವ ಪ್ರಭಾವದಿಂದ ಬಿಡುಗಡೆ ಹೊಂದಿದ ಮಾನುಷ ಬುದ್ಧಿಗೆ ಪ್ರಾಶಸ್ತ್ಯ ದೊರೆಕಿತು. ಎಲ್ಲದಕ್ಕೂ ಮನುಷ್ಯಬುದ್ಧಿ ಅಂತಿಮವಾದ ಒರೆಗಲ್ಲಾಯಿತು. ದೈವ ಪ್ರಭಾವದಿಂದ ಬೇರ್ಪಟ್ಟ ಸ್ವತಂತ್ರ ಸಮಾಜಶಾಸ್ತ್ರ ಬೆಳೆಯಲು ಅಂಕುರಾರ್ಪಣೆಯಾಯಿತು. ಒಟ್ಟಿನಲ್ಲಿ ಶೋಷಣೆ ಮತ್ತು ಆರ್ಥಿಕ ಅಸಮಾನತೆ ಕೇವಲ ದೈವ ನಿಯಾಮಕವಾಗಿರದೆ ಸಮಾಜದ ರಚನೆ ಮತ್ತು ಕಟ್ಟುಪಾಡುಗಳನ್ನು ಅವಲಂಬಿಸಿವೆ ಎಂದು ಎರಡು ಕ್ರಾಂತಿಗಳೂ ತಿಳಿಸಿದವು. ಆರ್ಥಿಕ ಅಸಮಾನತೆ ತಾರ್ಕಿಕ ಬುದ್ಧಿ ವಿಶೇಷಕ್ಕೆ ಸಮಂಜಸವಾಗಿ ತೋರುವುದಿಲ್ಲವೆಂದು ತಿಳಿಸಿದ್ದಲ್ಲದೆ ಸಮಾಜದ ಕಟ್ಟುಪಾಡುಗಳು ಸಮಾಜ ಜೀವಿಗಳ ಯೋಗಕ್ಷೇಮವನ್ನು ಗಳಿಸುವುದಾದರೆ ಸರಿ, ಇಲ್ಲವಾದರೆ ತಪ್ಪು ಎಂಬ ವೈಯುಕ್ತಿಕ ತೀರ್ಮಾನಕ್ಕೆ ಎಡೆ ಕೊಟ್ಟವು.

ಫ್ರಾನ್ಸಿನ ಮಹಾಕ್ರಾಂತಿಯ ಕಾಲದಲ್ಲಿ ಅವತರಿಸಿದ ಸಮಾನತೆಯ ತತ್ತ್ವ ನೊಂದ ಜನರ ತಾತ್ಕಾಲಿಕ ಆರ್ಭಟವಾಗದೆ ಚಿರಸ್ಥಾಯಿಯಾಯಿತು. ಫ್ರಾನ್ಸ್‌ದೇಶದಲ್ಲಿ ಅನೇಕ ವಿಚಾರತಜ್ಞರು ಸಮಾನತೆಯ ಸಮಸ್ಯೆಯನ್ನು ಜಿಜ್ಞಾಸೆಗೆ ಒಳಪಡಿಸಿದರು. ಅದರ ವಿಷಯವಾಗಿ ಸಾಹಿತ್ಯ ಬೆಳೆಯಲಾರಂಭಿಸಿತು. ಸಮಾನತೆ ಇರುವ ಸಮಾಜವನ್ನು ಬುದ್ಧಿಯ ಬಲದಿಂದ ರಚಿಸಲು ಸಾಧ್ಯವೆಂದು ತಿಳಿಸಿದರು. ಇಂತಹವುಗಳಲ್ಲಿ 'ಸಮಾಜವಾದ' ಎಂಬ ಹೆಸರಿನಲ್ಲಿ ಪ್ರಕಟವಾದ ಫ್ರಾನ್ಸಿನ ಫೌರಿಯರ್, ಪ್ರೌಧನ್ ಮತ್ತು ಮುಖ್ಯವಾಗಿ ಸೈಂಟ್ ಸೈಮನ್‌ರ ಬರೆಹಗಳು ಬಹಳ ಮುಖ್ಯವಾದವು. 'ಸಮಾನ ಸಮಾಜದ' ಮಾದರಿಯಂತೆ ಅಲ್ಲಲ್ಲಿ ಪ್ರಾಯೋಗಿಕ ಕೇಂದ್ರಗಳೂ ಆರಂಭವಾದವು. ಫ್ರಾನ್ಸ್‌ದೇಶ ಸಮಾಜವಾದ ತತ್ತ್ವಕ್ಕೆ ತಾರುಮನೆಯಾಯಿತು.

ಈ ಮಧ್ಯೆ ಇಂಗ್ಲೆಂಡ್ ದೇಶದಲ್ಲಿ ಕೈಗಾರಿಕಾ ಕ್ರಾಂತಿ (Industrial Revolution) ಉಂಟಾಗಿ, ಕ್ರಮೇಣ ಕ್ರಾಂತಿ ಯೂರೋಪಿನ

ಅನೇಕ ಭಾಗಗಳಿಗೆ, ಮುಖ್ಯವಾಗಿ ಫ್ರಾನ್ಸ್, ಬೆಲ್ಜಿಯಂ ಮತ್ತು ಜರ್ಮನಿ ದೇಶಗಳಿಗೆ, ಹರಡಲಾರಂಭಿಸಿತು. ಈ ಕ್ರಾಂತಿ ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳ ರಾಜಕೀಯ ಕ್ರಾಂತಿಗಳಷ್ಟೇ ಮುಖ್ಯವಾದದ್ದು. ಬಹುಶಃ ಕೈಗಾರಿಕಾ ಕ್ರಾಂತಿ ಈ ಎರಡು ಕ್ರಾಂತಿಗಳಿಗಿಂತ ಮಿಗಿಲಾದ ಪರಿಣಾಮವನ್ನು ಪ್ರಪಂಚದ ನಾನಾಭಾಗಗಳಲ್ಲಿ ಉಂಟುಮಾಡಿದೆ ಎಂದರೆ ಅತಿಶಯೋಕ್ತಿ ಆಗಲಾರದು. ಉತ್ಪಾದನೆಯಲ್ಲಿ ಯಾಂತ್ರಿಕ ಶಕ್ತಿಯನ್ನು ಉಪಯೋಗಿಸುವುದೇ ಕೈಗಾರಿಕಾ ಕ್ರಾಂತಿ. ಈ ಕ್ರಾಂತಿ ಖಾಸಗೀ ಬಂಡವಾಳ ಶೇಖರಣೆ, ಕೂಲಿಗಾರರ ಸಂಖ್ಯೆಯ ಅಭಿವೃದ್ಧಿ ಲಾಭೈಕ ಧ್ಯೇಯದಿಂದ ಸರಕುಗಳ ಉತ್ಪಾದನೆ ಇವು ಉಂಟಾದುವು. ಕೂಲಿಗಾರರು ಸಾಮೂಹಿಕವಾಗಿ ತಯಾರಿಸಿದ್ದೆಲ್ಲಾ ಬಂಡವಾಳಗಾರನ ಸ್ವತ್ತಾಯಿತು. ಕೂಲಿಗಾರರಿಗೆ ಯಾವ ಸ್ವಾಮ್ಯವೂ ಇಲ್ಲದೆ ದುಡಿಮೆ ಮಾತ್ರ ಉಳಿಯಿತು.

ಕೈಗಾರಿಕಾ ಕ್ರಾಂತಿ ಮತ್ತೊಂದು ಕಠೋರ ಪರಿಣಾಮವನ್ನು ತಂದಿತು. ವ್ಯವಸಾಯ ರಂಗದಲ್ಲಿ ಜೀತ, ಕೂಲಿ, ವಾರ ಗುತ್ತಿಗೆಯ ಮೂಲಕ ಶೋಷಣೆ ಆಗುತ್ತಿರುವಂತೆ ಕೈಗಾರಿಕಾ ರಂಗದಲ್ಲಿ ಇನ್ನೂ ಹೆಚ್ಚಾದ ಶೋಷಣೆ ಪ್ರಾರಂಭವಾಯಿತು. ಶೋಷಣೆ ಹೆಚ್ಚಿದಂತೆ ದೇಶದಲ್ಲಿ ದಾರಿದ್ರ್ಯ, ನಿರ್ಗತಿ ಹೆಚ್ಚಿದವು. ಇನ್ನೊಂದುಕಡೆ ಕೈಗಾರಿಕಾ ಸ್ವಾಮ್ಯ ವರ್ಗದಲ್ಲಿ ಸಂಪತ್ತು ಸಂಗ್ರಹವಾಯಿತು. ಸಮಾಜ ಇಬ್ಭಾಗವಾಗಿ ಒಡೆಯಿತು. ಸ್ವಾಮ್ಯವುಳ್ಳವರ್ಗ, ಸ್ವಾಮ್ಯವಿಲ್ಲದ ದುಡಿಮೆಗಾರ ವರ್ಗ ಉಂಟಾದವು. ಪ್ರಾರಂಭದಲ್ಲಿ ಕೈಗಾರಿಕಾ ಕ್ರಾಂತಿಯ ಪರಿಣಾಮವನ್ನು ಕಾರ್ಮಿಕವರ್ಗ ಗಮನಿಸಲಿಲ್ಲ. ಕ್ರಮೇಣ ಶೋಷಣೆ ಅತ್ಯಧಿಕ ರೀತಿಯಲ್ಲಿ ಆಗುತ್ತಿರುವುದನ್ನು ಕಾರ್ಮಿಕವರ್ಗ ಕಂಡಿತು; ಅದರಿಂದ ಪ್ರತಿಭಟನೆ ಮುಷ್ಕರಗಳು ಆರಂಭವಾದವು.

ಕೈಗಾರಿಕಾ ಕ್ರಾಂತಿ ಜನಸಮುದಾಯಕ್ಕೆ ತಂದ ನಿರ್ಗತಿಕ ಬಾಳನ್ನು ನೋಡಿ, ಮರುಕತಾಳಿ, ತಡೆಗಟ್ಟಲು ಕೆಲವು ಉದಾರಿಗಳು ಮುಂದೆ ಬಂದರು. ಇಂತಹ ಉದಾರಿಗಳಲ್ಲಿ ಇಂಗ್ಲೆಂಡಿನ ರಾಬರ್ಟ್ ಓವೆನ್ (1771–1858) ಎಂಬಾತನು ಚಿರಸ್ಮರಣೀಯನು. ಯಂತ್ರದ ಉಪಯೋಗದಿಂದ ಶೋಷಣೆಯಾಗುವುದಿಲ್ಲ. ಅದರ ಉಪಯೋಗದಿಂದ ಬಂದ ಪ್ರತಿಫಲವನ್ನು (ಲಾಭವನ್ನು) ದುಡಿಯುವ ಕೂಲಿಗಳಿಗೇ ಹಿಂತಿರುಗಿ

ಕೊಡುವುದಾದರೆ ಶೋಷಣೆಗೆ ಅವಕಾಶವಿಲ್ಲವೆಂದು ಓವೆನ್ ತಿಳಿಸಿದನು. ಅದರಂತೆ ಪರಸ್ಪರ ಸಹಕಾರ ನೀತಿಯಮೇಲೆ ಕೈಗಾರಿಕಾ ಉದ್ಯಮವನ್ನು ನ್ಯೂಲಾನಾರ್ಕ್ ಎಂಬ ಸ್ಥಳದಲ್ಲಿ ನಡೆಸಿ ದುಡಿಮೆಗಾರರಿಂದ ಮೆಚ್ಚುಗೆಯನ್ನು ಪಡೆದನು. ದುಡಿಮೆಗಾರರು ಸಹ ಮೊದಲಿಗಿಂತ ಹೆಚ್ಚಿಗೆ ದುಡಿಯಲಾರಂಭಿಸಿದರು. ಆದರೆ ಓವನ್ ಅಷ್ಟಕ್ಕೆ ತೃಪ್ತನಾಗದೆ ತನ್ನ ಉದ್ಯಮದ ಮರ್ಮವನ್ನು ಇತರೆಡೆಗಳಲ್ಲಿ ಪ್ರಚಾರಮಾಡಲನುವಾದನು. ಖಾಸಗೀ ಸ್ವಾಮ್ಯದ ಆವಶ್ಯಕತೆಯೇ ಇಲ್ಲವೆಂದನು. ಖಾಸಗೀಸ್ವಾಮ್ಯವರ್ಗ ಇದರಿಂದ ಗಾಬರಿಗೊಂಡಿತು. ಓವೆನ್ನನನ್ನು ನಿಂದೆಗೆ ಗುರಿಪಡಿಸಿ ದೇಶದಿಂದ ಹೊರದೂಡಿತು. ಅಡ್ಯಾಮ್‌ಸ್ಮಿತ್[1] ಮತ್ತು ಡೇವಿಡ್ ರಿಕಾರ್ಡೋ[2] ಇವ

(1) ಅಡ್ಯಾಮ್‌ಸ್ಮಿತ್ (1723–1790) ಗ್ಲಾಸ್ಗೋ ವಿಶ್ವವಿದ್ಯಾನಿಲಯದಲ್ಲಿ ಪ್ರಾಧ್ಯಾಪಕನಾಗಿದ್ದನು. ಈತನು ಬರೆದ 'Wealth of Nations' ಎಂಬ ಅರ್ಥಶಾಸ್ತ್ರ ಒಂದು ಉದ್ಗ್ರಂಥವಾಗಿದೆ.

(2) ಡೇವಿಡ್ ರಿಕಾರ್ಡೋ (1772–1823) ಒಬ್ಬ ಪ್ರಮುಖ ವ್ಯಾಪಾರೋದ್ಯಮಿ. 'Principles of Political Economy' ಎಂಬ ಉದ್ಗ್ರಂಥವನ್ನು ಪ್ರಕಟಿಸಿದನು.

ಅಡ್ಯಾಮ್‌ಸ್ಮಿತ್ ಮತ್ತು ಡೇವಿಡ್ ರಿಕಾರ್ಡೋ ಇವರು ಬಂಡವಾಳಷಾಹಿ ಅರ್ಥಶಾಸ್ತ್ರದ ಸ್ಥಾಪನಾಚಾರ್ಯರು. ಖಾಸಗೀಸ್ವಾಮ್ಯ, ಖಾಸಗೀ ಉದ್ಯಮ, ಪ್ರೈವೇಟ್, ದುಡಿಮೆಯ ಆಧಾರದಮೇಲೆ ಸರಕುಗಳ ಮೌಲ್ಯ ನಿರ್ಣಯ—ಇವು ಇವರ ಅರ್ಥಶಾಸ್ತ್ರದ ಆಧಾರ ಸ್ತಂಭಗಳು. ಕ್ರಮೇಣ ಇವರಿಂದ ಪ್ರತಿಪಾದಿತವಾದ ಅರ್ಥಶಾಸ್ತ್ರ ಮಾರ್ಷಲ್, ಎಡ್ಜ್‌ವರ್ತ್ ಮತ್ತು ಇತರರಿಂದ ಟೀಕೆಗೊಳಗಾಯಿತು. ದುಡಿಮೆಯ ಆಧಾರದಮೇಲೆ ಸರಕುಗಳ ಮೌಲ್ಯ ನಿರ್ಣಯ ತತ್ತ್ವಕ್ಕೆ ಬದಲು ಸರಬರಾಜು ಮತ್ತು ಗಿರಾಕಿಯ (Supply and demand) ನಿಯಮದಿಂದ ಸರಕುಗಳ ಬೆಲೆ ನಿರ್ಣಯವಾಗುತ್ತದೆಂದರು. ಇತ್ತೀಚೆಗೆ ಆಧುನಿಕ ಅರ್ಥಶಾಸ್ತ್ರದಲ್ಲಿ ಸರಕುಗಳ ಮೌಲ್ಯ ನಿರ್ಧಾರದ ಬಗ್ಗೆ ವಿಪರೀತ ಗೊಂದಲವೂ ಭಿನ್ನಾಭಿಪ್ರಾಯಗಳೂ ತಲೆಹಾಕಿವೆ. ಮೌಲ್ಯನಿರ್ಣಯ ತತ್ತ್ವವನ್ನೇ ಉಚ್ಚಾಟನೆಗೊಳಿಸಲು ಯತ್ನಿಸಲಾಗಿದೆ.

ಮಾರ್ಕ್ಸ್–ಏಂಗೆಲ್ಸ್‌ರವಾದದಲ್ಲಿ ದುಡಿಮೆಯ ಆಧಾರದಮೇಲೆ ಸರಕುಗಳ ಮೌಲ್ಯನಿರ್ಧಾರ ತತ್ತ್ವ ಬಹಳ ಮುಖ್ಯವಾದದ್ದು. ದುಡಿಮೆಯ ಪ್ರಮಾಣ ಪದಾರ್ಥಗಳ ಮೌಲ್ಯ ನಿರ್ಧರಿಸುತ್ತದೆಂದು ಅಡ್ಯಾಮ್‌ಸ್ಮಿತ್ ಮತ್ತು ರಿಕಾರ್ಡೋ ಪ್ರತಿಪಾದಿಸಿದ ಮೌಲ್ಯತತ್ತ್ವವನ್ನು ತಿದ್ದುಪಡಿಗೊಳಪಡಿಸಿದರು. ದುಡಿಮೆಯ ಪ್ರಮಾಣ (Quantity of Labour) ಪದಾರ್ಥಗಳ ಮೌಲ್ಯವನ್ನು ನಿರ್ಧರಿಸುವುದರ ಬದಲು ಪದಾರ್ಥಗಳ ಉತ್ಪಾದನೆಗೆ ಅವಶ್ಯಕವಾಗಿ ಬೇಕಾಗುವ ದುಡಿಮೆಯ ಕಾಲ (Socially necessary labour time) ಮೌಲ್ಯವನ್ನು ನಿರ್ಧರಿಸುವುದೆಂದರು. ಕಾರ್ಮಿಕರ ಶೋಷಣೆಯು ದುಡಿಮೆ ಶಕ್ತಿಯ (Labour Power) ಅಪಹರಣದಲ್ಲಿ ಅಡಗಿರುವುದಾಗಿ ತಿಳಿಸಿದರು.

ರಿಂದ ಪ್ರತಿಪಾದಿತವಾದ ಬಂಡವಾಳಶಾಹಿ ಅರ್ಥಶಾಸ್ತ್ರಕ್ಕೆ (Capitalist Economics) ವಿಪುಲ ಪುರಸ್ಕಾರ ಸಿಕ್ಕಿತು. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ಸಕಲರಿಗೂ ನ್ಯಾಯವನ್ನೂ ಅವರವರ ಯೋಗ್ಯತಾನುಸಾರ ಸುಖ ಸಂಪತ್ತುಗಳನ್ನೂ ದೊರಕಿಸಿಕೊಟ್ಟಿದೆ ಎಂದು ಸಾರಲಾಯಿತು. ಕಾರ್ಮಿಕರ ಶೋಷಣೆಯೆ ಇಲ್ಲವೆಂದು ಬಂಡವಾಳಶಾಹಿ ಅರ್ಥಶಾಸ್ತ್ರ ಸಮರ್ಥಿಸಿತು. ಆದರೆ ವಾಸ್ತವವಾಗಿ ಕಾರ್ಮಿಕವರ್ಗದ ಸ್ಥಿತಿಗತಿಗಳೇ ಬೇರೆಯಾಗಿದ್ದವು. ಬಂಡವಾಳ ವ್ಯವಸ್ಥೆಯ ಬಗ್ಗೆ ಎಲ್ಲ ಸಮರ್ಥನೆಯೂ ಕಾರ್ಮಿಕ ವರ್ಗದ ಚಳವಳಿಯನ್ನು ತಡೆಗಟ್ಟಲು ಅಶಕ್ತವಾದವು.

ಕಾರ್ಮಿಕವರ್ಗದ ಪ್ರತಿಭಟನೆ ಮತ್ತು ಚಳವಳಿಗೆ ಶೋಷಣೆ ಮುಖ್ಯ ಕಾರಣವಾಯಿತು. ಶೋಷಣೆ ತಪ್ಪಿ ಎಲ್ಲರಿಗೂ ನ್ಯಾಯ ಸಿಗುವಂತಹ ವ್ಯವಸ್ಥೆ ಬಗ್ಗೆ ಜಿಜ್ಞಾಸೆ ಪ್ರಾರಂಭವಾಯಿತು. ಖಾಸಗೀ ಸ್ವಾಮ್ಯವನ್ನು ನಾಶಪಡಿಸಿದಹೊರತು ಶೋಷಣೆ ತಪ್ಪಿದ್ದಲ್ಲವೆಂದೂ, ಶೋಷಣೆಗೂ ಆರ್ಥಿಕ ಅಸಮಾನತೆಗೂ ಖಾಸಗೀಸ್ವಾಮ್ಯವೇ ಕಾರಣವೆಂದೂ, ಆರ್ಥಿಕ ಸಮಾನತೆಯಿಂದ ಮಾತ್ರ ಸಮಾಜದಲ್ಲಿ ನ್ಯಾಯಸ್ಥಾಪನೆ ಸಾಧ್ಯವೆಂದೂ ಭಾವನೆ ಬೇರೂರಿತು. ಹೀಗೆ ಸಮಾಜವಾದ ಜನ್ಮತಾಳಿತು.

ಆದರೆ ಸಮಾಜವಾದೀ ಸಮಾಜವನ್ನು ತರುವುದು ಹೇಗೆ ? ಸಮಾಜವಾದೀ ಸಮಾಜ ಬಂದರೂ ಅಲ್ಲಿ ಸಮಾನತೆ ಹೇಗಿರಬೇಕು, ಇವುಗಳನ್ನು ತರುವುದಕ್ಕೆ ಯಾರು ಮುಂದಾಳತ್ವ ವಹಿಸಬೇಕು, ಅಂತಹ ಸಮಾಜದಲ್ಲಿ ಸರ್ಕಾರ, ಆಡಳಿತ, ಹಕ್ಕು ಬಾಧ್ಯತೆಗಳು ಹೇಗಿರಬೇಕು, ನ್ಯಾಯ ಸಮಾಜವೆಂದರೇನು, ಎಂಬೀ ವಿಷಯಗಳು ಚರ್ಚೆಗೆ ಆಕರವಾದವು. ಸಮಾಜವಾದಿಗಳಲ್ಲೇ ಏಕಾಭಿಪ್ರಾಯವಿರಲಿಲ್ಲ. ಹಲವರು ಹಲವು ರೀತಿಯಲ್ಲಿ ಸಮಾಜವಾದೀ ಸಮಾಜವನ್ನು ಬಣ್ಣಿಸಿದರು. ಕೆಲವರು ಬುದ್ಧಿ ಶಕ್ತಿಯ ಬಲದಿಂದ ನ್ಯಾಯ ಸಮಾಜವನ್ನು ರಚಿಸಿ ಅದನ್ನು ಪ್ರದರ್ಶಿಸಿದರೆ ಜನರು ಮೆಚ್ಚಿ ಅನುಸರಿಸುವರೆಂದು ತಿಳಿಸಿದರು. ಇನ್ನು ಕೆಲವರು ಸ್ವಾಮ್ಯವನ್ನು ನಾಶಪಡಿಸಿದರೆ ಸಾಕು, ಮಿಕ್ಕದ್ದೆಲ್ಲವೂ ತನ್ನಷ್ಟಕ್ಕೆ ತಾನೆ ರೂಪಗೊಂಡು ನ್ಯಾಯ ಲಭಿಸುವುದೆಂದು ತಿಳಿಸಿದರು. ಮತ್ತೆ ಕೆಲವರು ಮನಃ ಪರಿವರ್ತನೆಯ ಮೂಲಕ, ಸ್ವಾಮ್ಯವರ್ಗವನ್ನು ಒಲಿಸಿಕೊಳ್ಳುವುದರ ಮೂಲಕ, ಅವರಲ್ಲಿ ದಾನ ಧರ್ಮ ಬುದ್ಧಿಯನ್ನು ಉತ್ಪನ್ನಮಾಡುವುದರ ಮೂಲಕ

ಸಾಧ್ಯವಾಗುತ್ತದೆಂದು ತಿಳಿಸಿದರು. ಇನ್ನು ಕೆಲವರು ಸಮಾಜವಾದೀಸಮಾಜ ಒಂದುಗುರಿ (Ideal), ಅದು ಯಾವಾಗ ಲಭಿಸುತ್ತದೆಯೋ ಹೇಳುವುದಕ್ಕಾಗುವುದಿಲ್ಲ; ಆ ಗುರಿಯನ್ನು ಜ್ಞಾಪಕದಲ್ಲಿಟ್ಟು ಖಾಸಗೀ ಸ್ವಾಮ್ಯ ವ್ಯವಸ್ಥೆಯನ್ನು ಹಲವೆಡೆಗಳಲ್ಲಿ ಸುಧಾರಣೆ ಮಾಡುವುದಾದರೆ ಕ್ರಮೇಣ ಆ ಗುರಿಯನ್ನು ಮುಟ್ಟಬಹುದೆಂದು ನುಡಿದರು. ಅಂತೂ ಶೋಷಿತವರ್ಗದ ಚಳವಳಿಗಿಂತ ಮಿಗಿಲಾಗಿ ಸಮಾಜವಾದಿಗಳೆಂದು ಹೇಳಿಕೊಳ್ಳುವ ತತ್ತ್ವ ನಿರೂಪಕರ ಗೊಂದಲ ಹೆಚ್ಚಾಯಿತು. ನ್ಯಾಯವಂತೂ ಶೋಷಿತವರ್ಗಕ್ಕೆ ಲಭಿಸಲಿಲ್ಲ. ಅವರ ಚಳವಳಿಯೂ ನಿಲ್ಲಲಿಲ್ಲ. ಸ್ವಾಮ್ಯವರ್ಗದ ಮನಃ ಪರಿವರ್ತನೆಯೂ ಆಗಲಿಲ್ಲ. ಬಂದ ಸುಧಾರಣೆಗಳು ಶೋಷಣೆಯನ್ನು ಚ್ಯುತಿಗೊಳಿಸಲಿಲ್ಲ. ಶೋಷಿತವರ್ಗ ದಿಕ್ಕೆಟ್ಟು, ಕಂಗಲಾಗಿ, ಚಳವಳಿಗಳಲ್ಲಿ ನೊಂದು ಬೇಸತ್ತಿರುವಾಗ ಮಾರ್ಕ್ಸ್ ಮತ್ತು ಏಂಗೆಲ್ಸ್ ಎಂಬ ಜರ್ಮನೀ ದೇಶದ ಗೆಳೆಯರು ತಮ್ಮದೇ ಆದ ಒಂದು ಹೊಸ ರೂಪದ ಸಮಾಜ ವಾದವನ್ನು ಪ್ರತಿಪಾದಿಸಿದರು. ತಮ್ಮ ಸಮಾಜವಾದವನ್ನು ವೈಜ್ಞಾನಿಕ ಸಮಾಜವಾದವೆಂದು ಕರೆದರು. ಇತರ ಸಮಾಜವಾದಗಳನ್ನು ಕಾಲ್ಪನಿಕ ಸಮಾಜವಾದಗಳೆಂದು ಘೋಷಿಸಿದರು. ತಮ್ಮ ವಾದದ ಮೂಲಕ ಶೋಷಿತವರ್ಗದ ಚಳವಳಿಯ ಇಷ್ಟಾರ್ಥ ಕೈಗೂಡುವುದೆಂದು ತಿಳಿಸಿದರು. ಶೋಷಿತವರ್ಗದ ವಿಮುಕ್ತಿ ಶೋಷಿತವರ್ಗದ ಚಳವಳಿಯಿಂದ ಮಾತ್ರ ಸಾಧ್ಯವೆಂದು ಸ್ಪಷ್ಟಪಡಿಸಿದರು. ಅಂದಿನಿಂದ ಶೋಷಿತವರ್ಗದ ಚಳವಳಿ ಕಾರ್ಮಿಕವರ್ಗದ, ರೈತವರ್ಗದ ಮತ್ತು ಪ್ರಾಜ್ಞರ ಚಳವಳಿಯಾಗಿದೆ. ಮಾರ್ಕ್ಸ್ ತತ್ತ್ವ ಈ ಚಳವಳಿಯ ತತ್ತ್ವವಾಗಿದೆ. ಈ ತತ್ತ್ವವನ್ನು ಆಚರಣೆಗೆ ತರಲು ಹೊಡಿರುವ ಚಳವಳಿ ಸಮಾಜವಾದೀ ಚಳವಳಿ ಅಥವಾ ಕಮ್ಯೂನಿಸ್ಟ್ ಚಳವಳಿ ಆಗಿದೆ.

ಅಧ್ಯಯನ :

What Happened in History : G. Childe, Pelican, London.
Social Evolution : ,, Watts, London.
Origin of the family, private property and the state;
F. Engels : (Marx and Engels Selected Works Vol. II. Pages 155-278; Ed. 1951)

Social Struggles in Antiquity : M. Beer,
Leonard Parsons, London.
Social ,, The Middle Ages : M. Beer,
Leonard Parsons, London.
The English Resolution 1640 : Ed. C. Hill,
L and W, London.
Left-Wing Democracy in English Civil War,
D. W. Petegorsky : Victor Gollancz.
Essays on the French Revolution: Ed. T. A. Jackson, L and W, London.
Birth of Socialism Series :
(i) The French Revolution of 1848 : By A. Soboul,
(ii) The German ,, 1848 : Roy Pascal,
(iii) The Struggle for Democracy in England :
E. Rickwood, Fore Publications, London.
India—From Primitive Communism to Savagery : Dange,
Peoples' Publishing House, Bombay. 2nd Ed.

ಕಲ್ಪನಾ ಮತ್ತು ವೈಜ್ಞಾನಿಕ ಸಮಾಜ ವಾದಗಳು.

ಅಧ್ಯಾಯ--2.

1848 ಅತಿ ಮುಖ್ಯವಾದ ವರ್ಷ. ಈ ವರ್ಷದ ಜೂನ್ ತಿಂಗಳಲ್ಲಿ ಮಾರ್ಕ್ಸ ಮತ್ತು ಏಂಗೆಲ್ಸರು ತಮ್ಮ ತತ್ತ್ವದ ತಿರುಳನ್ನು ಸಂಕ್ಷಿಪ್ತವಾಗಿ "ಸಮವಾದಿಗಳ ಪ್ರಣಾಳಿಕೆ" (Communist Manifesto) ಎಂಬ ಗ್ರಂಥದ ಮೂಲಕ ಪ್ರಕಟಪಡಿಸಿದರು. ಇವರು ಈ ಸಂದರ್ಭದಲ್ಲಿ ತಮ್ಮದೇ ಆದ ಸಮಾಜವಾದೀ ತತ್ತ್ವವನ್ನು ಪ್ರಕಟಿಸುವುದಕ್ಕೂ ತಾವು ಪ್ರಕಟಿಸಿದ ಗ್ರಂಥಕ್ಕೆ "ಸಮವಾದಿಗಳ ಪ್ರಣಾಳಿಕೆ" ಎಂದು ಹೆಸರು ಇಡುವುದಕ್ಕೂ ಕಾರಣ ಗಳಿದ್ದವು. ಇವುಗಳ ಪರಿಚಯ ಮಾರ್ಕ್ಸ-ಏಂಗೆಲ್ಸರು ಪ್ರತಿಪಾದಿಸಿರುವ ಸಮಾಜವಾದೀ ತತ್ತ್ವದ ಸ್ವರೂಪ, ಅದರ ವೈಶಿಷ್ಟ್ಯತೆ ಮತ್ತು ಸಮಾಜ ವಾದದ ಇತಿಹಾಸದಲ್ಲಿ ಮಾರ್ಕ್ಸ ವಾದದ ಪಾತ್ರವನ್ನು ತಿಳಿಯಲು ಸಾಧಕ ವಾಗಿದೆ.

ಮಾರ್ಕ್ಸ ಹತ್ತೊಂಬತ್ತನೇ ಶತಮಾನದ ಆದಿಭಾಗದಲ್ಲಿ ಪ್ರಚಾರ ದಲ್ಲಿದ್ದ ಸಮಾಜವಾದೀ ತತ್ತ್ವಗಳಿಗೆ ಮನಸೋತನು. ಅವುಗಳ ಅಧ್ಯಯನ ಕ್ಕಾಗಿ ಸಮಾಜವಾದೀ ತತ್ತ್ವಗಳಿಗೆ ತೌರುಮನೆಯಂತಿದ್ದ ಫ್ರಾನ್ಸ ದೇಶಕ್ಕೆ ಬಂದನು.[1] ಹಾಗೆಯೇ ಮಾರ್ಕ್ಸನ ಜೀವನದ ಸಹೋದ್ಯೋಗಿ

---

(1) ಕಾರ್ಲ್ ಮಾರ್ಕ್ಸ್ (1818-1883) — 5 ನೇ ಮೇ 1818 ರಲ್ಲಿ ಜರ್ಮನೀ ದೇಶದ ಟ್ರೀರ್ ಎಂಬ ಊರಿನಲ್ಲಿ ಜನಿಸಿದನು. ಈತನ ತಂದೆ ವಕೀಲ ವೃತ್ತಿಯವರು. ಟ್ರೀರ್‌ನಲ್ಲಿ ಮಾರ್ಕ್ಸ್ ತನ್ನ ಪ್ರಾರಂಭದ ವ್ಯಾಸಂಗಗಳನ್ನು ಮುಗಿಸಿ, ಬಾನ್ ಮತ್ತು ಬರ್ಲಿನ್ ವಿಶ್ವವಿದ್ಯಾನಿಲಯಗಳಲ್ಲಿ ವ್ಯಾಸಂಗ ನಡೆಸಿ ದನು. ಸಮಾಜದ ಆಗು ಹೋಗುಗಳನ್ನು ತಿಳಿಯಲು ಯತ್ನಿಸಿ ಅಂದು ವಿಖ್ಯಾತ ರಾಗಿದ್ದ ಹೆಗೆಲ್ ಮತ್ತು ಫ್ಯೂಯರ್‌ಬಾಕ್ ಎಂಬ ತತ್ತ್ವವೇತ್ತಗಳ ಅನುಯಾಯಿ ಯಾದನು. ಆದರೆ ಬೆಳಕು ಸಿಗಲಿಲ್ಲ. ಸಮಾಜದ ಆರ್ಥಿಕ ವ್ಯವಸ್ಥೆಯ ಅರಿವಿ ನಲ್ಲಿ ಸಮಾಜದ ಆಗು ಹೋಗುಗಳು ಅಡಗಿರುವುದನ್ನು ಕಂಡನು. ಭೌತವಾದಿ ಯಾದನು. ತನ್ನ ಸಂದೇಶವನ್ನು ಸಾರಲು ಸಿದ್ಧನಾದನು.

ಜರ್ಮನಿಯಲ್ಲಿ ಅಂದು ಪ್ರಗತಿ ವಿರುದ್ಧ ವಾತಾವರಣವಿದ್ದುದರಿಂದ ವಿಶ್ವ ವಿದ್ಯಾನಿಲಯದಲ್ಲಿ ಅಧ್ಯಾಪಕ ವೃತ್ತಿಯನ್ನು ಅವಲಂಬಿಸುವುದು ಕಷ್ಟವಾಯಿತು. ಕಲೋನ್‌ನಗರದಲ್ಲಿ ಪ್ರಕಟವಾಗುತ್ತಲಿದ್ದ ತೀವ್ರಗಾಮಿ ಬೂರ್ಶ್ವಾ ಪತ್ರಿಕೆಯ

ಏಂಗೆಲ್ಸ್ ಸಹ ಬಂದನು. ಃ ಸಮಾಜವಾದೀ ತತ್ತ್ವ ನಿರೂಪಣೆಯಲ್ಲಿ ಗೊಂದಲವನ್ನು ಮಾರ್ಕ್ಸ್–ಏಂಗೆಲ್ಸರು ಕಂಡರು. ಆ ಅಧ್ಯಯನ ಪ್ರಚಾರ ದಲ್ಲಿದ್ದ ಸಮಾಜವಾದೀ ತತ್ತ್ವಗಳ ನಿಷ್ಪ್ರಯೋಜತೆಯನ್ನು ವ್ಯಕ್ತಪಡಿಸಿತು.


ಸಂಪಾದಕನಾದನು. ಆದರೆ ಕೆಲವು ಕಾಲದಲ್ಲೇ ಪತ್ರಿಕೆಯ ಮಾಲೀಕರಿಂದ ಒತ್ತಾಯ ಬಂದು ಸಂಪಾದಕತ್ವಕ್ಕೆ ರಾಜೀನಾಮೆ ಇತ್ತನು. ಫ್ರಾನ್ಸ್‌ದೇಶದ ಸಮಾಜ ವಾದೀ ತತ್ತ್ವದಿಂದ ಆಕರ್ಷಿಸಲ್ಪಟ್ಟು ಅದರ ಅಧ್ಯಯನಕ್ಕಾಗಿ ಪ್ಯಾರಿಸ್‌ನಗರಕ್ಕೆ ಬಂದನು. ಅಲ್ಲಿ ಸಮಾಜವಾದೀ ಚಳವಳಿಯಲ್ಲಿ ಭಾಗವಹಿಸಿದನು 1845 ರಲ್ಲಿ ಪ್ಯಾರಿಸ್‌ನಗರದಿಂದ ಹೊರದೂಡಲ್ಪಟ್ಟು ಬ್ರಸಲ್ಸ್‌ನಗರಕ್ಕೆ ಬಂದನು. ಅಲ್ಲಿಂದಲೂ ಸಹ 1848 ರಲ್ಲಿ ಹೊರದೂಡಲ್ಪಟ್ಟು ತನ್ನ ಜೀವನದ ಅಂತ್ಯದವರೆಗೂ ಲಂಡನ್ ನಗರದಲ್ಲೇ ನೆಲೆಸಿದನು.

ಈ ಪ್ರತಿಭಾನ್ವಿತನ ಜೀವನ ಚರಿತ್ರೆಯನ್ನು ಫ್ರಾನ್ಸ್ ಮೆಹರಿಂಗ್‌ರವರು ಅತ್ಯಂತ ವಿಹಂಗಮವಾಗಿ ಚಿತ್ರಿಸಿದ್ದಾರೆ. ಅಗತ್ಯವಾಗಿ ಓದಲೇಬೇಕು (Karl Marx: Story of His Life: By F. Mehring, Bodley Head, London.)

(2) ಫ್ರೆಡರಿಕ್ ಏಂಗಲ್ಸ್ (1820-1895)–28 ನೇ ನವಂಬರ್ 1820 ರಲ್ಲಿ ಜರ್ಮನೀದೇಶದ ಬಾರ್‌ಮನ್ ಎಂಬ ಊರಿನಲ್ಲಿ ಜನಿಸಿದನು. ಈತನ ತಂದೆ ಹತ್ತಿ ಕಾರ್ಖಾನೆಯ ಮಾಲೀಕರು. ಮಾರ್ಕ್ಸ್ ಮತ್ತು ಏಂಗೆಲ್ಸ್‌ರ ಸಮಾಗಮ ನಡೆದು ಈರ್ವರೂ ಏಕಾಭಿಪ್ರಾಯದಿಂದಿರುವುದನ್ನು ಕಂಡರು. 1848 ರಲ್ಲಿ ಮಾರ್ಕ್ಸ್ ಪ್ರಕಟಿಸಿದ ಕಮ್ಯೂನಿಸ್ಟರ ಪ್ರಣಾಳಿಕೆಯಬರೆವಣಿಗೆಗೆ ನೆರವಾದನು ಇಂಗ್ಲೇಂಡಿನಲ್ಲಿ ತನ್ನ ತಂದೆಯ ಹತ್ತಿಬಟ್ಟೆಯ ಗಿರಣಿಯೊಂದರಲ್ಲಿದ್ದುಕೊಂಡು ಮಾರ್ಕ್ಸ್‌ಗೆ ನೆರ ವಾಗಿ ನಿಂತನು. ಮಾರ್ಕ್ಸ್–ಏಂಗೆಲ್ಸ್‌ರ ಸ್ನೇಹ ವರ್ಣಿಸಲಸಾಧ್ಯವಾದದ್ದು. ಅದೊಂದು ಚರಿತ್ರಾರ್ಹ ಅಮರಗೆಳೆತನ ಮಾರ್ಕ್ಸ್ ಅತ್ಯಂತ ಬಡತನಕ್ಕೆ ಸಿಕ್ಕಿ ನರಳುತ್ತಿರುವಾಗ ಏಂಗೆಲ್ಸ್ ಆತನ ಸಹಾಯಕ್ಕೆ ಬಂದನು. ಏಂಗೆಲ್ಸ್‌ನ ಸಹಾಯ ವಿಲ್ಲದಿದ್ದರೆ ಮಾರ್ಕ್ಸ್ ತನ್ನ ಅತಿ ಮುಖ್ಯ ಗ್ರಂಥವಾದ 'ಕ್ಯಾಪಿಟಲ್' ಎಂಬ ಗ್ರಂಥವನ್ನು ಬರೆದು ಮುಗಿಸುತ್ತಿದ್ದನೋ ಇಲ್ಲವೋ ತಿಳಿಯದು.

ವೈಜ್ಞಾನಿಕ ಸಮಾಜವಾದ ಮಾರ್ಕ್ಸ್‌ವಾದವೆಂದು ಹೆಸರು ಪಡೆದಿದ್ದರೂ ಏಂಗೆಲ್ಸ್ ಆ ತತ್ತ್ವ ಪ್ರತಿಪಾದನೆಯಲ್ಲಿ ಸಮಭಾಗಿ. ಮಾರ್ಕ್ಸ್ ಸ್ಥಾನಮೂರ್ತಿಯ ಹಾಗೆ ಸಂಶೋಧನೆಯಲ್ಲಿ ತೊಡಗಿದ್ದರೆ, ಏಂಗೆಲ್ಸ್ ಆ ಸಂಶೋಧನೆಯ ಜೊತೆಗೆ ತನ್ನ ಶೋಧನೆಯನ್ನೂ ಸೇರಿಸಿ ವೈಜ್ಞಾನಿಕ ಸಮಾಜವಾದವನ್ನು ಪ್ರಸಾರಮಾಡುವ ಉತ್ಸವಮೂರ್ತಿಯಾದನು.

ಈತನ ಜೀವನ ಚರಿತ್ರೆಯನ್ನು ಸೆಲ್ಡಾ ಕೆ ಕೋಟ್ಸ್‌ರವರು ಬಹು ಸುಂದರ ವಾಗಿ ಚಿತ್ರಿಸಿದ್ದಾರೆ. (The Life and Teachings of Friedrich Engels: By Zelda K coates: Lawrence and Wishart, Ltd., London)



ಫ್ರೆಡರಿಕ್ ಏಂಗಲ್ಸ್

ಕೆಲವು ಸಮಾಜವಾದಿಗಳು ಶೋಷಣೆಗೆ ಒಳಪಟ್ಟವರ ಅಶೋತ್ತರಗಳಿಗೆ ಪರಿಹಾರ ತರುವ ರೀತಿಯಲ್ಲಿ ಸುಧಾರಿತ ಸಮಾಜವನ್ನು 'ನ್ಯಾಯ' 'ಧರ್ಮ' ಗಳ ಹೆಸರಿನಲ್ಲಿ ಪ್ರಚಾರ ಮಾಡಿದ್ದರು. ಸಮಾಜ ವ್ಯವಸ್ಥೆಯನ್ನು 'ನ್ಯಾಯ' 'ಧರ್ಮ' ಗಳ ಅಡಿಗಲ್ಲಿನಮೇಲೆ ಸ್ಥಾಪಿಸುವುದಾದರೆ ಚ್ಯುತಿಗೊಂಡಿರುವ 'ನ್ಯಾಯ' 'ಧರ್ಮ' ಗಳನ್ನು ಪುನರುದ್ಧಾರಮಾಡುವುದಾದರೆ ಎಲ್ಲವೂ ಸರಿಹೋಗುವುದೆಂದಿದ್ದರು. ಇನ್ನು ಕೆಲವರು ಸಮಾಜದಲ್ಲಿ ಕಂಡುಬರುತ್ತಿರುವ ನ್ಯೂನತೆಗಳಿಗೆ ಸ್ವಾರ್ಥ, ಪೈಪೋಟಿ ಮತ್ತು ಲಾಭದಾಸೆ ಕಾರಣಗಳೆಂದೂ, ಸ್ವಾಮ್ಯದಲ್ಲಿ ಅತಿ ಆಸಕ್ತಿಯನ್ನು ಕಡಿಮೆ ಮಾಡಿಕೊಳ್ಳುವುದರಿಂದಲೂ, ಸ್ವಾಮ್ಯವರ್ಗ ತನ್ನ ವರ್ತನೆಯನ್ನು ಮಾರ್ಪಾಡು ಮಾಡಿಕೊಳ್ಳುವುದರ ಮೂಲಕವೂ, ಹೊಂದಿರುವುದೆಲ್ಲವೂ ಬಡವರ ಪರವಾಗಿ ಎಂಬ ಧೋರಣೆಯನ್ನು ಸ್ವಾಮ್ಯವರ್ಗ ತಾಳುವುದರಿಂದಲೂ ಪರಿಹಾರ ಸಿಗುವುದೆಂದಿದ್ದರು. ಸ್ವಾಮ್ಯ ಉಳ್ಳವರು ತಮಗೆ ಸಲ್ಲತಕ್ಕದ್ದನ್ನು ಮಾತ್ರ ಇಟ್ಟುಕೊಂಡು ಮಿಕ್ಕದ್ದೆಲ್ಲವನ್ನೂ ದುಡಿಮೆ ಮಾಡಿದವರ ಸ್ವತ್ತೆಂದು ಭಾವಿಸಿ ನಡೆಯಬೇಕೆಂದೂ, ನ್ಯೂನತೆಗಳಿಗೆ ಮುಖ್ಯವಾಗಿ ಸ್ವಾಮ್ಯ ಕಾರಣವಾಗಿರದೆ ಅದನ್ನು ಉಪಯೋಗಿಸುವ ರೀತಿ ಕಾರಣವಾಗಿದೆ ಎಂದೂ, ಆದುದರಿಂದ ಸ್ವಾಮ್ಯ ಉಳ್ಳವರು ಸಮಾಜದ ಹಿತಚಿಂತಕರಾಗಿ ನಡೆದುಕೊಳ್ಳುವಂತೆ ಪರಿವರ್ತನೆ ಮಾಡುವುದಕ್ಕಾಗಿ ಪ್ರಚಾರವನ್ನು ಕೈಗೊಳ್ಳಬೇಕೆಂದರು. ಇನ್ನು ಕೆಲವರು ಸಮಾಜದಲ್ಲಿರುವ ನ್ಯೂನತೆಗಳಿಗೆ ಸನಾತನ ಮತಧರ್ಮವನ್ನೂ ಮತ್ತು ಅದರ ಆಚರಣೆಯನ್ನೂ ಮರೆತಿರುವುದೇ ಮುಖ್ಯ ಕಾರಣವಾಗಿದೆ ಎಂದಿದ್ದರು. ಕ್ರಿಸ್ತ ಮತಾವಲಂಬಿಗಳು ಕ್ರಿಸ್ತನು ಉದಾಹರಿಸಿದ ನೀತಿವಾಣಿಗಳಲ್ಲಿ ಸಮಾಜ ಕಲ್ಯಾಣ ಅಡಗಿರುವುದಾಗಿಯೂ, ಬಡವನಾದವನು ಶ್ರೀಮಂತನಿಗಿಂತ ಸುಲಭವಾಗಿ ದೇವರ ದಯೆಯನ್ನು ಗಳಿಸುತ್ತಾನೆಂದೂ, ಶ್ರೀಮಂತ ಜೀವನ ಪಾಪದ ಜೀವನವೆಂದೂ, ಆದುದರಿಂದ ಸರ್ವರೂ ಕ್ರೈಸ್ತ ಬೋಧನೆಯನ್ನೇ ಅನುಸರಿಸಬೇಕೆಂದೂ, ಸಮಾಜವಾದ ತತ್ತ್ವ ಕ್ರೈಸ್ತ ಬೋಧನೆಯನ್ನು ಅನುಷ್ಠಾನಕ್ಕೆ ತರುವುದರಲ್ಲಿ ಅಡಗಿದೆ ಎಂದೂ ಪ್ರಚಾರ ಕೈಕೊಂಡಿದ್ದರು. ಇನ್ನು ಕೆಲವರು ಇಂಗ್ಲಿಷ್ ಮತ್ತು ಫ್ರೆಂಚ್ ಕ್ರಾಂತಿಗಳಿಂದ ಸ್ಫೂರ್ತಿ ಪಡೆದು ಸಮಾಜದಲ್ಲಿರುವ ನ್ಯೂನತೆಗಳಿಗೆ ಸ್ವಾಮ್ಯವೇ ಮುಖ್ಯ ಕಾರಣವಾಗಿದೆ

ಎಂದರು. ಫ್ರೌಢನ್ ಎಂಬ ಸಮಾಜವಾದಿ 'ಸ್ವಾಮ್ಯ ಕಳವು' ಎಂದು ಉದ್ಘೋಷಿಸಿದನು (Property is theft). ಹಲವು ಉಗ್ರಗಾಮಿಗಳು ಸ್ವಾಮ್ಯವನ್ನು ವಿನಾಶಗೊಳಿಸಿ ಆರ್ಥಿಕ ಸಮಾನತೆಯನ್ನು ತರುವುದೇ ಸಮಾಜವಾದವೆಂದಿದ್ದರು. ಇನ್ನು ಕೆಲವರು ಸಮಾನತೆ ಎಂದರೆ ಎಲ್ಲ ಪೌರರ ಆವಶ್ಯಕತೆ, ಅಭಿರುಚಿ ಒಂದೇ ಎಂದೂ, ಒಬ್ಬ ವ್ಯಕ್ತಿಗೂ ಇನ್ನೊಬ್ಬ ವ್ಯಕ್ತಿಗೂ ಯಾವ ವ್ಯತ್ಯಾಸವೂ ಇಲ್ಲವೆಂದೂ, ಸಮಾನತೆ ಎಂದರೆ ಎಲ್ಲ ವಿಧದಲ್ಲೂ ಸಮಾನತೆ ಎಂದೂ ಘೋಷಿಸಿದರು. (Equilitarian socialists.)

ಇನ್ನು ಕೆಲವರು ಫ್ರೆಂಚ್ ಕ್ರಾಂತಿಯ ಕಾಲದಲ್ಲಿ ಪ್ರಾಧಾನ್ಯತೆ ಪಡೆದ ಬುದ್ಧಿಶಕ್ತಿಯ (Reason) ಆರಾಧಕರಾದರು. ಬುದ್ಧಿಶಕ್ತಿಯ ಬಲದಿಂದ ಸಮಾಜದಲ್ಲಿರುವ ನ್ಯೂನತೆಗಳನ್ನೆಲ್ಲಾ ತೊಡೆಯಲು ಸಾಧ್ಯವೆಂದರು. ಬುದ್ಧಿಶಕ್ತಿಯನ್ನು ಪ್ರಯೋಗಿಸಿ ಸ್ವಲ್ಪವೂ ಕಲ್ಮಷವಿಲ್ಲದ ಸಮಾಜವ್ಯವಸ್ಥೆಯ ನಿರ್ಮಾಣದಲ್ಲಿ ತೊಡಗಿದರು. ಸುಧಾರಣೆಯನ್ನು ಹೊಂದಿರುವ ಸಮಾಜ ವ್ಯವಸ್ಥೆಗಳ 'ಮಾದರಿ' (Models) ಯನ್ನು ರಚಿಸಿದರು. ಮುಖ್ಯವಾಗಿ, ಬುದ್ಧಿಶಕ್ತಿಗೆ ಈಗ ತಾನೆ ಪರಿಹಾರ ಮಾರ್ಗ ಗೋಚರವಾಗಿದೆ ; ಇಷ್ಟು ದಿವಸಗಳು ಈ ದಿವ್ಯವಾದ ಬೆಳಕು ಬುದ್ಧಿಶಕ್ತಿಗೆ ಅಗೋಚರವಾಗಿದ್ದು ಮಾನವಕೋಟಿ ನರಳಬೇಕಾಯಿತು ; ಈಗ ದಿವ್ಯ ಬೆಳಕು ಗೋಚರವಾಗಿರುವುದು ಮಾನವ ಕೋಟಿಯ ಭಾಗ್ಯವೆನ್ನಬಹುದು; ಮಾನವ ಕೋಟಿ ಇಷ್ಟು ದಿವಸಗಳವರೆಗೂ ವೃಥಾ ಕಷ್ಟಪರಂಪರೆಗಳಿಗೆ ಒಳಗಾಗಬೇಕಾಯಿತು ; ಆದುದರಿಂದ, ಈಗ ಗೋಚರವಾಗಿರುವ, ಬುದ್ಧಿಶಕ್ತಿಯ ಬಲದಿಂದ ನಿರ್ಮಾಣವಾಗಿರುವ, 'ಮಾದರಿ' ಗಳಲ್ಲಿ ಒಂದನ್ನಾದರೂ ಅಂಗೀಕರಿಸಿ ಕೃತಾರ್ಥರಾಗುವುದು ಸರ್ವರ ಕರ್ತವ್ಯವಾಗಿದೆ ಎಂದರು.

ಹೀಗೆ ಬಗೆಬಗೆಯ ಸಮಾಜವಾದಗಳು ಹಾರಾಡುತ್ತಿದ್ದವು. ಆದರೆ ದಿಟವಾಗಿ ನೋವನ್ನು ಅನುಭವಿಸುತ್ತಿರುವ ಶೋಷಿತವರ್ಗ ಮಾತ್ರ ಮುಷ್ಕರ, ದಂಗೆ, ಒಳಯುದ್ಧಗಳ ಮೂಲಕ ಪ್ರತಿಭಟನೆಯನ್ನು ವ್ಯಕ್ತಪಡಿಸುತ್ತಿರುವುದನ್ನೂ, ಅಡ್ಡಿ ಬಂದ ಶಕ್ತಿಗಳನ್ನೂ ಸೈನ್ಯಗಳನ್ನೂ ಎದುರಿಸಿ ಮಡಿಯುತ್ತಿರುವುದನ್ನೂ ಮಾರ್ಕ್ಸ್–ಎಂಗೆಲ್ಸ್ ಕಂಡರು. ಶೋಷಿತವರ್ಗದ ಕಾರ್ಯಾಚರಣೆಯಲ್ಲಿ ಯಾವ ತತ್ತ್ವಪ್ರೇರಣೆ ಇಲ್ಲದಿದ್ದರೂ ಬದುಕಲು

ವರ್ಗ ಹೋರಾಟವೇ (Class struggle) ಶೋಷಿತವರ್ಗದ ಉಸಿರಾಗಿರುವುದು ಕಂಡುಬಂದಿತು. ಮಾರ್ಕ್ಸ್–ಏಂಗೆಲ್ಸ್‌ರು ಈ ಹೋರಾಟದ ಚಿತ್ರವನ್ನು ಖಾಸಗೀ ಸ್ವಾಮ್ಯ ಆರಂಭವಾದಾಗಿನಿಂದ ಪ್ರತಿಯೊಂದು ಸಮಾಜದಲ್ಲೂ ನಡೆದಿರುವುದನ್ನು ಕಂಡರು. ತಮ್ಮ ಕಾಲವಾದ ಹತ್ತೊಂಬತ್ತನೇ ಶತಮಾನದಲ್ಲಿ ಹೋರಾಟ ಇನ್ನೂ ಹೆಚ್ಚು ಪ್ರಮಾಣದಲ್ಲಿ ಪ್ರತಿಧ್ವನಿಗೊಳ್ಳುತ್ತಿರುವುದು ಗೋಚರವಾಯಿತು. ಫ್ರಾನ್ಸಿನ ಮಹಾ ಕ್ರಾಂತಿಯ ಕಾಲದಲ್ಲಿ ಬೆಬ್ಯೂಫ್ ಮತ್ತು ಆತನ ಸಹಪಾಠಿಗಳು ಸಮಾನತೆಯನ್ನು ನ್ಯಾಯದ ಹೆಸರಿನಲ್ಲಿ ಸಾರಿ ಸಾವನ್ನಪ್ಪಿದ್ದರೆ, ಬೆಬ್ಯೂಫನ ಪ್ರತಿಬಿಂಬಗಳು ಯೂರೋಪಿನ ನಾನಾ ಭಾಗಗಳಲ್ಲಿ ಕಾಣಿಸಿಕೊಂಡು, ಸ್ವಾಮ್ಯವರ್ಗವನ್ನು ಮೂಲೋತ್ಪಾಟನ ಮಾಡಲು ಶೋಷಿತವರ್ಗ ನಿರತರಾಗಿರುವುದನ್ನು ಕಂಡರು. ಫ್ರಾನ್ಸ್ ದೇಶದಲ್ಲಿ ಶೋಷಿತ ವರ್ಗದ ಪ್ರತಿಭಟನೆ 1848 ರ ಹೊತ್ತಿಗೆ ಮತ್ತೆ ಉಗ್ರರೂಪವನ್ನು ತಾಳಿದ್ದಿತು. ಇಂಗ್ಲೆಂಡ್ ದೇಶದಲ್ಲೂ ಸಹ ಕಾರ್ಮಿಕವರ್ಗ ಸ್ವಾಮ್ಯವರ್ಗವನ್ನು ಬಹಿರಂಗವಾಗಿ ಟೀಕಿಸಿತು. ಕಾರ್ಮಿಕವರ್ಗದ ಆಶೋತ್ತರಗಳನ್ನು ಪತ್ರಮುಖೇನ ಮಂಡಿಸುವುದಕ್ಕೆ (The Chartist movement) ಚಳವಳಿಯನ್ನು ಆರಂಭಿಸಿತ್ತು. ಯೂರೋಪಿನ ಪ್ರಮುಖ ರಾಜಧಾನಿಗಳಲ್ಲಿ ನಿರಂಕುಶ ಪ್ರಭುತ್ವ ಮತ್ತು ಸ್ವಾಮ್ಯವರ್ಗದ ದರ್ಪವನ್ನಡಗಿಸಲು ಚಳವಳಿಗಳೆದ್ದಿದ್ದವು.

ಮುಖ್ಯವಾಗಿ, 1848 ರ ಹೊತ್ತಿಗೆ ಶೋಷಿತವರ್ಗದ ಚಳವಳಿ ಸ್ಪಷ್ಟವಾದ ರೂಪವನ್ನು ತಾಳಿ ಸ್ವಾಮ್ಯದ ಮೇಲೆ ಧಾಳಿ ಆರಂಭವಾಗಿತ್ತು. ಆದರೆ ಶೋಷಿತವರ್ಗದ ಆಶೋತ್ತರಗಳಿಗೆ ಪರಿಹಾರವನ್ನು ದೊರಕಿಸಿ ಕೊಡಲು ಹೊರಟ ವಾದಗಳು ಹಲವು ಬಗೆಯಲ್ಲಿದ್ದುದರಿಂದ ಯಾವುದು ಸರಿ, ಯಾವುದು ತಪ್ಪು ಎಂಬುದನ್ನು ತೀರ್ಮಾನಿಸುವುದೇ ಕಷ್ಟದ ಕೆಲಸವಾಯಿತು. ಎಲ್ಲವೂ ಧರ್ಮದ ನ್ಯಾಯದ ಹೆಸರಿನಲ್ಲಿ ಪ್ರತಿಪಾದಿತವಾಗಿದ್ದುದರಿಂದ ಮತ್ತು ಧರ್ಮ ನ್ಯಾಯಗಳ ಸಂರಕ್ಷಣೆ ಎಲ್ಲರ ಕರ್ತವ್ಯವೆಂದು ತಿಳಿಸಿದ್ದುದರಿಂದ ಧರ್ಮಕ್ಕೆ ನ್ಯಾಯಕ್ಕೆ ಚ್ಯುತಿ ಉಂಟಾಗಿರುವ ಬಗೆಯನ್ನು ಪತ್ತೆಹಚ್ಚುವುದೇ ಸಮಸ್ಯೆಯಾಯಿತು. ಮೇಲಾಗಿ ಈ ಹಲವು ವಾದಗಳು ತಮ್ಮ ಪರಿಹಾರಮಾರ್ಗವನ್ನು ಶೋಷಿತವರ್ಗಕ್ಕೆಮಾತ್ರ ಅನ್ವಯಿಸಿರಲಿಲ್ಲ. ಅಖಿಲ ಸಮಾಜದ ಉದ್ಧಾರ ಧರ್ಮ-ಸಮಾಜವಾದಿಗಳ ಮತ್ತು ನ್ಯಾಯ-

ಸಮಾಜವಾದಿಗಳ ಗುರಿಯಾಗಿದ್ದಿತು. ಶೋಷಿತವರ್ಗದ ಚಳವಳಿ ವರ್ಗವೈಷಮ್ಯವನ್ನು ತರುವುದೆಂದೂ, ಪಕ್ಷೀಯವಾಗುವುದೆಂದೂ, ಮತ್ತು ಧರ್ಮಸಂಸ್ಥಾಪನೆ ಸರ್ವರ ಕರ್ತವ್ಯವಾದ್ದರಿಂದ ಶೋಷಿತವರ್ಗದ ಚಳವಳಿ ಅನಾವಶ್ಯಕವೆಂದೂ ತಿಳಿಸಿದರು.

ಅಲ್ಪ ಸ್ವಲ್ಪ ಮಟ್ಟಿಗೆ ಫ್ರೆಂಚ್ ಮಹಾ ಕ್ರಾಂತಿಯಿಂದ ಸ್ಫೂರ್ತಿ ಪಡೆದು ಪ್ರತಿಪಾದಿತವಾಗಿದ್ದ ಉಗ್ರಗಾಮಿಗಳ ವಾದ ಶೋಷಿತವರ್ಗದ ವಾದವಾಗಿತ್ತು. ಸ್ವಾಮ್ಯ ಮತ್ತು ಶೋಷಕವರ್ಗದ ನಿರ್ಮೂಲವೇ ಶೋಷಿತವರ್ಗದ ವಿಮುಕ್ತಿಗೆ ಹೆದ್ದಾರಿ ಎಂದು ಉಗ್ರವಾದಿಗಳು ಘೋಷಿಸಿದ್ದರು. ಆದರೆ ಶೋಷಣೆ ಹೇಗೆ ನಡೆಯುತ್ತಿದೆ, ಸ್ವಾಮ್ಯವನ್ನಾಗಲೀ ಅಥವಾ ಶೋಷಣೆಯನ್ನಾಗಲೀ ನಿರ್ಮೂಲಮಾಡುವ ಬಗೆ ಹೇಗೆ, ಶೋಷಿತ ವರ್ಗ ಮಾಡಬೇಕಾಗಿರುವುದು ಏನು, ಎಂಬುದರ ಬಗ್ಗೆ ವಿವರಣೆಯನ್ನು ಕೊಡಲು ಅಶಕ್ತರಾಗಿದ್ದರು. ಒಟ್ಟಿನಲ್ಲಿ ಎಲ್ಲರೂ ಭಾವುಕರಾಗಿ ಅಥವಾ ಮಾದರೀ ಸಮಾಜಗಳ ನಿರ್ಮಾಣದಲ್ಲಿ ಕಾಲ ಕಳೆದರು. ನಾನಾ ತರಹದ ವಿವರಣೆಯ ಪರಿಣಾಮವಾಗಿ ಸಮಾಜವಾದವೆಂಬ ಶಬ್ದ ಪ್ರಯೋಗದಲ್ಲಿ ಬಂದರೂ ನಾನಾರ್ಥವನ್ನು ತಾಳಿದ್ದಿತು. ಸ್ವಾಮ್ಯ ಮತ್ತು ಶೋಷಣೆಯನ್ನು ನಿರ್ಮೂಲ ಮಾಡಬೇಕೆಂದವರು, ಸ್ವಾಮ್ಯ ಮತ್ತು ಶೋಷಣೆಯ ಪ್ರಶ್ನೆಯನ್ನೇ ಚರ್ಚಿಸದವರು, ಶೋಷಿತವರ್ಗದ ದುಃಸ್ಥಿತಿಗೆ ಧರ್ಮಚ್ಯುತಿಯೂ ನ್ಯಾಯಚ್ಯುತಿಯೂ ಕಾರಣವಾಗಿದೆ ಎಂದವರು, ಮಾದರೀ ಸಮಾಜ ನಿರ್ಮಾಪಕರು ಎಲ್ಲರೂ ಸಮಾಜವಾದಿಗಳಾಗಿದ್ದರು. ಎಲ್ಲವೂ ಗೊಂದಲವಾಗಿದ್ದಿತು.

ಇಂತಹ ಸಮಯದಲ್ಲಿ ಶೋಷಿತವರ್ಗದ ಕಾರ್ಯಾಚರಣೆಯಿಂದಲೇ ಮುಕ್ತಿ, ಹೋರಾಟವೇ ಉಳಿದಿರುವ ಮಾರ್ಗ, ಸ್ವಾಮ್ಯವೇ ಶೋಷಣೆಯ ಮೂಲ, ಸಮಾಜದ ಉತ್ಪಾದನಾ ಸಾಧನಗಳ ಸಮಾಜೀಕರಣವೇ ತಮ್ಮ ಗುರಿ, ಸ್ವಾಮ್ಯ ಮತ್ತು ಸ್ವಾಮ್ಯವರ್ಗದ ಸರ್ಕಾರದ ಮೂಲೋತ್ಪಾಟನೆಯೇ ತಮ್ಮ ಧ್ಯೇಯ ಎಂದು ಕಾರ್ಯಾಚರಣೆಯಲ್ಲಿ ನುರಿತಿದ್ದ ಕ್ರಾಂತಿಕಾರ ಯೋಧರು ತಮ್ಮದೇ ಆದ 'ನ್ಯಾಯವಾದಿಗಳ ಸಂಘ' (Federation of the Just) ವೊಂದನ್ನು 1836 ರಲ್ಲಿ ಫ್ರಾನ್ಸ್ ದೇಶದಲ್ಲಿ ಸ್ಥಾಪಿಸಿದರು. ಕ್ರಮೇಣ ಈ ಸಂಘ ಯೂರೋಪ್ ಖಂಡದ ನಾನಾ ದೇಶಗಳ

ಕಾರ್ಮಿಕ ಪ್ರತಿನಿಧಿಗಳನ್ನೊಳಗೊಂಡು ವಿಸ್ತರಣೆ ಹೊಂದಿ 'ಸಮವಾದಿಗಳ ಸಂಘ' (Communist League) ಎಂಬ ಹೆಸರಿನಿಂದ 1847 ರಲ್ಲಿ ಲಂಡನ್ ನಗರದಲ್ಲಿ ಸ್ಥಾಪನೆಯಾಯಿತು. ತಮ್ಮ ಚಟುವಟಿಕೆ ಕೇವಲ ಒಂದು ದೇಶಕ್ಕೆ ಮಾತ್ರ ಅನ್ವಯಿಸದೆ ಸಕಲ ದೇಶಗಳಿಗೂ ಅನ್ವಯಿಸುವುದಾಗಿ ತಿಳಿಸಿದರು. ಎಲ್ಲ ದೇಶದ ಕಾರ್ಮಿಕವರ್ಗ ಒಂದೇ, ಅವರಲ್ಲಿ ಯಾವ ಭೇದಭಾವವೂ ಇಲ್ಲವೆಂದರು. ಅಂತರ ರಾಷ್ಟ್ರೀಯ ಕಾರ್ಮಿಕ ಬಂಧುತ್ವವನ್ನು ಪ್ರಕಟಿಸಿದರು. ಸಮಾಜವಾದ ತತ್ತ್ವನಿರೂಪಣೆಯಲ್ಲಿ ಗೊಂದಲವೂ, ಶೋಷಿತವರ್ಗದ ಚಳವಳಿ ಅನಗತ್ಯ, ಸಂಘಟನೆ ಅನಾವಶ್ಯಕವೆಂಬ ಖಂಡನೆಗಳೂ ಇದ್ದಾಗ ಸಮವಾದಿಗಳ ಸಮೂಹದ (ಕಮ್ಯೂನಿಸ್ಟ್ ಲೀಗಿನ) ಕಾರ್ಯಕಲಾಪಗಳು ಮಾರ್ಕ್ಸ್-ಏಂಗೆಲ್ಸ್‌ರನ್ನು ಆಕರ್ಷಿಸಿದವು. ಈ ಸಂಸ್ಥೆ ನಿಜವಾಗಿಯೂ ಶೋಷಿತವರ್ಗದ ಪ್ರತಿನಿಧಿ ಎಂದು ಭಾವಿಸಿದರು. ಸಂಘಕ್ಕೆ ಸದಸ್ಯರಾಗಲು ಒಪ್ಪಿ ಕ್ರಮೇಣ ಸಂಘಕ್ಕೆ ಸಲಹೆಗಾರರಾದರು. ಆಮೇಲೆ ಸಮವಾದಿಗಳ ಸಮೂಹವೂ (ಕಮ್ಯೂನಿಸ್ಟ್ ಲೀಗ್) ಸಹ ಸಮಾಜವಾದೀ ತತ್ತ್ವದ ಬಗ್ಗೆಯಾಗಲೀ ಶೋಷಿತವರ್ಗದ ಪಾತ್ರದ ಬಗ್ಗೆ ಯಾಗಲೀ ಖಚಿತವಾದ ಅಭಿಪ್ರಾಯಗಳನ್ನು ಹೊಂದಿಲ್ಲದಿರುವುದನ್ನು ಕಂಡರು. ಸಮಾಜವಾದ ಧ್ಯೇಯದ ಬಗ್ಗೆ ಮತ್ತು ಕಾರ್ಯಾಚರಣೆಯ ಆವಶ್ಯಕತೆಯ ಬಗ್ಗೆ ಕ್ರಾಂತಿಕಾರ ಮನೋಭಾವವಿತ್ತೇ ವಿನಾ ಮತ್ತೇನೂ ಇರಲಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಮಾರ್ಕ್ಸ್-ಏಂಗೆಲ್ಸ್‌ರು ತಮ್ಮದೇ ಆದ ಹೊಸ ಬಗೆಯ ಸಮಾಜವಾದೀ ಸಿದ್ಧಾಂತವನ್ನು ಮುಂದಿಟ್ಟರು. ಸಂಘದ ಸದಸ್ಯರು ಮಾರ್ಕ್ಸ್-ಏಂಗೆಲ್ಸ್‌ರ ವಾದಸರಣಿಯನ್ನು ಮನನಮಾಡಿ ಅವರ ಸಿದ್ಧಾಂತವನ್ನು ಸಂಘದ ತತ್ತ್ವವನ್ನಾಗಿ ಅಂಗೀಕರಿಸಲು ನಿಶ್ಚಯಿಸಿದರು. ಅದರಂತೆ 1848 ರಲ್ಲಿ ಮಾರ್ಕ್ಸ್-ಏಂಗೆಲ್ಸ್‌ರು ಸಂಘದ ಪ್ರಣಾಳಿಕೆಯನ್ನು ಬರೆಯುವಂತೆ ಸಂಘದಿಂದ ಆಶ್ವಾಸನೆ ಬಂದಿತು. ಈ ಆದೇಶದ ಮೇರೆಗೆ ಮಾರ್ಕ್ಸ್-ಏಂಗೆಲ್ಸ್‌ರು "ಸಮವಾದಿಗಳ (ಕಮ್ಯೂನಿಸ್ಟ್) ಪ್ರಣಾಳಿಕೆ" (Communist Manifesto) ಎಂಬ ಗ್ರಂಥವನ್ನು ಬರೆದರು. 1848 ರಲ್ಲಿ ಸಂಘವು ಪ್ರಣಾಳಿಕೆಯನ್ನು ಪ್ರಕಟಿಸಿತು. ಈ ಗ್ರಂಥ

ಮತ್ತು ಇತರ ಗ್ರಂಥಗಳ [1] ಮೂಲಕ ಮಾರ್ಕ್ಸ್-ಏಂಗೆಲ್ಸ್‌ರು ತಮ್ಮ ನೂತನ ಸಿದ್ಧಾಂತವನ್ನು ಪ್ರತಿಪಾದಿಸಿದರು. ವೈಜ್ಞಾನಿಕ ಸಮಾಜವಾದ ಅಥವಾ ಮಾರ್ಕ್ಸ್ ವಾದ ಜನ್ಮತಾಳಿತು. ಈ ಕಾರಣದಿಂದಲೇ ಸಮಾಜವಾದದ ಪ್ರಣಾಳಿಕೆಯ ಪ್ರಕಟನೆ ವಿಶ್ವಘಟನೆಗಳಲ್ಲೊಂದಾಗಿದೆ. ಆಧುನಿಕ ಸಮಾಜ ವಾದದ ಆಗಮನಕ್ಕೆ ನಾಂದಿಯಾಗಿದೆ.

ಪ್ರಕಟವಾದ ಪ್ರಣಾಳಿಕೆಯನ್ನು ಸಮಾಜವಾದಿಗಳ ಪ್ರಣಾಳಿಕೆ ಎಂದು ಕರೆಯದೆ "ಸಮವಾದಿಗಳ (ಕಮ್ಯೂನಿಸ್ಟ್) ಪ್ರಣಾಳಿಕೆ" ಎಂದು ಕರೆಯುವುದಕ್ಕೆ ಕೆಲವು ಕಾರಣಗಳಿವೆ. ಆಗ್ಗೆ ಕಮ್ಯೂನಿಸ್ಟ್ [2] ಎಂಬ

---

1. ಮಾರ್ಕ್ಸ್—ಕ್ಯಾಪಿಟಲ್; ತತ್ತ್ವಶಾಸ್ತ್ರದ ದಾರಿದ್ರ್ಯ; ಗೋತಾ ಕಾರ್ಯಕ್ರಮದ ಟೀಕೆ; ಲಡ್‌ವಿಗ್‌ಫ್ಯೂಯರ್ ಬಾಕ್; ಹೋಲೀಫ್ಯಾಮಿಲಿ; ಕೂಲಿ, ಬೆಲೆ ಮತ್ತು ಲಾಭ; ಫ್ರಾನ್ಸ್‌ನಲ್ಲಿ ವರ್ಗಹೋರಾಟಗಳು; ಲೂಯಿ ಬಾನಾಪಾರ್ಟಿಯ ಹದಿನೆಂಟನೇ ಬ್ರುಮೇರ್; ಜರ್ಮನ್ ಐಡಿಯಾಲಜಿ; ಮುಂತಾದವುಗಳು.

ಏಂಗೆಲ್ಸ್—ಖಾಸಗೀ ಸ್ವಾಮ್ಯ ಮತ್ತು ರಾಜ್ಯದ ಉದಯ; ಕಾರ್ಮಿಕರ ಸ್ಥಿತಿಗತಿಗಳು; ಡ್ಯೂರಿಂಗನ ವಿರುದ್ಧ; ಮುಂತಾದವುಗಳು.

2. ಕಮ್ಯೂನಿಸಂ ಎಂಬ ಶಬ್ದ ಲ್ಯಾಟಿನ್ ಭಾಷೆಯ ಕಮ್ಯೂನಿಸ್ ಎಂಬ ಶಬ್ದದಿಂದ ಬಂದಿದೆ. ಕಮ್ಯೂನಿಸ್ ಎಂದರೆ ಎಲ್ಲರಿಗೂ ಒಂದೇ ಆಗಿರುವ, ಸಾಮಾನ್ಯ, ಸರ್ವಸಾಮಾನ್ಯ, ಸಾರ್ವಜನಿಕ (ವ್ಯತಿರಿಕ್ತ: ಒಬ್ಬನಿಗೆ ಸೇರಿರುವ) ಎಂಬ ಅರ್ಥ. (Communis=that which is common to several or to all, Common, General, Universal, Public (Opp.: that which belongs to one. Commune is (n) that which is common, Commune+ism=Communism). ವಿರಸ, ಅವ್ಯವಸ್ಥೆ, ಅಶಾಂತಿ ಇಲ್ಲದಿರುವ ಸಮಾಜ ವ್ಯವಸ್ಥೆ ಒಂದನ್ನು ಕಾಣಲು ಪ್ರಾಚೀನಕಾಲದಲ್ಲಿ ಪ್ರಯತ್ನ ನಡೆಯಿತು. ಅಂತಹ ಸಮಾಜ ಅತಿ ಹಿಂದಿನ ಕಾಲದಲ್ಲಿ ಇತ್ತೆಂದೂ, ಅದು ಸ್ವರ್ಣ ಯುಗವೆಂದೂ, ಅಲ್ಲಿ ಸುಖಶಾಂತಿಗಳು ಇದ್ದುವೆಂದೂ ಭಾವನೆ ಬಂದಿತು. ಉಣ್ಣುವ ಆಹಾರವಸ್ತುಗಳ ಮತ್ತು ಇತರ ಭೋಗವಸ್ತುಗಳ ಉತ್ಪಾದನೆ ಮತ್ತು ವಿಭಜನೆಗಳು ಸ್ವಾಮ್ಯವಿಲ್ಲದ ಸಮಾನ ಅನುಭ ಇದ್ದುದರಿಂದ ಆ ಸಮಾಜವನ್ನು ಕಮ್ಯೂನಿಸ್ಟ್ ಎಂದು ಕರೆದರು. ಅದರಂತಿರುವ ಆದರ್ಶ ಸಮಾಜವನ್ನು ವಿಚಾರಪರರು ಆಶಿಸಿದರು. ಇಂತವರಲ್ಲಿ ಪ್ಲೇಟೋ ಮುಖ್ಯನಾದವನು. ಕ್ರಮೇಣ ಈ ಆದರ್ಶ ಸಮಾಜ ಪ್ರಕೃತಿ ನಿಯಮಗಳಿಗೆ (Jus Naturale) ಮತ್ತು ವಿವೇಕ ಬುದ್ಧಿಗೆ (Right Reason) ಅನುಸಾರವಾಗಿ ಇರುವುದೆಂಬ ಭಾವನೆ ಪ್ರಚಾರಕ್ಕೆ

ನಾಮಾಂಕಿತ ಇತರ ಸಮಾಜವಾದಗಳಿಗಿಂತ ಉಗ್ರನಿಲುವನ್ನು ಸೂಚಿಸುವ ಶಬ್ದವಾಗಿ ಇದ್ದಿತು. ಮಾರ್ಕ್ಸ್–ಏಂಗೆಲ್ಸ್‌ರಿಗೆ ತಮ್ಮ ವಾದವನ್ನು ಇತರ ಸಮಾಜವಾದಗಳಿಂದ ಪ್ರತ್ಯೇಕಿಸುವುದಕ್ಕೆ 'ಕಮ್ಯೂನಿಸ್ಟ್' ಎಂಬ ಶಬ್ದ ಪ್ರಯೋಗ ಸೂಕ್ತವಾಗಿ ಕಂಡಿತು. ಆದ್ದರಿಂದ ತಮ್ಮ ಪ್ರಣಾಳಿಕೆಯನ್ನು 'ಕಮ್ಯೂನಿಸ್ಟ್' ಎಂದು ಕರೆದರು. ಇಷ್ಟು ವಿನಃ ಬೇರೆ ಇನ್ನಾವ ಅರ್ಥದಲ್ಲೂ 'ಕಮ್ಯೂನಿಸ್ಟ್' ಎಂಬ ಶಬ್ದವನ್ನು ಪ್ರಯೋಗಿಸಿಲ್ಲ. ಕಮ್ಯೂನಿಸಂ ಎಂದರೆ ಸಮಾಜವಾದ; ಮಾರ್ಕ್ಸ್–ಏಂಗೆಲ್ಸ್‌ರು ತಮ್ಮ ವಾದವನ್ನು ಸಹ 'ಸಮಾಜವಾದ' (ವೈಜ್ಞಾನಿಕ ಅಥವಾ ಆಧುನಿಕ) ಎಂದು ಕರೆದಿದ್ದಾರೆ. ಆದರೆ ಬಳಕೆಯಲ್ಲಿ (Usage) ಮಾರ್ಕ್ಸ್‌ವಾದವನ್ನು, ಅದನ್ನು ಅನುಸರಿಸಿದ ಕಾರ್ಮಿಕವರ್ಗದ ಚಳವಳಿಯನ್ನು ಮತ್ತು ಅದನ್ನು ಅನುಷ್ಠಾನಕ್ಕೆ ತರಲು ರಚನೆಯಾದ ಕಾರ್ಮಿಕವರ್ಗದ ರಾಜಕೀಯ ಪಕ್ಷಗಳನ್ನು 'ಕಮ್ಯುನಿಸ್ಟ್' ಎಂದು ಕರೆಯುವುದು ವಾಡಿಕೆಗೆ ಬಂದಿದೆ.[2]

ಮಾರ್ಕ್ಸ್–ಏಂಗೆಲ್ಸ್‌ರು ತಾವು ಪ್ರತಿಪಾದಿಸಿದ ಹೊಸ ಸಮಾಜವಾದ ತತ್ತ್ವವನ್ನು ವೈಜ್ಞಾನಿಕ ಸಮಾಜವಾದವೆಂದು ಕರೆದರು (Scientific Socialism). ಇತರ ಸಮಾಜವಾದಗಳನ್ನೆಲ್ಲಾ ಕಲ್ಪನಾ ಅಥವಾ

ಬಂದಿತು. ಈ ತರುವಾಯ ಪ್ರಕೃತಿ ನಿಯಮ ಮತ್ತು ವಿವೇಕ ಬುದ್ಧಿ ವಾಸ್ತವಿಕ ಸಮಾಜವನ್ನು ಆಳೆಯಲು ಅಳತೆಗೋಲಾದವು. ಆದರ್ಶ ಸಮಾಜ ಸಮಾಜ ಹಿತ ಚಿಂತಕರಿಗೆ ಚಳವಳಿಗಾರರಿಗೆ ಸ್ಫೂರ್ತಿದಾಯಕವಾಗಿ ನಿಂತಿತು. ಸ್ವಾಮ್ಯವಿಲ್ಲದ ಸಮಾನ ಅನುಭವವನ್ನು ವಾದಿಸುವವರೆಲ್ಲರೂ ಕಮ್ಯೂನಿಸಂ ಧ್ಯೇಯವಾದಿಗಳು ಅಥವ ಸಮಾಜವಾದಿಗಳಾದರು. ಆದರೂ 1836 ರ ಹೊತ್ತಿಗೆ ಸಮಾಜವಾದಿಗಳಲ್ಲಿ ಒಂದು ಪಂಗಡ ಉಗ್ರ ಕ್ರಾಂತಿಕಾರ ಚಳುವಳಿಯ ಮೂಲಕ ಸಮಾಜ ವ್ಯವಸ್ಥೆಯಲ್ಲಿ ಸಂಪೂರ್ಣ ಬದಲಾವಣೆಯನ್ನು ತರುವುದು ತಮ್ಮ ಕಾರ್ಯಕ್ರಮವೆಂದರು. ಇತರ ಸಮಾಜವಾದಿಗಳಿಂದ ತಮ್ಮನ್ನು ಪ್ರತ್ಯೇಕಿಸಿಕೊಳ್ಳಲು ಸಮವಾದಿಗಳೆಂದು (ಕಮ್ಯೂನಿಸ್ಟ್) ಎಂದು ಕರೆದುಕೊಂಡರು.

2. ಕಮ್ಯೂನಿಸಂ ಎಂಬ ಶಬ್ದವನ್ನು ಮಾರ್ಕ್ಸ್–ಏಂಗೆಲ್ಸ್‌ರು ಸಮಾಜವಾದ ಅಗಮಿಸಿ, ಮೊದಲು ವ್ಯವಸ್ಥೆ ಹೊಂದುವ ಸಮಾಜವನ್ನು 'ಸಮಾಜವಾದೀ ಸಮಾಜ' (Socialist Society) ವೆಂದೂ, ತರುವಾಯ ರೂಪಗೊಳ್ಳುವ ವ್ಯವಸ್ಥೆ 'ಸಮವಾದೀ ಸಮಾಜ' (Communist Society) ವೆಂದೂ ಇನ್ನೊಂದು ಅರ್ಥದಲ್ಲಿಯೂ ಸಹ ಪ್ರಯೋಗಮಾಡಿದ್ದಾರೆ.

ಭಾವುಕ ಸಮಾಜವಾದಗಳೆಂದು ಕರೆದರು (Utopian Socialism). ಕಲ್ಪನಾ ಸಮಾಜವಾದಗಳನ್ನು ಉಗ್ರ ಟೀಕೆಗೆ ಗುರಿಪಡಿಸಿದರು. ಅವುಗಳ ನಿಶ್ಪ್ರಯೋಜಕತೆಯನ್ನು, ಅವೈಜ್ಞಾನಿಕ ಸ್ವರೂಪವನ್ನೂ ಬಯಲು ಮಾಡಿದರು. ಒಂದನೆಯದಾಗಿ, ಯಾರು ಯಾರು ಸರ್ವರಿಗೂ ಸುಖಮಯ ಜೀವನವನ್ನು ಕಲ್ಪಿಸಿಕೊಡುವ ದೃಷ್ಟಿಯಿಂದ ಬುದ್ಧಿಶಕ್ತಿಯ ಮೂಲಕ 'ಮಾದರೀ' ಸಮಾಜಗಳನ್ನು ನಿರ್ಮಾಣಮಾಡಿ, ಅವುಗಳನ್ನು ಅನುಕರಿಸುವಂತೆ ಕರೆ ಇತ್ತರೊ, ಅವರನ್ನೆಲ್ಲಾ ಕಲ್ಪನಾಸಮಾಜವಾದಿಗಳೆಂದರು. ಈ ಜನರಲ್ಲಿರುವ ವಿಶೇಷವೆಂದರೆ ಸುಂದರವಾದ ಸಮಾಜದ ಮಾದರಿಗಳನ್ನು ರಚಿಸುವುದು, ಹಿಂಬಾಲಕರನ್ನು ಆಕರ್ಷಿಸಲು ಪ್ರದರ್ಶನಕ್ಕೆ ಮಾದರಿಗಳನ್ನು ಇಡುವುದು, ಅವರ ಮನಸ್ಸನ್ನು ಒಲಿಸಿಕೊಳ್ಳುವುದು, ಅವರ ಧರ್ಮಬುದ್ಧಿಗೆ ತಾಕುವಂತೆ ವಿಜ್ಞಾಪಿಸಿಕೊಳ್ಳುವುದು, ಒಂದು ಮಾದರಿಯನ್ನು ಪ್ರೇಕ್ಷಕರು ಒಪ್ಪದಿದ್ದ ಪಕ್ಷದಲ್ಲಿ ನಿರ್ಮಾಣಮಾಡಿದ್ದ ಮಾದರಿಯಲ್ಲಿ ಕೆಲವು ಬದಲಾವಣೆಗಳನ್ನು ಮಾಡುವುದು, ಹಾಗೆಯೂ ಒಪ್ಪದಿದ್ದ ಪಕ್ಷದಲ್ಲಿ ತಮ್ಮ ತಪ್ಪು ಏನೂ ಇಲ್ಲವೆಂದು ಹತಾಶರಾಗುವುದು.

ಮಾರ್ಕ್ಸ್–ಏಂಗೆಲ್ಸ್‌ರು ಕಲ್ಪನಾಸಮಾಜವಾದದಲ್ಲಿ ಅಡಗಿರುವ ದೋಷಗಳನ್ನು ವಿವರಿಸಿದ್ದಾರೆ. ಸಮಾಜಕಲ್ಯಾಣ ಬುದ್ಧಿಶಕ್ತಿಯಿಂದ ರಚಿತವಾಗುವ 'ಮಾದರಿ' ಗಳಿಂದ ಆಗುವುದಾದರೆ, ಸಮಾಜ ಕಲ್ಯಾಣದ ಭಾವನೆಯೂ ಮತ್ತು ಮಾದರಿಗಳೂ ಒಬ್ಬ ವ್ಯಕ್ತಿಯನ್ನು ಅನುಸರಿಸುತ್ತವೆ. ಒಬ್ಬನು ಇನ್ನೊಬ್ಬನ ಹಾಗೆ ಯೋಚಿಸುವುದಿಲ್ಲ; ಒಬ್ಬನಿಗೆ ಅಪ್ಯಾಯಮಾನವಾದದ್ದು ಇನ್ನೊಬ್ಬನಿಗೆ ಕಹಿಯಾಗಿ ಇರಬಹುದು. ಅವನವನ ಮಟ್ಟಕ್ಕೆ ಅನುಗುಣವಾಗಿ ನಿರ್ಮಾಣಹೊಂದುವ ಭಾವನೆಗಳಲ್ಲಿ ಯಾವುದು ಉತ್ತಮವಾದುದೆಂದು ತೀರ್ಮಾನಿಸಲು ಮತ್ತೊಬ್ಬನ ಬಳಿಗೆ ತೀರ್ಪಿಗೆ ಹೋಗಬೇಕಾಗುತ್ತದೆ. ಉತ್ಕೃಷ್ಟವಾದ ಮಾದರಿಯ ಬದಲು ವೈಯಕ್ತಿಕವೈಪರೀತ್ಯಗಳ ಹುಚ್ಚಾಟಗಳ ತಾರುಮನೆಯಾಗುತ್ತದೆ. ಅಷ್ಟೇ ಅಲ್ಲ; ಇನ್ನೊಂದು ಪ್ರಶ್ನೆಯೂ ಉದ್ಭವಿಸುತ್ತದೆ. ಕಲ್ಯಾಣಸಮಾಜದ ನಿರ್ಮಾಣ ಕೆಲವರಿಗೆ ಹೊಳೆದು ಮಾದರಿಗಳ ಮೂಲಕ ವ್ಯಕ್ತವಾಗಿದ್ದರೆ ಈ ಪ್ರೇರಣೆ ಇಷ್ಟು ದಿವಸವೂ ಏಕೆ ಆಗಿರಲಿಲ್ಲ? ಆದಿಯಿಂದ ಇಲ್ಲಿಯವರೆಗೆ ಮಾನವ ಜೀವಿಗಳು ಕಷ್ಟವನ್ನನುಭವಿಸಬೇಕೆಂಬುದು ದೇವರ

ನಿಯಾಮಕವೇ? ವಿಧಿ ವಿಲಾಸವೇ? 3,000 ವರ್ಷಗಳ ಹಿಂದೆಯೇ ಈ ಪ್ರೇರೇಪಣೆ ಹೊಳೆದಿದ್ದರೆ ಮಾನವಕೋಟಿಗೆ ಎಷ್ಟು ಉಪಕಾರವಾಗುತ್ತಿತ್ತು. ಈ ಪ್ರಶ್ನೆಗೆ ಉತ್ತರ ಸಿಗುವುದು ದುರ್ಲಭವಾಗುತ್ತದೆ. 18 ನೇ ಶತಮಾನದನಂತರ ಈ ಪ್ರೇರಣೆ ಹೊಳೆದಿರುವುದರಿಂದ ಅಲ್ಲಿಂದೀಚಿನ ವ್ಯಕ್ತಿಗಳು ಮಹಾಬುದ್ಧಿವಂತರೆಂದೂ, ಹಿಂದಿನವರೆಲ್ಲರೂ ದಡ್ಡರೆಂದೂ, ಕಲ್ಯಾಣಸಮಾಜದ ಭಾವನೆಯೂ ಅವರಿಗೆ ದರ್ಶನವಾಗಲಿಲ್ಲವೆಂದೂ ಅಥವಾ ಗ್ರಹಿಸಲು ಅಸಮರ್ಥರಾದರೆಂದೂ ತೀರ್ಮಾನಕ್ಕೆ ಬರಬೇಕಾಗುತ್ತದೆ. ಆದುದರಿಂದ ಕಲ್ಪನೆ, ಊಹೆಗಳ ಮೂಲಕ ಸಮಾಜವಾದದ ನಿರ್ಮಾಣವನ್ನು ಬಿಡಬೇಕು.

ಎಲ್ಲ ವಿಷಯಗಳಲ್ಲೂ ಸಮಾನತೆ ಇರುವ ಸಮಾಜವನ್ನು ಆದರ್ಶವನ್ನಾಗಿ ಬಯಸಿದ ಸಮಾಜವಾದವೂ (Equilitarian Socialism) ಸಹ ಕಲ್ಪನೆಯಾಗಿದೆ, ಮತ್ತು ಆಭಾಸದ ಪರಮಾವಧಿಯೂ ಆಗಿದೆ. ಎಲ್ಲ ವ್ಯಕ್ತಿಗಳ ಅಭಿರುಚಿ ಮತ್ತು ಆವಶ್ಯಕತೆ ಒಂದೇ ತೆರನಾಗಿ ಇರಲು ಸಾಧ್ಯವಿಲ್ಲ. ಒಂದುವೇಳೆ ಸಮಾನಸಮಾಜದ ಮೂಲಕ ಸುಖ ಲಭಿಸುವುದಾಗಿದ್ದರೆ, ಅಸಮಾನತೆ, ಖಾಸಗೀ ಸ್ವಾಮ್ಯ ಇವುಗಳು ಹೇಗೆ ಜನ್ಮತಾಳಿದವು? ಹಿಂದಿನವರಿಗೆ ಈ ಭಾವನೆ ಏಕೆ ಉಂಟಾಗಲಿಲ್ಲ? ಆದುದರಿಂದ ಸಮಾನತೆಯನ್ನೂ ಸುಖೀರಾಜ್ಯವನ್ನೂ ಕಲ್ಪನೆಯ ಮೂಲಕ ಸೃಷ್ಟಿಸುವುದಕ್ಕಾಗುವುದಿಲ್ಲ. ಸಾಧ್ಯವಿದ್ದಿದ್ದರೆ ಸಮಾನಸಮಾಜ ಎಂದೋ ಜನ್ಮ ತಾಳುತ್ತಿತ್ತು. ಇಂತಹ ಭಾವನೆ ಉತ್ಕೃಷ್ಟ ಸಮಾಜದ ಮಾದರಿಯಾಗಿ ಉಳಿದು, ಪುನಃ ಸಮಾಜವಾದದ ಪ್ರತಿಪಾದನೆಗೆ ಆವಶ್ಯಕತೆಯೇ ಇರುತ್ತಿರಲಿಲ್ಲ.

ಮಿಕ್ಕ ಸಮಾಜವಾದಗಳ ಸ್ವರೂಪವೂ ಸಹ ಹೆಚ್ಚುಕಡಿಮೆ ಇದೇ ಆಗಿದೆ. ಧರ್ಮಕ್ಕೆ, ನ್ಯಾಯಕ್ಕೆ ಅನುಗುಣವಾಗಿರುವ ಧರ್ಮಸಮಾಜ, ಸುಖೀ ರಾಜ್ಯ, ನ್ಯಾಯಸಮಾಜಗಳ ನಿರ್ಮಾಣದ ಕಾರ್ಯವೆಂದರೆ ಧರ್ಮ, ನ್ಯಾಯ ಎಂದರೆ ಏನು ಮತ್ತು ಯಾವುದು ಎಂಬ ಜಿಜ್ಞಾಸೆ ಬರುತ್ತದೆ. ಧರ್ಮ, ನ್ಯಾಯಗಳ ಬಗ್ಗೆ ಇತಿಹಾಸದ ಉದ್ದಕ್ಕೂ ವಿವಿಧ ಸಮಾಜಗಳಲ್ಲಿ ವಿವಿಧ ಭಾವನೆಗಳಿರುವುದರಿಂದಲೂ ಮತ್ತು ಒಂದೇ ಸಮಾಜದಲ್ಲೇ ಕಾಲ ಕಾಲಕ್ಕೆ ಧರ್ಮ, ನ್ಯಾಯಗಳ ಭಾವನೆಯ ಬಗ್ಗೆ ಬದಲಾವಣೆಗಳಾಗಿರುವುದರಿಂದಲೂ, ಧರ್ಮ ಮತ್ತು ನ್ಯಾಯಗಳಿಗೆ ಎಲ್ಲರೂ

ಒಂದೇ ಅರ್ಥವನ್ನು ಕೊಟ್ಟಿಲ್ಲ. ಈ ಕಾರಣದಿಂದ ಸಮಾಜರಚನೆಯ ಬಗ್ಗೆ, ಸಮಾಜಕಲ್ಯಾಣದ ಬಗ್ಗೆ ಏಕಾಭಿಪ್ರಾಯ ಇರುವುದಿಲ್ಲ. ಯಾವುದು ಧರ್ಮಸಮಾಜ, ಸುಖೀರಾಜ್ಯ ಆಗಿದೆ ಅಥವಾ ಆಗಿಲ್ಲ ಎಂಬುದನ್ನು ತೀರ್ಮಾನಿಸುವುದು ಕಷ್ಟವಾಗುತ್ತದೆ; ಅಷ್ಟಲ್ಲದೆ ಅಭಿಪ್ರಾಯ ವೈಯಕ್ತಿಕ ವಾಗುತ್ತದೆ.

ಇನ್ನು ಮತೀಯ ಸಮಾಜವಾದಿಗಳ ಬಗ್ಗೆ ಹೆಚ್ಚು ವಿಮರ್ಶೆ ಅನಾವಶ್ಯಕವಾಗಿದೆ. ನೀತಿಬೋಧೆಯು ಮನಃಪರಿವರ್ತನೆಯ ಕೆಲಸ ಎಡೆಬಿಡದೆ ಆಗುತ್ತಿದ್ದರೂ, ಸಮಾಜ ಕಲ್ಯಾಣ ಮತ್ತು ಸುಖೀರಾಜ್ಯ ಮಾತ್ರ ಇನ್ನೂ ಲಭಿಸಿಲ್ಲ! ಮತೀಯ ಸಮಾಜವಾದ ತನ್ನ ನಿಷ್ಪ್ರಯೋಜಕತೆಯನ್ನು ವ್ಯಕ್ತಪಡಿಸಿದೆ. ಇಷ್ಟಲ್ಲದೆ, ಆಗಾಗ್ಗೆ ಹಣಬೆಯಂತೆ ಹುಟ್ಟಿಸಾಯುವ ಸಮಾಜವಾದಗಳ ಬಗ್ಗೆ ಶೋಷಿತವರ್ಗ ಬಹು ಎಚ್ಚರಿಕೆಯಿಂದ ಇರಬೇಕಾದ ಆವಶ್ಯಕತೆ ಇದೆ ಎಂದು ಮಾರ್ಕ್ಸ್–ಏಂಗೆಲ್ಸ್‌ರು ಎಚ್ಚರಿಕೆ ಇತ್ತರು. ಮೊದಲನೆಯದಾಗಿ ಊಳಿಗಮಾನ್ಯದ–ಸಮಾಜವಾದ (Feudal Socialism). ಈ ವಾದ ನಾನಾಕಾಲದಲ್ಲಿ ನಾನಾರೂಪವನ್ನು ತಾಳುತ್ತಿರುತ್ತದೆ. ಸ್ಥಾನ ಮಾನಗಳನ್ನು ಕಳೆದುಕೊಂಡಿರುವ ಅಥವಾ ಕಳೆದುಕೊಳ್ಳುತ್ತಿರುವ ಅಥವಾ ಕಳೆದುಕೊಳ್ಳಬೇಕಾಗಿರುವ ವ್ಯಕ್ತಿಗಳು, ತಮ್ಮೆದುರು ಆಗುತ್ತಿರುವ ಬದಲಾವಣೆಗಳಿಗೆ ಅಂಜುವರು. ಇವರು ಜನರ ಮನಸ್ಸನ್ನು ಆಕರ್ಷಿಸುವರೀತಿಯಲ್ಲಿ ಗತಿಸಿದ ಮತ್ತು ಗತಿಸುತ್ತಿರುವ ಸಮಾಜಗಳು ಸುಖೀ ಸಮಾಜಗಳೆಂದೂ ಬದಲಾವಣೆ ಕ್ಷೇಮಕರವಲ್ಲವೆಂದೂ ಪ್ರಸಾರಮಾಡುತ್ತಾರೆ. ಈ ಮೂಲಕ ಸ್ಥಾನಮಾನಗಳನ್ನು ಉಳಿಸಿಕೊಳ್ಳುವುದಕ್ಕೆ ಯತ್ನಿಸುತ್ತಾ[illegible] ಶೋಷಿತವರ್ಗದ ಹಿತಚಿಂತಕರಾಗಿ ಅವರ ಕ್ಷೇಮವನ್ನು ಬಯಸುವುದು ಅವರ ನಿತ್ಯದ ಮಾತಾಗುತ್ತದೆ. ಮಕರ (Crocodile) ಸಮಾಜವಾದಿಗಳಾಗುತ್ತಾ[illegible] ಅದರಂತೆ ಬದಲಾವಣೆಗಳಿಗೆ ವಿಘ್ನತರಲು ಕಂಕಣಬದ್ಧರಾಗಿ ನಿಲ್ಲುತ್ತಾರೆ. ಎರಡನೆಯದಾಗಿ, ಇನ್ನು ಕೆಲವುವೇಳೆ ಸಮಾಜದಲ್ಲಿ ಆಗುತ್ತಿರುವ ಬದಲಾವಣೆಗಳನ್ನು ಸುದೀರ್ಘವಾಗಿ ಅರಿಯಲು ಕೆಲವರು ಅಶಕ್ತರಾಗಿ ರಸ (ಭಾವ) ಪ್ರಧಾನದ ಸಮಾಜವಾದಿಗಳಾಗುತ್ತಾರೆ (Sentimental Socialism). ನಿತ್ಯ ಕಾಣುವ ಯಾತನೆ, ಕಷ್ಟ, ದುಃಸ್ಥಿತಿಗಳು ಮನದಟ್ಟಾಗಿ, ದಿಕ್ಕುತೋಚದೆ, ಗತಿಸಿದ ಸಮಾಜಗಳ ವೈಭವದ ಆರಾ

ಧಕರಾಗಿಯೋ ಅಥವಾ ಕ್ಷೇಮ ಚಿಂತನೆ ಬಯಸುವರಾಗಿಯೋ ಅಥವಾ ನೀತಿ, ಧರ್ಮ, ನ್ಯಾಯ ಮತ್ತು ಸಂಸ್ಕೃತಿ ಪುನರುದ್ಧಾರಕರಾಗಿಯೋ ಅಥವಾ ಅವ್ಯವಸ್ಥೆಯ ಖಂಡನೆಯಲ್ಲೋ ನಿರತರಾಗಿರುತ್ತಾರೆ. ಆಗಾಗ್ಗೆ, ಸಮಯ ಸಂದರ್ಭಾನುಸಾರ, ಇರುವ ಸ್ಥಿತಿಗತಿಗಳ ಮೇಲೆ ಮುಸುಕು ಎಳೆಯಲು ಸಮಾಜವಾದ ಶಬ್ದದ ಉಚ್ಚಾರಣಾ ಪ್ರದರ್ಶನಗಳೂ ಸಹ ಬರುತ್ತಿರುತ್ತವೆ. ಸ್ವಾಮ್ಯವರ್ಗವೂ ಸಹ ಸಮಾಜವಾದದ ಧ್ಯೇಯವಾದಿ ಆಗುತ್ತದೆ

ಈ ರೀತಿಯಾಗಿ ಬಗೆ ಬಗೆಯ ಸಮಾಜವಾದಗಳು ಪ್ರತಿಪಾದಿತವಾಗುವುದಕ್ಕೆ ಈ ವಾದಗಳು ಪ್ರತಿಪಾದಿತವಾದ ಸಮಯದಲ್ಲಿದ್ದ ಸಮಾಜ ಸನ್ನಿವೇಶ, ಹಿಂದುಳಿದ ಆರ್ಥಿಕ ಪರಿಸ್ಥಿತಿಗಳು, ಇವೇ ಮುಖ್ಯ ಕಾರಣವಾಗಿವೆಯೆಂದು ಮಾರ್ಕ್ಸ್–ಏಂಗೆಲ್ಸರು ತಿಳಿಸಿದ್ದಾರೆ. ಸಮಾಜದಲ್ಲಿದ್ದ ಶೋಷಣೆ, ಯಾತನೆ, ದುಸ್ಥಿತಿ, ತಾರತಮ್ಯ, ಮನಕರಗುವ ದೃಶ್ಯ, ರಾಜಕೀಯ ಗೊಂದಲಗಳು, ಸ್ವಾಮ್ಯವರ್ಗದ ಸ್ವಾರ್ಥ ಇವುಗಳು ವಿಚಾರವೇತ್ತರನ್ನು ಪ್ರಚೋದನೆಗೊಳಿಸಿ ಸುಖೀರಾಜ್ಯದ ನಿರ್ಮಾಣಕ್ಕೆ ಆಶಿಸುವಂತೆ ಮಾಡಿದವು. ಪ್ರತಿಭಟನೆ, ಮುಷ್ಕರ, ದಂಗೆ, ಇತ್ಯಾದಿಗಳ ಮೂಲಕ ನೊಂದವರು ಪರಿಹಾರವನ್ನು ಯತ್ನಿಸಿದರೆ, ಸಹೃದಯರು, ವಿಚಾರವೇತ್ತರು ತಾತ್ವಿಕ ರೂಪದಲ್ಲಿ ಸಮಾಜ ಕಲ್ಯಾಣವನ್ನು ಬಯಸಿ ಸಮಾಜ ಸುಧಾರಣೆಗೆ ಯತ್ನಿಸಿದರು. ಆದುದರಿಂದ ಇವರುಗಳಲ್ಲಿ ಅನೇಕರು ಕೇವಲ ಶೋಷಿತ ವರ್ಗದ ಹಿತವನ್ನು ಬಯಸುವುದು ಮಾತ್ರವಲ್ಲದೆ ಸರ್ವರ ಹಿತವನ್ನೂ ಬಯಸಿದ್ದು ಸಹಜವಾಗಿದೆ. ಈ ಕಾರಣದಿಂದ ಸಮಾಜದಲ್ಲಿ ವರ್ಗಗಳ ಇರುವಿಕೆಯನ್ನಾಗಲಿ, ವರ್ಗವೈಷಮ್ಯವನ್ನಾಗಲಿ, ಶೋಷಿತವರ್ಗದ ಹೋರಾಟದ ಆವಶ್ಯಕತೆಯನ್ನಾಗಲಿ ಅಂಗೀಕರಿಸಲು ಇಚ್ಛಿಸಲಿಲ್ಲ. ಉತ್ಕೃಷ್ಟ ಸಮಾಜದ ಆಗಮನವನ್ನು ಊಹೆ ಮತ್ತು ಕಲ್ಪನೆಗಳ ಮೂಲಕ ಸಾಧಿಸುವುದಕ್ಕೆ ತೊಡಗಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ.

ಕಲ್ಪನೆಯ ಮೂಲಕ ಸುಖೀರಾಜ್ಯದ ಆಗಮನವನ್ನು ನಿರೀಕ್ಷಿಸುವುದಕ್ಕೆ ಹೊರಟರೆ ವಾಸ್ತವಿಕ ಪರಿಸ್ಥಿತಿಯ ಅರಿವು ಬೇಡವಾಗುತ್ತದೆ. ಆದುದರಿಂದ, ಸ್ವಾಭಾವಿಕವಾಗಿ ಕಲ್ಪನಾ ಸಮಾಜವಾದಿಗಳು ವಾಸ್ತವಿಕ ಪರಿಸ್ಥಿತಿಯನ್ನು ಅಧ್ಯಯನ ಮಾಡುವುದಕ್ಕಾಗಲಿ ಅಥವಾ ಶೋಷಣೆಯ ಆವಾಸಸ್ಥಾನವನ್ನು ತಿಳಿಯುವುದಕ್ಕಾಗಲಿ ಗಮನಕೊಡಲಿಲ್ಲ. ಯಾವುದು ಅವರ

ದೃಷ್ಟಿಯಲ್ಲಿ ಕ್ರೂರವಾಗಿ ಕಂಡುಬಂದಿತೋ ಅದನ್ನು ಅಧರ್ಮ, ಅನ್ಯಾಯವೆಂದರು. ಹಿತೈಷಿಗಳಾದವರು ಯಾವುದಾದರೂ ಒಂದು ವರ್ಗಕ್ಕೆ ಸೇರಿದವರೆಂದು ಹೇಳಿಕೊಳ್ಳಲು ಇಷ್ಟಪಡಲಿಲ್ಲ. ತಮ್ಮ ಸಂದೇಶವನ್ನು ಯಾವುದಾದರು ಒಂದು ವರ್ಗಕ್ಕೆ ಸಂಬೋಧನೆಮಾಡಲೂ ಇಲ್ಲ. ಆದುದರಿಂದ ಯಾವ ವರ್ಗಕ್ಕೂ ಇವರ ಮಾತುಗಳಲ್ಲಿ ನಂಬಿಕೆ ಬರದೆ ಹೋಯಿತು. ಕೆಲವು ಹಿಂಬಾಲಕರು ಸಿಕ್ಕಿ ಸಣ್ಣ ಪುಟ್ಟ ಪಂಥಗಳನ್ನು ಸ್ಥಾಪಿಸಿದರೇ ಹೊರತು ಕಾರ್ಯತಃ ಮತ್ತೇನನ್ನೂ ಗಳಿಸಲಿಲ್ಲ.

ನಿರ್ವೀರ್ಯವಾದ ಕಲ್ಪನಾ ಸಮಾಜವಾದ ಯಾವ ವಿಧವಾದ ಪರಿಹಾರವನ್ನು ತರದಿದ್ದುದರಿಂದ ವಿರಕ್ತಿ, ಅಸಹಾಯಕತೆ, ದಾನ ಧರ್ಮಗಳು, ಮನಃಪರಿವರ್ತನೆಯ ಕೆಲಸ ಇವುಗಳಿಗೆ ಎಡೆಗೊಟ್ಟು, ಎಲ್ಲವೂ ತಂಡ ತಂಡವಾಗಿ ಆಗಮಿಸುವಂತೆ ಆಗಿದೆ. ಅಸಹಾಯಕ ಸಮಾಜವಾದಕ್ಕೆ ಅನೇಕ ಸಾಧುಸಂತರ, ಮಹರ್ಷಿಗಳ, ಜೀವನ ಮತ್ತು ತತ್ತ್ವ ನಿದರ್ಶನಗಳಾಗಿವೆ. ಇವರುಗಳು ಯಾರೂ ಸಹ ಶೋಷಿತವರ್ಗವನ್ನು ಸಂಬೋಧಿಸಲಿಲ್ಲ. ಶೋಷಿತವರ್ಗ ರಾಜಕೀಯದಲ್ಲಿ ಪ್ರವೇಶಿಸಿ ರಾಜ್ಯಶಕ್ತಿಯನ್ನು ಗಳಿಸಬೇಕೆಂದು ತಿಳಿಸಲಿಲ್ಲ. ರಾಜಕೀಯವನ್ನು ದೂರವಿಡಬೇಕೆಂದು ತಿಳಿಸಿದರು. ಆದುದರಿಂದ ಈ ವಾದಗಳೆಲ್ಲವೂ ಕಾಲಕ್ರಮೇಣ, ಚಿಕ್ಕಮಕ್ಕಳು ಒಂದರ ಮೇಲೊಂದು ಅಡ್ಡವಾಗಿ ಡೊಂಕಾಗಿ ಎಳೆಯುವ ಗೆರೆಗಳಂತೆ ಗೋಜಿ ಹೋಗಿ, ನಿಷ್ಪ್ರಯೋಜಿತ ತತ್ತ್ವಗಳಾಗಿ ಉಳಿದುದು ಆಶ್ಚರ್ಯವೇನೂ ಇಲ್ಲ !

ಮುಖ್ಯವಾಗಿ ಹಿಂದುಳಿದ ಆರ್ಥಿಕ ಪರಿಸ್ಥಿತಿ ಸಮಾಜವಾದೀ ವ್ಯವಸ್ಥೆಯ ಆಗಮನವನ್ನು ಅಸಾಧ್ಯಮಾಡಿತ್ತು. ಹಿಂದುಳಿದ ಮತ್ತು ಸ್ವಯಂ ಸಂಪೂರ್ಣತೆಯ ಆರ್ಥಿಕ ವ್ಯವಸ್ಥೆ, ವಿಶಾಲ ಭೂಪ್ರದೇಶ, ಕಡಿಮೆ ಜನ ಸಂಖ್ಯೆ, ಮತ್ತು ಶೋಷಿತವರ್ಗದ ಮೌಢ್ಯ ಇವುಗಳು ಅತಿಪ್ರಮಾಣದಲ್ಲಿ ವರ್ಗವೈಷಮ್ಯವನ್ನೂ ಆರ್ಥಿಕ ವಿರಸವನ್ನೂ ತರದಿರುವುದರಿಂದ ಸಮಾಜವಾದದ ಆವಶ್ಯಕತೆಯೇ ಬರುವುದಿಲ್ಲ. ಶೋಷಣೆ ಮತ್ತು ದುಸ್ಥಿತಿ ಇದ್ದರೂ, ಇವುಗಳ ಒತ್ತಡ ಕಡಿಮೆ ಇರುವುದರಿಂದ, ವ್ಯವಸ್ಥೆ ಮತ್ತು ಉತ್ಪಾದನಾಶಕ್ತಿಗಳು ಇನ್ನೂ ಅಭಿವೃದ್ಧಿಹೊಂದಲು ಅವಕಾಶವಿರುವುದರಿಂದ, ಸಮಾಜದ ಉತ್ಪಾದನಾ ಸಾಧನಗಳ ಸಮಾಜೀ

ಕರಣ, ಸ್ವಾಮ್ಯದ ನಾಶ, ಎಲ್ಲವೂ ದುಸ್ಸಾಧ್ಯದ ಮಾತಾಗುತ್ತದೆ. ಇಂತಹ ಪರಿಸ್ಥಿತಿಗಳಲ್ಲಿ ಸಮಾಜವಾದೀ ವ್ಯವಸ್ಥೆಯನ್ನು ಆಶಿಸುವುದು ಕಲ್ಪನೆಯಾಗುತ್ತದೆ. ಇರುವ ಆರ್ಥಿಕಪರಿಸ್ಥಿತಿ ವಿರಸಪೂರಿತವಾಗಿ, ಅದರಲ್ಲಿರುವ ವಿರಸಗಳೇ ಸಮಾಜದ ಉತ್ಪಾದನಾ ಸಾಧನಗಳನ್ನು ಸಮಾಜೀಕರಣಮಾಡುವಂತೆ ಎಡೆಗೊಡುವವರೆಗೂ ಸಮಾಜವಾದದ ಆವಶ್ಯಕತೆಯೇ ಇರುವುದಿಲ್ಲ.

ಮಾರ್ಕ್ಸ್-ಏಂಗೆಲ್ಸರು ಕಲ್ಪನಾ ಸಮಾಜವಾದದ ವಿರುದ್ಧ ತಮ್ಮ ವೈಜ್ಞಾನಿಕ ವಾದವನ್ನು ಮಂಡಿಸಿದರು. ಐತಿಹಾಸಿಕವಾಗಿ ರೂಪುಗೊಂಡಿರುವ ಕಾರ್ಮಿಕವರ್ಗ ಮತ್ತು ಸ್ವಾಮ್ಯವರ್ಗಗಳ-ಹೋರಾಟದ ಫಲವಾಗಿ ಆವಶ್ಯಕವಾಗಿ ಸಮಾಜವಾದ ಜನ್ಮತಾಳುತ್ತದೆಂದರು. (Scientific Socialism is the necessary outcome of the struggle between two historically developed classes-the proletariat and the bourgeoisie).

ಅತ್ಯಂತ ಪರಿಪೂರ್ಣತೆಯ ಸಮಾಜವನ್ನಾಗಲಿ ಅಥವಾ ಉತ್ಕೃಷ್ಟ ಸಮಾಜವನ್ನಾಗಲಿ ಅಥವಾ ಮಾದರೀ ಸಮಾಜವನ್ನಾಗಲಿ ನಿರ್ಮಾಣಮಾಡುವುದು ಅನಾವಶ್ಯಕವಾಗಿದೆ. ಸಮಾಜವಾದದ ಆಗಮನವನ್ನು ನಿರೀಕ್ಷಿಸಲು ಆರ್ಥಿಕ ಮತ್ತು ಐತಿಹಾಸಿಕ ಘಟನೆಗಳನ್ನು ಮತ್ತು ಅವುಗಳಿಂದ ಅನಿವಾರ್ಯವಾಗಿ ಹೊರಹೊಮ್ಮಿರುವ ವರ್ಗಗಳು ಮತ್ತು ವರ್ಗಗಳ ವಿರೋಧವನ್ನು (ವೈಷಮ್ಯ) ಪರೀಕ್ಷಿಸಬೇಕು. ಹೀಗೆ ವ್ಯವಸ್ಥೆಹೊಂದಿರುವ ಆರ್ಥಿಕ ಪರಿಸ್ಥಿತಿಗಳಲ್ಲಿ ಬಡಿದಾಟವನ್ನು ಕೊನೆಗಾಣಿಸಲು ಮಾರ್ಗವನ್ನು ಸಂಶೋಧಿಸಬೇಕು. (Its scientific socialism) task was no longer to manufacture a system of society as perfect as possible, but to examine the historico-economic succession of events from which these classes and their antagonism had of necessity sprung, and to discover in the economic conditions thus created the means of ending the conflict).

ಇದೇ ಮಾರ್ಕ್ಸ್‌ವಾದದಲ್ಲಿ ಅಡಗಿರುವ ವೈಶಿಷ್ಟ್ಯತೆ ಮತ್ತು ವೈಜ್ಞಾನಿಕ ಮಾರ್ಗವಾಗಿದೆ. ವಿಜ್ಞಾನಿಯಾದವನು ಪ್ರಕೃತಿಯನ್ನು ಪರೀಕ್ಷಿಸಿ ವೈಜ್ಞಾನಿಕ ಸೂತ್ರಗಳನ್ನು ರಚಿಸುವುದರ ಮೂಲಕ ಪ್ರಕೃತಿಯ ಚಲನವಲನೆ ಮತ್ತು ಘಟನೆಗಳನ್ನು ತರ್ಕಿಸುವಂತೆ ಮಾರ್ಕ್ಸ್-ಏಂಗೆಲ್ಸರು ಸಮಾಜದ ಇತಿಹಾಸವನ್ನು ಪ್ರತಿಬಿಂಬಿಸುವಂತೆ ಸಮಾಜ ಸೂತ್ರಗಳನ್ನು (Social Laws) ರಚಿಸಿದರು. ಸಮಾಜವಾದದ ಅನಿವಾರ್ಯತೆಯನ್ನು ತರ್ಕಿಸಿದರು. ಇತಿಹಾಸ ವಿಜ್ಞಾನದ ಸಿದ್ಧಾಂತವನ್ನು (The Science of History) ಪ್ರತಿಪಾದಿಸಿದರು.

ಸಮಾಜ ಸೂತ್ರಗಳ ರಚನೆಗಾಗಿ ಮಾರ್ಕ್ಸ್-ಏಂಗೆಲ್ಸರು ತೊಡಗಿ ಸಮಾಜದ ಇತಿಹಾಸವನ್ನು ಸುದೀರ್ಘವಾಗಿ ಪರಿಶೋಧಿಸಿದರು. ಈ ಫಲವಾಗಿ ಸಮಾಜ ವ್ಯವಸ್ಥೆಯಲ್ಲಿ ವಿಕಾಸವೂ, ಸಮಾಜದ ಪ್ರತಿಯೊಂದು ಅವಸ್ಥೆಯ ಸ್ವರೂಪ ಒಂದು ಕ್ರಮಕ್ಕೆ ಒಳಪಟ್ಟಿರುವುದೂ ಮತ್ತು ಒಂದು ಅವಸ್ಥೆ ಅದರ ಹಿಂದಿನ ಅವಸ್ಥೆಯಿಂದ ಹೊರಹೊಮ್ಮಿರುವುದೂ ಕಂಡು ಬಂದಿತು. ಈ ಪ್ರಕಾರ ಸಮಾಜ ಅನಾಗರಿಕ, ಪ್ರಾಚೀನ, ಊಳಿಗಮಾನ್ಯ ಘಟ್ಟಗಳನ್ನು ದಾಟಿ ಈಗ ಬಂಡವಾಳಶಾಹಿ ಘಟ್ಟಕ್ಕೆ ಬಂದಿದೆ. ಅಲ್ಲದೆ ಸಮಾಜವಿಕಾಸ, ಬದಲಾವಣೆಗಳು, ವಿಕಾಸದಲ್ಲಿ ಕ್ರಮ ಎಲ್ಲವೂ ಆರ್ಥಿಕ ಬದಲಾವಣೆಗಳಿಂದ ಉಂಟಾಗಿರುವುದು ವ್ಯಕ್ತವಾಯಿತು. ಮತ್ತು ಪ್ರತಿ ಆರ್ಥಿಕ ವ್ಯವಸ್ಥೆಯಲ್ಲಿಯೂ ಅದಕ್ಕೆ ಸರಿಹೊಂದುವ ಸಾಮಾಜಿಕ, ನ್ಯಾಯ, ರಾಜಕೀಯ ವ್ಯವಸ್ಥೆ ಮತ್ತು ಭಾವನೆಗಳು ಇರುವುದು ಗೋಚರವಾಯಿತು. ಜೊತೆಗೆ ಪ್ರತಿಯೊಂದು ಅವಸ್ಥಾರೂಪದಲ್ಲಿ ವರ್ಗಗಳಿದ್ದು (Classes)—ಪ್ರಾಚೀನ ಸಮಾಜದಲ್ಲಿ ಯಜಮಾನ ಮತ್ತು ಗುಲಾಮ, ಊಳಿಗಮಾನ್ಯ ಸಮಾಜದಲ್ಲಿ ಒಡೆಯ ಮತ್ತು ಜೀತಗಾರ—ವರ್ಗವೈಷಮ್ಯವಿರುವುದು ಕಂಡು ಬಂದಿತು. ಈ ವರ್ಗಗಳು ಮತ್ತು ವರ್ಗವೈಷಮ್ಯ ಬಂಡವಾಳ ಅವಸ್ಥೆಯಲ್ಲಿ ಅತ್ಯಂತ ಉಗ್ರರೂಪವನ್ನು ತಾಳಿ, ಸ್ವಾಮ್ಯವರ್ಗ (Bourgeoisie) ಮತ್ತು ಕಾರ್ಮಿಕವರ್ಗ (Proletariat) ಪರಸ್ಪರ ವಿರೋಧಿಗಳಾಗಿ ನಿಂತಿರುವುದು ಗೋಚರವಾಯಿತು. ಬಂಡವಾಳ ವ್ಯವಸ್ಥೆಯಲ್ಲಿ ಹುದುಗಿರುವ ವಿರಸಗಳು ವರ್ಗವೈಷಮ್ಯವನ್ನು ತೀವ್ರಗೊಳಿಸುತ್ತಿರುವುದು ವ್ಯಕ್ತವಾಯಿತು. ವಿರಸವನ್ನು ತೊಡೆದುಹಾಕಲು

ಕಾರ್ಮಿಕವರ್ಗ ಕೈಕೊಂಡ ಚಳವಳಿಯ ಫಲವಾಗಿ ಅವಶ್ಯಕವಾಗಿ ಸಮಾಜವಾದ ಜನ್ಮತಾಳುತ್ತದೆಂದರು.

ಮಾರ್ಕ್ಸ್-ಏಂಗೆಲ್ಸರು ತಾವು ಸಂಶೋಧಿಸಿದ ಮುಖ್ಯ ಎರಡು ಸಮಾಜ ಸೂತ್ರಗಳನ್ನು 'ಐತಿಹಾಸಿಕ ಭೌತವಾದ' (Historical Materialism) ಮತ್ತು 'ಹೆಚ್ಚಿಗೇ ಮೌಲ್ಯ' (Surplus Value) ಎಂದು ಕರೆದರು. ಮೊದಲನೆಯ ಸೂತ್ರದ ಸಹಾಯದಿಂದ ಸಮಾಜವಿಕಾಸದ ಸ್ವರೂಪವನ್ನು ಚಿತ್ರಿಸಿದರು. ಎರಡನೆಯ ಸೂತ್ರದ ಸಹಾಯದಿಂದ ಶೋಷಣೆಯ ಮರ್ಮವನ್ನು ಬಯಲುಮಾಡಿದರು. ಮಾರ್ಕ್ಸ್-ಏಂಗೆಲ್ಸರಿಂದ ಹೆಚ್ಚಿಗೇಮೌಲ್ಯದ ಸೂತ್ರ ಪ್ರತಿಪಾದನೆಯಾಗುವವರೆಗೂ ಶೋಷಣೆಯ ಬಗ್ಗೆ ಖಂಡನೆ ಇತ್ತೆ ವಿನಾ ಯಾರೂ ಶೋಷಣೆ ಯಾವ ರೀತಿಯಲ್ಲಿ ಆಗುತ್ತಿದೆ ಎಂಬುದನ್ನು ತಿಳಿಸಲು ಸಮರ್ಥರಾಗಿರಲಿಲ್ಲ. ಮಾರ್ಕ್ಸ್-ಏಂಗೆಲ್ಸರು ಪ್ರತಿ ಸಮಾಜದ ವ್ಯವಸ್ಥೆಯಲ್ಲಿದ್ದ ಶೋಷಣೆಯನ್ನು ವಿವರಿಸಿ, ಬಂಡವಾಳ ವ್ಯವಸ್ಥೆಯಲ್ಲಿ ಸ್ವಾಮ್ಯವರ್ಗ ಕಾರ್ಮಿಕವರ್ಗವನ್ನು ಶೋಷಣೆ ಮಾಡುತ್ತಿರುವುದನ್ನು ಹೊರಹಾಕಿದರು. ಶೋಷಣೆ ಇಲ್ಲದೆ ಬಂಡವಾಳವರ್ಗ ಅತ್ಯಲ್ಪಕಾಲ ಬದುಕುವುದೂ ದುಸ್ತರವಾಗುವುದೆಂದು ವಿವರಿಸಿದರು. ಶೋಷಣೆಯು ವರ್ಗದಂತರವನ್ನೂ ದುಸ್ಥಿತಿಯನ್ನೂ ತಂದು, ಶೋಷಣೆಯ ವಿನಾಶ ಕಾರ್ಮಿಕವರ್ಗದ ಹೋರಾಟದಿಂದಲೇ ಸಾಧ್ಯವೆಂಬುದನ್ನು ಕಾರ್ಮಿಕವರ್ಗಕ್ಕೆ ಮನದಟ್ಟುಮಾಡುತ್ತದೆಂದು ತಿಳಿಸಿದರು. ಶೋಷಿತವರ್ಗ ಶೋಷಕವರ್ಗವನ್ನು ನಿರ್ಮೂಲಗೊಳಿಸುವುದೆಂದರು. ಸಮಾಜವಾದದ ಆಗಮನವು ಅನಿವಾರ್ಯವಾಗುತ್ತದೆಂದರು.

ಸಂಕ್ಷಿಪ್ತವಾಗಿ ವೈಜ್ಞಾನಿಕ ಸಮಾಜವಾದದ (ಆಧುನಿಕ ಅಥವಾ ಮಾರ್ಕ್ಸ್‌ವಾದ) ಸ್ವರೂಪವನ್ನು ಹೇಳುವುದಾದರೆ ಅದು ಬಂಡವಾಳ ವ್ಯವಸ್ಥೆಯಲ್ಲಿರುವ ವಿರಸಗಳ ಪ್ರತಿಬಿಂಬವಾಗಿದೆ. ಸ್ವಾಮ್ಯವರ್ಗಕ್ಕೂ ಕಾರ್ಮಿಕವರ್ಗ (ಶೋಷಿತವರ್ಗ) ಕ್ಕೂ ನಡೆಯುವ ಬಡಿದಾಟವಾಗಿದೆ. ಬಂಡವಾಳ ಆರ್ಥಿಕವ್ಯವಸ್ಥೆ ವಿರಸಪೂರಿತವಾದ ವ್ಯವಸ್ಥೆ. ಅದು ದಾರಿದ್ರ್ಯ, ನಿರುದ್ಯೋಗ, ಆರ್ಥಿಕ ದುಸ್ಥಿತಿ, ವರ್ಗದ ಅಂತರ, ಶೋಷಣೆ ಇವುಗಳನ್ನು ಉಂಟುಮಾಡುತ್ತದೆ. ಅವುಗಳ ವಿನಾಶಕ್ಕಾಗಿ ಕಾರ್ಮಿಕರು ಹೋರಾಟ

ವನ್ನು ಹೂಡುವಂತೆ ಮಾಡುತ್ತವೆ. ಕಾರ್ಮಿಕವರ್ಗ ತಮ್ಮ ದುಸ್ಥಿತಿಗೆ ಸ್ವಾಮ್ಯವರ್ಗವೇ, ಬಂಡವಾಳ ವ್ಯವಸ್ಥೆಯೇ ಕಾರಣವೆಂದು ತಿಳಿಯುತ್ತದೆ. ಅಲ್ಲದೆ ಆರ್ಥಿಕ ಮುಗ್ಗಟ್ಟು, ವಸಾಹತುಗಳ ದಾಹ, ಆರ್ಥಿಕ ಏರಿಳಿತಗಳು, ವಸಾಹತು ಜನರ ಅತ್ಯಧಿಕ ಶೋಷಣೆ, ಯುದ್ಧ, ಇತ್ಯಾದಿಗಳನ್ನು ಬಂಡ ವಾಳ ಉತ್ಪಾದನಾಕ್ರಮ (Capitalist Mode of Production) ಸಾಲುಸಾಲಾಗಿ ತರುತ್ತಲೇ ಇರುತ್ತದೆ. ಆರ್ಥಿಕ ಭದ್ರತೆ, ಉದ್ಯೋಗ. ಶೋಷಣಾರಹಿತ ಕೆಲಸಗಳಿಗಾಗಿ ಕಾರ್ಮಿಕ ವರ್ಗದಿಂದ ಚಳವಳಿ ಆರಂಭ ವಾಗುತ್ತದೆ. ಸ್ವಾಮ್ಯವರ್ಗದ ನಾಶ, ಸಮಾಜದ ಉತ್ಪಾದನಾ ಸಾಧನಗಳ ಸಮಾಜೀಕರಣ, ಇವುಗಳ ಮೂಲಕವೇ ಅಧೋಗತಿಯಿಂದ ಪಾರಾಗಲು ಸಾಧ್ಯವೆಂಬುದು ಕಾರ್ಮಿಕವರ್ಗಕ್ಕೆ ಅರಿವಾಗುತ್ತದೆ. ಅಂದೇ ಸಮಾಜ ವಾದದ ಉದಯ ನಿಶ್ಚಯವಾಗುತ್ತದೆ.

ಸಮಾಜವಾದದ ಅರ್ಥವಿವರಣೆಯಲ್ಲಿ ಮಾರ್ಕ್ಸ್–ಏಂಗೆಲ್ಸರು ಅನುಸರಿಸಿರುವ ಕ್ರಮದಲ್ಲಿ ಒಂದು ವಿಶೇಷವಿದೆ. ಮಿಕ್ಕವರ ಹಾಗೆ ಸಮಾಜವಾದೀ ವ್ಯವಸ್ಥೆಯ ಚಿತ್ರವನ್ನು ಮೊದಲು ಬರೆದು ಅದೇ ಗುರಿ ಅಥವಾ ಉತ್ಕೃಷ್ಟ ಅಥವಾ ಪರಿಪೂರ್ಣತೆಯ ಸಮಾಜವೆಂದು ಹೇಳಲಿಲ್ಲ; ಅದನ್ನು ಸಾಧಿಸಲು ಕರೆಕೊಡಲಿಲ್ಲ. ಹಾಗೆ ಮಾಡಿದ್ದರೆ ಇವರುಗಳೂ ಸಹ ಕಲ್ಪನಾ ಸಮಾಜವಾದಿಗಳಾಗುತ್ತಿದ್ದರು. ಸುಂದರವಾದ ಸಮಾಜ ರಚ ನೆಯ ಗೋಜಿಗೆ ಹೋಗಲಿಲ್ಲ. ಬಂಡವಾಳ ವ್ಯವಸ್ಥೆಯ ಚಲನವಲನೆಯ ವಿನ್ಯಾಸಗಳನ್ನು ಚಿತ್ರಿಸುವುದರಲ್ಲಿ ತೃಪ್ತರಾದರು. ಬಂಡವಾಳ ವ್ಯವಸ್ಥೆಯಲ್ಲಿರುವ ವಿರಸಗಳ ಮತ್ತು ವರ್ಗ ಹೋರಾಟದ ನಿರೂಪಣೆ ಮಾತ್ರ ಇದೆ. ಬಂಡವಾಳ ವ್ಯವಸ್ಥೆ ತಾನು ಜನ್ಮಕೊಟ್ಟ ಕಾರ್ಮಿಕವರ್ಗವೇ ಬಂಡವಾಳ ವ್ಯವಸ್ಥೆಯ ನಿರ್ಮೂಲಕ್ಕೆ ಕಾರಣವಾಗುತ್ತದೆಂದರು. ಶೋಷಣೆ ಯಿಂದಲೂ ವಿರಸಗಳಿಂದಲೂ ಪಾರಾಗಲು ಖಾಸಗೀ ಸ್ವಾಮ್ಯವನ್ನೂ, ಬಂಡವಾಳ ಉತ್ಪಾದನಾ ವ್ಯವಸ್ಥೆಯನ್ನೂ ಕಾರ್ಮಿಕವರ್ಗ ನಾಶಗೊಳಿಸು ವುದೆಂದರು. ಇವುಗಳ ನಿರ್ಮೂಲವೇ ಸಮಾಜವಾದೀ ವ್ಯವಸ್ಥೆ ಆಗುತ್ತದೆ. ವಿರಸಗಳಿಲ್ಲದ, ವರ್ಗಗಳಿಲ್ಲದ, ಶೋಷಣೆ ಇಲ್ಲದ ಆರ್ಥಿಕ ವ್ಯವಸ್ಥೆ ಬರು ತ್ತದೆ. ವೈಜ್ಞಾನಿಕ ಸಮಾಜವಾದವೆಂದರೆ ಇಂತಹ ವ್ಯವಸ್ಥೆ ಹೇಗೆ ಬರುತ್ತದೆ, ಅದರ ಆವಶ್ಯಕತೆ ಏನು ಮತ್ತು ಅವನ್ನು ತರುವವರು ಯಾರು

ಎಂಬುದನ್ನು ಮಾತ್ರ ತಿಳಿಸುವ ವಾದವಾಗಿದೆ. ಇದೇ ವೈಜ್ಞಾನಿಕ ಸಮಾಜವಾದ (ಮಾರ್ಕ್ಸ್‌ವಾದ) ಮಾಡಿರುವ ಕೆಲಸ.

ಅಧ್ಯಯನ :

The Manifesto of the Communist Party :
(Marx-Engels Selected Works Vol. 1, Pages 21-61 ; Ed 1951, Moscow).

Socialism-Utopian and Scientific : F. Engels.
(Marx-Engles Selected Works, Vol. II, Pages 86-125 ; Ed. 1951.)

Condition of the Working Class in England :
Engels, L. & W. London.

What is Marxism ?
Emil Burns, L. & W. London.

Communism :
Ralph Fox ; Kitabistan, Allahabad.

ವೈಜ್ಞಾನಿಕ ಸಮಾಜವಾದದ ಆಧಾರ

ಅಧ್ಯಾಯ—3.

ಮಾರ್ಕ್ಸ್‌ವಾದ ವಿಶ್ವದೃಷ್ಟಿಯನ್ನು (World Outlook) ನಿರೂಪಿಸುವ ಒಂದು ತತ್ತ್ವ ಸಿದ್ಧಾಂತವಾಗಿದೆ. ವೈಜ್ಞಾನಿಕ ಸಮಾಜ ವಾದ ಈ ತತ್ತ್ವಸಮುಚ್ಚಯದಲ್ಲಿ ಹೆಣೆದುಕೊಂಡು ತಾರ್ಕಿಕ ರೂಪದಲ್ಲಿ ಹೊರಬಿದ್ದಿರುವ ಭಾಗವಾಗಿದೆ. ಈ ಕಾರಣದಿಂದ ಮಾರ್ಕ್ಸ್ ಸಿದ್ಧಾಂತ ದಲ್ಲಿ ಪ್ರಕೃತಿಯ ಜನನ, ಪ್ರಕೃತಿಯ ಕಾರ್ಯವಿಧಾನ, ಪ್ರಕೃತಿಗೂ ಮಾನವ ನಿಗೂ ಇರುವ ಸಂಬಂಧ, ಸಮಾಜದ ಜನನ, ಸಮಾಜದ ಬೆಳವಣಿಗೆ, ಸಮಾಜದಲ್ಲಿ ಕಾಣುವ ಆರ್ಥಿಕ ವ್ಯವಸ್ಥೆ, ಕಟ್ಟಳೆ, ಕಾನೂನು, ಜಾತಿ, ಮತ, ದೇವರಲ್ಲಿ ನಂಬಿಕೆ, ನೀತಿ, ಶಾಸ್ತ್ರಗಳು ಇತ್ಯಾದಿ ಎಲ್ಲದರ ಸ್ವರೂಪ, ವಿನ್ಯಾಸ, ಅವುಗಳನ್ನು ಅರ್ಥಮಾಡಿಕೊಳ್ಳುವ ರೀತಿ, ಅವುಗಳಿಗಿರುವ ಪರಸ್ಪರ ಸಂಬಂಧ, ಅವುಗಳ ಸ್ಥಾನಮಾನಗಳು, ಇತ್ಯಾದಿಗಳನ್ನು ಚರ್ಚಿಸ ಲಾಗಿದೆ. ಮಾನವನ ಬಾಳು ಮುಖ್ಯವಾದದ್ದು.. ಬಾಳಿನಲ್ಲಿ ರೂಪರೇಖೆ ಗಳು ಇರುತ್ತವೆ. ಈ ರೂಪರೇಖೆಗಳ ಒಂದು ಭಾಗದಲ್ಲಿ ತಲ್ಲೀನರಾಗಿ ಒಟ್ಟು ಬಾಳನ್ನು ಮರೆತರೆ ಕುರುಡರು ಆನೆಯನ್ನು ಗುರುತಿಸಿದ ಕಥೆ ಯಾಗುತ್ತದೆ. ಒಟ್ಟು ಬಾಳನ್ನು ಅರಿಯಲು ಯತ್ನಿಸಬೇಕು. ಆಗಲೇ ಇತಿಹಾಸದ ಉದ್ದಕ್ಕೂ, ವಿವಿಧ ಕಾಲಗಳಲ್ಲಿ, ವಿವಿಧ ಸಮಾಜಗಳಲ್ಲಿ, ಬಾಳಿನ ಸ್ವರೂಪ, ಚಿತ್ರ ವಿಚಿತ್ರ, ಮತ್ತು ರೂಪರೇಖೆಗಳು ವ್ಯಕ್ತವಾಗುವುವು. ಬಾಳು ಸಮಾಜದಲ್ಲಿ ನಡೆಯುತ್ತದೆ; ಇತರ ವ್ಯಕ್ತಿಗಳ ಜೊತೆಯಲ್ಲಿ ಸಂಬಂಧವನ್ನು ಬೆಳಸಿ ಸಾಗುತ್ತದೆ. ಸಾಗಾಣಿಕೆಯಲ್ಲಿ ವಿಧವಿಧವಾದ ಸಮಸ್ಯೆಗಳು ತಲೆದೋರುತ್ತವೆ. ಸಮಸ್ಯೆಗಳನ್ನು ಬೇರೆ ಬೇರೆ ಹೆಸರಿನಲ್ಲಿ ಕರೆದರೂ ಅವುಗಳೆಲ್ಲವೂ ಒಂದೇ ಜೀವನದ ಸಮಸ್ಯೆಗಳು. ಈ ಮರ್ಮ ವನ್ನು ಮಾರ್ಕ್ಸ್ ತತ್ತ್ವ ಮರೆಯದೆ ಬಾಳನ್ನು ಆಮೂಲಾಗ್ರವಾಗಿ ಪರೀಕ್ಷಿ ಸಿದೆ. ಅದರ ಪದರಗಳನ್ನೆಲ್ಲ ಬಿಡಿಸಲು ಯತ್ನಿಸಿದರೂ ಆ ಪದರಗಳೆ ಲ್ಲವೂ ಬಾಳನ್ನು ನಡಸಲು ಹೊರಟಿರುವ ಮಾನವ ಜೀವಿಗಳಲ್ಲಿ ಕೇಂದ್ರೀ ಕೃತವಾಗಿವೆ ಎಂಬುದನ್ನು ಶ್ರುತಪಡಿಸುತ್ತದೆ. ಈ ಕಾರಣಗಳಿಂದ

ಮಾರ್ಕ್ಸ್ ತತ್ತ್ವ ಕೇವಲ ವಿಜ್ಞಾನವಲ್ಲ, ಅರ್ಥಶಾಸ್ತ್ರವಲ್ಲ, ರಾಜಕೀಯ ಶಾಸ್ತ್ರವಲ್ಲ, ಮನಶ್ಶಾಸ್ತ್ರವಲ್ಲ, ಸಮಾಜ ಶಾಸ್ತ್ರವಲ್ಲ—ಅದು ಎಲ್ಲವೂ ಆಗಿದೆ. ಹೀಗಿರುವುದರಿಂದಲೇ ಮಾರ್ಕ್ಸ್ ತತ್ತ್ವವನ್ನು ತಿಳಿದುಕೊಳ್ಳುವುದರಲ್ಲಿ ಸ್ವಲ್ಪ ಕ್ಲಿಷ್ಟತೆ ಕಂಡು ಬರುವುದು. ಎಲ್ಲ ಶಾಸ್ತ್ರಗಳನ್ನೂ ದೀರ್ಘವಾಗಿ ವ್ಯಾಸಂಗ ಮಾಡಿದರೆ ಸಾಲದು, ಪ್ರತಿಯೊಂದಕ್ಕೂ ಇರುವ ಪರಸ್ಪರ ನಿಕಟ ಸಂಬಂಧವನ್ನು ಬಾಳಿನ ಹಿನ್ನೆಲೆಯಲ್ಲಿ ತಿಳಿದುಕೊಳ್ಳಲು ಶಕ್ತಿ ಸಂಪಾದಿಸಿರಬೇಕು. ಇಲ್ಲದಿದ್ದರೆ ಶುಷ್ಕಪಾಂಡಿತ್ಯವಾಗುತ್ತದೆ. ಬಾಳಿನ, ಸಮಾಜದ, ಪ್ರಕೃತಿಯ ಒಟ್ಟಿನ ಸೊಗಸನ್ನು ಚಿತ್ರಿಸುವ ಉದ್ಯಮದಲ್ಲಿ ಮಾರ್ಕ್ಸ್-ಏಂಗೆಲ್ಸರು ನಿಸ್ಸೀಮರು. ಅವರ ತತ್ತ್ವ ಸಿದ್ಧಾಂತ ತನ್ನ ಪ್ರತಿಯೊಂದು ಭಾಗದಲ್ಲೂ ಈ ಮೇಲ್ಮೆಯನ್ನು ಹೊರಸೂಸುತ್ತದೆ.

ಮಾರ್ಕ್ಸ್ ಸಿದ್ಧಾಂತ ಇನ್ನೊಂದು ಲಕ್ಷಣವನ್ನು ವ್ಯಕ್ತಪಡಿಸುತ್ತದೆ. ಕೇವಲ ತಾತ್ತ್ವಿಕ ನಿರೂಪಣೆಯಾಗಿರದೆ ಕಾರ್ಯಾಚರಣೆಯ ಅಗತ್ಯವನ್ನು ಒತ್ತಿಹೇಳಿರುವ ತತ್ತ್ವನಾಗಿದೆ. ಲೋಕವ್ಯವಹಾರವನ್ನುತ್ಯಜಿಸಿ ಸತ್ಯಸಂಶೋಧನೆಯೇ ಗುರಿಯೆಂದು ತಿಳಿಸುವ ತತ್ತ್ವವಲ್ಲ. ಈ ಕಾರಣದಿಂದ ಮಾರ್ಕ್ಸ್‌ವಾದ ಪ್ರಥಮವಾಗಿ ಶೋಷಣೆಗೆ ಒಳಗಾಗಿರುವವರ ಆಶೋತ್ತರಗಳನ್ನು ಪ್ರತಿಬಿಂಬಿಸುವ ತತ್ತ್ವ. ಶೋಷಣೆಯಿಂದ ಪಾರಾಗಲು ಯಾವ ಬಗೆಯ ಕಾರ್ಯಾಚರಣೆಯಿಂದ ಸಾಧ್ಯ ಎಂದು ಹೇಳುವ ತತ್ತ್ವ. ಶೋಷಣೆ ಎಂದರೇನು, ಅದು ಯಾವ ರೀತಿಯಲ್ಲಿ ಆಗುತ್ತಿದೆ, ಶೋಷಣೆ ಆಗುವುದಕ್ಕೆ ಯಾರು ಯಾರು, ಯಾವ ಯಾವ ಶಕ್ತಿಗಳು ಸಹಾಯಕವಾಗಿ ನಿಂತಿವೆ, ಮಾಡುತ್ತಿರುವವರು ಯಾರು, ಇತ್ಯಾದಿಗಳನ್ನು ತಾತ್ವಿಕ ರೂಪದಲ್ಲಿ ವಿವರಿಸಿದೆ. ಪ್ರತಿಭಟನೆ, ಕಾರ್ಯಾಚರಣೆ ಇವುಗಳ ಮೂಲಕವೇ ಶೋಷಣೆಯಿಂದ ಪಾರಾಗಲು ಸಾಧ್ಯವೆಂದು ತಿಳಿಸುತ್ತದೆ. ಶೋಷಣೆಯಿಂದ ಜೀವನ ಮಾಡುತ್ತಿರುವ ವರ್ಗದಮೇಲೆ ಶೋಷಿತವರ್ಗ ಸಂಘಟಿತರಾಗಿ ಚಳವಳಿ ಹೂಡಬೇಕೆಂದು ತಿಳಿಸುತ್ತದೆ. ಹೊಸ ಬಗೆಯ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗೆ ಹೋರಾಟ ನಡಸಬೇಕೆಂದು ನಿರೂಪಿಸುತ್ತದೆ. ಆದುದರಿಂದ ಮಾರ್ಕ್ಸ್ ತತ್ತ್ವ ಹೋರಾಟಕ್ಕೆ ಮುನ್ನುಡಿಯಾಗಿ ಮಾರ್ಗದರ್ಶಕವಾಗಿದೆ. ಸ್ಥಿತಿಗತಿಗಳು ಬದಲಾವಣೆಗೊಂಡಂತೆ, ಹೊಸ ಸನ್ನಿವೇಶಗಳು ಮೂಡಿದಂತೆ, ಹೊಸಸಂದರ್ಭ ಸನ್ನಿವೇಶಗಳ ವಿವರಣೆಯೂ ವಿಮರ್ಶೆಯೂ ಅವಶ್ಯಕವೆಂದು

ಒತ್ತಿ ಹೇಳುತ್ತದೆ. ಹೊಸ ಸನ್ನಿವೇಶವನ್ನು ಅರ್ಥಮಾಡಿಕೊಳ್ಳುವುದಕ್ಕೆ ತತ್ತ್ವ ಸಾಧ್ಯಮಾಡಿಕೊಡದಿದ್ದರೆ ಪ್ರತಿಪಾದನೆಯಾಗಿರುವ ತತ್ತ್ವದಲ್ಲಿ ಮಾರ್ಪಾಡು ಅಗತ್ಯವೆಂದು ಸೂಚಿಸುತ್ತದೆ. ಪ್ರತಿ ಸಮಯದಲ್ಲೂ ಸನ್ನಿವೇಶ, ಸ್ಥಿತಿಗತಿಗಳು, ತತ್ತ್ವ ಮತ್ತು ಹೋರಾಟ ಇವುಗಳಲ್ಲಿ ಸಮನ್ವಯ ಇರಬೇಕೆಂದು ವಿಧಿಸುತ್ತದೆ. ಶೋಷಿತವರ್ಗವನ್ನು ಶೋಷಣೆಯಿಂದ ವಿಮುಕ್ತರನ್ನಾಗಿ ಮಾಡುವುದೇ ಮಾರ್ಕ್ಸ್ ತತ್ತ್ವದ ಮೂಲ ಉದ್ದೇಶವಾದ್ದರಿಂದ ಅದು ಯಾವಾಗಲೂ ದುಡಿಮೆ ಮಾಡುವ ವರ್ಗದ ಪ್ರತಿನಿಧಿ. ಶೋಷಣೆ ಇಲ್ಲವೆಂದು ಹೇಳುವವರನ್ನೂ, ಶೋಷಣೆಯಮೇಲೆ ಮುಸುಕನ್ನೆಳೆದು ಅದನ್ನು ಮರೆಮಾಚಿರುವವರನ್ನೂ, ದೈವಸಿಯಾಮಕ, ದೇವರಲ್ಲಿ ಮರೆಹೋಗೆಂದು ಹೇಳುವ ಮತೀಯ ತತ್ತ್ವಗಳನ್ನೂ, ಸತ್ಯಾನ್ವೇಷಣೆಯ ಸೋಗಿನಲ್ಲಿ ಕಾಲಹರಣಮಾಡುತ್ತಿರುವ ವಿದ್ವನ್ಮಣಿಗಳನ್ನೂ, ಅಜ್ಞಾನದಿಂದ ಕೂಡಿರುವ ಮೌಢ್ಯ ಜನಸಮುದಾಯಕ್ಕೆ ಅಚ್ಚರಿ ಉಂಟುಮಾಡುತ್ತಿರುವ ರಾಜಮಂತ್ರ ಪ್ರವೀಣರು, ರಾಜ್ಯನೀತಿ ನಿಪುಣರು ಮತ್ತು ಅರ್ಥಶಾಸ್ತ್ರ ಪಂಡಿತರನ್ನೂ ಕಟುವಾಗಿ ಟೀಕೆಗೆ ಗುರಿಪಡಿಸಿದೆ. ಕಾರ್ಮಿಕ ವರ್ಗಕ್ಕೆ ಬೇಕಾಗಿರುವ ತತ್ತ್ವನಿರೂಪಣೆಯನ್ನು ಅಂಜದೆ ನೈಜವಾಗಿ ತಿಳಿಸುತ್ತದೆ. ಆರ್ಥಿಕ ಜೀವನವೇ ಬಾಳಿನ ಆಧಾರ ಸ್ತಂಭವೆಂದು ಒತ್ತಿ ಹೇಳಿ, ಆರ್ಥಿಕ ಜೀವನದ ಇತಿಹಾಸವನ್ನು ಆದಿಯಿಂದ ಬಂಡವಾಳಶಾಹಿ ಸಮಾಜದವರೆಗೆ ನಿರ್ಭಯವಾಗಿ ವಿಶದಪಡಿಸಿದೆ. ಹಾಗೆ ತಿಳಿಸಲು ಹೊರಟು ತನ್ನದೇ ಆದ ಹೊಸ ಸಿದ್ಧಾಂತವನ್ನು ಪ್ರತಿಪಾದಿಸಿದೆ. ಬಂಡವಾಳ ಉತ್ಪಾದನಾ ವ್ಯವಸ್ಥೆಯಲ್ಲಿರುವ ವಿರೋಧಾಭಾಸ ಸ್ವಾಮ್ಯಕ್ಕೆ ಮೃತ್ಯುವಾಗುತ್ತದೆಂದೂ, ಅದನ್ನು ತೊಡೆಯಲು ಕಾರ್ಮಿಕವರ್ಗ ಜನ್ಮತಾಳಿದೆಯೆಂದೂ ತಿಳಿಸಿದೆ. ಒಂದು ಪಕ್ಷ ಮಾರ್ಕ್ಸ್‌ವಾದ ಶೋಷಿತವರ್ಗದ ಪಕ್ಷೀಯ ಸಿದ್ಧಾಂತವಾಗಿ ಕಂಡರೆ, ಇರುವ ಮತ್ತು ಹಿಂದಿನ ಸಿದ್ಧಾಂತಗಳಿಗೆ ವಿರುದ್ಧವಾಗಿದ್ದರೆ, ಅದು ಇತಿಹಾಸದ ಉದ್ದಕ್ಕೂ ಸ್ವಾಮ್ಯ ವರ್ಗದಿಂದ ನಡೆದಿರುವ ಶೋಷಣೆಯ ಮತ್ತು ಶೋಷಕವರ್ಗದ ಖಂಡನೆ ಮಾಡುವ ಪಕ್ಷವನ್ನಾಗಿ ಮಾಡಿದೆ. ಸಮಾಜದಲ್ಲಿ ದುಡಿಮೆ ಮಾಡುವ ಜನರಿಗೆ ಮಾತ್ರ ಸ್ಥಳವಿರುವುದರಿಂದ ಶೋಷಣೆಮಾಡುವವರಿಗೆ ಸ್ಥಳವಿಲ್ಲ. ಹಾಗೆಯೇ ಶೋಷಣೆಯನ್ನು ಸಮರ್ಥಿಸುವ ಸಿದ್ಧಾಂತಗಳಿಗೂ ಸ್ಥಳವಿಲ್ಲ. ಮಾರ್ಕ್ಸ್

ಸಿದ್ಧಾಂತಕ್ಕೆ ಮಾತ್ರ ಸ್ಥಳವಿದೆ. ಶೋಷಿತವರ್ಗದ ಆಶೋತ್ತರಗಳನ್ನು ಪ್ರತಿಬಿಂಬಿಸುವುದು ಪಕ್ಷೀಯವಾದರೆ ಬಾಧಕವಿಲ್ಲ.

ಸಮಾಜದ ಸ್ವರೂಪವನ್ನು ಅರಿಯಲು ಮಾರ್ಕ್ಸ್–ಏಂಗೆಲ್ಸರ ಸಿದ್ಧಾಂತ ಹೊಸ ಕ್ರಮವನ್ನು ನಿರೂಪಿಸಿದೆ. ಈ ಸಿದ್ಧಾಂತದೃಷ್ಟಿಗೆ ಮಾರ್ಕ್ಸ್–ಏಂಗೆಲ್ಸರು ಎಷ್ಟು ಬಾಧ್ಯರೋ ಅಷ್ಟೇ ಅವರು ಈ ಹೊಸ ಸಿದ್ಧಾಂತ ಸೃಷ್ಟಿಸುವುದಕ್ಕೆ ಸಹಾಯಕರಾದ ಮಹನೀಯರುಗಳಿಗೂ ಋಣಿಗಳಾಗಿರುತ್ತಾರೆ. ಆದುದರಿಂದ ಅವರ ಸಿದ್ಧಾಂತ ಸ್ವೇಚ್ಛಾವಾದವಲ್ಲ. ಈ ಸಿದ್ಧಾಂತದ ಅನೇಕ ಭಾಗಗಳು ಇತರರು ಪ್ರತಿಪಾದಿಸಲು ಯತ್ನಿಸಿದ, ಅಥವಾ ಸ್ವಲ್ಪ ಮಟ್ಟಿಗೆ ಯತ್ನಿಸಿ ಅಲ್ಲೇ ನಿಂತ, ಅಥವಾ ವಿಷಯಗೋಚರವಾಗಿ ಹೇಳುವುದನ್ನು ತಪ್ಪು ರೀತಿಯಲ್ಲಿ ಹೇಳಿರುವ, ಅಥವಾ ವಿಷಯಗೋಚರವಾಗಿ ಅದಕ್ಕೆ ಕಾರಣಗಳು ಬೇರೆಯಾಗಿವೆಯೆಂದು ಹೇಳಿದ ಗ್ರಂಥಗಳಲ್ಲಿ ಕಾಣುತ್ತವೆ. ಈ ಕಾರಣದಿಂದ ಮಾರ್ಕ್ಸ್–ಏಂಗೆಲ್ಸರ ಸಿದ್ಧಾಂತ ದೃಷ್ಟಿಗೆ ಯೂರೋಪಿನ 19 ನೇ ಶತಮಾನದ ಆದಿಭಾಗದಲ್ಲಿ ಪ್ರಬುದ್ಧಾವಸ್ಥೆಗೆ ಬಂದ ಮೂರು ತತ್ತ್ವಗಳು ಸಹಾಯಕ ಭಾಗವಾಗಿ ಸೇರಿವೆ. ಮೊದಲನೆಯದಾಗಿ, ಜರ್ಮನಿ ದೇಶದ ಅತಿ ವಿಖ್ಯಾತ ತತ್ತ್ವವೇತ್ತ ಹೆಗೆಲ್ ಎಂಬಾತನು ಪ್ರತಿಪಾದನೆ ಮಾಡಿದ ಇತಿಹಾಸ ದೃಷ್ಟಿ ಮತ್ತು ತರ್ಕ; ಎರಡನೆಯದಾಗಿ, ಫ್ರಾನ್ಸ್ ದೇಶದಲ್ಲಿ ಪ್ರತಿಪಾದಿತವಾದ ಸಮಾಜವಾದ ತತ್ತ್ವ; ಕೊನೆಯದಾಗಿ, ಇಂಗ್ಲೆಂಡ್ ದೇಶದಲ್ಲಿ ಕೈಗಾರಿಕಾ ಕ್ರಾಂತಿಯನಂತರ ವ್ಯವಸ್ಥೆ ಹೊಂದಿದ ಬಂಡವಾಳ ಆರ್ಥಿಕ ವ್ಯವಸ್ಥೆ, ಅದರ ಸ್ವರೂಪವನ್ನು ತಿಳಿಸಲು ಪ್ರತಿಪಾದಿತವಾದ ಆಡ್ಯಾಮ್ ಸ್ಮಿತ್ ಮತ್ತು ರಿಕಾರ್ಡೋಗಳ ಅರ್ಥಶಾಸ್ತ್ರ ಮತ್ತು ಪದಾರ್ಥಗಳ ಮೌಲ್ಯವನ್ನು ನಿರ್ಧರಿಸಲು ದುಡಿಮೆಯನ್ನು ಆಧಾರಮಾಡಿದ ತತ್ತ್ವ.

ತತ್ತ್ವಜ್ಞಾನಿ ಹೆಗೆಲ್ಲನು[1] ಮಾನವ ಇತಿಹಾಸವನ್ನು ಈಕ್ಷಿಸಿ ಮಾನವ ಸಮಾಜಗಳಲ್ಲಿ ಚಲನೆ ಮತ್ತು ಬೆಳವಣಿಗೆಯನ್ನು ಕಂಡನು.

---

(1) ಜರ್ಮನಿ ದೇಶದ ಅತಿ ಪ್ರಖ್ಯಾತ ತತ್ತ್ವವೇತ್ತ (1770-1831). ಬರ್ಲಿನ್ ವಿಶ್ವವಿದ್ಯಾನಿಲಯದಲ್ಲಿ ತತ್ತ್ವಶಾಸ್ತ್ರದ ಪ್ರಾಧ್ಯಾಪಕನಾಗಿದ್ದನು. ಈತನ ಬರೆಹಗಳಲ್ಲಿ 'ಬುದ್ಧಿಮೀಮಾಂಸೆ' (Phenomenology of Mind), 'ತರ್ಕವಿಜ್ಞಾನ' (Science of Logic), 'ಇತಿಹಾಸ ತತ್ತ್ವ' (Philosophy of History) 'ಧರ್ಮದ ತತ್ತ್ವ'(Philosophy of Right), ಬಹು ಮುಖ್ಯವಾದವು.

ಇತಿಹಾಸದ ಉದ್ದಕ್ಕೂ ಸಮಾಜ ಬೇರೆ ಬೇರೆ ಸ್ವರೂಪದಲ್ಲಿದ್ದು ಒಂದೊಂದು ಕಾಲದಲ್ಲೂ ಅದರ ಸ್ವರೂಪವು ಕ್ರಮೇಣ ಬದಲಾವಣೆಯಾಗಿ ಬೇರೊಂದು ಸ್ವರೂಪ ತಾಳುವುದು ವ್ಯಕ್ತವಾಯಿತು. ಅದಿ ಅಂತ್ಯವಿಲ್ಲದ ಚಲನೆಯೇ ಇತಹಾಸದ ಸ್ವರೂಪವೆಂದು ಹೆಗೆಲ್ಲನು ತನ್ನ ತರ್ಕದ ಆಧಾರದ ಮೇಲೆ ತೀರ್ಮಾನಕ್ಕೆ ಬಂದನು. ಆತನ ತಾರ್ಕಿಕಕ್ರಮ (Dialectics)[2] ವಸ್ತು ಚಲನೆಯನ್ನು ಪ್ರತಿಬಿಂಬಿಸುವುದಕ್ಕೆ ಉತ್ಕೃಷ್ಟವಾದ ಸಾಧನ ದಂತಿತ್ತು. ಆದರೆ ಆತನು ಭಾವಾತ್ಮಕನಾಗಿದ್ದನು (Idealist).[3]

(²) Dialectics : ಗ್ರೀಕ್ ಶಬ್ದ. (dia+legein=discourse=ವಾದಸರಣಿ). ಪೂರ್ವದಲ್ಲಿ ಈ ಶಬ್ದದ ಅರ್ಥವನ್ನು ವಾದ ಪ್ರತಿವಾದಗಳ ಮೂಲಕ ಪ್ರತಿಸ್ಪರ್ಧಿಯ ವಾದಸರಣಿಯಲ್ಲಿ ವಿರುದ್ಧವನ್ನು ವ್ಯಕ್ತಪಡಿಸಿ, ವಿರುದ್ಧವನ್ನು ಹೋಗಲಾಡಿಸುವ ಕ್ರಮವೆಂದು ತಿಳಿದಿದ್ದರು. ಕ್ರಮೇಣ ಮೂಲ ಬದಲಾವಣೆಗಳ, ಒಳ ಸಂಬಂಧಗಳ ಮತ್ತು ವಿಕಾಸದ ಅಧ್ಯಯನವೆಂಬುದಾಗಿ ಶಬ್ದ ಅರ್ಥ ತಾಳಿತು. ಎಲ್ಲ ವಸ್ತುವಿಶೇಷಗಳು ಚಲನೆಗೂ ಮತ್ತು ಬದಲಾವಣೆಗಳಿಗೂ ಒಳಪಟ್ಟವೆ ಯೆಂದೂ. ವಸ್ತುವಿಶೇಷಗಳಲ್ಲೇ ಇರುವ ವಿರೋಧಾಭಾಸದಿಂದ (Confict of opposites taking place in all things)ಪ್ರಕೃತಿಯ ವಿಕಾಸ ಆಗುತ್ತಿರುವುದಾಗಿಯೂ ಈ ಬಗೆಯ ತರ್ಕ ತಿಳಿಸುತ್ತದೆ. ಪ್ರಾಚೀನ ಗ್ರೀಕ್ ತತ್ತ್ವಜ್ಞಾನಿಗಳು ಆಜನ್ಮ ತಾರ್ಕಿಕರಾಗಿದ್ದರು. ಆದರೆ ಅವರು ವಸ್ತುವಿಶೇಷಗಳಿಗಿರುವ ಸಂಬಂಧಗಳನ್ನು ವಿಶದವಾಗಿ ತಿಳಿಸಲು ಅಶಕ್ತರಾದರು.

ಮುಂದಿನ ಶತಮಾನಗಳಲ್ಲಿ ವಸ್ತುವಿಶೇಷಗಳ ಬಗ್ಗೆ ತಾರ್ಕಿಕ ದೃಷ್ಟಿ ನಶಿಸಿತು. ಅದ್ವೈತನ್ಯಾದ ದೃಷ್ಟಿ ಬೆಳೆಯಿತು. ಆದರೆ 18 ನೇ ಶತಮಾನಾನಂತರ ಪುನಃ ತಾರ್ಕಿಕ ದೃಷ್ಟಿ ಪ್ರಾಧಾನ್ಯತೆ ಪಡೆಯಿತು. ಕ್ಯಾಂಟ್ ಎಂಬ ಜರ್ಮನ್ ತತ್ತ್ವವೇತ್ತನು ಪ್ರತಿಪಾದಿಸಿದ ಸೂರ್ಯಮಂಡಲದ ವಿಕಾಸ ಸಿದ್ಧಾಂತ ತಾರ್ಕಿಕ ದೃಷ್ಟಿಗೆ ನಾಂದಿಯಾಯಿತು. ಹೆಗೆಲ್ ತತ್ತ್ವವೇತ್ತನು ತಾರ್ಕಿಕ ದೃಷ್ಟಿಯನ್ನು ತನ್ನ ಸಿದ್ಧಾಂತಕ್ಕೆ ಆಧಾರವನ್ನಾಗಿ ಮಾಡಿದನು.

ಈ ತಾರ್ಕಿಕ ಕ್ರಮ ಮೂರು ನಿಯಮಗಳನ್ನು ಒಳಗೊಂಡಿದ್ದಾಗಿವೆ. ಒಂದನೆಯದಾಗಿ ಐಕ್ಯತೆ ಮತ್ತು ವಿರೋಧಾಭಾಸ; ಎರಡನೆಯದಾಗಿ, ಗುಣದಿಂದ ಗಾತ್ರಕ್ಕೆ ಬದಲಾವಣೆ; ಮೂರನೆಯದಾಗಿ ನಕಾರವನ್ನು ನಕಾರಗೊಳಿಸುವುದು.

(³) **ಭಾವವಾದ:** ಭೌತವಾದಕ್ಕೆ ಪ್ರತಿಯಾದದ್ದು. ಬುದ್ಧಿಗೂ ವಸ್ತುವಿಗೂ ಇರುವ ಸಂಬಂಧವನ್ನು ಹೇಳುವಾಗ ಬುದ್ಧಿಯನ್ನು ಪ್ರಧಾನವೆಂದು ಪರಿಗಣಿಸುತ್ತದೆ. ಬುದ್ಧಿ ವಸ್ತುವಿನಿಂದ ಉಂಟಾಯಿತೆಂಬುದನ್ನೂ, ಬುದ್ಧಿ ವಸ್ತುವಿನ ಚಲನಾರೂಪವೆಂಬುದನ್ನೂ ನಿರಾಕರಿಸುತ್ತದೆ.

ಇತಿಹಾಸದಲ್ಲಿ ಕಾಣುತ್ತಿರುವ ಚಲನೆಗೆ ಭಾವವೇ (Idea) ಕಾರಣವೆಂದು ಬಗೆದು, ಭಾವದಿಂದ ಚಲನೆ ಪ್ರೇರಿತವಾಗಿ ಚಲನೆ ಉಂಟಾಗುವುದೆಂದನು. ಕಡೆಗೆ ಭಾವ ಬ್ರಹ್ಮದಲ್ಲಿ (Absolute) ತನ್ನ ಪರಿಪೂರ್ಣತೆಯನ್ನು ಕಂಡು ಇತಿಹಾಸದ ಚಲನೆ ಮುಕ್ತಾಯಗೊಳ್ಳುತ್ತದೆಂದನು. ಈ ಭಾವ ಅಂದಿನ ಜರ್ಮನ್ ಸಮಾಜದಲ್ಲಿ ತನ್ನ ಪರಿಪೂರ್ಣತೆಯನ್ನು ಕಂಡಿರುವುದಾಗಿ ಭಾವಿಸಿದನು. ಅದರಂತೆ ತನ್ನ ಕಾಲದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಗಳಲ್ಲಿ ಇನ್ನು ಬದಲಾವಣೆಗಳೇ ಇಲ್ಲ, ಅವುಗಳೇ ಪೂರ್ಣವಾದ, ಪರಿಪಕ್ವವಾದ, ದೈವನಿಯಾಮಕ ವ್ಯವಸ್ಥೆಗಳೆಂದು ಸಾರಿದನು. ಆದರೆ ಹೆಗೆಲ್ ತನ್ನ ತಾರ್ಕಿಕ ಕ್ರಮದಂತೆ ಪ್ರತಿಪಾದಿಸಿದ ಇತಿಹಾಸದ ಅನಂತ ಚಲನೆಗೂ ತಾನು ತೀರ್ಮಾನಕ್ಕೆ ಬಂದ ಅಚಲ ಸ್ಥಿತಿಗೂ ಪರಸ್ಪರ ವಿರೋಧವನ್ನು ಕಾಣದಾದನು. ಮಾರ್ಕ್ಸ್-ಏಂಗೆಲ್ಸರು ಈ ವಿರೋಧವನ್ನು ಸ್ಪಷ್ಟಪಡಿಸಿದರು; ಹೆಗೆಲ್ಲನ ಮಹತ್‌ಕಾಣಿಕೆಯಾದ ಇತಿಹಾಸ ದೃಷ್ಟಿಯನ್ನು ಭಾವಾತ್ಮಕ ಬಂಧನದಿಂದ ಬಿಡುಗಡೆಮಾಡಿದರು; ಭೌತಾತ್ಮಿಕ ಇತಿಹಾಸ ದೃಷ್ಟಿಯನ್ನು ಪ್ರತಿಪಾದಿಸಿದರು. (Materialist Conception of History.)

ಈ ಕಾರಣದಿಂದ ವಾಸ್ತವಿಕ ಪ್ರಪಂಚ ನಶ್ವರವೂ, ಮಿಥ್ಯವೂ ಆಗುತ್ತದೆ. ಭಾವವೇ ನಿಜವಾದದ್ದು, ಸತ್ಯವಾದದ್ದು. ಸತ್ಯಸಂಶೋಧನೆ ಭಾವಚಿಂತನೆಯಾಗುತ್ತದೆ. ವಿಜ್ಞಾನದ ಬೆಳವಣಿಗೆ ಕುಂಠಿತವಾಗುತ್ತದೆ. ವಾಸ್ತವಿಕ ಪ್ರಪಂಚದಿಂದ ದೂರ ಸರಿದ ಪ್ರಾಜ್ಞ ಜೀವನ ಭಾವವಾದಕ್ಕೆ ಎಡೆಕೊಡುತ್ತದೆ.

ಭಾವವಾದ ಪ್ರಧಾನವಾಗಿ ಎರಡು ರೂಪವಲ್ಲಿರುತ್ತದೆ. ಆಂತರಿಕ ಮತ್ತು ಬಾಹ್ಯ ಭಾವವಾದ. ಎರಡರಲ್ಲೂ ಭಾವವೇ ಚೈತನ್ಯವಾಗಿ ಬ್ರಹ್ಮ, ಪರಬ್ರಹ್ಮ, ದೇವರು ಇತ್ಯಾದಿ ಆಗುತ್ತದೆ. ಮತೀಯ ಭಾವನೆಗಳಿಗೆ ಸಮೀಪಬಂಧು ಆಗುತ್ತದೆ.

ಅಂತರಾತ್ಮನ ಅಥವಾ ಪರಬ್ರಹ್ಮನ ಚಿಂತನೆಯೇ ಮುಖ್ಯವಾಗಿರುವಾಗ ಸಮಾಜದ ಆಗುಹೋಗುಗಳು ಭಾವವಾದದಲ್ಲಿ ತೃಣೀಕರಿಸಲ್ಪಡುತ್ತವೆ. ವಸ್ತುವೇ ಮಿಥ್ಯವಾಗಿರುವಾಗ ಸಮಾಜದ ಆಗುಹೋಗುಗಳೂ ಮಿಥ್ಯವಾಗುತ್ತವೆ. ಭಾವವಾದಿಗಳು ಪ್ರಗತಿವಿರೋಧಿಗಳಾಗುತ್ತಾರೆ.

(See: Materialism and Empiriocriticism: Lenin: S. W. V. II. L. & W.)

ಜೀವಾದಿಗಳೆಲ್ಲವೂ ಭೌತ ಸ್ವರೂಪ (Matter); ಪ್ರಪಂಚದ ಹುಟ್ಟಿಗೆ ಚಲನವಲನಗಳಿಗೆ ದೇವರು ಕಾರಣವಾಗಿರದೆ ಭೌತ ಸ್ವರೂಪವೇ ಕಾರಣವೆಂದು ಆದಿಯಿಂದ ಬಂದು ತತ್ತ್ವ ಪಂಥ ಹೇಳುತ್ತಲಿತ್ತು. ಈ ವಾದ ಪಾಶ್ಚಾತ್ಯ, ಪೌರ್ವಾತ್ಯಗಳೆರಡರಲ್ಲೂ ಕಂಡು ಬರುತ್ತದೆ (ಗ್ರೀಸಿನಲ್ಲಿ ಯಪಿಕ್ಯುರಸ್, ಡೆಮೋಕ್ರೆಟಿಸ್; ಭಾರತದಲ್ಲಿ ಲೋಕಾಯತ ಅಣುವಾದಿಗಳಾದ ಕಣಾದ ಋಷಿ). ಕ್ರಮೇಣ ಈ ವಾದ ಮೂಲೆಗೆ ಬಿದ್ದು ಭಾವಾತ್ಮಿಕ ತತ್ತ್ವ ಪ್ರಾಬಲ್ಯಕ್ಕೆ ಬಂದಿತು. ಆದರೆ ಪುನಃ 17–18 ನೇ ಶತಮಾನಗಳಲ್ಲಿ ಭೌತವಾದ ಅವತರಿಸಿತು. ಇಂಗ್ಲೆಂಡಿನಲ್ಲಿ ಡಾಸ್ಕೋಟಸ್, ಹಾಬ್ಸ್, ಲಾಕ್, ಬೇಕನ್ನರಿಂದ ಪ್ರತಿಪಾದಿಸಲ್ಪಟ್ಟು, ಫ್ರಾನ್ಸ್ ದೇಶದಲ್ಲಿ ಹಾಲ್‌ಬಾಕ್, ಹೆಲ್‌ವೀಷಿಯಸ್, ಡಿಡಿರೋರಿಂದ ಪ್ರಚಾರಕ್ಕೆ ಬಂದಿತು. ಜೊತೆಗೆ 16–17–18 ನೇ ಶತಮಾನಗಳಲ್ಲಿ ರೂಪುಗೊಂಡ ವಿಜ್ಞಾನ ಶಾಸ್ತ್ರ ಈ ವಾದಕ್ಕೆ ಪುಷ್ಟಿಕೊಟ್ಟಿತು. ಭೌತವಾದದ ನಿಜಾಂಶಕ್ಕೆ ವಿಜ್ಞಾನ ಸಮರ್ಥನೆ ಕೊಟ್ಟಿತು. ಅಷ್ಟಕ್ಕೇ 18 ನೇ ಶತಮಾನದ ಭೌತವಾದಿಗಳು ತೃಪ್ತಿ ಹೊಂದಿದರು. ಭೌತ ಪ್ರಪಂಚದಲ್ಲಿ ಚಲನೆ ಮತ್ತು ಚೈತನ್ಯ ಇಲ್ಲವೆಂದರು. ಯಾಂತ್ರಿಕ ಭೌತವಾದ (Mechanical Materialism) ಪ್ರಚಾರಕ್ಕೆ ಬಂದಿತು.

ಈ ಸಂಧಿಗ್ಧ ಸಮಯದಲ್ಲಿ ಮಾರ್ಕ್ಸ್-ಏಂಗೆಲ್ಸರು ಪ್ರವೇಶಮಾಡಿದರು. ಅವರ ನಿಲುವು ಭೌತಾತ್ಮಕ ವಾದವಾಯಿತು. 18 ನೇ ಶತಮಾನದ ಅಚೈತನ್ಯದ, ಅಚಲನೆಯ ಭೌತವಾದವನ್ನು ಖಂಡಿಸಿದರು; ತಾರ್ಕಿಕ ಭೌತವಾದವನ್ನು ಪ್ರತಿಪಾದಿಸಿದರು (Dialectical Materialism) ಭೌತ ಪ್ರಪಂಚದ ಸ್ವರೂಪವೇ ಚಲನೆ ಮತ್ತು ಚೈತನ್ಯವೆಂದರು. ಹೆಗೆಲ್ ಪ್ರತಿಪಾದಿಸಿದ ಇತಿಹಾಸ ದೃಷ್ಟಿಯನ್ನು ತಾರ್ಕಿಕ ಭೌತವಾದದ ಅಡಿಪಾಯದ ಮೇಲೆ ಸ್ಥಾಪಿಸಿದರು. ಸಮಾಜದ ಹುಟ್ಟು, ಬೆಳವಣಿಗೆ, ಸಾಮಾಜಿಕ ಮತ್ತು ರಾಜಕೀಯ ರಂಗಗಳಲ್ಲಿ ಕಂಡು ಬರುವ ಬದಲಾವಣೆಗಳು ಮತ್ತು ಭಾವನೆಗಳು ಸಮಾಜದ ಆರ್ಥಿಕ ವ್ಯವಸ್ಥೆ ಅಥವಾ ಆಯಕಟ್ಟಿನಲ್ಲಿ (The Economic Structure) ಹುದುಗಿರುವ ಚೇತನಾಶಕ್ತಿಗಳಿಂದ ಮತ್ತು ಆಗುತ್ತಿರುವ ಬದಲಾವಣೆಗಳಿಂದ ಉಂಟಾಗಿವೆ ಎಂದು ತಿಳಿಸಿದರು. ಸಮಾಜದ ಸ್ವರೂಪವನ್ನು ಅನಂತ ಚಲನೆ

ಯೆಂದು ಕಂಡುಹಿಡಿದರು. ಸಮಾಜಕ್ಕೆ ಅನ್ವಯಿಸುವ ಹಾಗೆ ಐತಿಹಾಸಿಕ ಭೌತವಾದವನ್ನು ಪ್ರತಿಪಾದಿಸಿದರು (Historical Materialism).

ಇದೇ ಸಮಯದಲ್ಲಿ ಫ್ರಾನ್ಸ್ ದೇಶದಲ್ಲಿ ಪ್ರಚಾರಕ್ಕೆ ಬಂದಿದ್ದ ಸಮಾಜವಾದ ಮಾರ್ಕ್ಸ್–ಏಂಗೆಲ್ಸರ ಐತಿಹಾಸಿಕ ಭೌತವಾದ ದೃಷ್ಟಿಗೆ ಪುಷ್ಟಿಕೊಟ್ಟಿತು. ಇತಿಹಾಸಜ್ಞರು ವರ್ಗ ಹೋರಾಟ, ವರ್ಗಗಳ ಇರುವಿಕೆ, ವಿರಸ ಇತ್ಯಾದಿಗಳ ಕಡೆ ಗಮನ ಸೆಳೆದಿದ್ದರು. ಇವುಗಳು ಕೊನೆಗೊಳ್ಳಬೇಕಾದರೆ ಸಮಾಜದ ಆರ್ಥಿಕ ವ್ಯವಸ್ಥೆಯನ್ನು ಮಾರ್ಪಾಡು ಮಾಡಿದ ಹೊರತು, ಆರ್ಥಿಕ ಸಮಾನತೆಯನ್ನು ಸ್ಥಾಪಿಸಿದ ಹೊರತು, ಖಾಸಗೀ ಸ್ವಾಮ್ಯ ವಿನಾಶವಾದ ಹೊರತು ಸಾಧ್ಯವಿಲ್ಲವೆಂದು ಫ್ರೆಂಚ್ ಸಮಾಜವಾದಿಗಳು ತಿಳಿಸಿದ್ದರು. ಈ ಮಧ್ಯೆ ಶೋಷಣೆಯಿಂದ ಪಾರಾಗಲು ಯತ್ನಿಸಿ ಕಾರ್ಮಿಕವರ್ಗ ಸ್ವಾಮ್ಯವರ್ಗದ ಮೂಲೋತ್ಪಾಟನೆಗೆ ಶ್ರಮಿಸುತ್ತಿದ್ದಿತು. ಹೀಗಿರುವಾಗ, ಸಮಾಜವಾದಿಗಳು ಆಶಿಸಿದಂತೆ, ಸ್ವಾಮ್ಯವರ್ಗ ನಿರ್ನಾಮವಾಗುವುದಕ್ಕೆ ಸಹಾಯ ಸಂದರ್ಭಗಳನ್ನು ಆಧುನಿಕ ಬಂಡವಾಳ ಆರ್ಥಿಕ ವ್ಯವಸ್ಥೆ ಕಲ್ಪಿಸಿದೆಯೇ ಎಂಬುದಕ್ಕೆ ಉತ್ತರ ಬೇಕಾಯಿತು. ಈ ಉತ್ತರದ ಸಂಶೋಧನೆ ಮಾರ್ಕ್ಸ್–ಏಂಗೆಲ್ಸರ ಪ್ರಥಮ ಕರ್ತವ್ಯವಾಯಿತು. ಉತ್ತರ ಸಿಕ್ಕಿತು. ಬಂಡವಾಳ ಆರ್ಥಿಕ ವ್ಯವಸ್ಥೆಯಲ್ಲಿರುವ ವಿರಸಗಳು ಮತ್ತು ಅದು ಜನ್ಮ ಕೊಟ್ಟಿರುವ ಹೊಸ ಶಕ್ತಿಯಾದ ಕಾರ್ಮಿಕವರ್ಗ ಬಂಡವಾಳ ವ್ಯವಸ್ಥೆಗೂ ಖಾಸಗೀ ಸ್ವಾಮ್ಯಕ್ಕೂ ಚ್ಯುತಿ ತರುವುದೆಂದರು. ಸಮಾಜವಾದದ ಆಗಮನ ಅನಿವಾರ್ಯವೆಂದರು. ತತ್ ಪರಿಣಾಮವಾಗಿ ಕಾರ್ಮಿಕವರ್ಗದ ಚಳವಳಿಗೂ ಸಮಾಜವಾದಕ್ಕೂ ನಿಕಟ ಸಂಬಂಧವನ್ನು ಕಲ್ಪಿಸಿದರು.

ಕಾರ್ಮಿಕವರ್ಗದ ಹೋರಾಟ ಮತ್ತು ಚಳವಳಿಗೆ ಶೋಷಣೆಯೇ ಮುಖ್ಯ ಕಾರಣವಾಗಿದೆ ಎಂದು ಮಾರ್ಕ್ಸ್–ಏಂಗೆಲ್ಸರು ತಿಳಿಸಿದರು. ಆದುದರಿಂದ, ಶೋಷಣೆ ಆಗುತ್ತಿರುವ ರೀತಿಯನ್ನು ವ್ಯಕ್ತಪಡಿಸುವುದು ಅಗತ್ಯವಾಯಿತು. ಇದಕ್ಕೆ ಇಂಗ್ಲೆಂಡ್ ದೇಶದಲ್ಲಿ ಬೃಹತ್ ಪ್ರಮಾಣದಲ್ಲಿ ವ್ಯವಸ್ಥೆ ಹೊಂದಿದ್ದ ಬಂಡವಾಳ ಉತ್ಪಾದನಕ್ರಮ ಶೋಷಣೆಯ ಮರ್ಮವನ್ನು ಬಹಿರಂಗಪಡಿಸಲು ನೆರವಾಯಿತು. ಮಾರ್ಕ್ಸ್–ಏಂಗೆಲ್ಸರು ಬಂಡವಾಳ ಆರ್ಥಿಕ ವ್ಯವಸ್ಥೆಯ ಬೆಳವಣಿಗೆ, ಅದು ಕೆಲಸ ಮಾಡುವ ರೀತಿ, ಇತ್ಯಾದಿಗಳನ್ನು ಅತಿ ಸೂಕ್ಷ್ಮವಾಗಿ ಪರಿಶೀಲಿಸಿದರು. ಲಾಭ

ದೃಷ್ಟಿಯೇ ಬಂಡವಾಳ ವ್ಯವಸ್ಥೆಯ ಜೀವನಾಡಿ ಎಂದು ತೀರ್ಮಾನಿಸಿದರು. ಲಾಭವೇ ಬಂಡವಾಳದ ಉತ್ಪಾದನಕ್ಕೆ, ಅಭಿವೃದ್ಧಿಗೆ ಕಾರಣವೆಂದರು. ಸರಕುಗಳನ್ನು ತಯಾರಿಸಲು ವೇತನ ಕೊಟ್ಟು ದುಡಿಮೆಗಾರರನ್ನು ನೇಮಿಸಿ ಕೊಳ್ಳುವುದು ಸಹಜವಾಗಿ ಕಂಡರೂ, ದುಡಿಮೆಗೆ ಪ್ರತಿಯಾಗಿ ಕೊಡುವ ವೇತನ, ಕೂಲಿ, ದುಡಿಮೆಗಾರರು ಮಾಡುವ ಉತ್ಪನ್ನಕ್ಕೆ ಸರಿಸಮನಾಗಿಲ್ಲ ದಿರುವುದನ್ನು ಕಂಡರು. ದುಡಿಮೆಗಾರರಿಗೆ ಸರಿಪ್ರಮಾಣದಲ್ಲಿ ಕೂಲಿ ಕೊಡದೆ ದಕ್ಕಿಸಿಕೊಳ್ಳುವುದೇ ಲಾಭ. ಉದ್ಯಮಗಾರನು ಕೂಲಿ ಅಥವಾ ವೇತನವನ್ನು ಎಲ್ಲರೂ ಕಾಣುವಹಾಗೆ ಬಹಿರಂಗವಾಗಿ ನಿಷ್ಕರ್ಷಿಸಿ ಸರಿ ಸಮಾನದ ಪ್ರತಿಫಲವನ್ನು ಕೊಡುವಹಾಗೆ ಕಂಡರೂ, ದುಡಿಮೆಯ ಶಕ್ತಿ (Labour Power) ಯಿಂದ ಆಗುವ ಉತ್ಪನ್ನದ ಅತ್ಯಧಿಕ ಭಾಗ ಬಂಡ ವಾಳಗಾರನಿಗೇ ಸಿಕ್ಕುತ್ತದೆ. ಇದೇ ಹೆಚ್ಚಿಗೇ ಮೌಲ್ಯ—ಲಾಭ. ಇದನ್ನು ಉದ್ಯಮಗಾರನು ದಕ್ಕಿಸಿಕೊಳ್ಳುತ್ತಾನೆ. ಒಂದು ದೃಷ್ಟಾಂತವನ್ನು ನೋಡೋಣ. ಒಬ್ಬ ಉದ್ಯಮಗಾರ ಒಬ್ಬ ಕೂಲಿಯವನನ್ನು ಒಂದು ದಿನದ ಮಟ್ಟಿಗೆ (8 ಘಂಟೆಯ ಕಾಲಕ್ಕೆ) ಒಂದು ರೂಪಾಯಿ ಕೂಲಿಯ ಮೇಲೆ ಕೆಲಸಕ್ಕೆ ತೆಗೆದುಕೊಳ್ಳುತ್ತಾನೆ. ಆ ದುಡಿಮೆಗಾರ 8 ಘಂಟೆಗಳ ಕಾಲ ಕೆಲಸ ಮಾಡುತ್ತಾನೆ. ದುಡಿಮೆಗಾರ ಚರಕದ ಸಹಾಯ ದಿಂದ ದಿನಕ್ಕೆ 3 ಲಡಿ ದಾರವನ್ನು ತೆಗೆಯುತ್ತಾನೆ. ಅದರ ಮೌಲ್ಯವೆಲ್ಲಾ ಉದ್ಯಮಗಾರನಿಗೇ ಸೇರುತ್ತದೆ. ಅದೇ ಮನುಷ್ಯನನ್ನು ಯಂತ್ರದಮೇಲೆ ಕೆಲಸ ಮಾಡಿಸಿದರೆ 30 ಲಡಿ ದಾರ ಬರುತ್ತದೆ. ದುಡಿಮೆಗಾರನ ದುಡಿಮೆ ಶಕ್ತಿ 3 ಲಡಿ ದಾರ ತೆಗೆಯಲಿ, ಅಥವಾ 30 ಲಡಿ ದಾರ ತೆಗೆಯಲಿ, ಅದು ಗಣನೆಗೆ ಬರುವುದಿಲ್ಲ. ಕೊಂಡಿರುವುದು 8 ಘಂಟೆಯ ದುಡಿಮೆ. ಆದ್ದ ರಿಂದ ಹೆಚ್ಚಿಗೆ ಉತ್ಪಾದನೆಯೆಲ್ಲ—22 ಲಡಿ ದಾರದ ಮೌಲ್ಯ—ಉದ್ಯಮ ಗಾರನ ಲಾಭ. ಇದೇ ಹೆಚ್ಚಿಗೆ ಮೌಲ್ಯ (Surplus value).

ಮಾರ್ಕ್ಸ್–ಏಂಗೆಲ್ಸರು ಹೆಚ್ಚಿಗೇ ಮೌಲ್ಯದ ಗುಟ್ಟನ್ನು ಬಹಿರಂಗ ಪಡಿಸುವುದರ ಮೂಲಕ ಶೋಷಣೆಯ ಆವಾಸಸ್ಥಾನವನ್ನು ಪತ್ತೆ ಹಚ್ಚಿದರು. ಬಂಡವಾಳಶಾಹಿ–ಆರ್ಥಿಕ ವ್ಯವಸ್ಥೆಗೆ ಊರೆಗೋಲಾಗಿರುವ ಲಾಭ ಮತ್ತು ಲಾಭದಾಹ ಬಂಡವಾಳ ವ್ಯವಸ್ಥೆಯಮೇಲೆ, ಸಮಾಜದಮೇಲೆ ಮತ್ತು ಕಾರ್ಮಿಕವರ್ಗದಮೇಲೆ ಮಾಡುವ ಪರಿಣಾಮಗಳನ್ನು ವಿಶದಪಡಿಸಿದರು.

ಬಂಡವಾಳ ವ್ಯವಸ್ಥೆ ಜನ್ಮವಿತ್ತ ದುಸ್ಥಿತಿಪೀಡಿತ ಕಾರ್ಮಿಕವರ್ಗದಿಂದಲೇ ಬಂಡವಾಳ ವ್ಯವಸ್ಥೆಯ ನಾಶ ಆಗುವುದಾಗಿ ಘೋಷಿಸಿದರು. ಬಂಡವಾಳ ಉತ್ಪಾದನ ಕ್ರಮದಲ್ಲಿರುವ ಚೇತನವೆಂದರೆ ಉತ್ಪಾದನಾಶಕ್ತಿ (Productive forces) ಗಳಾದ ಯಂತ್ರಗಳು (Machines) ಮತ್ತು ಉಪಕರಣ (Tools) ಗಳಾಗಿವೆ. ಹೆಚ್ಚು ಉತ್ಪಾದನೆಮಾಡಲು, ತನ್ಮೂಲಕ ಹೆಚ್ಚು ಲಾಭಗಳಿಸಲು ಉತ್ಪಾದನಾ ಶಕ್ತಿಗಳನ್ನು ಬೆಳಸಲಾಗಿದೆ. ಈ ಶಕ್ತಿಗಳ ಬೆಳವಣಿಗೆ ಮೊದಮೊದಲು ಹೆಚ್ಚು ಹೆಚ್ಚು ಲಾಭ ತರುವುವು. ಕೊನೆಗೆ ಅವು ತರುವ ಬದಲಾವಣೆಗಳು ಮತ್ತು ಪರಿಣಾಮಗಳು ಖಾಸಗೀ ಸ್ವಾಮ್ಯಕ್ಕೆ ಮೃತ್ಯುವಾಗಿ ಪರಿಣಮಿಸುವುವು. ಬಂಡವಾಳ ವ್ಯವಸ್ಥೆ ವಿರಸ ಪೂರಿತವಾಗುತ್ತದೆ. ಲಾಭದ ಅಂಶ ಕಡಿಮೆಯಾದ ಹಾಗೆ ಬಂಡವಾಳ ಶೇಖರಣೆ ಮತ್ತು ಬಂಡವಾಳ ವ್ಯವಸ್ಥೆ ಕುಗ್ಗುತ್ತದೆ. ನಿರುದ್ಯೋಗ, ದುಸ್ಥಿತಿ ಹೆಚ್ಚುತ್ತದೆ. ಕಾರ್ಮಿಕವರ್ಗ ಕ್ರಾಂತಿಕಾರಿಯಾಗುತ್ತದೆ. ಖಾಸಗೀ ಸ್ವಾಮ್ಯದ ಬಂಧನದಲ್ಲಿ ಸಿಕ್ಕಿರುವ ಈ ಉತ್ಪಾದನಾ ಶಕ್ತಿಗಳ ಬಿಡುಗಡೆ ಅಗತ್ಯವಾಗುತ್ತದೆ. ಉತ್ಪಾದನಾ ಸಾಧನಗಳ ಮೇಲಿರುವ ಖಾಸಗೀ ಸ್ವಾಮ್ಯವನ್ನು ಕಾರ್ಮಿಕವರ್ಗ ನಾಶಪಡಿಸುತ್ತದೆ.[1]

ಮೇಲ್ಕಂಡ ತತ್ತ್ವತ್ರಯಗಳನ್ನು ಸಂಯೋಗಗೊಳಿಸಿ ಮಾರ್ಕ್ಸ್-ಏಂಗೆಲ್ಸರು ಸಮಾಜದ ಚಲನವಲನಗಳ ಬಗ್ಗೆ ನಿಯಮಗಳನ್ನು ರಚಿಸಿದರು. ಅವುಗಳಲ್ಲಿ ಸೂತ್ರದಂತಿರುವ ನಿಯಮ ಸಂಕ್ಷಿಪ್ತವಾಗಿ ಈ ರೀತಿ ಇದೆ—

(1) ಮಾನವನು ಸಮಾಜಜೀವಿ. ಆತನು ಬದುಕಬೇಕು. ಬದುಕಲು ಅನ್ನ ಆಹಾರಾದಿಗಳನ್ನು ಸಂಪಾದಿಸಬೇಕು. ಹಾಗೆ ಮಾಡುವುದರಲ್ಲಿ ನಿರತನಾಗಿ ಒಂಟಿಯಾಗಿಯೋ ಇತರರೊಡಗೂಡಿಯೋ ಜೀವನ ಸಾಮಗ್ರಿಗಳನ್ನು ಉತ್ಪಾದನೆ ಮಾಡಬೇಕು. ಇದರಿಂದ ಪಾರಾಗಲು ಸಾಧ್ಯವೇ ಇಲ್ಲ. ಒಂಟಿಯಾಗಿ ಮಾಡಲಿ, ಇತರರೊಡಗೂಡಿ ಮಾಡಲಿ, ಇಷ್ಟವಿರಲಿ ಇಲ್ಲದಿರಲಿ, ಉತ್ಪಾದನಾಕಾರ್ಯ ಒಬ್ಬರೊಬ್ಬರೊಡನೆ ಸಂಬಂಧವನ್ನು ಕಲ್ಪಿಸುತ್ತದೆ. ಈ ಉತ್ಪಾದನಾ ಸಂಬಂಧಗಳು ಎಲ್ಲ ಕಾಲದಲ್ಲೂ

---

(1) ನಾಲ್ಕನೇ ಅಧ್ಯಾಯದಲ್ಲಿ ಬಂಡವಾಳ ವ್ಯವಸ್ಥೆ ಎಡೆಕೊಡುವ ವಿರಸಗಳನ್ನು ವಿವರಿಸಲಾಗಿದೆ.

ಒಂದೇ ತರನಾಗಿರದೆ ಆಯಾ ಕಾಲದಲ್ಲಿ ಆ ಸಮಾಜದಲ್ಲಿರುವ ಉತ್ಪಾದನಾ ಶಕ್ತಿಗಳಿಗೆ (ಉತ್ಪಾದನೆ ಮಾಡುವುದಕ್ಕೆ ಸಹಾಯಕವಾಗಿರುವ ವಸ್ತುಗಳು–ನೇಗಿಲು, ಪಿಕಾಸಿ, ಗುದ್ದಲಿ, ಹಾರೆ, ಯಂತ್ರ, ಇತ್ಯಾದಿ) ಹೊಂದಿಕೊಂಡಿರುತ್ತದೆ. ಉತ್ಪಾದನಾ ಶಕ್ತಿಗಳು ಉತ್ಪತ್ತಿಮಾಡುವ ವಿಧಾನವನ್ನು ನಿರ್ಧರಿಸುತ್ತವೆ. ಹಾಗೆಯೇ ಉತ್ಪಾದನಾ ಸಂಬಂಧಗಳೂ ನಿರ್ಧರವಾಗುತ್ತವೆ. ಈ ಉತ್ಪಾದನಾ ಸಂಬಂಧಗಳ ಸಮುದಾಯ ಸಮಾಜದ ಆರ್ಥಿಕ ವ್ಯವಸ್ಥೆಯಾಗುತ್ತದೆ. ಇದೇ ಪ್ರತಿಯೊಂದು ಸಮಾಜದ ಮುಖ್ಯವಾದ ಅಸ್ತಿಭಾರ.

(2) ಈ ಅಸ್ತಿಭಾರದ ಮೇಲೆ ಪ್ರತಿಯೊಂದು ಸಮಾಜದ ಸಾಮಾಜಿಕ, ರಾಜಕೀಯ, ನ್ಯಾಯ ವ್ಯವಸ್ಥೆಗಳು ಮತ್ತು ಇವುಗಳನ್ನು ಪ್ರತಿಬಿಂಬಿಸುವ ರೀತಿಯಲ್ಲಿ ಮನೋಭಾವಗಳು ಜನ್ಮತಾಳುತ್ತವೆ. ಒಟ್ಟಿನಲ್ಲಿ ಉತ್ಪಾದನಾ ರೀತಿ ಸಾಮಾಜಿಕ, ರಾಜಕೀಯ ಮತ್ತು ಪ್ರಾಜ್ಞಜೀವನದ ಮೇಲೆ ಪ್ರಭಾವ ಬೀರುತ್ತದೆ; ಅವುಗಳ ಸ್ವಭಾವವನ್ನು ನಿರ್ಧರಿಸುತ್ತದೆ. ಸಮಾಜದಲ್ಲಿ ಜನರು ಹೊಂದಿರಬಹುದಾದ ಮನೋಭಾವಕ್ಕೂ, ಅವರು ವಾಸ್ತವವಾಗಿ ನಡಸುತ್ತಿರುವ ಜೀವನಕ್ಕೂ ಸಂಬಂಧವಿದೆ. ಅವರು ವಾಸ್ತವವಾಗಿ ನಡಸುತ್ತಿರುವ ಜೀವನ ಅವರುಗಳ ಮನೋಭಾವವನ್ನು ರೂಪಿಸಿದೆಯೇ ವಿನಹ ಮನೋಭಾವ ಅವರು ನಡಸುತ್ತಿರುವ ಜೀವನವನ್ನು ರೂಪಿಸಿಲ್ಲ.

(3) ಜೀವನ ಹೀಗೆ ಸಾಗುತ್ತಾ, ಉತ್ಪಾದನಾ ಶಕ್ತಿಗಳು ವೃದ್ಧಿಯಾಗುತ್ತಾ ಇರುತ್ತವೆ. ಒಂದು ಕಾಲದಲ್ಲಿ ಒಂದು ಉತ್ಪಾದನಾ ರೀತಿ ಮತ್ತು ವ್ಯವಸ್ಥೆಗೆ ಒಳಪಟ್ಟು ಕೆಲಸಮಾಡುತ್ತಲಿರುವ, ವೃದ್ಧಿಹೊಂದುತ್ತಿರುವ ಉತ್ಪಾದನಾ ಶಕ್ತಿಗಳು, ಅವು ಅದುವರೆಗೂ ತಮಗೆ ಆಶ್ರಯವಿತ್ತಿದ್ದ ಉತ್ಪಾದನಾಕ್ರಮ ಮತ್ತು ಸ್ವಾಮ್ಯ ಸಂಬಂಧಗಳೊಡನೆ ವಿರಸ ತಾಳುತ್ತವೆ. ಈ ಸ್ವಾಮ್ಯ ಸಂಬಂಧಗಳು ಉತ್ಪಾದನಾ ಶಕ್ತಿಗಳ ಬೆಳವಣಿಗೆಗೆ ಅಡ್ಡಿಬರುತ್ತವೆ. ಈ ರೀತಿ ಆಗುವುದೇ ತಡ ಸಮಾಜದಲ್ಲಿ ಸಾಮಾಜಿಕ ಕ್ರಾಂತಿ ಪ್ರಾರಂಭವಾಗುತ್ತದೆ. ಸಮಾಜದಲ್ಲಿ ಬದಲಾವಣೆಗಳು ಆರಂಭವಾಗುತ್ತವೆ. ಪ್ರಥಮವಾಗಿ ಆರ್ಥಿಕ ಅಸ್ತಿಭಾರ ಮಾರ್ಪಾಡು

ಹೊಂದುತ್ತದೆ. ಇದರಲ್ಲಿ ಆಗುವ ಬದಲಾವಣೆಗಳನ್ನು ನಿರ್ದಿಷ್ಟವಾಗಿ ಗುರ್ತಿಸಬಹುದು. ಆರ್ಥಿಕ ಅಸ್ತಿಭಾರದಲ್ಲಿ ಬದಲಾವಣೆಯೇ ಪ್ರಾರಂಭ, ಅದಕ್ಕೆ ಹೊದಿಕೆಯಂತಿರುವ (Superstructure) ರಾಜಕೀಯ ವ್ಯವಸ್ಥೆ, ನ್ಯಾಯ, ತತ್ತ್ವ, ಪಾರಮಾರ್ಥಿಕ ದೃಷ್ಟಿ ಮತ್ತು ಮನೋಭಾವ ಗಳು ಎಲ್ಲವೂ ಬದಲಾವಣೆ ಹೊಂದುತ್ತವೆ. ಇವುಗಳಲ್ಲಿ ಬದಲಾವಣೆಗಳು ಸ್ವಲ್ಪನಿಧಾನ. ಬದಲಾವಣೆಯಾದ ಆರ್ಥಿಕ ವ್ಯವಸ್ಥೆಗೂ ಹಳೆಯ ಭಾವನೆ ಗಳಿಗೂ ಮತ್ತು ವ್ಯವಸ್ಥೆಗಳಿಗೂ ಹೊಂದಾಣಿಕೆ ಇಲ್ಲವೆಂದು ಮನದಟ್ಟಾಗು ತ್ತದೆ. ಈ ರೀತಿಯಾದ ಜಾಗೃತಿ ಜೀವನದಲ್ಲಿರುವ ವಿರೋಧಗಳಿಂದಲೂ ಮತ್ತು ಉತ್ಪಾದನಾ ಸಂಬಂಧಗಳಿಗೂ ಉತ್ಪಾದನಾ ಶಕ್ತಿಗಳಿಗೂ ತಲೆ ದೋರುವ ವಿರಸಗಳಿಂದ ಉಂಟಾಗುತ್ತದೆ.

ಉತ್ಪಾದನಾ ಶಕ್ತಿಗಳು ಪೂರ್ಣವಾಗಿ ಅಭಿವೃದ್ಧಿ ಹೊಂದಲು ಮತ್ತು ಅವು ಹಾಗೆ ಅಭಿವೃದ್ಧಿಹೊಂದಲು ಪೂರ್ಣ ಅವಕಾಶವಿರುವವರೆಗೂ ಯಾವ ಸಮಾಜ ವ್ಯವಸ್ಥೆಯೂ ಗತಿಸುವುದಿಲ್ಲ. ಮತ್ತು ಹಳೆಯ ಉತ್ಪಾ ದನಾ ವ್ಯವಸ್ಥಾಕ್ರಮದ ಮೇಲೆ ನಡೆಯುತ್ತಿರುವ ಆರ್ಥಿಕ ವ್ಯವಸ್ಥೆ ಪರಿಪಕ್ವ ವಾಗುವವರೆಗೂ ಹೊಸ ಉತ್ಪಾದನಾ ಸಂಬಂಧಗಳು ಮೂಡುವುದಿಲ್ಲ. ಯಾವ ಕೆಲಸವು ಸಾಧ್ಯವೋ ಆ ಕೆಲಸವನ್ನು ಮಾಡುವುದು ಗುರಿಯಾಗು ತ್ತದೆ; ಮಾನವರು ಅದರಲ್ಲಿ ನಿರತರಾಗುತ್ತಾರೆ. ಆದ್ದರಿಂದ ಸಮಾಜದ ಬದಲಾವಣೆಗೆ ಯತ್ನಿಸುವ ಕಾರ್ಯಕ್ಕೆ, ಹಾಗೆ ಯತ್ನಿಸಿ ಸಫಲವಾಗುವುದಕ್ಕೆ, ಉತ್ಪಾದನಾ ವ್ಯವಸ್ಥಾಕ್ರಮದಲ್ಲಿ ಸ್ಥಳವಿರಬೇಕು, ಅಥವಾ ಅದಕ್ಕೆ ಸೌಲಭ್ಯ ಗಳಿರಬೇಕು, ಅಥವಾ ಸೌಲಭ್ಯಗಳು ಸೃಷ್ಟಿಹೊಂದುತ್ತಿರುವ ಸ್ಥಿತಿಯಲ್ಲಿರ ಬೇಕು.

ಈ ದೃಷ್ಟಿಯಿಂದ ಗತಿಸಿರುವ ಪ್ರಾಚೀನ ಮತ್ತು ಊಳಿಗಮಾನ್ಯ ಪದ್ಧತಿಯ ಆರ್ಥಿಕ ವ್ಯವಸ್ಥೆಗಳು ಸಮಾಜದ ಆರ್ಥಿಕ ವಿಕಾಸದಲ್ಲಿ ಕ್ರಮ ವಾಗಿ ಕಾಣಿಸಿಕೊಂಡ ಘಟ್ಟಗಳಾಗಿವೆ. ಈಗ ಕೊನೆಯ ಘಟ್ಟವಾಗಿ ವಿರಸಗಳನ್ನೊಳಗೊಂಡ ಬಂಡವಾಳ ವ್ಯವಸ್ಥೆ ಮತ್ತು ಸಂಬಂಧಗಳು ಇವೆ. ಬಂಡವಾಳ ವ್ಯವಸ್ಥೆಯ ಗರ್ಭದಲ್ಲಿ ಜನಿಸುತ್ತಿರುವ ಉತ್ಪಾದನಾ ಶಕ್ತಿಗಳು, ಭೌತಿಕ ಸ್ಥಿತಿಗತಿಗಳನ್ನು (Material Conditions) ಕಲ್ಪಿಸಿಕೊಡು

ವುದರ ಮೂಲಕ, ವಿರಸಗಳನ್ನು ತೊಡೆಯಲು ಸಾಧ್ಯ ಮಾಡಿಕೊಡುತ್ತಲಿವೆ. ಬಂಡವಾಳ ವ್ಯವಸ್ಥೆಯ ಅಂತ್ಯದೊಡನೆ, ಹೊಸ ವ್ಯವಸ್ಥೆಯ ಉದಯ ದೊಡನೆ, ಮಾನವನ ಪೂರ್ವ ಇತಿಹಾಸದ ಅಂಕ ಪರಿಸಮಾಪ್ತಿಯಾಗುತ್ತದೆ. 1

ಮಾರ್ಕ್ಸ್-ಏಂಗೆಲ್ಸರು ಆರ್ಥಿಕ ಅಂಶಗಳಿಗೆ ಹೆಚ್ಚು ಗಮನವನ್ನು ಕೊಡಲಿಕ್ಕೂ ಮತ್ತು ಸಮಾಜ ಸ್ವರೂಪದ ಬಗ್ಗೆ ಭೌತಾತ್ಮಿಕ ವಿವರಣೆ ಕೊಡಲಿಕ್ಕೂ ಕಾರಣವೇನು? ಮಾರ್ಕ್ಸ್-ಏಂಗೆಲ್ಸರ ಪ್ರಕಾರ ಸಮಾಜ ಜೀವನದಲ್ಲಿ ಮೂಲಭೂತವಾಗಿ ಕಾಣುವ ಮುಖ್ಯ ಅಂಶವೆಂದರೆ ಮಾನವ ಜೀವಿಗಳು ಪ್ರಾಣ ಸಂರಕ್ಷಿಸಿಕೊಳ್ಳುವ ಪ್ರಯತ್ನ. ಇದು ಎಷ್ಟು ಅಗತ್ಯ ವೆಂದರೆ, ಜೀವಸಂರಕ್ಷಣೆ ಆದ ಹೊರತು ಮಾನವ ಜೀವಿಗಳು ಇನ್ನಾವ ಕೆಲಸಕ್ಕೂ ಗಮನ ಕೊಡಲು ಸಿದ್ಧರಿಲ್ಲ. ಜೀವನದ ಮಿಕ್ಕ ಸೊಗಸುಗಳು ಎಷ್ಟೇ ಆಪ್ಯಾಯಮಾನವಾಗಿರಲಿ, ಅವನ್ನು ಹೊಂದುವುದು ಎಷ್ಟೇ ಪ್ರಾಮುಖ್ಯ ವಾಗಿರಲಿ, ಮೊದಲು ಜೀವಸಂರಕ್ಷಣೆಗಾಗಿ ದುಡಿಯಬೇಕು, ಪ್ರಕೃತಿಯನ್ನು ಭೇದಿಸಬೇಕು, ಉತ್ಪಾದನೆ ಮಾಡಬೇಕು ಮತ್ತು ಜೀವಿಸಬೇಕು. ಇದಕ್ಕಾಗಿ ಮಾನವರು ತಾಂತ್ರಿಕ ಸಲಕರಣೆಗಳನ್ನು (Implements) ಬಹು ಆದಿಕಾಲದಲ್ಲೇ ನಿರ್ಮಿಸಿದರು. ಕೆಲವರು ಕೆಲವು ಕೆಲಸಗಳಲ್ಲಿ ನಿರತ ರಾಗುವುದರಲ್ಲಿ ಸೌಲಭ್ಯಗಳನ್ನು ಕಂಡರು. 'ದುಡಿಮೆಯ ವಿಭಜನೆಯು' (Division of labour) ಬಂದಿತು. ಮಾನವ ವ್ಯಕ್ತಿಗಳ ದುಡಿಮೆಯಲ್ಲಿ ಸಂಭವಿಸುವ ಪರಸ್ಪರ ಸಂಬಂಧ—ಉಳುವವನು ಯಾರು, ನೀರು ಹಾಯಿಸುವವನು ಯಾರು, ದನ ಕಾಯುವವನು ಯಾರು, ಉತ್ಪಾದನೆಗೆ ಸಾಧನ ವಾದ ಪ್ರಕೃತಿಸಂಪತ್ತು ಯಾರ ಸ್ವಾಮ್ಯಕ್ಕೆ ಒಳಪಟ್ಟಿರಬೇಕು, ಉತ್ಪಾದನೆ ಆದದ್ದು ಹೇಗೆ ವಿಭಜನೆಯಾಗಬೇಕು, ಇತ್ಯಾದಿಗಳನ್ನು ಪ್ರತಿಬಿಂಬಿಸುವ ಸಂಬಂಧ—ಆರ್ಥಿಕ ಸಂಬಂಧಗಳಾಗಿವೆ. ಸಮಾಜದ ಕಟ್ಟಳೆ, ಕಾನೂನು, ನ್ಯಾಯ ಮತ್ತು ಧರ್ಮ—ರಾಜಕೀಯ ಮತ್ತು ಧಾರ್ಮಿಕ ವ್ಯವಸ್ಥೆ—ಇವು ಗಳನ್ನು ಸಂರಕ್ಷಿಸುತ್ತವೆ. ಹೀಗೆ ಮಾನವರು ಒಡಗೂಡಿ, ಸಮಾಜ ಜೀವಿ ಗಳಾಗಿ, ಜೀವನ ಸಾಗಿಸಲು ನಿರ್ಮಿಸಿಕೊಂಡ ಆರ್ಥಿಕ ಜೀವನ, ಅವರು

(1) Preface to a contribution to the critique of political economy: Marx. (M.&.E.S.W. Pages 327-339.)

ಉತ್ಪಾದನೆ ಮಾಡುವ ರೀತಿ ಮತ್ತು ಹಾಗೆ ಮಾಡುವಾಗ ಉಂಟಾಗುವ ಪರಸ್ಪರ ಸಂಬಂಧ ಇವು ಅವರ ಆರ್ಥಿಕ ವ್ಯವಸ್ಥೆಯಾಗಿದೆ.

ಆದುದರಿಂದ ಸಮಾಜದ ನೈಜಸ್ವರೂಪವನ್ನು ತಿಳಿಯಬೇಕಾದರೆ ಅದರ ಆರ್ಥಿಕ ವ್ಯವಸ್ಥೆಯನ್ನು ಮೊದಲು ಪರೀಕ್ಷೆಮಾಡಬೇಕು. ಇಷ್ಟೇ ಅಲ್ಲ ಬದುಕಿಗೆ ಆರ್ಥಿಕ ವ್ಯವಸ್ಥೆ ಆಸರೆಯಾಗಿ ತಳಹದಿಯಾಗುತ್ತದೆ. ಇದರ ಸಂರಕ್ಷಣಾರ್ಥವಾಗಿ ಸಾಮಾಜಿಕ, ರಾಜಕೀಯ, ನ್ಯಾಯ ವ್ಯವಸ್ಥೆಗಳು ಮತ್ತು ಧರ್ಮ ಮೂಡುತ್ತವೆ. ಆರ್ಥಿಕ ವ್ಯವಸ್ಥೆ ಮೂಲವಾಗಿ ನಿಲ್ಲುತ್ತದೆ, ಮತ್ತು ತನ್ನ ಸಂರಕ್ಷಣೆಯನ್ನು ಕೇಳುತ್ತದೆ. ರಾಜಕೀಯ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಮತ್ತು ಧರ್ಮ ಇವುಗಳು ಅದಕ್ಕೆ ಸಂರಕ್ಷಣೆಯನ್ನು ಕೊಡುತ್ತವೆ. ಇದನ್ನು ಅನುಸರಿಸಿ 'ಭಾವನೆ' ಗಳು ಮೂಡುತ್ತವೆ. ಭಾವನೆಗಳ ಕೆಲಸವೆಂದರೆ ಉಂಟಾಗಿರುವ ವ್ಯವಸ್ಥೆಗಳಿಗೆ ತತ್ತ್ವಪುಷ್ಟಿಯನ್ನು (Theoretical Justification or explanation) ಕೊಡುವುದು. ಆದ್ದರಿಂದ ಒಂದು ಸಮಾಜದ ರಾಜಕೀಯ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಧರ್ಮ ಮತ್ತು ಭಾವನೆಗಳು ಪ್ರತ್ಯೇಕವಾಗಿ ಜನಿಸಿಲ್ಲ. ಅವುಗಳ ಹುಟ್ಟು ಆರ್ಥಿಕ ವ್ಯವಸ್ಥೆಯಲ್ಲಿ ಅಡಗಿದೆ. ಕ್ರಮೇಣ ಈ ರಾಜಕೀಯ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಧರ್ಮ ಮತ್ತು ಭಾವನೆಗಳು ತಮ್ಮ ಹುಟ್ಟಿನಿಂದ ಪ್ರತ್ಯೇಕಹೊಂದಿ ಸ್ವತಂತ್ರವಾಗುವುವು. ಅನೇಕವೇಳೆ ಆರ್ಥಿಕ ವ್ಯವಸ್ಥೆಗೂ ಭಾವನೆಗಳಿಗೂ ಆರ್ಥಿಕ ಸಂಬಂಧ ಇಲ್ಲದ ಹಾಗೆ ಕಾಣುತ್ತದೆ. ಎಲ್ಲೋ ಬುದ್ಧಿಶಕ್ತಿಯಿಂದ ಜನಿಸಿದವುಗಳಾಗಿ ತೋರುತ್ತವೆ. ಕಾರಣ, ಆರ್ಥಿಕ ಆಧಾರದ ಮೇಲೆ ಜನ್ಮ ತಾಳಿದ ಭಾವನೆಗಳು ಕ್ರಮೇಣ ಪ್ರತ್ಯೇಕ ಹೊಂದುತ್ತವೆ; ಭಾವನೆಗಳು ತಾತ್ವಿಕ ರೂಪವನ್ನು ತಾಳಿವೆ; ತಮ್ಮದೇ ಆದ ತಾತ್ವಿಕ ಬೆಳವಣಿಗೆಯನ್ನು ಹೊಂದುತ್ತವೆ; ಬುದ್ಧಿಶಕ್ತಿಯಿಂದ ಅವು ಬೃಹದ್ ಸ್ವರೂಪವನ್ನು ತಾಳುತ್ತವೆ. ಭಾವನೆಯಿಂದಲೇ ವಸ್ತುಪ್ರಪಂಚ ನಿರ್ಮಿತವಾದಹಾಗೆ ತೋರುತ್ತವೆ.

ಮೂಲಭೂತವಾದ ಆರ್ಥಿಕ ವ್ಯವಸ್ಥೆ ಇತಿಹಾಸದ ರಂಗದಲ್ಲಿ ಆದಿಯಿಂದ ಇಲ್ಲಿಯವರೆಗೆ ಒಂದೇ ತರನಾಗಿಲ್ಲ. ಇದು ವಾಸ್ತವಾಂಶ. ಇದು ನಮ್ಮ ಜೀವನಕ್ಕೂ ಸಾವಿರ ವರ್ಷಗಳ ಹಿಂದೆ ನಮ್ಮ ಹಿರಿಯರು ನಡಸುತ್ತಿದ್ದ ಜೀವನಕ್ಕೂ ಅಜಗಜಾಂತರ ವ್ಯತ್ಯಾಸಗಳಿವೆ. ಕಾಡಿನಲ್ಲಿ ಗೆಡ್ಡೆ

ಗೆಣಸುಗಳನ್ನು ತಿಂದು ಅಥವಾ ಬೇಟೆಯಾಡುವುದರ ಮೂಲಕ ನಡಸುತ್ತಿದ್ದ ಜೀವನವೆಲ್ಲಿ? ವ್ಯವಸಾಯ ಮತ್ತು ಕೈಗಾರಿಕೆ ಮೂಲಕ ಇಂದು ನಡೆಯುತ್ತಿರುವ ಜೀವನವೆಲ್ಲಿ? ಆರ್ಥಿಕವಾಗಿ—ಜೀವನ ಕ್ರಮದಲ್ಲಿ, ಉತ್ಪಾದನೆಮಾಡುವ ರೀತಿ ನೀತಿಗಳಲ್ಲಿ, ಉಪಯೋಗಿಸುವ ಉಪಕರಣಗಳಲ್ಲಿ ಪದಾರ್ಥಗಳನ್ನು ಅದಲುಬದಲು ಮಾಡಿಕೊಳ್ಳುವುದರಲ್ಲಿ, ಹಂಚಿಕೆಯಲ್ಲಿ—ಉಗ್ರ ಬದಲಾವಣೆಗಳು ಕಾಣುತ್ತವೆ. ಈ ಆರ್ಥಿಕರಂಗದಲ್ಲಿ ಬದಲಾವಣೆ ಮಾತ್ರವಲ್ಲದೆ ನಮ್ಮ ಜೀವನದ ಪ್ರತಿಯೊಂದು ಅಂಗದಲ್ಲೂ ಬದಲಾವಣೆಗಳನ್ನು ಕಾಣುತ್ತೇವೆ. ನಿರಂಕುಶ ರಾಜಪ್ರಭುತ್ವಗಳೆಲ್ಲಿ? ಗುಲಾಮತನವನ್ನು ಸಂರಕ್ಷಿಸುವ ಕಾನೂನುಗಳೆಲ್ಲಿ? ಅವುಗಳಿಗೆ ಪುಷ್ಟಿ ಕೊಡುವ ರೀತಿಯುಲ್ಲಿದ್ದ ಭಾವನೆಗಳೆಲ್ಲಿ? ವಿಜ್ಞಾನ ನಮ್ಮ ಜೀವನದ ಪ್ರತಿಯೊಂದು ಪದರವನ್ನೂ ಹೊಕ್ಕು ಮಾರ್ಪಾಡುಮಾಡುತ್ತಿದೆ. ಪ್ರಪಂಚ ಭಾವನೆಯೇ ಬದಲಾವಣೆಯಾಗಿದೆ. ಪ್ರಕೃತಿಯ ಆಗುಹೋಗುಗಳನ್ನು ಬೇರೊಂದು ವಿಧದಲ್ಲಿ ವಿವರಿಸಲಾಗಿದೆ.

ಇವಕ್ಕೆಲ್ಲಾ ಮಾನಸಿಕ ಪ್ರೇರಣೆ ಅಥವಾ ಬುದ್ಧಿಶಕ್ತಿಯ ಊಹೆ ಕಾರಣವಾಗಿದೆಯೇ? ಆರ್ಥಿಕ ಬದಲಾವಣೆಗಳು, ಸಂಶೋಧನೆಗಳು ಮತ್ತು ಇತರ ಘಟನೆಗಳು ಕೆಲವು ಕಾಲಗಳಲ್ಲಿ ಮಾತ್ರ ಆಗಿರುವುದಕ್ಕೂ ಇನ್ನು ಇತರ ಕಾಲದಲ್ಲಿ ಆಗದೇ ಇರುವುದಕ್ಕೂ ಮಾನಸಿಕ ಅಥವಾ ದೈವ ಪ್ರೇರಣೆಯಿಂದಾಗಲೀ ಅಥವಾ ಬುದ್ಧಿ ಶಕ್ತಿಯ ಊಹೆಯಿಂದಾಗಲೀ ಸಮಂಜಸವಾದ ಉತ್ತರ ಸಿಗುವುದಿಲ್ಲ. ಬುದ್ಧಿಯ ಊಹಾ ಶಕ್ತಿಯಿಂದ ಆಗುವುದಾದರೆ ಆದಿಮಾನವನು ಈಗ ನಾವು ಗಳಿಸಿರುವ ಸಾಧನಗಳನ್ನೆಲ್ಲಾ ಐದು ಸಾವಿರ ವರ್ಷಗಳ ಹಿಂದೆಯೇ ಊಹೆಮಾಡಿ ನಿರ್ಮಿಸಬಹುದಾಗಿತ್ತು! ಊಹೆಯಿಂದ ಪ್ರೇರೇಪಣೆ ಪಡೆದು, ಇತಿಹಾಸದ ಉದ್ದಕ್ಕೂ ಉಂಟಾಗಿರುವ ಯುದ್ಧಗಳು, ಶೋಷಣೆ ಇತ್ಯಾದಿ ಎಲ್ಲವನ್ನೂ ನೀಗಿಸಿ, ಕಲ್ಯಾಣ ಸಮಾಜವನ್ನು ಎಂದೋ ನಿರ್ಮಿಸಬಹುದಾಗಿತ್ತು! ಆದರೆ ಇತಿಹಾಸದ ಮುಂದೋಟ ಆ ರೀತಿ ಸಾಗಿಲ್ಲ. ಒಂದು ಕ್ರಮವರಿತು ಸಾಗಿದೆ. ಒಂದು ಘಟನೆ ಮತ್ತೊಂದು ಘಟನೆಗೆ ಪ್ರಚೋದನಕಾರಿಯಾಗಿದೆ. ಆದುದರಿಂದ ಆರ್ಥಿಕ ಮತ್ತು ಇತರ ಸನ್ನಿವೇಶಗಳಿಂದ ಬುದ್ಧಿ ಬಲ ಬಂಧಿಸಲ್ಪಟ್ಟು, ಅನುಕೂಲಗಳು ಒದಗಿದಹಾಗೆ, ಪ್ರಚೋದನೆ ದೊರಕಿದಹಾಗೆ, ಆವಶ್ಯಕತೆ ಕಾಣಿಸಿಕೊಂಡಹಾಗೆ, ಬುದ್ಧಿ ಶಕ್ತಿ ತನ್ನ ಆಧಿಪತ್ಯವನ್ನು ಸ್ಥಾಪಿಸಿದೆ.

ಸಮಾಜ ಪರಿವರ್ತನೆಗೆ ಊಹೆ, ದೈವ ಪ್ರೇರಣೆ ಕಾರಣವಾಗಿಲ್ಲ. ಪರಿವರ್ತನೆಗೆ ಕಾರಣವು ಆರ್ಥಿಕ ಬದಲಾವಣೆಗಳಲ್ಲಿ ಹುದುಗಿದೆ. ಮೂಲ ಕರ್ತೃಗಳು ಮಾನವರು. ಮಾನವರೇ ಇತಿಹಾಸವನ್ನು ಬೆಳಸುವವರು. ಮಾನವ ಜೀವಿಗಳ ಬಾಳಿಗೆ ಆಧಾರವಾಗಿ ಆರ್ಥಿಕ ವ್ಯವಸ್ಥೆ ಜನಿಸಿದೆ. ಪ್ರತಿಯೊಂದು ಆರ್ಥಿಕ ವ್ಯವಸ್ಥೆಯಲ್ಲಿಯೂ ಉತ್ಪಾದನಾ ಶಕ್ತಿಗಳಿಂದ ಸಹಾಯಪಡೆದು ಉತ್ಪಾದನಾಕ್ರಮ ಸಾಗುತ್ತಿರುತ್ತದೆ. ಉತ್ಪಾದನಾ ಕ್ರಮದ ಶಕ್ತಿ ಸಾಮರ್ಥ್ಯಗಳು ಮಾನವ ವ್ಯಕ್ತಿಗಳು ಅಭಿವೃದ್ಧಿಮಾಡಿರುವ ಉತ್ಪಾದನಾ ಶಕ್ತಿಗಳನ್ನು ಹೊಂದಿಕೊಂಡಿರುತ್ತವೆ. ಹೀಗಿರುವಾಗ ಅಭಿವೃದ್ಧಿ ಹೊಂದುತ್ತಿರುವ ಉತ್ಪಾದನಾ ಶಕ್ತಿಗಳು ಉತ್ಪಾದನಾಕ್ರಮ ಬದಲಾವಣೆ ಹೊಂದುವಂತೆ ಮಾಡುತ್ತವೆ. ವ್ಯವಸ್ಥೆಹೊಂದಿರುವ ಹಿತಗಳಿಗೆ ಬದಲಾವಣೆ ಧಕ್ಕೆ ತರುತ್ತದೆ. ಹಿತಸಂರಕ್ಷಿಸಿಕೊಳ್ಳಲು ಹಳೆಯ ಆರ್ಥಿಕ ವ್ಯವಸ್ಥೆಲ್ಲಿರುವ ಹಕ್ಕುದಾರವರ್ಗ (ಸ್ವಾಮ್ಯವರ್ಗ) ಬದಲಾವಣೆಯನ್ನು ತಡೆಯಲು ಯತ್ನಿಸುತ್ತದೆ. ಸಂದಿಗ್ಧ ಸಮಯ ಬರುತ್ತದೆ. ಹಳೆಯ ವ್ಯವಸ್ಥೆ ಇರಬೇಕು, ಇಲ್ಲವೆ ಹೊಸ ವ್ಯವಸ್ಥೆ, ಹೊಸ ಉತ್ಪಾದನಾ ಶಕ್ತಿಗಳಿಂದ ಉಪಯೋಗಪಡೆಯಬೇಕು. ಇದೇ ಉಂಟಾಗುವ ವಿರಸ. ಈ ವಿರಸ ಸಮಾಜದಲ್ಲಿ ಆಂಧೋಳನ ತರುತ್ತದೆ. ಹಳೆಯ ಆರ್ಥಿಕ ವ್ಯವಸ್ಥೆ ಕ್ರಮೇಣ ಬದಲಾವಣೆ ಹೊಂದುತ್ತದೆ. ಆರ್ಥಿಕ ವ್ಯವಸ್ಥೆಯ ಪರಿವರ್ತನೆಯೇ ಸಮಾಜ ಪರಿವರ್ತನೆಯಾಗಿದೆ.

ಈಗಿರುವ ಬಂಡವಾಳಶಾಹೀ ಆರ್ಥಿಕ ವ್ಯವಸ್ಥೆ ಕ್ರಮೇಣ ಗತಿಸಿದ ಆರ್ಥಿಕ ವ್ಯವಸ್ಥೆಗಳಿಂದ ಮೂಡಿದ್ದಾಗಿದೆ. ಇದಕ್ಕೆ ಹಿಂದೆ ಊಳಿಗ ಮಾನ್ಯ ವ್ಯವಸ್ಥೆ ಇತ್ತು. ಅದಕ್ಕೆ ಹಿಂದೆ ಪ್ರಾಚೀನ ಆರ್ಥಿಕ ವ್ಯವಸ್ಥೆ ಇತ್ತು. ಈ ಪ್ರತಿಯೊಂದು ವ್ಯವಸ್ಥೆಯನ್ನೂ ಉತ್ಪಾದನಾ ಕ್ರಮದಲ್ಲಿರುವ ವ್ಯತ್ಯಾಸ ವಿಂಗಡಿಸುತ್ತದೆ. ಅತ್ಯಂತ ಪ್ರಾಚೀನಕಾಲದ ಆರ್ಥಿಕ ವ್ಯವಸ್ಥೆ ಎಂದರೆ ಖಾಸಗೀ ಸ್ವಾಮ್ಯ, ದಾಸ್ಯಪದ್ಧತಿ, ಕನಿಷ್ಠ ದರ್ಜೆಯ ಉಪಕರಣಗಳು, ಹೆಚ್ಚಿಗೇ ಪದಾರ್ಥಗಳ ಅದಲುಬದಲು. ಉತ್ಪಾದನಾ ಶಕ್ತಿಗಳು ಬೆಳೆದು ಉತ್ಪಾದನೆ ಹೆಚ್ಚುವವರೆಗೂ ದಾಸ್ಯಪದ್ಧತಿ ಮುಂದುವರಿಯಿತು. ಕ್ರಮೇಣ ಉತ್ಪಾದನಾ ಶಕ್ತಿಗಳ ಬೆಳವಣಿಗೆ ಊಳಿಗಮಾನ್ಯ ಪದ್ಧತಿಯನ್ನು

ತಂದಿತು. ಆರ್ಥಿಕ ವ್ಯವಸ್ಥೆ ಮಾರ್ಪಾಡು ಹೊಂದಿತು. ಊಳಿಗಮಾನ್ಯದ ಬೇಸಾಯದ ಜೊತೆಗೆ ಸಣ್ಣಪುಟ್ಟ ಗೃಹಕೈಗಾರಿಕೆ, ಗಿಲ್ಡ್ (ಶ್ರೇಣಿ) ಪದ್ಧತಿಯವರೆಗೆ ಉತ್ಪಾದನೆ, ವಿಕ್ರಯಕ್ಕಾಗಿ ಸರಕುಗಳ ತಯಾರಿಕೆ ಬಂದಿತು. ಸುಮಾರು 16-17 ನೇ ಶತಮಾನಗಳಲ್ಲಿ ಉಂಟಾದ ವೈಜ್ಞಾನಿಕ ಸಂಶೋಧನೆಗಳು, ಪ್ರಪಂಚದ ಅರಿವು, ಪ್ರಯಾಣ, ವಾಣಿಜ್ಯಗಳಲ್ಲಿ ಕ್ರಾಂತಿ, ಅದಕ್ಕೆ ಸಾಧನಗಳಾಗಿ ನಿರ್ಮಿಸಿಕೊಂಡ ಉಪಕರಣಗಳು, ಕ್ರಮೇಣ ಕೈಗಾರಿಕಾ ಕ್ರಾಂತಿ ಎಲ್ಲವೂ ಉತ್ಪಾದನಾ ಶಕ್ತಿಗಳನ್ನು ಮತ್ತಷ್ಟು ವೃದ್ಧಿಗೊಳಿಸಿದವು. ಉತ್ಪಾದನಾ ಕ್ರಮದಲ್ಲಿ ಬದಲಾವಣೆ ಉಂಟಾಯಿತು. ಗಿಲ್ಡ್ ತಯಾರಿಕೆ ನಶಿಸಿತು. ವೇತನಕೊಟ್ಟು ಒಂದೆಡೆಯಲ್ಲಿ ಕೂಲಿಗಾರರು ಕೆಲಸಮಾಡುವ ಸಣ್ಣಪುಟ್ಟ ಕೈಗಾರಿಕೆಗಳನ್ನು ಶ್ರೀಮಂತರು ಮತ್ತು ವ್ಯಾಪಾರಗಾರರು ಸ್ಥಾಪಿಸಿದರು. ಸಿಕ್ಕುವ ಲಾಭ ಅವರನ್ನು ಮತ್ತಷ್ಟು ಪ್ರೇರೇಪಿಸಿತು. ತಮ್ಮ ಕೈಗಾರಿಕಾಲಯುಗಳನ್ನು ವಿಸ್ತರಿಸಲು, ಹೆಚ್ಚು ಬಂಡವಾಳ ಶೇಖರಿಸಲು, ಪೈಪೋಟಿ ನಡಸಿದರು. ಹೆಚ್ಚು ಹೆಚ್ಚು ಕೂಲಿಯವರನ್ನು ಕೆಲಸಕ್ಕೆ ನೇಮಿಸಿಕೊಂಡರು. ಹೊಸ ಬಂಡವಾಳ ವ್ಯವಸ್ಥೆಯ ಉದಯವನ್ನು ವಿರೋಧಿಸಿದ ಊಳಿಗ ಮಾನ್ಯ ವ್ಯವಸ್ಥೆಯ ಕಟ್ಟು, ಕಾನೂನು, ರಾಜಕೀಯ ವ್ಯವಸ್ಥೆ, ವ್ಯವಹಾರ, ಧರ್ಮ ಮತ್ತು ನಿರಂಕುಶ ರಾಜರ ಮತ್ತು ಪಾಳೆಯಗಾರರ ಹಕ್ಕುಬಾಧ್ಯತೆಗಳನ್ನು ಕ್ರಾಂತಿಗಳ ಮೂಲಕ (1640 ಮತ್ತು 1789) ಕಿತ್ತೊಗೆದರು. ಬಂಡವಾಳ ಆರ್ಥಿಕ ವ್ಯವಸ್ಥೆಯ ಉದಯ ಹೊಸ ಉತ್ಪಾದನಾ ಶಕ್ತಿಗಳ ಬೆಳವಣಿಗೆಯ ಜೊತೆಯಲ್ಲಿ ಮೂಡಿತು.

ಮಾರ್ಕ್ಸ್-ಏಂಗೆಲ್ಸರು ಊಳಿಗ ಮಾನ್ಯಆರ್ಥಿಕ ವ್ಯವಸ್ಥೆಯ ಗರ್ಭದಿಂದ ಜನಿಸಿದ ಬಂಡವಾಳ ವ್ಯವಸ್ಥೆಯ ವಿಮರ್ಶೆಗೆ ಗಮನಕೊಟ್ಟರು. ಗತಿಸಿದ ಆರ್ಥಿಕ ವ್ಯವಸ್ಥೆಗಳು ತಮ್ಮ ಇರುವಿಕೆಯ ಕಾಲದಲ್ಲಿ ವಿರಸಕ್ಕೆ ಆಸ್ಪದಕೊಟ್ಟು ಹೇಗೆ ಗತಿಸಿದವೋ ಅದೇ ರೀತಿ ಬಂಡವಾಳ ಆರ್ಥಿಕ ವ್ಯವಸ್ಥೆಯ ಗರ್ಭದಲ್ಲಿ ವಿರಸ ಗೋಪ್ಯವಾಗಿ ಅಡಗಿದ್ದು ಕ್ರಮೇಣ ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆಯ ಬೆಳವಣಿಗೆಯಲ್ಲಿ ಪ್ರಕಾಶಮಾನಕ್ಕೆ ಬರುವುದನ್ನು ಕಂಡರು. ಬಂಡವಾಳ ವ್ಯವಸ್ಥೆ ತನ್ನ ಅಂತ್ಯವನ್ನು ತಾನೇ ತಂದುಕೊಳ್ಳುವುದನ್ನು ಅದರ ಚಲನವಲನೆಗಳಲ್ಲಿ ಕಂಡರು. ಅವರ ಹಿರಿಯ ಉದ್ದೇಶ ಬಂಡವಾಳ ಆರ್ಥಿಕ ವ್ಯವಸ್ಥೆಯ ಚಲನಾ ನಿಯಮವನ್ನು (The law of motion of capitalist society) ಕಂಡು

ಹಿಡಿಯುವುದಾಯಿತು. ಬಂಡವಾಳಶಾಹಿ ವ್ಯವಸ್ಥೆ ಶಾಶ್ವತವಾಗಿ ನಿಂತಿರುವ ವ್ಯವಸ್ಥೆಯಾಗಿರದೆ ಹೊಸದೊಂದು ಆರ್ಥಿಕವ್ಯವಸ್ಥೆಗೆ ಆಸ್ಪದಕೊಡುವ ಮತ್ತು ಹೊಸ ವ್ಯವಸ್ಥೆ ಮೂಡಲಿಕ್ಕೆ ಬಂಡವಾಳಶಾಹಿ ವ್ಯವಸ್ಥೆಯಲ್ಲೇ ಸಾಧನಗಳು ನಿರ್ಮಿತವಾಗುತ್ತಿರುವ ವಿಶೇಷವನ್ನು ಕಂಡರು; ಸಮಾಜವಾದೀ ಸಮಾಜದ ಆಗಮನ ಅನಿವಾರ್ಯವೆಂದರು.

ಅಧ್ಯಯನ :

Marx–Engles-Marxism : By Lenin :
Pages 15 to 76, F. L. P. H. Moscow. 1947.
Introduction to Philosophy : By J. Lewis : Watts, London.
Ludwig Feurbach—The Outcome of German Classical Philosophy : Engels : (Marx-Engles Selected Works. V. II, Pages 86-107 and 324–365. Ed. 1951.
Dialectics of Nature—Engles : F. L. P. H. Moscow.
Dialectical and Historical Materialism : Stalin :
In Problems of Leninism : Pages 569–595, F. L. P. H. Moscow. 1945.
Dialectical Materialism : M. Cornforth : L. & W. London.
Wages, Price and Profit ; and Wage Labour and Capital :
Marx : M. & E. S. W. Vol. I, Pages 66–91 and 361–400. Ed. 1951.
Capital : Vol. I, Marx : F. L. P. H. Moscow. 1954.
Studies in the Development of Capitalism : M. Dobb :
Routledge, London.

ಬಂಡವಾಳ ಆರ್ಥಿಕವ್ಯವಸ್ಥೆಯ ಸ್ವರೂಪ

ಅಧ್ಯಾಯ 4

ಸಮಾಜವಾದದ ಅನಿವಾರ್ಯತೆಗೆ (Inevitability) ಬಂಡವಾಳ ಶಾಹಿ ವ್ಯವಸ್ಥೆಯಲ್ಲಿರುವ ವಿರಸಗಳೇ ಕಾರಣವಾಗಿವೆ. ಮಾರ್ಕ್ಸ್, ಏಂಗೆಲ್ಸರು ಈ ವಿರಸಗಳ ಬಗ್ಗೆ ಮತ್ತು ವಿರಸಗಳಿಗೆ ಎಡೆಯಿತ್ತಿರುವ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ದೀರ್ಘವಾದ ವಿವರಣೆಯನ್ನು ಕೊಟ್ಟಿದ್ದಾರೆ.

ಒಂದನೆಯದಾಗಿ, ಬಂಡವಾಳ ಆರ್ಥಿಕವ್ಯವಸ್ಥೆಯ ಪ್ರಥಮಲಕ್ಷಣವೆಂದರೆ ಖಾಸಗೀ ಸ್ವಾಮ್ಯ. ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿ ಉತ್ಪಾದನಾ ವಸ್ತುಗಳಾದ ಭೂಮಿ, ಕೈಗಾರಿಕೆಗಳು ಮತ್ತು ಇತರ ಸಂಪತ್ತುಗಳು ಖಾಸಗಿಯಾಗಿ ವ್ಯಕ್ತಿಗಳಿಗೆ ಸೇರಿದ್ದಾಗಿವೆ. ಈ ವಸ್ತುಗಳನ್ನು ಹೊಂದಿರುವವನು ತನಗೆ ಇಷ್ಟ ಬಂದ ರೀತಿಯಲ್ಲಿ ಅನುಭವಿಸಲು ಶಕ್ತನು. ಅವನ್ನು ಎಷ್ಟು ಪ್ರಮಾಣದಲ್ಲಿ ಹೊಂದಿರಬೇಕೆಂಬುದಕ್ಕೆ ಮಿತಿ ಇಲ್ಲ.

ಬಂಡವಾಳಶಾಹಿ ವ್ಯವಸ್ಥೆಯ ದ್ವಿತೀಯ ಲಕ್ಷಣವೆಂದರೆ ಖಾಸಗೀ ಉತ್ಪಾದನೆ. ನಿತ್ಯಜೀವನಕ್ಕೆ ಬೇಕಾಗಿರುವ ಆವಶ್ಯಕವಾದ ಅನ್ನ ಆಹಾರಾದಿಗಳು ಮತ್ತು ಇತರ ವಸ್ತುಗಳು ಪ್ರತ್ಯೇಕ ಪ್ರತ್ಯೇಕವಾಗಿ ಖಾಸಗೀ ವ್ಯಕ್ತಿಗಳು ತಯಾರಿಸಿದ್ದು ಅಥವಾ ಬೆಳೆದವುಗಳಾಗಿವೆ. ಮುಖ್ಯವಾಗಿ ಈ ವ್ಯವಸ್ಥೆಯಲ್ಲಿ ಮಾರುಕಟ್ಟೆಯ ದೃಷ್ಟಿಯಿಂದಲೇ ಪದಾರ್ಥಗಳ ತಯಾರಿಕೆ ಅಥವ ಉತ್ಪಾದನೆ ನಡೆಯುವುದು. ಮಾರುಕಟ್ಟೆಯಲ್ಲಿ ಪದಾರ್ಥಗಳನ್ನು ವಿಕ್ರಯಮಾಡಿ ಹಣ ಪಡೆಯಬೇಕು. ಉತ್ಪಾದನೆಯ ಮೇಲೆ ಮಾರುಕಟ್ಟೆಯ ಬೆಲೆಯು ಬೀರುವ ಪ್ರಭಾವವನ್ನು ತಡೆದುಕೊಳ್ಳಲು ವ್ಯಕ್ತಿಗಳು ಸಿದ್ಧರಿರಬೇಕು. ಬಂಡವಾಳಶಾಹಿ ಉತ್ಪಾದನೆಯ ಮರ್ಮವೆಂದರೆ ವಿಕ್ರಯವಾಗುವ ವಸ್ತುವಿಗೆ ಸರಿಯಾದ ಪ್ರತಿಫಲ ಸಿಕ್ಕುವ ಹಾಗಿದ್ದರೆ ಇನ್ನೂ ಹೆಚ್ಚಾಗಿ ಪದಾರ್ಥಗಳು ತಯಾರಾಗುತ್ತವೆ. ಇಲ್ಲವಾದರೆ, ನಷ್ಟದಿಂದ ಪಾರಾಗಲು ಉತ್ಪಾದನೆಯೇ ನಿಲ್ಲುತ್ತದೆ.

ಮೂರನೆಯದಾಗಿ, ಕೂಲಿಗಾಗಿ ದುಡಿಮೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದನಾಕಾರ್ಯ ಕೇವಲ ಒಬ್ಬನಿಂದ ಸಾಧ್ಯವಿಲ್ಲ. ಇದು ಸಾಮೂಹಿಕವಾಗಿ ನಡೆಯುವ ಕಾರ್ಯ. ಕೂಲಿಗಾಗಿ ದುಡಿಯುವ ಕಾರ್ಮಿಕವರ್ಗದಿಂದ

ಉತ್ಪಾದನೆ ನಡೆಯುತ್ತದೆ. ದುಡಿಮೆಯನ್ನು ಕೂಲಿ, ವೇತನ, ಸಂಬಳ ಇವುಗಳಿಗೆ ವಿಕ್ರಯಮಾಡುವ ಅಸ್ವಾಮ್ಯವರ್ಗದ ಜನರಿಲ್ಲದೆ ಉತ್ಪಾದನಾ ಕೆಲಸ ಸಾಗುವಂತೆಯೇ ಇಲ್ಲ. ದೃಷ್ಟಾಂತಕ್ಕೆ ಒಂದು ಕೈಗಾರಿಕೆಯನ್ನು ತೆಗೆದುಕೊಳ್ಳೋಣ. ಆ ಕೈಗಾರಿಕೆಯ ಮಾಲೀಕತ್ವ ಒಬ್ಬನಿಗೆ ಸೇರಿದ್ದಾದರೂ, ಒಬ್ಬನೇ ಆ ಕೈಗಾರಿಕೆಯನ್ನು ನಡೆಸಲು ಸಾಧ್ಯವಿಲ್ಲ. ಇತರರ ಸಹಾಯ ಅತ್ಯಗತ್ಯ. ಕೂಲಿಗಾಗಿ ದುಡಿಮೆಮಾಡುವವರಿಲ್ಲದಿದ್ದರೆ ಉತ್ಪಾದನೆಯೇ ನಿಂತು ಹೋಗುತ್ತದೆ.[1] ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿ ವಸ್ತುಗಳ ಉತ್ಪಾದನೆ ಇತರರ ಸಹಾಯವನ್ನು ಪಡೆದು ಪರಸ್ಪರ ದುಡಿಮೆಯಿಂದ ನಡೆಸುವ ಉತ್ಪಾದನೆಯಾಗಿದೆ.

ನಾಲ್ಕನೆಯದಾಗಿ, ಲಾಭ. ಉತ್ಪಾದನೆಯು ಸುಲಲಿತವಾಗಿ ಸಾಗಾಣಿಕೆಯಾಗುವುದಕ್ಕೆ ಸ್ವಾಮ್ಯವರ್ಗಕ್ಕೆ ಸಿಗುವ ಲಾಭವೇ ಪ್ರಚೋದನಾ ಶಕ್ತಿಯಾಗಿ ಉಳಿದಿದೆ. ದುಡಿಮೆಯವರಿಂದ ಉತ್ಪಾದನೆ ನಡಸಿ, ಅವರಿಗೆ ಕೊಡಬೇಕಾಗಿರುವ ಕೂಲಿ ಮತ್ತು ಇತರ ಖರ್ಚುಗಳನ್ನು ಕಳೆದು, ಸ್ವಾಮ್ಯ ಹೊಂದಿರುವವನಿಗೆ ಲಾಭ ಸಿಗದಿದ್ದರೆ ಆತನು ಉತ್ಪಾದನಾ ಕಾರ್ಯಕ್ಕೆ

---

(1) ಒಬ್ಬವ್ಯಕ್ತಿ ಯಾವ ಕೂಲಿಗಾರನನ್ನೂ ನೇಮಿಸಿಕೊಳ್ಳದೆ, ಸ್ವಾವಲಂಬಿ ಅಥವ ಆತನ ಸಂಸಾರದವರ ಸಹಾಯವನ್ನು ಮಾತ್ರ ತೆಗೆದುಕೊಂಡು ನಡೆಸುವ ಉತ್ಪಾದನೆಯೂ ಉಂಟು. ಇಂತಹ ಉತ್ಪಾದನೆಯಲ್ಲಿ ಶೋಷಣೆಗೆ ಅವಕಾಶವಿಲ್ಲ. ಆದರೆ ಆಧುನಿಕ ಕಾಲದ ಆರ್ಥಿಕವ್ಯವಸ್ಥೆಯಲ್ಲಿ ಸ್ವಾವಲಂಬಿ ಉತ್ಪಾದನೆಯೂ ಸಹ ಮಾರುಕಟ್ಟೆಯ ಪರಿಮಿತಗಳಿಗೆ ಒಳಪಟ್ಟಿದೆ. ಬಂಡವಾಳ ಆರ್ಥಿಕವ್ಯವಸ್ಥೆಯ ಒಂದು ಅಂಗವಾಗಿದೆ. ಕೂಲಿಗಾರರನ್ನು ನೇಮಿಸಿಕೊಂಡು, ಲಾಭದ ದೃಷ್ಟಿಯಿಂದ ತಯಾರಾದ ವಸ್ತುಗಳು ಸ್ವಾವಲಂಬಿ ಉತ್ಪಾದಕರಿಗೆ ಬೇಕಾಗಿವೆ. ಹಾಗೆಯೇ ಸ್ವಾವಲಂಬಿ ಉತ್ಪಾದಕರಸ ವಸ್ತುಗಳು ಬಂಡವಾಳಗಾರನಿಗೆ ಬೇಕಾಗಿವೆ. ಸ್ವಾವಲಂಬಿ ಉತ್ಪಾದನೆಗೂ ಬಂಡವಾಳಶಾಹಿ ಉತ್ಪಾದನೆಗೂ ನಿಕಟಸಂಬಂಧವಿದೆ.

ಸ್ವಾವಲಂಬಿ ಉತ್ಪಾದನೆಯನ್ನು ಕೈಗಾರಿಕೆಯಲ್ಲಿ ಮುಂದುವರಿದ ದೇಶಗಳಿಗಿಂತ ವ್ಯವಸಾಯವೇ ಪ್ರಾಧಾನ್ಯವಾಗುಳ್ಳ ದೇಶಗಳಲ್ಲಿ (ಉದಾ: ಭಾರತ ಮತ್ತು ಚೀನಾ) ಅಧಿಕವಾಗಿ ಕಾಣಬಹುದು.

ಮಾರ್ಕ್ಸ್‌ವಾದಕ್ಕೂ ವ್ಯವಸಾಯವೇ ಪ್ರಾಧಾನ್ಯವಾಗುಳ್ಳ (ಹಿಂದುಳಿದ) ದೇಶಗಳಿಗೂ ಇರುವ ಸಂಬಂಧದ ಬಗ್ಗೆ ಮುಂದಿನ ಅಧ್ಯಾಯಗಳನ್ನು ನೋಡಿ.

ತೊಡಗುವುದೂ ಇಲ್ಲ ಮತ್ತು ದುಡಿಮೆಯವರನ್ನು ಕೆಲಸಕ್ಕೆ ತೆಗೆದುಕೊಳ್ಳು ವುದೂ ಇಲ್ಲ. ತಯಾರಾದ ಪದಾರ್ಥಗಳ ವಿಕ್ರಯದಿಂದ ಬರುವ ಹಣ ಲಾಭವನ್ನು ತೋರಿಸಬೇಕು. ಹೆಚ್ಚು ಲಾಭ ದೊರೆತಷ್ಟೂ ಬಂಡವಾಳ ಶೇಖರಣೆಯಾಗುತ್ತದೆ ; ಮತ್ತು ಹೊಸ ಉದ್ಯಮಗಳಲ್ಲಿ ಶೇಖರಣೆಯಾದ ಬಂಡವಾಳವನ್ನು ಹಾಕಲು, ಹೊಸ ತಾಂತ್ರಿಕ ಉಪಯೋಗದಿಂದ ಹೆಚ್ಚು ಉತ್ಪಾದನೆ ನಡೆಸಲು, ಆಗುತ್ತದೆ. ಲಾಭಕ್ಕೆ ಧಕ್ಕೆಬರುವಂತಿದ್ದರೆ, ಸ್ವಾಮ್ಯ ಹೊಂದಿರುವವನು (ಕೈಗಾರಿಕಾ ಮಾಲೀಕನು) ಉತ್ಪಾದನೆಗೆ ತೊಡಗು ವುದೇ ಇಲ್ಲ.

ಐದನೆಯದಾಗಿ, ಪೈಪೋಟಿ. ಉತ್ಪಾದನೆಯಲ್ಲಿ ತೊಡಗಿರುವ ಮಾಲೀಕರೆಲ್ಲರೂ ಸ್ವತಂತ್ರರು. ದುಡಿಮೆಯವರಿಂದ ಉತ್ಪಾದನೆಯಾದ ಸರಕುಗಳನ್ನು ಮಾರುಕಟ್ಟೆಯಲ್ಲಿ ಬಿಕರಿಮಾಡಬೇಕು. ಯಾರ ಸರಕು ಇತರರ ಸರಕುಗಳಿಗಿಂತ ಕಡಿಮೆ ಬೆಲೆಯುಳ್ಳದ್ದೊ, ಅದು ಬೇಗನೆ ಬಿಕರಿ ಯಾಗುತ್ತದೆ. ಈ ಕಾರಣದಿಂದ ಲಾಭಕ್ಕೆ ಚ್ಯುತಿ ಬರದ ರೀತಿಯಲ್ಲಿ, ತಯಾರಿಸುವ ಸರಕುಗಳಿಗೆ ಹೆಚ್ಚು ಖರ್ಚಾಗದಂತೆ ಉತ್ಪಾದನೆಗೆ ತೊಡಗ ಬೇಕು. ಖರ್ಚನ್ನು ಕಡಿಮೆಮಾಡಿದಷ್ಟು ಲಾಭ ಹೆಚ್ಚು. ಪೈಪೋಟಿಯಲ್ಲಿ ತಯಾರಿಸಬೇಕು, ವಿಕ್ರಯಮಾಡಬೇಕು. ಶೀಘ್ರವಾಗಿ ವಿಕ್ರಯಮಾಡಿ ಆದಷ್ಟು ಲಾಭ ಪಡೆಯುವುದೇ ಉತ್ಪಾದನೆಯ ಗುರಿ. ಹೀಗಾಗಿ, ಸರಕು ಗಳ ಉಪಯೋಗ ಅಷ್ಟು ಪ್ರಾಮುಖ್ಯವಾದದ್ದಲ್ಲ; ಸರಕುಗಳು ಯಾವುವೇ ಆಗಲಿ, ಅವು ಮಾರುಕಟ್ಟೆಯಲ್ಲಿ ವಿಕ್ರಯಹೊಂದುತ್ತಿದ್ದರೆ ಅವುಗಳ ತಯಾರಿಕೆ ನಡೆಯುತ್ತದೆ. ಜನರಿಗೆ ತಾನು ಸುಲಭವಾದ ಮತ್ತು ಉತ್ತಮವಾದ ಸರಕುಗಳನ್ನು ತಯಾರಿಸುತ್ತಿದ್ದೇನೆಂಬುದನ್ನು ಸಿನೆಮಾ ನೋಟೀಸುಗಳು, ಜಾಹೀರಾತು, ಏಜೆಂಟ್ ಮತ್ತು ದಳ್ಳಾಳಿಗಳ ಮೂಲಕ ಬಹಿರಂಗಮಾಡಬೇಕು. ಒಂದು ವೇಳೆ, ಒಬ್ಬ ವ್ಯಕ್ತಿ ನಷ್ಟಹೊಂದಿ ಪೈಪೋಟಿಮಾಡಲು ಅಶಕ್ತನಾದರೆ ಅದು ಯಾರ ಜವಾಬ್ದಾರಿಯೂ ಅಲ್ಲ. ಆತನು ತನ್ನ ಉದ್ಯಮವನ್ನು ಮುಚ್ಚಿ, ನೇಮಿಸಿಕೊಂಡಿದ್ದ ಕೂಲಿಯವರನ್ನು ವಜಾಮಾಡಿ, ಸುಮ್ಮನೆ ಕುಳಿತುಕೊಳ್ಳಲು ಹಕ್ಕಿದೆ.

ಸಂಕ್ಷಿಪ್ತವಾಗಿ, ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯ, ಮಾರುಕಟ್ಟೆಯ ದೃಷ್ಟಿಯಿಂದ ಸರಕುಗಳ ಉತ್ಪಾದನೆ, ಕೂಲಿಗಾಗಿ ದುಡಿಮೆ,

ಮತ್ತು ಲಾಭ ಇವುಗಳೇ ಬಂಡವಾಳ ಆರ್ಥಿಕವ್ಯವಸ್ಥೆಯ ಆಧಾರ ಸ್ತಂಭಗಳು. ಈ ಲಕ್ಷಣಗಳನ್ನು ಒಳಗೊಂಡ ಆರ್ಥಿಕವ್ಯವಸ್ಥೆ ಮೊದಲು ಇಂಗ್ಲೇಂಡ್ ದೇಶದಲ್ಲಿ ಹುಟ್ಟಿತು. ಬೆಳವಣಿಗೆಗೆ ಅಡ್ಡಿ ಬಂದ ವ್ಯವಸ್ಥೆಗಳನ್ನೆಲ್ಲಾ ಮುರಿದು ದೇಶಾದ್ಯಂತ ಹರಡಿತು. ದೇಶದ ಆರ್ಥಿಕವ್ಯವಸ್ಥೆಯ ಸ್ವರೂಪ ತೀವ್ರವಾಗಿ ಬದಲಾವಣೆ ಹೊಂದಿತು. ಸಂಕುಚಿತವಾದ ಮತ್ತು ಸ್ವಂತ ಉಪಯೋಗಕ್ಕೆಂದು ಸ್ವಯಂ ಸಂಪೂರ್ಣ ಪದ್ಧತಿಯಮೇರೆಗೆ ನಡೆಯುತ್ತಿದ್ದ ತಯಾರಿಕೆ ನಿಂತಿತು. ಊರಿನ ಸಮೀಪದ ಮಾರುಕಟ್ಟೆಯಲ್ಲೋ ಅಥವ ಸಂತೆಯಲ್ಲೋ ಆಗುತ್ತಿದ್ದ ಹೆಚ್ಚಿಗೇ ಪದಾರ್ಥಗಳ ಅದಲು–ಬದಲು ಸಹ ನಿಂತಿತು; ದೇಶವೆಲ್ಲಾ ಒಂದೇ ಮಾರುಕಟ್ಟೆಯಾಯಿತು. ದೇಶವಿದೇಶಗಳ ಮಾರುಕಟ್ಟೆಯ ದೃಷ್ಟಿಯಿಂದ ಸರಕುಗಳ ತಯಾರಿಕೆ, ಹಣಕ್ಕೆ ವಿಕ್ರಯಿಸುವುದು ಆಚರಣೆಗೆ ಬಂದಿತು. ಖಾಸಗೀ ಉದ್ಯಮದಾರರು ಮತ್ತಷ್ಟು ತಯಾರಿಸಲು ಮತ್ತು ದೂರ ದೇಶಗಳಲ್ಲಿ ತಮ್ಮ ಸರಕುಗಳನ್ನು ಅತಿ ಹೆಚ್ಚು ಲಾಭಕ್ಕೆ ಮಾರಲು ಆಧುನಿಕ ಸಂಚಾರ–ಸೌಕರ್ಯಗಳು ಅವಕಾಶ ಕಲ್ಪಿಸಿದವು. ದೇಶವಿದೇಶಗಳಲ್ಲಿ ಅತಿ ಸುಲಭವಾಗಿ ಲಾಭಸಿಗುವುದನ್ನು ಖಾಸಗೀ ಉದ್ಯಮಗಾರರು ಕಂಡರು; ಯಂತ್ರಗಳಿಂದ ಹೆಚ್ಚು ಉತ್ಪಾದನೆ ನಡೆಸಲು ಆರಂಭಿಸಿದರು. ತಾವು ಗಳಿಸಿದ್ದ ಲಾಭವನ್ನೆಲ್ಲಾ ಬಂಡವಾಳದ ರೂಪದಲ್ಲಿ ಹಾಕಿ ಬಂಡವಾಳಗಾರರಾದರು. ಯಂತ್ರಗಳನ್ನು ನಡೆಸಲು ಕೂಲಿಗೆ ದುಡಿಮೆಯವರು ಬೇಕಾಗಿದ್ದಿತು. ಭೂಮಿ ಇಲ್ಲದ, ಹೊಟ್ಟೆಗಿಲ್ಲದ, ಜೀತ ಮತ್ತು ಗುತ್ತಿಗೆ ಮಾಡುವ ಸಾವಿರಾರು ಜನರು ಕೂಲಿಗೆ ಸಿಕ್ಕಿದರು. ಇವರನ್ನೆಲ್ಲಾ ಒಂದೆಡೆಯಲ್ಲಿ ಸೇರಿಸಿ, ಹೆಚ್ಚು ಪ್ರಮಾಣದಲ್ಲಿ ಉತ್ಪಾದನೆ ಪ್ರಾರಂಭವಾಯಿತು. ಲಾಭದ ದೃಷ್ಟಿಯಿಂದ ವಿದೇಶೀ ಮಾರುಕಟ್ಟೆಗಳಿಗೆ ಸರಕುಗಳನ್ನು ಕಳುಹಿಸಲು ಭಾರಿ ವ್ಯಾಪಾರ ಸಂಸ್ಥೆಗಳು ಜನ್ಮತಾಳಿದವು. ವಿದೇಶೀ ಮಾರುಕಟ್ಟೆಗಳನ್ನೆಲ್ಲಾ ಎಲ್ಲೆಲ್ಲಿ ಸುಲಭವಾಗಿ ಆಕ್ರಮಿಸಿಕೊಳ್ಳುವುದಕೆ ಸಾಧ್ಯವೋ, ಅಲ್ಲೆಲ್ಲಾ ತಮ್ಮ ಆರ್ಥಿಕ ಯಜಮಾನಿಕೆಯನ್ನು ಬಂಡವಾಳಶಾಹಿ ಉದ್ಯಮಗಳು ಸ್ಥಾಪಿಸಿದವು. ಪ್ರತಿಭಟನೆ ಬಂದೆಡೆಗಳಲ್ಲಿ ಯುದ್ಧದ ಮೂಲಕ ಮಾರುಕಟ್ಟೆಗಳನ್ನು ಕೊಳ್ಳೆಹೊಡೆಯಲಾಯಿತು.

ಇಂಗ್ಲೇಂಡಿನಲ್ಲಿ ಅಭಿವೃದ್ಧಿಗೆ ಬಂದ ಬಂಡವಾಳಶಾಹಿ ವ್ಯವಸ್ಥೆ ದೇಶವಿದೇಶಗಳ ಮೇಲೆ ಅತ್ಯುಗ್ರ ಪರಿಣಾಮಗಳನ್ನುಂಟುಮಾಡಿತು. ಕೂಲಿಯಿಂದ

ಜೀವನ ನಡೆಸುವ ಮತ್ತು ಕೂಲಿಗಾಗಿ ದುಡಿಮೆಯನ್ನು ವಿಕ್ರಯಮಾಡುವ ಕಾರ್ಮಿಕವರ್ಗವೊಂದಕ್ಕೆ ಈ ಬಂಡವಾಳಶಾಹಿ ವ್ಯವಸ್ಥೆ ಜನ್ಮ ಕೊಟ್ಟಿತು. ಒಂದುಕಡೆ ಲಾಭಲೋಲುಪರಾಗಿ ಬಂಡವಾಳ ವರ್ಗವೂ, ಇನ್ನೊಂದುಕಡೆ ಯಾವ ಸ್ವಾಮ್ಯವನ್ನೂ ಹೊಂದಿರದೆ ಬರುವ ಕೂಲಿಯೇ ಜೀವನಾಧಾರವಾಗಿರುವ ಕಾರ್ಮಿಕವರ್ಗವೂ ಇದಿರುಬದಿರಾಗಿ ನಿಂತವು. ಬಂಡವಾಳ ಆರ್ಥಿಕವ್ಯವಸ್ಥೆಯ ಬೆಳವಣಿಗೆಯ ಜೊತೆಜೊತೆಯಲ್ಲೇ ಬಡತನ, ನಿರುದ್ಯೋಗ ಆರ್ಥಿಕದುಸ್ಥಿತಿ ಮತ್ತು ಅವ್ಯವಸ್ಥೆ ಜನಸಮುದಾಯವನ್ನು ಆವರಿಸಿದವು. ನೊಂದ ಮತ್ತು ಶೋಷಣೆಗೆ ಒಳಗಾದ ದುಡಿಮೆವರ್ಗದಿಂದ ಪ್ರತಿಭಟನೆ ಆರಂಭವಾಯಿತು. ಬಂಡವಾಳಶಾಹಿವ್ಯವಸ್ಥೆ ಒಂದುಕಡೆ ಸಂಪತ್ತಿನ ಅಭಿವೃದ್ಧಿಗೆ ದಾರಿಮಾಡಿ ಕೊಟ್ಟರೆ, ಇನ್ನೊಂದುಕಡೆ ವೃದ್ಧಿಯಾಗುತ್ತಿರುವ ಸಂಪತ್ತು ಕೇವಲ ಕೆಲವರ ಕೈಯಲ್ಲಿ ಕೇಂದ್ರೀಕೃತವಾಗುವಂತೆ ಆಯಿತು. ಬಹುಸಂಖ್ಯಾತ ಜನರು ಶೋಷಣೆಗೆ ಸಿಲುಕಿ ನಿರ್ಗತಿಕರಾಗುತ್ತಿರುವ ದೃಶ್ಯ ಎಲ್ಲರಿಗೂ ವೇದ್ಯವಾಯಿತು. ಶೋಷಣೆಯೇ ಬಂಡವಾಳ ವೃದ್ಧಿಗೂ, ಸಂಪತ್ತು ಕೆಲವರ ಬಳಿ ಕೇಂದ್ರೀಕೃತವಾಗುವುದಕ್ಕೂ ಕಾರಣವೆಂದು ತಿಳಿದರು. ಬಂಡವಾಳಶಾಹಿ ವ್ಯವಸ್ಥೆ ಮಾನವ ಕಲ್ಯಾಣಕ್ಕೆ ಶತ್ರು ಎಂದು ಸಾರಿದರು. ಇವರ ಜೊತೆಗೆ, ಬಂಡವಾಳ ಆರ್ಥಿಕವ್ಯವಸ್ಥೆ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು ನುಡಿದಂತೆ ಸುಗಮವಾಗಿ ಕೆಲಸಮಾಡಲು ಅಶಕ್ತವಾಯಿತು. ಆಗಾಗ್ಗೆ ಬೆಲೆಗಳ ಏರಿಳಿತಗಳು, ಆರ್ಥಿಕ ದುಸ್ಥಿತಿ, ಹಣದ ಉಬ್ಬರವಿಳಿತ, ಉತ್ಪಾದನೆಯೇ ನಿಂತು ದುಡಿಮೆಯವರೆಲ್ಲರೂ ನಿರುದ್ಯೋಗಿಗಳಾಗುವ ದೃಶ್ಯ ಕಂಡುಬಂದಿತು. ದುಡಿಮೆಗೆ ಪ್ರತಿಫಲ ಸಿಕ್ಕುವ ಆಸೆ ಹೋಗಿ, ಕೆಲಸ ಸಿಕ್ಕಿದರೆ ಸಾಕೆಂದು ಹಾತೊರೆಯುವ, ಪೈಪೋಟಿಯಿಂದ ತಮ್ಮ ದುಡಿಮೆಯನ್ನು ಅತಿ ಕಡಿಮೆ ಕೂಲಿಗೆ ವಿಕ್ರಯ ಮಾಡಿಕೊಳ್ಳುವ, ಮೃಗಗಳಂತೆ ವಾಸಿಸುವ, ಕರುಣಾಜನಕ ಪರಿಸ್ಥಿತಿ ಕಾರ್ಮಿಕರಿಗೆ ಒದಗಿತು. ಜನಸಮುದಾಯದ ಸುಖಸಂಪತ್ತಿಗಾಗಿ ನಡೆಯಬೇಕಾದ ಉತ್ಪಾದನೆ ಹೋಗಿ, ಲಾಭಕ್ಕಾಗಿ ನಡೆಯುವ ಉತ್ಪಾದನೆ ಬಂದಿತು. ಲಾಭ ಮತ್ತು ಲಾಭದ ಮೂಲಕ ಹಣ ಶೇಖರಣೆ ಬಂಡವಾಳವರ್ಗದ ಹೆಗ್ಗುರಿಯಾಯಿತು. ಲಾಭದ ವೃದ್ಧಿಯ ಸಂಭ್ರಮದಲ್ಲಿ ದಯೆ, ಕರುಣೆ, ಮನುಷ್ಯತ್ವ ಇವುಗಳನ್ನೂ ಸಹ ಬಂಡವಾಳ ವರ್ಗ ಮರೆತಿರುವ ದೃಶ್ಯ ಗೋಚರವಾಯಿತು.

ಕೈಗಾರಿಕಾ ಸರಕುಗಳು ವಿದೇಶಗಳನ್ನು ಹೊಕ್ಕವು. ಅಲ್ಲಿರುವ ಗೃಹ ಕೈಗಾರಿಕೆ, ಸಣ್ಣ ಪ್ರಮಾಣದ ತಯಾರಿಕೆ ಇವುಗಳನ್ನೆಲ್ಲಾ ಮೂಲೆ ಗೊತ್ತಿದವು. ಎಲ್ಲ ದೇಶದವರೂ ಲಾಭದ ಗುಟ್ಟನ್ನರಿತರು. ತಮ್ಮ ತಮ್ಮ ದೇಶಗಳಲ್ಲಿ ಯಂತ್ರಗಳ ಸಹಾಯದಿಂದ ತಯಾರಿಕೆಯನ್ನು ಆರಂಭಿಸಿದರು. ಸ್ಪರ್ಧೆಯಿಂದ ತಮ್ಮ ವಸ್ತುಗಳನ್ನು ಪ್ರಪಂಚದ ಮಾರುಕಟ್ಟೆಯಲ್ಲಿ ವಿಕ್ರಯಮಾಡಲು ಉಪಕ್ರಮಿಸಿದರು. ಇಂಗ್ಲೇಂಡ್ ದೇಶದ ಹಾಗೆ ಖಾಸಗೀ ಉದ್ಯಮದಾರರು ಬಂಡವಾಳವನ್ನು ಹಾಕಿ, ಕೂಲಿಗಾಗಿ ಸಿಗುವ ದುಡಿಮೆ ಗಾರರನ್ನು ತಂದು, ದೊಡ್ಡ ದೊಡ್ಡ ಕೈಗಾರಿಕಾ ಕೇಂದ್ರಗಳನ್ನು ಸ್ಥಾಪಿಸಿದರು. ಕಾರ್ಮಿಕವರ್ಗ ಅಲ್ಲಿಯೂ ಜನಿಸಿತು. ದೇಶ ವಿದೇಶಗಳ ಆರ್ಥಿಕ ಪ್ರತ್ಯೇಕತೆ ಮಾಯವಾಯಿತು. ಎಲ್ಲ ದೇಶಗಳೂ ಬಂಡವಾಳಶಾಹಿ ವ್ಯವಸ್ಥೆಯ ಸೂತ್ರಗಳಿಂದ–ಮಾರುಕಟ್ಟೆ ತೀರ್ಮಾನಿಸುವ ಬೆಲೆ ಮತ್ತು ಸಿಗುವ ಲಾಭ–ಬಿಗಿಯಲ್ಪಟ್ಟವು. ಒಂದು ದೇಶದ ಆರ್ಥಿಕವ್ಯವಸ್ಥೆಯಲ್ಲಿ ಉಂಟಾಗುವ ಬದಲಾವಣೆಗಳು ಇತರ ದೇಶಗಳ ಆರ್ಥಿಕವ್ಯವಸ್ಥೆಯ ಮೇಲೆ ಪರಿಣಾಮವನ್ನುಂಟುಮಾಡುವ ಶಕ್ತಿಯುಳ್ಳವಾದವು.

ಬಂಡವಾಳ ಆರ್ಥಿಕವ್ಯವಸ್ಥೆಯ ಲಕ್ಷಣಗಳು, ಅದರ ಜನನ ಮತ್ತು ಬೆಳವಣಿಗೆ ಇಷ್ಟನ್ನು ಮಾತ್ರ ಚಿತ್ರಿಸುವುದರಲ್ಲೇ ಮಾರ್ಕ್ಸ್–ಏಂಗೆಲ್ಸರು ತೃಪ್ತರಾಗಲಿಲ್ಲ. ಮುಂದುವರಿದು, ಬಂಡವಾಳ ಶೇಖರಣೆ ಆಗಲು ಹೇಗೆ ಸಾಧ್ಯವಾಯಿತು? ಬಂಡವಾಳವೆಂದರೇನು ? ಬಂಡವಾಳವನ್ನು ಉತ್ಪಾದನಾ ಕಾರ್ಯದಲ್ಲಿ ಹಾಕುವುದರಿಂದ ಲಾಭ ಹೇಗೆ ಬರುತ್ತದೆ ? ಯಂತ್ರಗಳ ಸಹಾಯದಿಂದ ಅತ್ಯಧಿಕ ಪ್ರಮಾಣದಲ್ಲಿ ತಯಾರಾಗುತ್ತಿರುವ ಸರಕುಗಳು ಜನರಿಗೆ ಯಥೇಚ್ಛವಾಗಿ ಸಿಕ್ಕುತ್ತಿವೆಯೇ ? ಅದರಿಂದ ಜನಸಮುದಾಯಕ್ಕೆ ಸುಖ ಉಂಟಾಗಿದೆಯೇ ಅಥವಾ ಇಲ್ಲವೇ ? ಬಂಡವಾಳ ಆರ್ಥಿಕವ್ಯವಸ್ಥೆ ಸುಗಮವಾದ ರೀತಿಯಲ್ಲಿ ಮುಂದುವರಿಯಲು ಸಾಧ್ಯವೇ ? ಎಂಬೀ ವಿಷಯ ಗಳ ಬಗ್ಗೆ ಪರಿಶೋಧನೆ ನಡಸಿದರು. ಬಂಡವಾಳ ಆರ್ಥಿಕವ್ಯವಸ್ಥೆ ಸುಗಮ ವಾಗಿ ನಡೆಯುತ್ತದೆಂದು ಹೇಳುವ ವಾದವನ್ನು ಸುಳ್ಳೆಂದರು.

ಮಾರ್ಕ್ಸ್–ಏಂಗೆಲ್ಸರು ಬಂಡವಾಳ ಆರ್ಥಿಕವ್ಯವಸ್ಥೆಯ ಸ್ವರೂಪವನ್ನು ಹೊರಗೆಡುವವರೆಗೂ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಅನೇಕ ಬಗೆಯ ಹಗಲುಗನಸಿನ ಆರ್ಥಿಕವಾದಗಳು ಪ್ರಚಾರದಲ್ಲಿದ್ದವು. ಇದರ ಪ್ರಕಾರ

ಪ್ರತಿಯೊಬ್ಬ ವ್ಯಕ್ತಿಗೂ ಆತನೆ ಹಿತವಾವುದೆಂಬುದು ಗೊತ್ತು. ಹಿತಗಳ ಬಗ್ಗೆ ವಿವೇಚನೆ ವ್ಯಕ್ತಿಗಳಲ್ಲಿ ಇದೆ. ವ್ಯಕ್ತಿಗಳು ಆರ್ಥಿಕ ಕ್ಷೇತ್ರದಲ್ಲಿ ಪ್ರವೇಶಿಸಿ ತಮ್ಮ ತಮ್ಮ ಆರ್ಥಿಕಾಭಿವೃದ್ಧಿಯನ್ನು ಮಾಡಿಕೊಳ್ಳುವರು. ಪ್ರತಿಯೊಬ್ಬನೂ ದುಡಿಯುತ್ತಾನೆ. ದುಡಿಮೆಗೆ ಅನುಸಾರವಾಗಿ ಪ್ರತಿಯೊಬ್ಬನೂ ಪ್ರತಿಫಲ ಪಡೆಯುತ್ತಾನೆ. ಹೀಗೆ ಪ್ರತಿಯೊಬ್ಬನೂ ಆತನ ಯೋಗ್ಯತಾನುಸಾರ ದುಡಿಯುವುದರಿಂದ ಸಂಪತ್ತುಅಭಿವೃದ್ಧಿಯಾಗುತ್ತದೆ. ಕೆಲವರು ನೇರವಾಗಿ ಉತ್ಪಾದನೆಯಲ್ಲಿ ತೊಡಗುತ್ತಾರೆ, ಕೆಲವರು ವ್ಯಾಪಾರದಲ್ಲಿ ತೊಡಗುತ್ತಾರೆ, ಇನ್ನು ಕೆಲವರು ಉತ್ಪಾದನೆಗೆ, ವ್ಯಾಪಾರಕ್ಕೆ ಅನುಕೂಲವಾಗುವ ರೀತಿಯಲ್ಲಿ ಉಪಕೆಲಸ ಅಥವ ಸಹಾಯಕ ಕೆಲಸಗಳಲ್ಲಿ ನಿರತರಾಗುತ್ತಾರೆ. ಒಟ್ಟಿನಲ್ಲಿ, ಎಲ್ಲರೂ ಉತ್ಪಾದನೆಯಲ್ಲಿ, ಸಂಪತ್ತಿನ ಅಭಿವೃದ್ಧಿಯಲ್ಲಿ ಸಮಭಾಗಿಗಳಾಗಿದ್ದಾರೆ, ಸಮಾಜದ ಆರ್ಥಿಕ ಜೀವನ ಸುಗಮವಾಗಿ ನಡೆಯಲು ಕಾರಣರಾಗಿದ್ದಾರೆ. ಎಲ್ಲರೂ ದುಡಿಮೆಮಾಡುವುದರಿಂದ, ದುಡಿಮೆಗೆ ತಕ್ಕ ಪ್ರತಿಫಲ ದೊರಕಿಸಿಕೊಳ್ಳುವುದರಿಂದ ಅವರವರು ಗಳಿಸಿರುವ ಸ್ವತ್ತು ಅವರವರಿಗೆ ಸೇರಿದ್ದು; ಅವರ ದುಡಿಮೆಯ ಫಲ. ಒಬ್ಬನಲ್ಲಿ ಹೆಚ್ಚು ಹಣ ಅಥವಾ ಬಂಡವಾಳವಿದ್ದರೆ ಅದು ಆತನ ದುಡಿಮೆಯ ಫಲ. ಆದ್ದರಿಂದ ಖಾಸಗೀ ಸ್ವಾಮ್ಯದಲ್ಲಿ ತಪ್ಪಿಲ್ಲ. ಈ ಆಧಾರದಮೇಲೆಯೇ ಬಂಡವಾಳ ಆರ್ಥಿಕವ್ಯವಸ್ಥೆ ಜನನ ಹೊಂದಿ ಅಭಿವೃದ್ಧಿಗೆ ಬಂದಿರುವುದು. ಇನ್ನು ಮುಂದೆಯೂ ಸಹ ಇದೇ ರೀತಿಯಲ್ಲಿ ಪ್ರವರ್ಧಮಾನ ಸ್ಥಿತಿಯಲ್ಲಿರುವುದು ಖಂಡಿತ.

ಆದುದರಿಂದ, ಸರ್ಕಾರವು ಆರ್ಥಿಕ ಕ್ಷೇತ್ರದಲ್ಲಿ ಯಾವ ರೀತಿಯಲ್ಲೂ ಪ್ರವೇಶಿಸಕೂಡದು ; ಸರ್ಕಾರದ ಪ್ರವೇಶದಿಂದ ಸುಗಮವಾಗಿ ನಡೆಯುತ್ತಿರುವ ಖಾಸಗೀ ಉದ್ಯಮ, ಖಾಸಗೀ ಉತ್ಪಾದನೆ, ಬಂಡವಾಳ ಶೇಖರಣೆ, ಉದ್ಯಮಕ್ಕೆ ತಕ್ಕ ಲಾಭ, ಉದ್ಯೋಗದ ಪ್ರಾಪ್ತಿ, ಕೆಲಸಕ್ಕೆ ತಕ್ಕ ಕೂಲಿ, ಇವುಗಳಿಗೆ ಭಂಗ ಉಂಟಾಗುತ್ತದೆ. ಸರ್ಕಾರವು ದೂರಸರಿದು ನಿಲ್ಲಬೇಕು ; ಸಾರ್ವಜನಿಕ ಶಾಂತಿಯನ್ನು ಕಾಪಾಡುವುದು, ಒಪ್ಪಂದಗಳನ್ನು ಪ್ರತಿಯೊಬ್ಬರೂ ಪರಿಪಾಲಿಸುವಂತೆ ನೋಡಿಕೊಳ್ಳುವುದು, ಖಾಸಗೀ ಸ್ವಾಮ್ಯಕ್ಕೆ ರಕ್ಷಣೆ ಕೊಡುವುದು ಸರ್ಕಾರದ ಮುಖ್ಯ ಕೆಲಸವಾಗಿರಬೇಕು.

ಎರಡನೆಯದಾಗಿ, ಸಮಾಜದ ಆರ್ಥಿಕ ವ್ಯವಹಾರಗಳಲ್ಲಿ "ಸರಬರಾಜು ಮತ್ತು ಗಿರಾಕಿ" ಎಂಬ ಆರ್ಥಿಕ ನಿಯಮವು (Law of supply and demand) ಬಂಡವಾಳಶಾಹಿ ವ್ಯವಸ್ಥೆಯನ್ನು ಸುಗಮವಾಗಿ ಮುಂದುವರಿಸಲು ಕಾರಣವಾಗಿವೆ. ಸಮಾಜದ ಆರ್ಥಿಕ ಅಂಗ ವಿಶೇಷಗಳಾದ ಖಾಸಗೀ ಸ್ವಾಮ್ಯ, ಖಾಸಗೀ ಉತ್ಪಾದನೆ, ಕೆಲಸಕ್ಕೆ ತಕ್ಕ ಕೂಲಿ, ಇತ್ಯಾದಿಗಳಲ್ಲಿ ಈ ಆರ್ಥಿಕ ನಿಯಮ ಸಂಬಂಧವನ್ನು ಕಲ್ಪಿಸಿ ಇವುಗಳು ವಿಶೇಷವಾಗಿ ಏರದಂತೆಯೂ ಅಥವ ತಗ್ಗದಂತೆಯೂ ಪರಮಾವಧಿಗಳನ್ನು (limits) ವಿಧಿಸಿದೆ, ಮತ್ತು ಪ್ರತಿ ಆರ್ಥಿಕ ಅಂಗ ವಿಶೇಷಗಳಲ್ಲಿ ಸ್ವಯಂ ಹೊಂದಾಣಿಕೆಯನ್ನು (Self-Adjustments) ತಂದಿದೆ. ಆದುದರಿಂದ, ಆರ್ಥಿಕ ವ್ಯವಸ್ಥೆಯಲ್ಲಿರುವ ಈ ಸ್ವಯಂ ಹೊಂದಾಣಿಕೆಯನ್ನು ರಕ್ಷಿಸುವುದು ಸರ್ಕಾರದ ಕರ್ತವ್ಯವಾಗಿದೆ ; ಸರ್ಕಾರವು ಆರ್ಥಿಕ ಕ್ಷೇತ್ರದಲ್ಲಿ ಪ್ರವೇಶಿಸದಿರುವುದರ ಮೂಲಕ ಈ ಕರ್ತವ್ಯವನ್ನು ಪರಿಪಾಲಿಸಿದಂತಾಗುತ್ತದೆ.[1]

ಈ ಮೇಲ್ಕಂಡ ವಾದವನ್ನು ಹುರುಳಿಲ್ಲದ ಮತ್ತು ವಾಸ್ತವಾಂಶಗಳಿಗೆ ದೂರವಾದ ವಾದವೆಂಬುದನ್ನು ತೋರಿಸುವುದು ಮಾರ್ಕ್ಸ್-ಏಂಗೆಲ್ಸರಿಗೆ ಅಷ್ಟು ಕಷ್ಟವಾಗಲಿಲ್ಲ. ಉತ್ಪಾದನೆಯಲ್ಲಿ ಎಲ್ಲರೂ ಸಮಭಾಗಿಗಳಾಗಿರುವುದಾದರೆ, ಎಲ್ಲರೂ ತಾವು ದುಡಿಮೆ ಮಾಡಿದುದಕ್ಕೆ ತಕ್ಕ ಪ್ರತಿಫಲವನ್ನು ಪಡೆಯುತ್ತಿರುವುದಾದರೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಕಾಣುವ ಶ್ರೀಮಂತಿಕೆ, ಬಡತನ, ನಿರುದ್ಯೋಗ, ದುಃಸ್ಥಿತಿ ಎಲ್ಲವೂ ಹೇಗೆ ಉಂಟಾದವು, ಹೇಗೆ ಬಂದವು ? ಸಮಾಜದ ಒಂದು ವರ್ಗದಲ್ಲಿ ಸಂಪತ್ತು ಕೇಂದ್ರೀಕೃತವಾಗಲೂ, ಹಣ ಸಂಗ್ರಹವಾಗಲೂ ಹೇಗೆ ಸಾಧ್ಯವಾಯಿತು ?

ಬಂಡವಾಳಶಾಹಿ ವ್ಯವಸ್ಥೆಯ ಉತ್ಪಾದನಾ ಕಾರ್ಯದಲ್ಲಿ ನೆರವಾಗಿರುವ ಕಾರ್ಮಿಕವರ್ಗಕ್ಕೆ ತಕ್ಕ ಪ್ರತಿಫಲ ದೊರೆಯುತ್ತಿಲ್ಲದಿರುವುದರಿಂದಲೂ ಮತ್ತು ಕಾರ್ಮಿಕವರ್ಗ ಶೋಷಣೆಗೆ ತುತ್ತಾಗಿರುವುದರಿಂದಲೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವೈಪರೀತ್ಯಗಳು ಉಂಟಾಗಿರುವುದಾಗಿ ಮಾರ್ಕ್ಸ್-ಏಂಗೆಲ್ಸರು ತಿಳಿಸಿದರು. ಜನಸಮುದಾಯಕ್ಕೆ ಸುಖ ಶಾಂತಿಗಳನ್ನು ತರುವುದು ಬಂಡವಾಳ ಆರ್ಥಿಕ ವ್ಯವಸ್ಥೆಯಿಂದ ಸಾಧ್ಯವೇ ಇಲ್ಲವೆಂದೂ, ಆರ್ಥಿಕ ದುಃಸ್ಥಿತಿ, ನಿರುದ್ಯೋಗ, ಆರ್ಥಿಕ ಏರಿಳಿತಗಳು, ಪೈಪೋಟಿ, ಲಾಭದಾಹ, ಯುದ್ಧ ಇವು ಬಂಡವಾಳಶಾಹಿ ವ್ಯವಸ್ಥೆಗೆ ಅಂಟುಬಿದ್ದಿವೆ ಎಂದೂ, ಇದಕ್ಕೆಲ್ಲಾ

---

(1) ಆರ್ಥಿಕ ಕ್ಷೇತ್ರದಲ್ಲಿ ಸರ್ಕಾರ ಪ್ರವೇಶಿಸಕೂಡದೆಂಬ ಧೋರಣೆ "ಸರ್ಕಾರದ ತಾಟಸ್ಥ್ಯ ನೀತಿ" (Laissez-faire) ಎಂದು ಹೆಸರು ಪಡೆದಿದೆ. 1917 ರ ವರೆಗೂ ಈ ನೀತಿ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರ ಉಸಿರಾಗಿತ್ತು. (See-Rise of European Liberalism—H. J. Laski).

ಬಂಡವಾಳಶಾಹಿ ಉತ್ಪಾದನಾಕ್ರಮವೇ (Capitalist mode of producation) ಕಾರಣವಾಗಿದೆ ಎಂದೂ ಮಾರ್ಕ್ಸ್-ಎಂಗೆಲ್ಸರು ಘೋಷಿಸಿದರು.

ಬಂಡವಾಳಶಾಹಿ ಉತ್ಪಾದನೆ ಲಾಭದೃಷ್ಟಿಯಿಂದ ಕೈಗೊಳ್ಳುವ ಉತ್ಪಾದನೆಯಾಗಿದೆ. ಸಮಾಜದ ಆವಶ್ಯಕತೆಗಳನ್ನು ಉತ್ಪಾದನೆಯ ಮೂಲಕ ನೀಗಿಸುವ ದೃಷ್ಟಿಯಿಂದ ನಡೆಯುವ ಉತ್ಪಾದನೆ ಆಗಿಲ್ಲ. ಲಾಭದಾಯಕ ಉತ್ಪಾದನೆ ಸ್ಪರ್ಧೆಯನ್ನು ತರುತ್ತದೆ. ಹೀಗಾಗಿ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಪ್ರತಿಯೊಬ್ಬ ಉದ್ಯಮದಾರನ ಜೀವನವೂ ನೂಕುನುಗ್ಗಲಿನಲ್ಲಿ ನಡೆಸುವ ಬದುಕಾಗಿದೆ. ಸಿಗುವ ಲಾಭದ ಮೂಲಕ ಜೀವನ ನಡೆಸಲು ಪ್ರತಿಯೊಬ್ಬನೂ ಯತ್ನಿಸುತ್ತಾನೆ. ಲಾಭ ಸಿಗುವ ಭರವಸೆಯಿಂದ ಉತ್ಪಾದನೆಯನ್ನು ಕೈಗೊಳ್ಳುತ್ತಾನೆ. ಲಾಭವೇ ಬಂಡವಾಳಶಾಹಿ ವ್ಯವಸ್ಥೆಯ ಸುಗಮ ಸಾಗಾಣಿಕೆಗೆ ಆಧಾರವಾಗಿದೆ ಮತ್ತು ಜೀವಿಸಲೆತ್ನಿಸಿವ ಪ್ರತಿಯೊಬ್ಬ ಜೀವಿಯ ಆರ್ಥಿಕ ಚಟುವಟಿಕೆಯನ್ನು ಪ್ರಚೋದನೆಗೊಳಿಸುವ ಶಕ್ತಿಯೂ ಆಗಿದೆ. ಆದರೆ ಲಾಭ ಎಲ್ಲಿಂದ ಬರುತ್ತದೆ?

ಮಾರ್ಕ್ಸ್-ಎಂಗೆಲ್ಸರು ಲಾಭದ ಮೂಲವನ್ನು ಹಲವು ಬಗೆಯಲ್ಲಿ ನಡೆಯುತ್ತಿರುವ ಕಾರ್ಮಿಕವರ್ಗದ ಶೋಷಣೆಯಲ್ಲಿ ಕಂಡರು. ಲಾಭದ ಉತ್ಪತ್ತಿ ಸರಕುಗಳ ಅದಲು-ಬದಲು (Exchange) ನಲ್ಲಿ ಆಗದೆ,[1] ಅದರ ಆವಾಸಸ್ಥಾನ ಉತ್ಪಾದನಾ ಕಾರ್ಯರಂಗದಲ್ಲಿ (in the process of production) ಇರುವುದಾಗಿ ತಿಳಿಸಿದರು. ಕಾರ್ಮಿಕರ ನೆರವಿಲ್ಲದೆ ನಡೆಯಲಸಾಧ್ಯವಾಗಿರುವ ಬಂಡವಾಳಶಾಹಿ ಉತ್ಪಾದನೆಯು ಕಾರ್ಮಿಕ ವರ್ಗದ ಶೋಷಣಾ ಕೇಂದ್ರವಾಗಿರುವುದನ್ನು ಹೊರಹಾಕಿದರು. ಕಾರ್ಮಿಕ ವರ್ಗದ ಸ್ಥಾನಮಾನ, ಅದಕ್ಕಿರುವ ಕೃತಕ ಸ್ವಾತಂತ್ರ್ಯ, ಬಂಡವಾಳವರ್ಗಕ್ಕಿ

---

1. ಸರಕುಗಳ ಅದಲು-ಬದಲಿನಲ್ಲಿ ಲಾಭ ಕೆಲವರಿಗೆ ಸಿಗುವಹಾಗೆ ಕಂಡರೂ ಒಟ್ಟಿನಲ್ಲಿ ಅದಲು-ಬದಲಿನಿಂದ ಲಾಭ ಬರಲು ಸಾಧ್ಯವಿಲ್ಲ. ಏಕೆಂದರೆ, ಒಬ್ಬನು ಇನ್ನೊಬ್ಬನಿಗೆ ಹೆಚ್ಚಿಗೆಯ ದರಕ್ಕೆ ಮಾರಿ ಹೆಚ್ಚಿಗೇ ಹಣ ಸಂಪಾದಿಸಬಹುದು. ಆದರೆ ಎಲ್ಲ ಜನರೂ ಮಾಡಲು ಸಾಧ್ಯವಿಲ್ಲ. ಹೆಚ್ಚಿಗೇ ಉತ್ಪಾದನೆಯನ್ನು ದಕ್ಕಿಸಿಕೊಳ್ಳುವುದರ ಮೂಲಕ ಲಾಭ ಸಾಧ್ಯ.

ರುವ ಸ್ವಾವ್ಯಬಲ ಕಾರ್ಮಿಕವರ್ಗವನ್ನು ಶೋಷಣೆಗೆ ಈಡುಮಾಡಿ ಲಾಭ ತರುತ್ತಿರುವುದಾಗಿ ತಿಳಿಸಿದರು.

ಒಂದನೆಯದಾಗಿ, ನಿರುದ್ಯೋಗದಿಂದ ನರಳುತ್ತಿರುವ ಕಾರ್ಮಿಕರ ದುಡಿಮೆಗೆ ಸರಿಸಮಾನ ಪ್ರತಿಫಲವನ್ನು ಪಡೆಯುವುದು ಅಸಾಧ್ಯದ ಮಾತು. ನಿರುದ್ಯೋಗಿಗಳು ಕೆಲಸ ಸಿಕ್ಕಿದರೆ ಸಾಕೆಂದು ಹಾತೊರೆಯುತ್ತಿರುತ್ತಾರೆ. ನಿರುದ್ಯೋಗಿ ಕೊಟ್ಟಷ್ಟು ಕೂಲಿಯನ್ನು ತೆಗೆದುಕೊಂಡು ದುಡಿಮೆಮಾಡುತ್ತಾನೆ. ಕಡಿಮೆ ಕೂಲಿಗೆ ಮೊದಲಿನಷ್ಟೇ ಉತ್ಪಾದನೆ ನಡೆಯುವುದರಿಂದ ಉಳಿತಾಯ ಲಾಭವಾಗುತ್ತದೆ, ಅಥವಾ ದುಡಿಮೆಗಾರನು ಹೆಚ್ಚಿಗೇ ಮೌಲ್ಯವನ್ನು ಉತ್ಪಾದಿಸಿ ಬಂಡವಾಳಸ್ಥನಿಗೆ ಕೊಡುತ್ತಾನೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಿದಷ್ಟೂ ಅದಕ್ಕೆ ಹೆಚ್ಚು ಜೀವಕಳೆ ಬರುತ್ತದೆ. ಕಾರ್ಮಿಕರಲ್ಲೇ ಸ್ಪರ್ಧೆ ಉಂಟಾಗಿ ಬಂಡವಾಳಗಾರರಿಗೆ ಹೆಚ್ಚು ಕೂಲಿಗಾರರು ದುಡಿಮೆಗೆ ಸಿಗುತ್ತಾರೆ: ಹೆಚ್ಚು ಲಾಭ ಹೊಂದಲು ಅವಕಾಶವಾಗುತ್ತದೆ.

ಎರಡನೆಯದಾಗಿ, ಹುಡುಗರನ್ನೂ, ಹೆಂಗಸರನ್ನೂ ಕೂಲಿಗೆ ನೇಮಿಸಿಕೊಂಡು ಕಡಿಮೆ ಕೂಲಿ ಕೊಡುವುದರ ಮೂಲಕ ಅಥವಾ ಗಂಡಾಳಿನಷ್ಟೇ ಅವರಿಂದ ದುಡಿಸಿಕೊಳ್ಳುವುದರ ಮೂಲಕ ಲಾಭ ಹೆಚ್ಚಾಗುತ್ತದೆ.

ಮೂರನೆಯದಾಗಿ, ಕೂಲಿಗೆ ತೆಗೆದುಕೊಂಡ ದುಡಿಮೆಯವರನ್ನು ನಿಗದಿಯಾದ ಅವಧಿಗಿಂತ ಹೆಚ್ಚುಕಾಲ ದುಡಿಸಿಕೊಳ್ಳುವುದರಿಂದ ಲಾಭ ಬರುತ್ತದೆ.

ನಾಲ್ಕನೆಯದಾಗಿ, ಯಂತ್ರಗಳಮೇಲೆ ದುಡಿಮೆಗಾರರನ್ನು ದುಡಿಸಿ, ಸಹಸ್ರಪಾಲು ಹೆಚ್ಚಿಗೇ ಉತ್ಪಾದನೆ ಆಗುತ್ತಿದ್ದರೂ ಕರಾರಿನಂತೆ ಕೂಲಿ ಕೊಡುವದರಿಂದ ಲಾಭ ಬರುತ್ತದೆ. 2 ಈ ಹಲವು ಬಗೆಯಲ್ಲಿ ಹೆಚ್ಚಿಗೆ ದುಡಿಮೆಯಿಂದ ಆಗುವ ಹೆಚ್ಚು ಉತ್ಪಾದನೆ ಅಥವಾ ಹೆಚ್ಚಿಗೇ ಮೌಲ್ಯದ ಅಪಹರಣ ಲಾಭಕ್ಕೂ, ಬಂಡವಾಳ ಶೇಖರಣೆಗೂ (Accumalation of Capital), ಶ್ರೀಮಂತರು ಇನ್ನೂ ಶ್ರೀಮಂತರಾಗುವುದಕ್ಕೂ, ಕಾರ್ಮಿಕರ ಆರ್ಥಿಕ ಪರಿಸ್ಥಿತಿ ಇನ್ನೂ ಅಧೋಗತಿಗೆ ಇಳಿಯುವುದಕ್ಕೂ ಮೂಲಕಾರಣವಾಗಿದೆ. ಇವೇ ಬಂಡವಾಳಶಾಹಿ ಉತ್ಪಾದನೆಯ ಅಂತರಾಳವಾಗಿದೆ. ಅಷ್ಟೇ

2. ದೃಷ್ಟಾಂತಕ್ಕೆ 48 ನೇ ಪುಟವನ್ನು ನೋಡಿ.

ಅಲ್ಲ. ಬಂಡವಾಳ ಉತ್ಪಾದನೆ ಸುಗಮವಾಗಿ ಮುಂದುವರಿಯಬೇಕಾದರೆ ಹೆಚ್ಚು ಹೆಚ್ಚು ಲಾಭ ಸಿಗುತ್ತಲೇ ಇರಬೇಕು. ಬಂಡವಾಳವರ್ಗ ಹೊಸ ಹೊಸ ಉದ್ಯಮಗಳನ್ನು ಸ್ಥಾಪಿಸಲು, ಹೆಚ್ಚು ಉತ್ಪಾದನೆಯನ್ನು ಕೈಗೊಳ್ಳಲು ಅಥವ ಆಗುತ್ತಿರುವ ಉತ್ಪಾದನೆಯನ್ನು ಮುಂದುವರಿಸಲು ಇದೇ ಪ್ರಚೋದನಾ ಶಕ್ತಿಯಾಗಿದೆ. ಹೆಚ್ಚು ಹೆಚ್ಚು ಲಾಭ ದೊರೆತು ಬಂಡವಾಳ ಶೇಖರಣೆಯಾದಷ್ಟೂ, ಒಬ್ಬ ಬಂಡವಾಳಉದ್ಯಮಿ ಇನ್ನೊಬ್ಬ ಬಂಡವಾಳ ಉದ್ಯಮಿಯಮೇಲೆ ಪೈಪೋಟಿ ನಡೆಸಿ ಉಳಿಯಲು ಸಾಧ್ಯ. ಬಂಡವಾಳವನ್ನು "ಶೇಖರಿಸು," "ಶೇಖರಿಸು" ಇದೇ ಬಂಡವಾಳ ಉದ್ಯಮಿಯ ನಿತ್ಯದ ಕಾರ್ಯಕ್ರಮ, ಆತನ ಜೀವನದ ಉಸಿರು, ಆತನ ಜೀವನದ ಹೆಗ್ಗುರಿ. ಇದರಿಂದಲೇ ಆತನಿಗೆ ಬಂಡವಾಳಶಾಹಿ ಸಮಾಜದಲ್ಲಿ ಸ್ಥಾನಮಾನಗಳು.

ಲಾಭ, ಬಂಡವಾಳ ಶೇಖರಣೆ, ಶೇಖರಣೆಯಾದ ಬಂಡವಾಳಕ್ಕೆ ಮತ್ತೆ ತಕ್ಕ ಲಾಭ, ಇವುಗಳೇ ಬಂಡವಾಳ ಆರ್ಥಿಕವ್ಯವಸ್ಥೆ ಸುವ್ಯವಸ್ಥೆಯಿಂದ ಕೆಲಸಮಾಡಲಿಕ್ಕೆ ಸಹಾಯಕಶಕ್ತಿಗಳು. ಆದರೆ ಲಾಭವನ್ನು ಒಂದೇ ಸಮನಾಗಿ ಹೆಚ್ಚು ಹೆಚ್ಚಾಗಿ ಗಳಿಸಲು ಹೇಗೆ ಸಾಧ್ಯ ? ಇದರ ಸಾಧ್ಯತೆ, ಕಡಿಮೆ ಕೂಲಿಗೆ ಸಿಗುವ ದುಡಿಮೆಯುವರನ್ನು ಅವಲಂಬಿಸಿದೆ. ಸದಾ ಪೈಪೋಟಿಯಿಂದ ಕಡಿಮೆ ಕೂಲಿಗೆ ಬರುವ ನಿರುದ್ಯೋಗಿಗಳ ತಂಡವಿರಬೇಕು. ಇಲ್ಲವೆ, ಬಂಡವಾಳಗಾರನು ಆದಷ್ಟು ಕಡಿಮೆ ಕೂಲಿಯವರನ್ನು ಕೆಲಸಕ್ಕೆ ತೆಗೆದುಕೊಂಡು, ಅವರಿಂದಲೇ ಹೆಚ್ಚುಮಂದಿ ಕೂಲಿಗಳು ತಯಾರಿಸುವಷ್ಟು ಸರಕುಗಳನ್ನು ತಯಾರಿಸಬೇಕು. ಆದ್ದರಿಂದ ಬಂಡವಾಳಗಾರನಿಗೆ ಯಂತ್ರಗಳ ಬಳಕೆ ಅತ್ಯಗತ್ಯವಾಗುತ್ತದೆ ; ಯಂತ್ರಗಳ ಉಪಯೋಗದಿಂದ ಉತ್ಪಾದನೆಯನ್ನು ಹೆಚ್ಚಿಸುವುದೊಂದೇ ಉಳಿದಿರುವ ಮಾರ್ಗ. ಯಂತ್ರಗಳನ್ನು ಅಥವಾ ಆಧುನಿಕ ಉತ್ಪಾದನಾ ಶಕ್ತಿಗಳನ್ನು ಹೇರಳವಾಗಿ ಉತ್ಪಾದನೆಯಲ್ಲಿ ಉಪಯೋಗಿಸಿದರೆ ಹೆಚ್ಚುಮಂದಿ ದುಡಿಮೆಯವರು ಬೇಕಾಗುವುದಿಲ್ಲ. ಇದರಿಂದ ದುಡಿಮೆಯ ಜನರಲ್ಲಿ ಮತ್ತಷ್ಟು ನಿರುದ್ಯೋಗ ಬೆಳೆದರೆ ಇನ್ನೂ ಸಂತೋಷ ! ನಿರುದ್ಯೋಗ ಹೆಚ್ಚಿದಷ್ಟೂ ದುಡಿಮೆಯವರು ಇನ್ನೂ ಕಡಿಮೆ ಕೂಲಿಗೆ ದುಡಿಯಲು ಒಪ್ಪಿಕೊಳ್ಳುವರು !!

ಆದರೆ ಎಲ್ಲವೂ ಸುಗಮವೆಂದು ಅಣಿಮಾಡಿಕೊಳ್ಳುವುದರಲ್ಲಿಯೇ ಕನಸು ಭಗ್ನವಾಗುತ್ತದೆ. ಯಾವುದು ಏನೇ ಆಗಲಿ ಲಾಭಕ್ಕೆ ಧಕ್ಕೆ ಬರದ ರೀತಿಯಲ್ಲಿ ಉತ್ಪಾದನೆ ನಡೆಯಬೇಕು. ಲಾಭದಾಯಕ ಉತ್ಪಾದನೆ ನಡೆಯುವುದಕ್ಕೆ ಎಷ್ಟು ಕನಿಷ್ಠ ಸಂಖ್ಯೆ ದುಡಿಮೆಯವರು ಬೇಕೋ ಅಷ್ಟಕ್ಕೆ ಮಾತ್ರ ಜೀವದಾನದ ಕೂಲಿ ಕೊಡುತ್ತಿರುವಾಗ, ಮತ್ತು ಜೊತೆಗೆ ನಿರುದ್ಯೋಗಿಗಳ ತಂಡವಿರುವಾಗ, ಬಂಡವಾಳಶಾಹಿ ವ್ಯವಸ್ಥೆ ಆಧುನಿಕ ಯಂತ್ರೋಪಕರಣಗಳ ಸಹಾಯದಿಂದ ಹೇರಳವಾಗಿ ಉತ್ಪನ್ನಮಾಡುತ್ತಿರುವ ಸರಕುಗಳನ್ನು ಕೊಳ್ಳುವವರು ಯಾರು? ಅವುಗಳ ಮಾರಾಟವೆಲ್ಲಿ?

ಬಂಡವಾಳ ಆರ್ಥಿಕವ್ಯವಸ್ಥೆ ಸುಗಮವಾಗಿ ನಡೆಯಲು ಉತ್ಪನ್ನವಾದ ಸರಕುಗಳು ಮಾರಾಟವಾಗಬೇಕು. ಬಂಡವಾಳಗಾರನು ತಯಾರಿಸಿದ ಸರಕುಗಳ ಮೌಲ್ಯವನ್ನು ಹಣದ ರೂಪದಲ್ಲಿ ಪುನಃ ಪಡೆಯಬೇಕು. ಸರಕುಗಳು ಮಾರುಕಟ್ಟೆಯಲ್ಲಿ ವಿಕ್ರಯವಾದ ಹೊರತೂ ಹಣ ಬರುವ ಹಾಗಿಲ್ಲ. ಕೊಳ್ಳುವವರು ಯಾರಿದ್ದಾರೆ? ಕೊಳ್ಳುವ ಜನರಲ್ಲಿ ಹೆಚ್ಚು ಮಂದಿ ಜೀವದಾನದ ಕೂಲಿಯವರು ಅಥವಾ ನಿರುದ್ಯೋಗಿಗಳು. ಇವರು ತಯಾರಾದ ಪದಾರ್ಥಗಳನ್ನು ಕೊಳ್ಳುವುದು ಸಲ್ಲದ ಮಾತು. ಸರಕುಗಳು ಗಿರಾಕಿಗಳೇ ಇಲ್ಲದೆ ನಿಲ್ಲುವುವು! ಇದೇ ಸೂಚನೆ. ತಯಾರಿಸುವ ಬಂಡವಾಳಗಾರನು ತನ್ನ ಸರಕುಗಳನ್ನು ಮತ್ತಷ್ಟು ಸುಲಭ ದರದಲ್ಲಿ ತಯಾರಿಸಬೇಕು, ಇಲ್ಲವೆ ತನ್ನ ಉದ್ಯಮವನ್ನು ಮುಚ್ಚಬೇಕು, ಇಲ್ಲವೆ ಸುಲಭ ದರದಲ್ಲಿ ವಿಕ್ರಯಿಸಲು ಮತ್ತಷ್ಟು ಕೂಲಿ ಕಡಿಮೆಮಾಡಬೇಕು, ಇಲ್ಲವೆ ಮತ್ತಷ್ಟು ಯಂತ್ರಗಳಿಂದ ಸಹಾಯಪಡೆದು ಹೆಚ್ಚು ಉತ್ಪಾದನೆಯನ್ನು ಇರುವ ದುಡಿಮೆಯವರಿಂದ ಪಡೆಯಬೇಕು, ಅಥವ ಲಾಭದ ಪ್ರಮಾಣವನ್ನು ಕಡಿಮೆಮಾಡಿಕೊಳ್ಳಲು ಬಂಡವಾಳಗಾರನು ಸಿದ್ಧನಿರಬೇಕು. ಕೊನೆಯದು ಸಾಧ್ಯವೇ ಇಲ್ಲ. ಉಳಿದ ಮಾರ್ಗಗಳೆಂದರೆ ದುಡಿಮೆವರ್ಗಕ್ಕೆ ಮತ್ತಷ್ಟು ಕಡಿಮೆ ಕೂಲಿ ಕೊಡುವುದು ಅಥವಾ ಮತ್ತಷ್ಟು ಕೆಲಸಗಾರರನ್ನು ಕೆಲಸದಿಂದ ತೆಗೆಯುವುದು. ಇದರಿಂದ ಆಗುವ ಪರಿಣಾಮವೆಂದರೆ ದುಡಿಮೆಗಾರರ ಕೊಳ್ಳುವ ಶಕ್ತಿಯನ್ನು ಕಡಿಮೆ ಕೂಲಿ ಮತ್ತು ನಿರುದ್ಯೋಗ ಇನ್ನೂ ಕಡಿಮೆಮಾಡುತ್ತವೆ. ಬಂಡವಾಳಗಾರನ ಸರಕುಗಳು ಕೊಳ್ಳುವರಿಲ್ಲದೆ ಮಾರುಕಟ್ಟೆಯಲ್ಲಿ ಉಳಿಯುತ್ತವೆ. ಸಮೃದ್ಧಿಯ ಮಧ್ಯದಲ್ಲಿ ದಾರಿದ್ರ್ಯ

ತಲೆಹಾಕುತ್ತದೆ. ಈ ವಿರಸದಿಂದ ಪಾರಾಗಲಿಕ್ಕೆ ಮಾರ್ಗವೇ ಇಲ್ಲ. ಈ ವಿರಸ ಬಂಡವಾಳಶಾಹಿ ವ್ಯವಸ್ಥೆಗೆ ಗಂಟುಬಿದ್ದದ್ದು. ಸರಕುಗಳು ಹೇರಳವಾಗಿ ಬಿದ್ದಿರುವಾಗ ಕೊಳ್ಳುವ ಶಕ್ತಿಯನ್ನು ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಲಾಭದಾಹವೇ ಹಿಂಗುವಂತೆ ಮಾಡುತ್ತದೆ.

ನಿರುದ್ಯೋಗವೂ ಸಹ ಬಂಡವಾಳಶಾಹಿ ವ್ಯವಸ್ಥೆಗೆ ಗಂಟುಬಿದ್ದದ್ದು. ನಿರುದ್ಯೋಗಿಗಳ ತಂಡವಿಲ್ಲದೆ ಬಂಡವಾಳಶಾಹಿ ವ್ಯವಸ್ಥೆ ಒಂದು ನಿಮಿಷವೂ ಬದುಕಲಾರದು. ನಿರುದ್ಯೋಗಿಗಳ ತಂಡವೇ ಬಂಡವಾಳಶಾಹಿ ವ್ಯವಸ್ಥೆಗೆ ಜೀವದಾನ ಮಾಡುವುದು. ಲಾಭದ ಪ್ರಮಾಣ ಕಡಿಮೆಯಾಗದಂತೆಯೂ ಉತ್ಪಾದನೆ ನಿಲ್ಲದಂತೆಯೂ ಬಂಡವಾಳಶಾಹಿ ವ್ಯವಸ್ಥೆ ಮುಂದುವರಿಯಬೇಕು. ಶೋಷಣೆಯಾಗಬಲ್ಲ ದುಡಿಮೆಗಾರರನ್ನು ತಂಡೋಪತಂಡವಾಗಿ ಬಂಡವಾಳಗಾರನ ಉದ್ಯಮಕ್ಕೆ ಒದಗಿಸಿಕೊಡುವುದರ ಮೂಲಕ ನಿರುದ್ಯೋಗ ಬಂಡವಾಳಗಾರನ ಲಾಭದ ಪ್ರಮಾಣವನ್ನೂ ಉತ್ಪಾದನೆಯನ್ನೂ ಸಂರಕ್ಷಿಸುತ್ತದೆ. ಎರಡನೆಯದಾಗಿ, ನಿರುದ್ಯೋಗ ಕೊನೆಗೊಳ್ಳಲು ಸಾಧ್ಯವೂ ಇಲ್ಲ. ಆಧುನಿಕ ಯಂತ್ರೋಪಕರಣಗಳ ಬಳಕೆಯಿಂದ ಆಗಾಗ್ಗೆ ವಿಸರ್ಜಿತವಾಗುವ ಹೆಚ್ಚಿಗೇ ದುಡಿಮೆಗಾರರು ನಿರುದ್ಯೋಗಿಗಳಾಗುತ್ತಲೇ ಇರುತ್ತಾರೆ. ಹೀಗಾಗಿ, ಬಂಡವಾಳಶಾಹಿ ಉದ್ಯಮದ ಜೊತೆ ಜೊತೆಯಲ್ಲೇ ನಿರುದ್ಯೋಗ ಬೆಳೆಯುತ್ತಿರುತ್ತದೆ. ಸುಖಶಾಂತಿಗಳನ್ನು ಕಲ್ಪಿಸಲು ಆಗಮಿಸಿದ ಬಂಡವಾಳಶಾಹಿ ವ್ಯವಸ್ಥೆಯ ಮಹಾ ವರಪ್ರಸಾದಗಳೆಂದರೆ—ನಿರುದ್ಯೋಗ, ಆರ್ಥಿಕ ದುಃಸ್ಥಿತಿ ಮತ್ತು ಶೋಷಣೆ!

ಇಷ್ಟೇ ಅಲ್ಲ. ಲಾಭದಾಹ ಉತ್ಪಾದನೆಯಲ್ಲಿ ಪೈಪೋಟಿಯನ್ನು ತರುತ್ತದೆ. ಪ್ರತಿಯೊಬ್ಬನೂ ಸ್ವತಂತ್ರನು; ಹಾಕಿದ ಬಂಡವಾಳಕ್ಕೆ ಬರುವ ಲಾಭ ಆತನದು. ಎಲ್ಲ ಉದ್ಯಮಗಾರರೂ ಮಾರುಕಟ್ಟೆಯ ಬೆಲೆಯನ್ನು ಅನುಸರಿಸಿ ಉತ್ಪಾದನೆಯಲ್ಲಿ ನಿರತರಾಗುವರು. ಆದುದರಿಂದ ಯಾವನು, ಎಲ್ಲಿ, ಎಷ್ಟು ಪ್ರಮಾಣದಲ್ಲಿ, ಯಾವ ಸರಕನ್ನು ತಯಾರಿಸಿದ್ದಾನೆಂಬುದು ಯಾರಿಗೂ ತಿಳಿಯದ ವಿಷಯ. ಕಣ್ಣುಮುಚ್ಚಾಲೆ ಆಟದಂತಿರುತ್ತದೆ ಉತ್ಪಾದನೆ. ಯಾರು ಶೀಘ್ರವಾಗಿ, ಸುಲಭದರದಲ್ಲಿ, ಸರಕುಗಳನ್ನು ತಯಾರಿಸಿ ಮಾರುಕಟ್ಟೆಗೆ ಕಳುಹಿಸಬಲ್ಲರೋ ಅವರೇ ಗೆಲ್ಲುವವರು, ಉಳಿದವರೆಲ್ಲರೂ ಮುಳುಗಿದ ಹಾಗೆಯೇ. ಹೀಗಾಗಿ ಅನೇಕವೇಳೆ ಕೊಳ್ಳುವವರು ಇಲ್ಲದಿದ್ದರೂ ಹೆಚ್ಚು

ಉತ್ಪಾದನೆ ನಡೆದು ಉತ್ಪನ್ನವಾದ ಸರಕುಗಳು ಮಾರಾಟವಾಗದೇ ನಿಂತುಹೋಗುತ್ತವೆ. ಈ ಉತ್ಪಾದನೆಯ ವೈಪರೀತ್ಯ ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿ ಆರ್ಥಿಕ ಉಬ್ಬರವಿಳಿತಗಳ (Booms and Depressions) ರೂಪವನ್ನು ತಾಳುತ್ತದೆ. ಆರ್ಥಿಕ ಉಬ್ಬರದ ಕಾಲದಲ್ಲಿ ಹೆಚ್ಚು ಉತ್ಪಾದನೆ, ಹೆಚ್ಚಿಗೆ ಬೆಲೆ, ಹೆಚ್ಚಿಗೆ ಕೂಲಿ, ಹೆಚ್ಚಿನ ಉದ್ಯೋಗ, ಮಾರುಕಟ್ಟೆ ಮತ್ತು ವ್ಯಾಪಾರ ನಡೆಯುತ್ತದೆ. ಕ್ರಮೇಣ ಒಂದೊಂದಾಗಿ ನಶಿಸಿ, ಕೊನೆಗೆ ಆರ್ಥಿಕ ವ್ಯವಹಾರವೇ ನಿಂತುಹೋಗುತ್ತದೆ. ಹಾಹಾಕಾರ, ನಿರುದ್ಯೋಗ, ಪಾಪರ್ ಆಗುವುದು, ಉದ್ಯಮಗಳು ನಷ್ಟಹೊಂದಿ ಮುಚ್ಚುವುದು ನಿತ್ಯದೃಶ್ಯವಾಗುತ್ತದೆ. ಬಂಡವಾಳಶಾಹಿ ವ್ಯವಸ್ಥೆ ತನ್ನ ಗರ್ಭದಲ್ಲಿ ಅಡಗಿದ್ದ ವಿರಸವನ್ನು ಹೊರಸೂಸುತ್ತದೆ.

ಬಂಡವಾಳಶಾಹಿ ವ್ಯವಸ್ಥೆ ತಾನು ಜನ್ಮವಿತ್ತಿರುವ ನಿರುದ್ಯೋಗ, ಆರ್ಥಿಕ ದುಃಸ್ಥಿತಿ ಮತ್ತು ಆರ್ಥಿಕ ವೈಪರೀತ್ಯಗಳಿಂದ ಪಾರಾಗಲು ಹವಣಿಸುತ್ತದೆ. ಹೇರಳವಾಗಿ ಉತ್ಪನ್ನವಾಗುತ್ತಿರುವ ಸರಕುಗಳಿಗೆ ಒಳದೇಶದ ಮಾರುಕಟ್ಟೆಗಳಲ್ಲಿ ಗಿರಾಕಿಗಳು ಇಲ್ಲವಾದರೆ, ವಿದೇಶೀ ಮಾರುಕಟ್ಟೆಯಲ್ಲಿ ಸರಕುಗಳನ್ನು ವಿಕ್ರಯಿಸಲು ಯತ್ನಿಸುತ್ತದೆ. ಆದರ ವಿದೇಶದ ಬಂಡವಾಳಗಾರರು ಬಹುಕಾಲ ಸುಮ್ಮನಿರಲು ಸಾಧ್ಯವಿಲ್ಲ, ಅವರುಗಳು ಲಾಭಕ್ಕೆ ಒದಗಿರುವ ಚ್ಯುತಿಯಿಂದ ಪಾರಾಗಲು ಯತ್ನಿಸುತ್ತಾರೆ.

ಇದಕ್ಕೆ ಪರಿಹಾರಾರ್ಥವಾಗಿ ಆರ್ಥಿಕ ಸ್ಪೈರ್ಧೆ ಹುಟ್ಟುತ್ತದೆ. ಯಾವ ಬಂಡವಾಳಶಾಹಿ ರಾಷ್ಟ್ರ ಅತಿ ಸುಲಭವಾಗಿ ಕಡಿಮೆ ದರದಲ್ಲಿ ಮಾಲನ್ನು ವಿಕ್ರಯಿಸಲು ಸಿದ್ಧವಿರುವುದೋ ಅದಕ್ಕೇ ಸ್ಥಳ. ಪ್ರಬಲ ಬಂಡವಾಳಶಾಹಿ ರಾಷ್ಟ್ರಬಲಹೀನ ಬಂಡವಾಳಸ್ಥ ದೇಶಗಳನ್ನುಆರ್ಥಿಕ ಪೈಪೋಟಿಯಿಂದ ಹೊರಗೆ ನೂಕಿ ಸ್ಥಳವನ್ನು ಆಕ್ರಮಿಸುತ್ತದೆ. ಆರ್ಥಿಕವಾಗಿ ಹಿಂದುಳಿದ ದೇಶಗಳನ್ನುತನ್ನ ವಸಾಹತು ಅಥವ ಮಾರುಕಟ್ಟೆಯಾಗಿ ನಿರ್ಮಿಸಿಕೊಳ್ಳಲು ಹವಣಿಸುತ್ತದೆ. ಚಿಕ್ಕ ಬಂಡವಾಳಶಾಹಿ ರಾಷ್ಟ್ರಗಳಿಗೆ ವಸಾಹತು ಮತ್ತು ಮಾರುಕಟ್ಟೆಗಳು ಇಲ್ಲವಾಗುವುದು. ವಸಾಹತು ಮತ್ತು ಮಾರುಕಟ್ಟೆಗಳಿಗಾಗಿ ದಾಹ ಬಿಕ್ಕಟ್ಟನ್ನು ತರುತ್ತದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲೇ ಯುದ್ಧ ಅನಿವಾರ್ಯವಾಗುತ್ತದೆ.

ಎರಡನೆಯದಾಗಿ, ಪೈಪೋಟಿಯು ತಂದೊಡ್ಡಿರುವ ವೈಪರೀತ್ಯವನ್ನು ತಡೆಗಟ್ಟಲು, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸುಗಮವನ್ನು ತರಲು, ಟ್ರಸ್ಟ್, ಕಂಬೈನ್ಸ್, ಒಪ್ಪಂದಗಳು, ರಚಿತವಾಗುತ್ತವೆ. ಇವುಗಳ ಉದ್ದೇಶವೆಂದರೆ ಲಾಭಕ್ಕೆ ಧಕ್ಕೆ ಬರದಹಾಗೆ ಅನುಚಿತ ಪೈಪೋಟಿ ಇಲ್ಲದಂತೆ ಮಾಡುವುದು ಮತ್ತು ಪ್ರತಿಯೊಬ್ಬ ಬಂಡವಾಳಗಾರನಿಗೂ ಕನಿಷ್ಠ ಲಾಭ ದೊರಕುವಹಾಗೆ ನಿಯಮಿತ ಬೆಲೆಯನ್ನು ಗೊತ್ತುಪಡಿಸುವುದು. ಇದರ ಅಂಗವಾಗಿ ಅನೇಕ ಬಂಡವಾಳ ಉದ್ಯಮಗಳ ಮೇಲು ಉಸ್ತುವಾರಿ ನೋಡಿಕೊಳ್ಳುವ ಒಕ್ಕೂಟಗಳ (combines) ರಚನೆಹೊಂದಿ, ಬಂಡವಾಳು ಉದ್ಯಮಗಳು ಉತ್ಪಾದನೆಮಾಡುವ ಸರಕುಗಳ ಪ್ರಮಾಣ, ಬೆಲೆ ಮತ್ತು ಲಾಭವನ್ನು ನಿರ್ಧರಿಸುತ್ತವೆ. ಇಷ್ಟು ಸಾಲದೇ ಸಾಧ್ಯವಿದ್ದೆಡೆಗಳೆಲ್ಲೆಲ್ಲಾ ಪ್ರತಿ ಬಂಡವಾಳಶಾಹಿ ರಾಷ್ಟ್ರ ಭದ್ರತಾ ಕ್ರಮಗಳನ್ನು ಜಾರಿಗೆ ತರುತ್ತದೆ. ಒಂದು ಬಂಡವಾಳಶಾಹಿ ರಾಷ್ಟ್ರಕ್ಕೆ ಸೇರಿರುವ ಮಾರುಕಟ್ಟೆಯಲ್ಲಿ ಇತರ ಬಂಡವಾಳಶಾಹಿ ರಾಷ್ಟ್ರಗಳು ಪ್ರವೇಶಿಸಿ ಧಾಂದಲೆ ಮಾಡದಹಾಗೆ ನಿಗದಿಯಾದ ಪ್ರಮಾಣದಲ್ಲಿ ಇತರರು ಮಾರುವಂತೆಯೂ (quota), ಹಲವು ವಸ್ತುಗಳನ್ನು ಇತರರು ಆ ಮಾರುಕಟ್ಟೆಯಲ್ಲಿ ಮಾರದಂತೆಯೂ (protection), ಹಲವು ಪದಾರ್ಥಗಳ ವ್ಯಾಪಾರದಲ್ಲಿ ವಸಾಹತಿನ ಯಜಮಾನ ರಾಷ್ಟ್ರಕ್ಕೆ ಮಾತ್ರ ರಹದಾರಿ ಇರುವಂತೆಯೂ (preference) ವಿಧಿಸಲಾಗುತ್ತದೆ. ಒಟ್ಟಿನ ಪರಿಣಾಮವೆಂದರೆ ಬಂಡವಾಳಶಾಹಿವ್ಯವಸ್ಥೆ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು ನಿರೂಪಿಸಿರುವಂತೆ ಸುಗಮ ವ್ಯವಸ್ಥೆಯಾಗಿರದೆ ವಿರಸಗಳ ತೌರುಮನೆಯಾಗುತ್ತದೆ.

ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿ ವಿರಸಗಳು ಮೂಡಲು ಕಾರಣ ಈಗ ಬಯಲಾಗಿದೆ. ನಾಯಿ ತನ್ನ ಬಾಲವನ್ನೇ ಬೇಟೆಯಾಡಿದಂತೆ ಬಂಡವಾಳ ಆರ್ಥಿಕವ್ಯವಸ್ಥೆ ವಿರಸಗಳಿಂದ ಪಾರಾಗಲು ಅಶಕ್ತವಾಗಿದೆ. ಸಾಲುಸಾಲಾಗಿ ಸಂಭವಿಸುತ್ತಿರುವ ಆರ್ಥಿಕ ಅವ್ಯವಸ್ಥೆ, ನಿರುದ್ಯೋಗ, ಮತ್ತು ಆರ್ಥಿಕಮುಗ್ಗಟ್ಟು ಜನಸಮುದಾಯಕ್ಕೆ ಬಂಡವಾಳಶಾಹಿ ವ್ಯವಸ್ಥೆಯು ನೀಡಿರುವ ವರಪ್ರಸಾದಗಳಾಗಿವೆ. ಇವುಗಳನ್ನು ತೊಡೆಯಲು ಬಂಡವಾಳ ಆರ್ಥಿಕವ್ಯವಸ್ಥೆಯಿಂದ ಸಾಧ್ಯವೇ ಇಲ್ಲ. ಈ ವ್ಯವಸ್ಥೆಯ ಬೆನ್ನಿಗೇ ಅಂಟಿದ ಬೇತಾಳನಂತೆ ಅವು ಜನಸಮುದಾಯವನ್ನು ಕಾಡುತ್ತವೆ. ಈ ವೈಪರೀತ್ಯಗಳಿಗೂ, ವಿರಸಗಳಿಗೂ ಬಂಡವಾಳಶಾಹಿ ವ್ಯವಸ್ಥೆಯ

ಉತ್ಪಾದನಾಕ್ರಮವೇ (Mode of Production) ಮೂಲ ಕಾರಣ ವಾಗಿದೆ.

ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿ ಉತ್ಪಾದನಾ ಸಾಧನಗಳು (Means of Production) ಖಾಸಗೀ ಸ್ವಾಮ್ಯಕ್ಕೆ ಒಳಪಟ್ಟಿವೆ. ಅವುಗಳಿಂದ ಉತ್ಪಾದನೆಯಾಗುವ ಸರಕುಸಾಮಗ್ರಿಗಳು, ಲಾಭ ಎಲ್ಲವೂ ಬಂಡವಾಳಗಾರನಿಗೆ ಸೇರಿದುವು. (2 ನೇ ಚಿತ್ರ ನೋಡಿ). ಅವುಗಳ ಮೇಲೆ ಸಂಪೂರ್ಣ ಹತೋಟಿಯನ್ನು ಬಂಡವಾಳಗಾರನು ಹೊಂದಿದ್ದಾನೆ. ಯಾವ ರೀತಿಯಲ್ಲಾದರೂ ಅವನ್ನು ಉಪಯೋಗಿಸುವ ಹಕ್ಕು ಬಂಡವಾಳಗಾರನಿಗೆ ಇದೆ. ಆದರೆ ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿ ಉತ್ಪಾದನೆ ಒಂದೆಡೆಯಲ್ಲಿ ಸೇರಿ ದುಡಿಯುವ ಕಾರ್ಮಿಕರಿಂದ ನಡೆಯುತ್ತದೆ. ಉತ್ಪಾದನಾ ಸಾಧನಗಳು ಮತ್ತು ಅವುಗಳಿಂದ ಬರುವ ಉತ್ಪತ್ತಿ ಬಂಡವಾಳಗಾರನಿಗೆ ಸೇರಿದವಾದರೂ ಉತ್ಪಾದನೆ ಮಾತ್ರ ಸಾಮೂಹಿಕವಾಗಿ ಹತ್ತಾರು ಜನರಿಂದ ಮಾತ್ರ ಆಗಬೇಕಾಗಿದೆ. ಆದರೆ ಈ ದುಡಿಮೆಯವರಿಗೆ ಉತ್ಪಾದನಾ ಸಾಧನಗಳ ಮೇಲೆ ತಯಾರಾಗುವ ಸರಕುಸಾಮಗ್ರಿಗಳ ಮೇಲೆ ಮತ್ತು ಬರುವ ಲಾಭದಮೇಲೆ ಯಾವ ಹಕ್ಕಾಗಲೀ ಅಥವಾ ಹತೋಟಿಯಾಗಲೀ ಇಲ್ಲ; ಕೂಲಿಗೆ ಮಾತ್ರ ಬಾಧ್ಯರು. ಈ ದ್ವಯವೇ — **ಸಾಮೂಹಿಕವಾಗಿ ನಡೆಯುವ ಉತ್ಪಾದನೆ, ಆದರೆ ಉತ್ಪಾದನೆಯ ಫಲದಮೇಲೆ ಇರುವ ಸ್ವಾಮ್ಯ ಮತ್ತು ವೈಯಕ್ತಿಕ ಅಪಹರಣ** (Social character of the means of productoin and individual appropriation) — ಶೋಷಣೆಗೆ ಒಳಗಾದ ಕಾರ್ಮಿಕರು ತಾವು ಉತ್ಪಾದನೆಮಾಡಿದ ವಸ್ತುಗಳನ್ನು ಕೊಂಡು ಜೀವಿಸಲು ಅಶಕ್ತರನ್ನಾಗಿ ಮಾಡಿವೆ.[1] ಜೊತೆಗೆ, ಬಂಡವಾಳಶಾಹಿ ವ್ಯವಸ್ಥೆ ತಂದೊಡ್ಡಿರುವ ಆರ್ಥಿಕ ಅಭದ್ರತೆ, ನಿರುದ್ಯೋಗ, ಆರ್ಥಿಕ ಏರಿಳಿತಗಳು ಮತ್ತು ಯುದ್ಧಗಳು ಕಾರ್ಮಿಕವರ್ಗದ ಜೀವನವನ್ನು ಪುಟದ ಚೆಂಡಿನಂತೆ ಮಾಡಿವೆ. ಆದರೆ, ಕಾರ್ಮಿಕವರ್ಗಕ್ಕೆ ಶೋಷಣೆ ಅರಿವಾಗಿ, ಯಾತನೆಯನ್ನು ಸಹಿಸಲಾರದೆ, ಬಂಡವಾಳಶಾಹಿ ವ್ಯವಸ್ಥೆಯನ್ನೇ ಪ್ರಶ್ನಿಸಿದ್ದಾರೆ.

---

1. ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿ ಉತ್ಪಾದನೆಯ ಸ್ವರೂಪವನ್ನು ನೆನಪಿನಲ್ಲಿಡುವುದು ಅತ್ಯಗತ್ಯ. ಉದಾಹರಣೆಗೆ—ಒಂದು ಹತ್ತಿ ಕಾರ್ಖಾನೆ

ಯನ್ನು ತೆಗೆದುಕೊಳ್ಳೋಣ. ಇಲ್ಲಿ ಕಾರ್ಖಾನೆಯ ಕಟ್ಟಡ, ಯಂತ್ರಗಳು, ದಾಸ್ತಾನು ಮತ್ತು ಇತರ ಸಾಮುಗ್ರಿ ವಿಶೇಷಗಳು ಎಲ್ಲವೂ ಒಬ್ಬ ಧನಿಕನಿಗೊ (ಬಂಡವಾಳಗಾರ) ಅಥವ ಹಲವು ಪಾಲುದಾರರಿರುವ (ಷೇರ್‌ಹೋಲ್ಡರ್ಸ್) ಕಂಪನಿಗೋ ಸೇರಿದ್ದಾಗಿವೆ. ಬೇರೊಂದು ಮಾತಿನಲ್ಲಿ ಹೇಳುವುದಾದರೆ ಕಾರ್ಖಾನೆಯ ಸಾಮುಗ್ರಿ ವಿಶೇಷಗಳೆಲ್ಲವೂ ಖಾಸಗೀ ಸ್ವಾಮ್ಯಕ್ಕೆ ಒಳಪಟ್ಟಿದೆ. ಆದರೆ ಇವರಲ್ಲಿ ಯಾರೂ ಕಾರ್ಖಾನೆಯಲ್ಲಿರುವ ನೂರಾರು ಕೂಲಿಗಳಂತೆ ಕೆಲಸಮಾಡುವುದಿಲ್ಲ. ಮೇಲ್ವಿಚಾರಕರಾಗಿಯೋ ಅಥವ ಅನೇಕವೇಳೆ ಮೇಲ್ವಿಚಾರಣಾ ಕೆಲಸವನ್ನೂ ಸಹ ವೇತನಕ್ಕಿರುವ ಬೇರೊಬ್ಬನಿಗೋ ವಹಿಸಿರುವುದೂ ಉಂಟು.

ಈ ನೂರಾರು ಕೂಲಿಗಳು ಕೆಲಸಮಾಡಿ ಬಟ್ಟೆಯನ್ನು ತಯಾರಿಸುತ್ತಿದ್ದರೂ ಅವರಾರಿಗೂ ಕಾರ್ಖಾನೆಯು ಸೇರಿದ್ದಲ್ಲ; ಅವರು ಕೆಲಸಗಾರರು ಮಾತ್ರ; ಅವರು ಮಾಡುವ ಕೆಲಸಕ್ಕೆ ಕೂಲಿಯನ್ನು ಹೊಂದಲು ಮಾತ್ರ ಬಾಧ್ಯರು. ಹೀಗಾಗಿ, ಕಾರ್ಖಾನೆಯಲ್ಲಿ ತಯಾರಾಗುವ ಬಟ್ಟೆಯಲ್ಲಿ ಎರಡು ಅಂಶಗಳು ಜೊತೆಗೂಡಿವೆ. ಒಂದನೆಯದಾಗಿ, ಸಾಮೂಹಿಕ ಉತ್ಪಾದನೆ. ಮಾಲೀಕ ಅಥವ ಮಾಲೀಕರಿಗೆ ಕಾರ್ಖಾನೆ ಸೇರಿದ್ದಾದರೂ ಅವರೇ ಬಟ್ಟೆಯನ್ನು ತಯಾರಿಸಲು ಅಶಕ್ತರು. ನೂರಾರು ಜನ ಕೂಲಿಗಳ ಸಹಾಯ ಬೇಕೇ ಬೇಕು. ಇವರಿಂದಾಗಿ, ಬಟ್ಟೆಯ ಉತ್ಪಾದನೆ ನೂರಾರು ಜನರು ಒಂದೆಡೆಸೇರಿ, ದುಡಿದು, ತಯಾರಿಸಿದ ವಸ್ತು ಆಗಿದೆ. ಎರಡನೆಯದಾಗಿ, ತಯಾರಾಗುವ ಬಟ್ಟೆ ನೂರಾರು ಜನರು ಒಂದೆಡೆ ಸೇರಿ ಪರಸ್ಪರ ಸಹಾಯದಿಂದ ತಯಾರಿಸಿದ ವಸ್ತುವಾದರೂ, ಅವರಲ್ಲಿ ಯಾರಿಗೂ ತಯಾರಾದ ಬಟ್ಟೆ ತನಗೆ ಸೇರಿದ್ದೆಂದು ಹೇಳಿಕೊಳ್ಳುವ ಹಕ್ಕು ಇಲ್ಲ. ಬಟ್ಟೆಯು ಮಾಲೀಕನಿಗೆ ಸೇರಿದ್ದಾಗಿದೆ.

ಈ ಪರಿಣಾಮವಾಗಿ ಬಂಡವಾಳ ಆರ್ಥಿಕ ವ್ಯವಸ್ಥೆಯ ಆಗಮನದ ಆರಂಭದಿಂದ ಉತ್ಪಾದನಾ ಸ್ವರೂಪವೇ ಬದಲಾವಣೆ ಹೊಂದಿದೆ. ಒಂದನೆಯದಾಗಿ, ಬಂಡವಾಳಶಾಹಿ ವ್ಯವಸ್ಥೆ ಉತ್ಪಾದನೆಯಲ್ಲಿ ಒಂದು ಬಗೆಯ ಸಮಾಜೀಕರಣವನ್ನು ತಂದಿದೆ (Socialised Production). ಬಂಡವಾಳಗಾರನು ಲಾಭದಾಸೆಯಿಂದ ಉತ್ಪಾದನೆಯನ್ನು ಕೈಗೊಂಡಿದ್ದಾನೆ. ಇದಕ್ಕಾಗಿ ನೂರಾರು ಜನ ಕೂಲಿಯವರನ್ನು ನೇಮಿಸಿಕೊಂಡಿದ್ದಾನೆ. ಕೂಲಿಗಾಗಿ ತಮ್ಮ ದುಡಿಮೆಯನ್ನು ವಿಕ್ರಯಮಾಡುವ ಈ ನೂರಾರು ಜನರು ಒಂದೆಡೆಸೇರಿ ಸಾಮೂಹಿಕವಾಗಿ ದುಡಿಮೆಮಾಡುತ್ತಾ ಉತ್ಪಾದನೆಯನ್ನು ನಡೆಸುತ್ತಿದ್ದಾರೆ. ಆದರೆ ಈ ದುಡಿಮೆಗಾರರಿಗೆ ಉತ್ಪಾದನಾ ಸಾಧನಗಳ ಮೇಲೆ (ಕಾರ್ಖಾನೆ, ಯಂತ್ರಗಳು, ಮತ್ತು ಇತರ ಸಾಮುಗ್ರಿಗಳು) ಯಾವ ಸ್ವಾಮ್ಯವೂ ಇಲ್ಲ; ಉತ್ಪಾದನಾ ಸಾಧನಗಳೆಲ್ಲವೂ ಮಾಲೀಕನಿಗೆ ಸೇರಿವೆ. ಬೇರೆ ಮಾತುಗಳಲ್ಲಿ ಕೇಳುವುದಾದರೆ, ಯಾವ ಸ್ವಾಮ್ಯವನ್ನೂ ಹೊಂದಿರದ ನೂರಾರು ಜನ ಕೂಲಿಯವರು ಉತ್ಪಾದನೆಯನ್ನು ಕೈಗೊಂಡಿದ್ದಾರೆ; ಉತ್ಪಾದನೆ

ಒಬ್ಬನಿಂದ ನಡೆಯದೆ, ಒಟ್ಟಿನಲ್ಲಿ ಪರಸ್ಪರವಾಗಿ ಮತ್ತು ಸಾಮೂಹಿಕವಾಗಿ ನೂರಾರು ಜನ ದುಡಿಮೆಗಾರರು ನಡೆಸುತ್ತಿದ್ದಾರೆ; ಈ ನೂರಾರು ಜನ ದುಡಿಮೆಗಾರರು ಉತ್ಪಾದನಾ ಸಾಧನಗಳನ್ನು ಸಾಮೂಹಿಕವಾಗಿ ಉಪಯೋಗಿಸಿ ಉತ್ಪಾದನೆಯನ್ನು ನಡೆಸುತ್ತಿದ್ದಾರೆ; ಅವುಗಳ ಉಪಯೋಗ ಸಮಾಜೀಕರಣವಾಗಿದೆ. ಎರಡನೆಯದಾಗಿ ಉತ್ಪಾದನೆಯಲ್ಲಿ ಸಾಮೂಹಿಕ ದುಡಿಮೆ ಮತ್ತು ಉತ್ಪಾದನ ಸಾಧನಗಳಲ್ಲಿ ಸಾಮೂಹಿಕ ಉಪಯೋಗ ಇವುಗಳು ಇದ್ದರೂ, ಬಂಡವಾಳಗಾರನು ಈ ಉತ್ಪಾದನಾ ಸಾಧನಗಳ ಒಡೆಯನಾಗಿಯೂ ಮತ್ತು ಉತ್ಪಾದನೆಯ ಮೇಲೆ ಸಂಪೂರ್ಣ ಹತೋಟಿಯನ್ನು ಹೊಂದಿಯೂ ಇದ್ದಾನೆ. ಉತ್ಪಾದನೆ ಯಾವ ವಸ್ತು ಮಾಲೀಕನ ಒಡೆತನಕ್ಕೆ ಸೇರಿದ್ದು; ಕೂಲಿಗಾರರಿಗೆ ಅದರಮೇಲೆ ಯಾವ ಸ್ವಾಮ್ಯವೂ ಇಲ್ಲ, ಉತ್ಪಾದನೆಯಿಂದ ದೊರಕುವ ಲಾಭವೆಲ್ಲವೂ ಬಂಡವಾಳಗಾರನಿಗೆ ಸೇರುತ್ತದೆ.

ಈ ತೆರನಾದ ಉತ್ಪಾದನೆ ಹೊಸತರಲ್ಲಿ ಹೊಸತು. ಬಂಡವಾಳಶಾಹಿ ಉತ್ಪಾದನಾ ಕ್ರಮವು (Capitalistic Mode of Production) ತಂದಿರುವ ಬದಲಾವಣೆಗಳನ್ನು ತಿಳಿಯಲು ಬಂಡವಾಳಶಾಹಿ ವ್ಯವಸ್ಥೆ ಆಗಮಿಸುವುದಕ್ಕೆ ಮುಂಚಿತವಾಗಿ ಇದ್ದ ಉತ್ಪಾದನಾ ಕ್ರಮವನ್ನು ಜ್ಞಾಪಿಸಿಕೊಳ್ಳಬೇಕು. ನೂರಾರು ಜನರು ಒಂದೆಡೆ ಸೇರಿ ದುಡಿಮೆ ಮಾಡುತ್ತಿರಲಿಲ್ಲ. ಕೂಲಿಗಾಗಿ ದುಡಿಮೆಯ ವಿಕ್ರಯ ವಿರಳವಾಗಿತ್ತು; ನೂರಾರು ಜನರ ದುಡಿಮೆಯನ್ನು ಕೊಳ್ಳುವ ಬಂಡವಾಳಗಾರನೂ ಇರಲಿಲ್ಲ. ಪ್ರಾಚೀನ ಕಾಲದಲ್ಲಿದ್ದ ಗುಲಾಮರ ದುಡಿಮೆಯನ್ನು ಬಿಟ್ಟರೆ, ಯಾವ ಕೂಲಿಗಾರನನ್ನೂ ನೇಮಿಸಿಕೊಳ್ಳದೆ ಸ್ವಾವಲಂಬಿ ಅಥವಾ ಆತನ ಸಂಸಾರದವರ ಸಹಾಯವನ್ನು ಪಡೆದು ಮಾಡುವ ಉತ್ಪಾದನೆ ಮಾತ್ರ ಇತ್ತು. ಉತ್ಪಾದನೆಯಲ್ಲಿ ತಾಂತ್ರಿಕ ಉಪಕರಣಗಳ ಉಪಯೋಗವೂ ಸಹ ಅತಿ ಕಡಿಮೆ ಇತ್ತು, ಅವು ಅಷ್ಟು ವೃದ್ಧಿಯೂ ಆಗಿರಲಿಲ್ಲ. ಪದಾರ್ಥಗಳನ್ನು ಸ್ವಂತ ಉಪಯೋಗಕ್ಕಾಗಿ ತಯಾರಿಸುತ್ತಿದ್ದರು; ಯಾವ ಲಾಭದ ಆಸೆಯೂ ಉತ್ಪಾದನೆಯಲ್ಲಿ ಇರಲಿಲ್ಲ. ಮತ್ತು ಮುಖ್ಯವಾಗಿ ಉತ್ಪಾದನೆಯಲ್ಲಿ ಯಾವ ದ್ವಯವೂ ಇರಲಿಲ್ಲ. ಉತ್ಪಾದನಾ ಸಾಧನಗಳು ಒಬ್ಬನ ಸ್ವಾಮ್ಯಕ್ಕೆ ಸೇರಿದ್ದಾಗಿ, ಉತ್ಪಾದನೆಯು ಮಾತ್ರ ಬೇರೊಬ್ಬರಿಂದ ನಡೆಯುತ್ತಿರಲಿಲ್ಲ. ಯಾವನು ಉತ್ಪಾದನಾ ಸಾಧನಗಳಮೇಲೆ ಸ್ವಾಮ್ಯವನ್ನು ಹೊಂದಿದ್ದನೋ ಆತನೇ ತನ್ನ ದುಡಿಮೆಯಿಂದ ಉತ್ಪಾದನೆಯನ್ನು ನಡೆಸುತ್ತಿದ್ದನು. ಬಂಡವಾಳಶಾಹಿ ವ್ಯವಸ್ಥೆ ತನ್ನನಾಗೋಲೋಟದ ಅಭಿವೃದ್ಧಿಯಲ್ಲಿ ಈ ಸ್ವಾವಲಂಬಿ ಉತ್ಪಾದನಾ ಕ್ರಮವನ್ನು ಮೂಲೆಗೆ ತಳ್ಳಿದೆ, ಸಾಮೂಹಿಕವಾಗಿ ನೂರಾರು ಜನ ಕೂಲಿಯವರಿಂದ ನಡೆಯುವ ಉತ್ಪಾದನಾ ಕ್ರಮವನ್ನು ತಂದಿದೆ.

ಆದುದರಿಂದ, ಸಮಾಜವಾದೀ ವ್ಯವಸ್ಥೆಯಲ್ಲಿ ಉತ್ಪಾದನಾ ಸಾಧನಗಳನ್ನು ಹೊಸದಾಗಿ ಸಮಾಜೀಕರಣ ಮಾಡಬೇಕಾಗಿಲ್ಲ. ಉತ್ಪಾದನೆಯಲ್ಲಿ ಸಮಾಜೀ

ಈ ಪ್ರಶ್ನೆಯೇ ಆಧುನಿಕ ಸಮಾಜವಾದದ ಮೂಲವಾಗಿದೆ. ಉತ್ಪಾದನಾ ಸಾಧನಗಳನ್ನು ಖಾಸಗಿಯಾಗಿ ಹೊಂದಿ ಲಾಭವನ್ನು ಅಪಹರಣ ಮಾಡುತ್ತಿರುವ ಬಂಡವಾಳವರ್ಗದಮೇಲೆ ಹೋರಾಟ ಉಂಟಾಗಿದೆ. ಸಾಮೂಹಿಕ ದುಡಿಮೆಯಿಂದ ಆಗುತ್ತಿರುವ ಉತ್ಪಾದನೆಯ ಫಲವೂ ಸಹ ಕಾರ್ಮಿಕರಿಗೇ ಸೇರಬೇಕೆಂಬ ಚಳವಳಿ ಹುಟ್ಟಿದೆ. ಉತ್ಪಾದನಾ ಸಾಧನಗಳ ಮೇಲಿರುವ ಖಾಸಗೀ ಸ್ವಾಮ್ಯವನ್ನು ನಾಶಪಡಿಸಿದ ಹೊರತೂ ಕಾರ್ಮಿಕ ವರ್ಗದ ವಿಮೋಚನೆ ಅಸಾಧ್ಯವೆಂಬ ಅರಿವೂ ಉಂಟಾಗಿದೆ. **ಒಂದೇ ಮಾತಿನಲ್ಲಿ ಹೇಳುವುದಾದರೆ ಅಪಹರಣವನ್ನೂ, ಶೋಷಣೆಯನ್ನೂ ನಾಶಮಾಡುವುದೇ ಚಳವಳಿಯ ಉದ್ದೇಶವಾಗಿದೆ. ಸಮಾಜವಾದ ಈ ಚಳವಳಿಯ ಪ್ರತಿಬಿಂಬವಾಗಿದೆ.** ಬಂಡವಾಳಶಾಹಿ ವ್ಯವಸ್ಥೆ ಜನ್ಮಕೊಟ್ಟ ಶಕ್ತಿಯೇ—ಕಾರ್ಮಿಕವರ್ಗ—ಬಂಡವಾಳಶಾಹಿ ವ್ಯವಸ್ಥೆಯನ್ನು ಚ್ಯುತಿಗೊಳಿಸಲು ಹೊರಟಿದೆ.

ಮಾರ್ಕ್ಸ್—ಏಂಗೆಲ್ಸರ ವೈಜ್ಞಾನಿಕ ಸಮಾಜವಾದ ತತ್ತ್ವ ಇದೇ ಆಗಿದೆ. ಮಾರ್ಕ್ಸ್-ಏಂಗೆಲ್ಸರು ಬಂಡವಾಳಶಾಹಿ ವ್ಯವಸ್ಥೆಯ ಚಲನೆವಲನೆಗಳನ್ನು ಪರೀಕ್ಷಿಸುವುದರ ಮೂಲಕ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು

ಕರಣವನ್ನು ಆಗಲೇ ಬಂಡವಾಳಶಾಹಿ ವ್ಯವಸ್ಥೆಯು ತಂದಿದೆ ಮತ್ತು ಪ್ರತಿನಿತ್ಯ ತರುತ್ತಿದೆ. ಸಮಾಜವಾದಿಗಳು ಉತ್ಪಾದನಾ ಸಾಧನಗಳನ್ನು ಸಮಾಜೀಕರಣ ಮಾಡಬೇಕೆನ್ನುವುದರ ಅರ್ಥ ಇಷ್ಟೇ ಆಗಿದೆ. ಉತ್ಪಾದನ ಸಾಧನಗಳ ಮೇಲಿರುವ ಖಾಸಗೀ ಸ್ವಾಮ್ಯವನ್ನು ನಾಶಪಡಿಸುವುದಾಗಿದೆ, ಸಮಾಜೀಕರಣವಾಗಿರುವ ಮತ್ತು ಆಗುತ್ತಿರುವ ಉತ್ಪಾದನೆಯನ್ನು ಸಾಮೂಹಿಕ ಅಥವ ಸಮಾಜದ ಸ್ವಾಮ್ಯಕ್ಕೆ ಒಳಪಡಿಸುವುದಾಗಿದೆ, ಮತ್ತು ಉತ್ಪಾದನೆಯಲ್ಲಿ ಬಂಡವಾಳ ಉತ್ಪಾದನಾ ಕ್ರಮ ತಂದಿರುವ ವ್ಯಯವನ್ನು ನಾಶಪಡಿಸುವುದಾಗಿದೆ.

ಬಂಡವಾಳಶಾಹಿ ವ್ಯವಸ್ಥೆ ಬೆಳೆದು ಬಂದ ಹಾಗೆಲ್ಲಾ ಕೈಗಾರಿಕಾ ರಂಗದಲ್ಲಿ ಮತ್ತು ಬೇಸಾಯ ರಂಗದಲ್ಲಿ ಸಾಮೂಹಿಕ ಉತ್ಪಾದನೆಯನ್ನು ತಂದಿದೆ. ಲಾಭದಾಹ ಹೆಚ್ಚು ಹೆಚ್ಚು ಸಾಮೂಹಿಕ ಉತ್ಪಾದನೆಗೂ, ತಾಂತ್ರಿಕ ಆಂದೋಳನಕ್ಕೂ ಎಡೆಕೊಟ್ಟಿದೆ. ಹಾಗೆಯೇ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ದ್ವಯ ಶೋಷಣೆಯನ್ನು ಅಧಿಕಗೊಳಿಸಿದೆ.

ಆದರೆ, ಪ್ರತಿ ದೇಶದಲ್ಲೂ ಈ ಬಂಡವಾಳ ಉತ್ಪಾದನಾ ಕ್ರಮ ತಂದಿರುವ ಬದಲಾವಣೆಗಳನ್ನು ಒಟ್ಟಿನಲ್ಲೂ ಮತ್ತು ಪ್ರತ್ಯೇಕವಾಗಿಯೂ ವಿಮರ್ಶಿಸಬೇಕು.

ನುಡಿದಂತೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಸುಗಮವೂ ಮತ್ತು ಸ್ವಯಂ ಹೊಂದಾಣಿಕೆಯೂ ಅಸಾಧ್ಯವೆಂದರು ; ಬಂಡವಾಳ ಆರ್ಥಿಕವ್ಯವಸ್ಥೆಯಲ್ಲಿರುವ ವಿರಸಗಳು ಅದರ ಒಳವನ್ನು ದುಸ್ಸಾಧ್ಯಗೊಳಿಸಿವೆ ಎಂದರು. ಬಂಡವಾಳಶಾಹಿ ವ್ಯವಸ್ಥೆ ಜನ್ಮಕೊಟ್ಟಿರುವ ಕಾರ್ಮಿಕವರ್ಗ ಬಂಡವಾಳಶಾಹಿ ವ್ಯವಸ್ಥೆಯನ್ನು ನಾಶಪಡಿಸಿ ಹೊಸ ವ್ಯವಸ್ಥೆಯನ್ನು ತರುವವು ಎಂದು ಹೇಳಿದರು. ಹಾಗೆ ಹೊಸ ವ್ಯವಸ್ಥೆ ಮೂಡಲು ಬಂಡವಾಳಶಾಹಿ ವ್ಯವಸ್ಥೆಯಲ್ಲಿಯೇ ಅವಕಾಶಗಳು—ಸಾಮೂಹಿಕಉತ್ಪಾದನೆ. ತಾಂತ್ರಿಕ ಆಂಧೋಳನ, ಸ್ವಾಮ್ಯ ರಹಿತವಾದ ಕಾರ್ಮಿಕವರ್ಗ—ಪರಿಪಕ್ವವಾಗುತ್ತಿರುವುದಾಗಿ ತಿಳಿಸಿದರು.

ಆರಂಭದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಪುರೋಗಾಮಿಯಾಗಿ ಪ್ರಪಂಚವನ್ನು ಆಕ್ರಮಿಸಿತು, ಸಂಪತ್ತನ್ನು ವೃದ್ಧಿಮಾಡಿತು. ಆದರೆ ಅದರ ಬೆಳವಣಿಗೆಯಲ್ಲಿ ಹೊಸ ಉತ್ಪಾದನಾ ಶಕ್ತಿಗಳು, ತಾಂತ್ರಿಕ ಆಂಧೋಳನ, ಮತ್ತು ಸಾಮೂಹಿಕ ಉತ್ಪಾದನೆಯನ್ನು ತಂದಿತು. ಕಾರ್ಮಿಕವರ್ಗಕ್ಕೆ ಜನ್ಮಕೊಟ್ಟಿತು. ಈಗ ಎರಡು ಮಾರ್ಗಗಳು ಉಳಿದಿವೆ: ಬಂಡವಾಳಶಾಹಿ ಉತ್ಪಾದನಾ ಕ್ರಮವಿರಬೇಕು-ಖಾಸಗೀ ಸ್ವಾಮ್ಯ, ಲಾಭಕ್ಕಾಗಿ ಉತ್ಪಾದನೆ. ಲಾಭದ ವೈಯಕ್ತಿಕ ಅಪಹರಣ ಶೋಷಣೆ ಮತ್ತು ಕಾರ್ಮಿಕವರ್ಗದ ದಾಸ್ಯ, —ಇಲ್ಲವೇ ಬಂಡವಾಳಶಾಹಿ ಉತ್ಪಾದನಾಕ್ರಮ ನಾಶಹೊಂದಬೇಕು. ಬಂಡವಾಳಶಾಹಿ ಉತ್ಪಾದನಾಕ್ರಮವನ್ನು ಉಳಿಸಿಕೊಳ್ಳಲು ಸ್ವಾಮ್ಯವರ್ಗ ಧೃಢನಿಶ್ಚಯಮಾಡಿದೆ, ಆದರೆ ಎಚ್ಚೆತ್ತ ಕಾರ್ಮಿಕವರ್ಗ ಬಂಡವಾಳಶಾಹಿ ಉತ್ಪಾದನಾ ಕ್ರಮದ ನಾಶಕ್ಕಾಗಿ ಪಣತೊಟ್ಟಿವೆ. ಸ್ವಾಮ್ಯವರ್ಗಕ್ಕೂ ಕಾರ್ಮಿಕವರ್ಗಕ್ಕೂ ಹೋರಾಟ ಹತ್ತಿದೆ. ಈ ಹೋರಾಟದಿಂದ ಇತಿಹಾಸವೇ ಬದಲಾವಣೆಯಾಗುತ್ತಿದೆ. ಕಾರ್ಮಿಕರು ಘನ್ಮನಾಗಬೇಕಾದರೆ ಶೋಷಣೆ ನಾಶಹೊಂದಬೇಕು ; ಅದಕ್ಕೆ ಆಸ್ಪದಕೊಟ್ಟಿರುವ ಖಾಸಗೀ ಸ್ವಾಮ್ಯ ಹೋಗಬೇಕು. ದಂಗೆ ಎದ್ದಿರುವ ಕಾರ್ಮಿಕರ ಗುರಿ ಶೋಷಣೆಯನ್ನೂ ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವನ್ನೂ ನಾಶಪಡಿಸುವುದೇ ಆಗಿದೆ. ಉತ್ಪಾದನಾ ಸಾಧನಗಳ ಮೇಲೆ ಖಾಸಗೀ ಸ್ವಾಮ್ಯವಿಲ್ಲದ, ಶೋಷಣೆಗೆ ಅವಕಾಶವಿಲ್ಲದ, ಆರ್ಥಿಕ ವ್ಯವಸ್ಥೆ ಬೇಕಾಗಿದೆ. ಇದೇ ಸಮಾಜವಾದೀ ಆರ್ಥಿಕವ್ಯವಸ್ಥೆಯಾಗಿವೆ. ಸಮಾಜದ ಉತ್ಪಾದನಾ ಸಾಧನಗಳನ್ನು ಖಾಸಗಿಯಾಗಿ ಕೆಲವರು

ಹೊಂದಿರದೆ, ಎಲ್ಲರಿಗೂ ಸೇರಿ ಸಮುದುಡಿಮೆಗಾರರಾಗಿ ಉತ್ಪಾದನೇ ನಡೆಸುವುದೇ ಸಮಾಜವಾದೀ ಆರ್ಥಿಕವ್ಯವಸ್ಥೆಯಾಗಿದೆ.

ಆದುದರಿಂದ ಸಮಾಜವಾದದ ಉದಯು ವಿರಸ ತಾಳಿರುವ ಬಂಡವಾಳ ಆರ್ಥಿಕಶಾಹಿ ವ್ಯವಸ್ಥೆಯ ಅಂತ್ಯ. ಬಂಡವಾಳಶಾಹಿ ವ್ಯವಸ್ಥೆ ಮೂಡುವವರೆಗೂ ಸಮಾಜವಾದ ಬರಲು ಸಾಧ್ಯವೇ ಇಲ್ಲ. ಈಗ ಅದು ಅನಿವಾರ್ಯವಾಗಿದೆ. ಬಂಡವಾಳಶಾಹಿ ಆರ್ಥಿಕ ವ್ಯವಸ್ಥೆ ದಾರಿಮಾಡಿ ಕೊಟ್ಟಿದೆ. ಆದುದರಿಂದ ಬಂಡವಾಳಶಾಹಿ ವ್ಯವಸ್ಥೆಯ ಮುನ್ನ ಸಮಾಜವಾದ ಬೇಕೆನ್ನುವುದು ಕಲ್ಪನೆ ಆಗುತ್ತದೆ. ಅದು ವಾಸ್ತವವಾಗಿ ಸಾಧ್ಯವಿಲ್ಲ. ಇದೇ ಮಾರ್ಕ್ಸ್-ಎಂಗೆಲ್ಸರ ವೈಜ್ಞಾನಿಕ ಸಮಾಜವಾದೀ ಸಿದ್ಧಾಂತವಾಗಿದೆ.

ಅಧ್ಯಯನ :

Political Economy : J. Eaton :
Current Book House, Bombay.

Marx's Capital : A. Leontiev :
International Publishers, N. Y.

Marxian Economics : Untermann :
Charles H. Kerr & Com. Chicago.

On Capital : Engels :
L & W., London.

Capital Vol. 1, 2 and 3 : Marx (First Volume :
F. L. P. H., Moscow; Second and Third Volumes :
Charles H. Kerr. & Com, Chicago.)

Theories of Surplus Value : Marx :
L & W., London.

Marx as an Economist : M. Dobb : P. P. H., Bombay.

Economics of Capitalism : M Dobb : P. P. H., Bomby.

ಕಾರ್ಯರಂಗದಲ್ಲಿ ಮಾರ್ಕ್ಸ್‌ವಾದ

ಅಧ್ಯಾಯ 5

ಮಾರ್ಕ್ಸ್‌ವಾದ (ಆಧುನಿಕ ಸಮಾಜವಾದ) ಕೇವಲ ತತ್ತ್ವನಿರೂಪಣೆ (Theory) ಯಲ್ಲ. ಕಾರ್ಯಾಚರಣೆಗೆ (Practice) ಪ್ರಾಧಾನ್ಯತೆ ಇತ್ತಿದೆ. ಇದು ಮಾರ್ಕ್ಸ್-ಎಂಗೆಲ್ಸರ ಜೀವನದಲ್ಲೂ, ಅವರ ತತ್ತ್ವದ ಪ್ರತಿಯೊಂದು ಅಂಶದಲ್ಲೂ ಕಂಡು ಬರುತ್ತದೆ. ವಿಮರ್ಶೆ ಮತ್ತು ಟೀಕೆ ಇವುಗಳಿಂದಲೇ ಬಂಡವಾಳ ಆರ್ಥಿಕವ್ಯವಸ್ಥೆಯನ್ನು ವಿನಾಶಗೊಳಿಸುವುದು ಅಸಾಧ್ಯವೆಂದು ಸೂಚಿಸಿದರು; ಕಾರ್ಮಿಕವರ್ಗವನ್ನು ಸಂಘಟಿಸಲು, ಕಾರ್ಯೋನ್ಮುಖರನ್ನಾಗಿ ಮಾಡಲು ಮಾರ್ಕ್ಸ್-ಎಂಗೆಲ್ಸರು ಕಂಕಣ ಬದ್ಧರಾದರು. ರಾಜಕೀಯದಲ್ಲಿ ಕಾರ್ಮಿಕರ ಪ್ರವೇಶ, ಕಾರ್ಮಿಕರ ಹಿತಸಂರಕ್ಷಣೆ ಮಾಡಬಲ್ಲ ಕಾರ್ಮಿಕರ ರಾಜಕೀಯ ಪಕ್ಷ, ಇತರ ಶೋಷಿತವರ್ಗಗಳೊಡನೆ ಸಹಕಾರ ಮತ್ತು ಚಳವಳಿ ಅತ್ಯಗತ್ಯವೆಂದರು. ತಮ್ಮ ತತ್ತ್ವದ ಬಗ್ಗೆ, ಕಾರ್ಮಿಕವರ್ಗದ ಕರ್ತವ್ಯಗಳ ಬಗ್ಗೆ ಅವರು ಇತ್ತಿರುವ ವಿವರಣೆಗಳು ಅಮರವಾಗಿವೆ.

ಒಂದನೆಯದಾಗಿ, ಮಾರ್ಕ್ಸ್‌ವಾದ ಕಾರ್ಮಿಕರ ಚಳವಳಿಗೆ ಕೈಗನ್ನಡಿ. ಬಂಡವಾಳ ಆರ್ಥಿಕವ್ಯವಸ್ಥೆಯ ಚಲನವಲನಗಳನ್ನು, ಅದರ ಆಗುಹೋಗುಗಳನ್ನು ಮತ್ತು ಅದರ ವಿನ್ಯಾಸಗಳನ್ನು ಕಾರ್ಮಿಕರಿಗೆ ತಿಳಿಸಲು ನಿರ್ಮಿತವಾಗಿರುವ ಒಂದು ವಿಮರ್ಶಾಸಾಧನ; ರಚಿತವಾಗಿರುವ ತತ್ತ್ವ ಕಾರ್ಮಿಕರ ಕಾರ್ಯಾಚರಣೆಗೆ ಸಹಕಾರಿ ಮತ್ತು ದಿಕ್‌ಸೂಚಿ. ಆದುದರಿಂದ ಪರಿಸ್ಥಿತಿಗಳು ರೂಪಗೊಂಡಂತೆ ಆಗಿರುವ ಬದಲಾವಣೆಗಳನ್ನು ಮನನಮಾಡುವುದು ಅಗತ್ಯ. ತತ್ತ್ವ ಹೊಸ ಸನ್ನಿವೇಶಗಳನ್ನು ಪ್ರತಿಬಿಂಬಿಸುವ ಹಾಗೆ ರಚನೆಯಾಗಬೇಕು. ಒಂದೇಬಾರಿಗೆ ಮುಂದೆ ಆಗುವುದೆಲ್ಲವನ್ನೂ ತತ್ತ್ವ ಪ್ರತಿಪಾದಿಸಲು ಸಾಧ್ಯವಿಲ್ಲ. ಆದ್ದರಿಂದ ಕಾರ್ಮಿಕವರ್ಗ ತತ್ತ್ವದಿಂದ ಸ್ಫೂರ್ತಿ ಪಡೆದು ಸನ್ನಿವೇಶಗಳಿಗನುಸಾರವಾಗಿ ಕಾರ್ಯೋನ್ಮುಖರಾಗಬೇಕು.

ಎರಡನೆಯದಾಗಿ, ಕಾರ್ಯಾಚರಣೆ ಇಲ್ಲದಿರುವ ತತ್ತ್ವ ಬರಡುತತ್ತ್ವ. ಮೊದಲು ಕಾರ್ಯ, ತರುವಾಯ ತತ್ತ್ವ. ಕಾರ್ಯ ತತ್ತ್ವಕ್ಕೆ ಸ್ಫುಟ

ಕೊಡುತ್ತದೆ. ಕಾರ್ಯವಿಲ್ಲದ ತತ್ತ್ವಕ್ಕಿಂತ ಕಾರ್ಯವೇ ಲೇಸು. ಆದ್ದರಿಂದ ಕಾರ್ಮಿಕರು ಮೊದಲು ಕಾರ್ಯಾಚರಣೆಯ ಅಂಗವಾಗಿ ಚಳವಳಿಯಲ್ಲಿ ನಿರತರಾಗಬೇಕು.

ಮೂರನೆಯದಾಗಿ, ವಿಶ್ವದ ಕಾರ್ಮಿಕವರ್ಗ ಒಂದಾಗಬೇಕು. ಎಡೆಬಿಡದೆ ಸತತವಾಗಿ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಮತ್ತು ಬಂಡವಾಳವರ್ಗದ ವಿರುದ್ಧ ಚಳವಳಿಯನ್ನು ಮುಂದುವರಿಸಬೇಕು.

ದೇಶ ವಿದೇಶಗಳಲ್ಲಿರುವ ಕಾರ್ಮಿಕರು ಒಂದೇ ಬಗೆಯ ಶೋಷಣೆಗೆ ಒಳಗಾಗಿರುವುದರಿಂದ ಕಾರ್ಮಿಕರಲ್ಲಿ ಅನ್ಯರು ಸ್ವಜನರು ಎಂಬ ಭೇದ ಭಾವಕ್ಕೆ ಅವಕಾಶವೇ ಇಲ್ಲ. ಒಂದು ದೇಶದ ಕಾರ್ಮಿಕರು ತಮ್ಮ ಆಶೋತ್ತರಗಳನ್ನು ಚಳವಳಿಯ ಮೂಲಕ ಅಲ್ಪ ಸ್ವಲ್ಪ ಗಳಿಸಿಕೊಂಡು ಸಂತೃಪ್ತರಾಗಿರುವುದು ಇತರ ದೇಶಗಳ ಕಾರ್ಮಿಕವರ್ಗವನ್ನು ಮರೆತಂತೆಯೂ ಕಾರ್ಮಿಕವರ್ಗಕ್ಕೆ ದ್ರೋಹಬಗೆದಂತೆಯೂ ಆಗುತ್ತದೆ. ಕಾರ್ಮಿಕವರ್ಗ ಎಚ್ಚರಗೊಳ್ಳಬೇಕು. ಕಾರ್ಮಿಕವರ್ಗ ಯಾವ ದೇಶದ್ದೇ ಆಗಲಿ, ಅದೂ ಸಹ ದಾಸ್ಯದಿಂದಲೂ ಶೋಷಣೆಯಿಂದಲೂ ಪಾರಾಗುವವರೆಗೂ ಕಾರ್ಮಿಕವರ್ಗದ ಹೋರಾಟ ಮುಗಿದಂತಾಗಲಿಲ್ಲವೆಂದು ತಿಳಿಯಬೇಕು. ಕಾರ್ಮಿಕರ ಹೋರಾಟ ಯಾವದೇಶದಲ್ಲೇ ನಡೆಯುತ್ತಿರಲಿ ಸಕಲ ಕಾರ್ಮಿಕರೂ ತಮ್ಮ ತನು ಮನ ಧನಗಳನ್ನು ನೀಡಬೇಕು. ಇದು ಕಾರ್ಮಿಕರ ಪವಿತ್ರ ಕರ್ತವ್ಯ.

ಈ ಘೋಷಣೆಯನ್ನೊಳಗೊಂಡ (ಮಾರ್ಕ್ಸ್ ವಾದದ) ಕಾರ್ಮಿಕರ ಸಂಸ್ಥೆಯೊಂದು 1864 ರಲ್ಲಿ "ಅಂತರರಾಷ್ಟ್ರೀಯ ಕಾರ್ಮಿಕ ಸಮೂಹ" (International Workmen's Union) ಎಂಬ ಹೆಸರಿನಿಂದ ಲಂಡನ್ನಿನಲ್ಲಿ ಸ್ಥಾಪಿತವಾಯಿತು. ಮಾರ್ಕ್ಸ್ ಈ ಸಂಘದ ಅಧ್ಯಕ್ಷನಾದನು. ವಿವಿಧ ದೇಶಗಳ ಕಾರ್ಮಿಕವರ್ಗವನ್ನು ಒಂದೇ ಸಂಘದ ಆಶ್ರಯದಲ್ಲಿ ಸಂಘಟನೆಮಾಡುವುದು, ಪ್ರತಿಯೊಂದು ದೇಶದ ಕಾರ್ಮಿಕರ ಚಳವಳಿಯನ್ನು ನಿರ್ದೇಶನ ಮಾಡುವುದು, ಕಾರ್ಮಿಕರ ಚಳವಳಿಯ ಬಗ್ಗೆ ಧ್ಯೇಯ ಪ್ರಸಾರಮಾಡುವುದು ಮತ್ತು ಸಮಾಜವಾದಕ್ಕೂ ಕಾರ್ಮಿಕರ ಚಳವಳಿಗೂ ಇರುವ ಸಂಬಂಧದ ಬಗ್ಗೆ ತಿಳಿವಳಿಕೆ ನೀಡುವುದು ಇವು ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆಯ ಮುಖ್ಯಕೆಲಸವಾಯಿತು. ಹೀಗೆ ಮೊಟ್ಟ ಮೊದಲನೆಯ

ಬಾರಿಗೆ ವಿವಿಧ ದೇಶಗಳ ಕಾರ್ಮಿಕರನ್ನು ಒಂದೇ ಚೌಕಟ್ಟಿನಲ್ಲಿ ಒಟ್ಟುಗೂಡಿಸಿ ಸಮಾಜವಾದಕ್ಕೆ ಹೋರಾಡಿದ ಕಾರ್ಮಿಕರ ಚಳವಳಿ "ಮೊದಲನೆಯ ಅಂತರ ರಾಷ್ಟ್ರೀಯ" (First International) ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ. 1876 ರ ವರೆಗೆ ಈ ಅಂತರರಾಷ್ಟ್ರೀಯ ಸಂಘ ಬಹು ಯಶಸ್ವಿಯಾಗಿ ಕಾರ್ಮಿಕರ ಸಂಘಟನಾ ಕಾರ್ಯವನ್ನು ನಿರ್ವಹಿಸಿತು.

ವೈಜ್ಞಾನಿಕ ಸಮಾಜವಾದ ತತ್ತ್ವ, ಮಾರ್ಕ್ಸ್–ಏಂಗೆಲ್ಸರ ನೇತೃತ್ವ ಮತ್ತು ಮೊದಲನೇ ಅಂತರರಾಷ್ಟ್ರೀಯದ ವ್ಯವಸ್ಥಾಪನಾ ಶಕ್ತಿ ಕಾರ್ಮಿಕರ ಚಳವಳಿಯ ಸ್ವರೂಪವನ್ನೇ ಬದಲಾಯಿಸಿದವು. ಸಣ್ಣ ಪುಟ್ಟ ಸುಧಾರಣೆಗಳಿಗಾಗಿ ಕಾರ್ಮಿಕರು ನಿರತರಾಗುವುದು ನಿಂತಿತು. ಬಂಡವಾಳಶಾಹಿ ವ್ಯವಸ್ಥೆಯನ್ನು ಬುಡಸಹಿತ ಕಿತ್ತೊಗೆಯುವವರೆಗೂ ಬಂಡವಾಳವರ್ಗದ ನಾಶ ಆಗುವುದಿಲ್ಲವೆಂಬುದನ್ನು ಕಾರ್ಮಿಕರು ಅರಿತರು. ಸಣ್ಣ ಪುಟ್ಟ ಸುಧಾರಣೆಗಳು ಬಂಡವಾಳ ಆರ್ಥಿಕಶಾಹಿವ್ಯವಸ್ಥೆಗೆ ಅಪಾಯ ಒದಗದಂತೆ ಬಂಡವಾಳವರ್ಗವು ನಿರ್ಮಿಸಿಕೊಳ್ಳುವ ತಂತ್ರವೆಂದು ತಿಳಿಯಿತು. ಕಾರ್ಮಿಕವರ್ಗವು ಬಂಡವಾಳ ರಾಜಕೀಯ ಪಕ್ಷಗಳ ಹಿಂಬಾಲಕನಂತಿರುವುದು ತಪ್ಪಿತು. ಕಾರ್ಮಿಕವರ್ಗದ ಹಿತಗಳನ್ನು ಪ್ರತಿಬಿಂಬಿಸುವ ಮತ್ತು ಸಂರಕ್ಷಿಸುವ ಕಾರ್ಮಿಕರ ರಾಜಕೀಯ ಪಕ್ಷವೊಂದು ಜನಿಸಿತು. ಬಂಡವಾಳ ಆರ್ಥಿಕ ವ್ಯವಸ್ಥೆಯನ್ನು ಕೊನೆಗಾಣಿಸಲು ಕಾರ್ಮಿಕರು ಸಿದ್ಧವಾದರು. ಸಮಾಜವಾದೀ ಸಮಾಜದ ಸ್ಥಾಪನೆಗಾಗಿ ಕಾರ್ಮಿಕವರ್ಗ ಅಧಿಕಾರಕ್ಕೆ ಬರಲು ಯತ್ನಿಸಿತು. ಕಾರ್ಮಿಕವರ್ಗದ ಸಂಘಟಿತ ಹೋರಾಟ ಯೂರೋಪುಖಂಡದ ರಾಜಕೀಯದ ಬಣ್ಣವನ್ನೇ ಬದಲಾಯಿಸಿತು.

ಇಂಗ್ಲೇಂಡ್ (1648) ಮತ್ತು ಫ್ರಾನ್ಸ್ (1789) ದೇಶಗಳಲ್ಲಿ ನಡೆದ ಕ್ರಾಂತಿಯ ಕಾಲದಲ್ಲಿ ಸ್ವಾಮ್ಯ ಮತ್ತು ವ್ಯಾಪಾರ ವರ್ಗದವರು ಕ್ರಾಂತಿಯ ಮುಂದಾಳುಗಳಾಗಿ ಜನಸಮುದಾಯದ ಗಮನವನ್ನೆಲ್ಲಾ ನಿರಂಕುಶ ಪ್ರಭುತ್ವದ ನಾಶ, ಶಾಸನದ ರಚನೆಯಲ್ಲಿ ಪ್ರಾತಿನಿಧ್ಯ ಮತ್ತು ರಾಜಕೀಯ ಮತ್ತು ಪೌರ ಸ್ವಾತಂತ್ರ್ಯ ಇವುಗಳಲ್ಲಿ ಕೇಂದ್ರೀಕರಿಸಿದ್ದರು. ಕೆಲವು ಕ್ರಾಂತಿಕಾರ ವ್ಯಕ್ತಿಗಳು ಮತ್ತು ಭಾವಕ ಸಮಾಜವಾದಿಗಳನ್ನು ಬಿಟ್ಟರೆ ಇತರರು

ಯಾರೂ ಶೋಷಣೆಗೆ ಆವಾಸಸ್ಥಾನವಾದ ಆರ್ಥಿಕವ್ಯವಸ್ಥೆಯನ್ನು ಪ್ರಶ್ನಿಸಿರಲಿಲ್ಲ. ಕ್ರಾಂತಿಯ ನಂತರವೂ ಸಹ ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವಿರುವ ಆರ್ಥಿಕವ್ಯವಸ್ಥೆಯ ಆಧಾರದಮೇಲೆ ಸಾಮಾಜಿಕ ಮತ್ತು ರಾಜಕೀಯ ವ್ಯವಹಾರ ನಡೆಯುವಂತಾಯಿತು. ಆದರೆ ಮಾರ್ಕ್ಸ್‌ವಾದದ ಧ್ಯೇಯಗಳಿಂದ ಕೂಡಿದ ಕಾರ್ಮಿಕವರ್ಗದ ಪ್ರವೇಶ ರಾಜಕೀಯವನ್ನು ಕಲಕಿತು. ಸ್ವಾಮ್ಯದ ನಾಶವನ್ನು ಗುರಿಯನ್ನಾಗಿ ಉಳ್ಳ ಕಾರ್ಮಿಕ ವರ್ಗದ ಚಳವಳಿ ಸ್ವಾಮ್ಯವರ್ಗದ ಎದೆಯನ್ನೊಡೆಯಿತು ಸ್ವಾಮ್ಯವರ್ಗ ಕಾರ್ಮಿಕವರ್ಗದ ಚಳವಳಿಯ ವಿರೋಧಿಗಳಾದರು. ಅದುವರೆಗೂ ಕ್ರಾಂತಿಕಾರರು ಮತ್ತು ತೀವ್ರಗಾಮಿಗಳೆನಿಸಿಕೊಂಡಿದ್ದ ಸ್ವಾಮ್ಯವರ್ಗ ಮತ್ತು ಅದರ ಮುಖಂಡರು ಪ್ರತಿಗಾಮಿಗಳಾದರು (Reactionaries). ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವನ್ನೂ ಮತ್ತು ಶೋಷಣೆಯನ್ನೂ ಉಳಿಸಿಕೊಳ್ಳಲು ಸ್ವಾಮ್ಯವರ್ಗ ಯತ್ನಿಸಿತು. ತಮ್ಮ ಅಧೀನದಲ್ಲಿದ್ದ ಸರ್ಕಾರ, ನ್ಯಾಯಾಲಯ, ಪೋಲೀಸ್ ಮತ್ತು ಸೈನ್ಯ—ರಾಜ್ಯಶಕ್ತಿ (State)—ಇವುಗಳಲ್ಲಿ ಮರೆಹೊಕ್ಕರು. ಸ್ವಾಮ್ಯದ ರಕ್ಷಣೆ ರಾಜಕೀಯದ ಅಂತರಾಳವಾಯಿತು. ಸ್ವಾಮ್ಯದ ಪ್ರಶ್ನೆ ಬಂದಾಗಲೆಲ್ಲಾ ಅದನ್ನು ಮರೆಮಾಚಲು, ಅಥವಾ ಅನಿವಾರ್ಯವಾದರೆ ಆ ಪ್ರಶ್ನೆ ಎತ್ತಿದವರನ್ನು ಅತಿ ಕ್ರೂರವಾಗಿ ದಮನಮಾಡಲು ಸ್ವಾಮ್ಯವರ್ಗ ನಿಂತಿತು.

1848 ರಲ್ಲಿ ಫ್ರಾನ್ಸ್‌ದೇಶದಲ್ಲಿ ಕ್ರಾಂತಿ ಉಂಟಾಯಿತು. ಇದು ಕಾರ್ಮಿಕರ ಮುಂದಾಳತ್ವದಲ್ಲಿ ನಡೆಯಿತು. ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವನ್ನೂ ಮತ್ತು ಸ್ವಾಮ್ಯವರ್ಗದ ಆಡಳಿತವನ್ನೂ ಪ್ರಶ್ನಿಸಿ ಕ್ರಾಂತಿಯು ಆರಂಭವಾಯಿತು. ಆರ್ಥಿಕವಾಗಿ ಸ್ವಾಮ್ಯದ ನಿರ್ಮೂಲ ಕ್ರಾಂತಿಯ ಗುರಿಯಾಯಿತು. ಇದೇ ಸಂದರ್ಭದಲ್ಲಿ ಇಂಗ್ಲೇಂಡಿನಲ್ಲಿ 'ಚಾರ್ಟಿಸ್ಟರ' ಚಳವಳಿ ಎದ್ದಿತ್ತು. ಸ್ವಾಮ್ಯವರ್ಗ ತನ್ನ ಸ್ಥಾನಮಾನಗಳು ಅಪಾಯಕ್ಕೆ ಈಡಾಗುತ್ತಿರುವುದನ್ನು ಕಂಡಿತು. ಕಾರ್ಮಿಕವರ್ಗದ ಚಳವಳಿಯನ್ನು ದಮನಮಾಡುವುದು, ಕಾರ್ಮಿಕರ ಸಂಘಟನೆಗೆ ಭಂಗತರುವುದು ಮತ್ತು ಕಾರ್ಮಿಕರ ಚಳವಳಿಯ ಧ್ಯೇಯವನ್ನು ಅಲ್ಲಗಳೆಯುವುದು ಸ್ವಾಮ್ಯವರ್ಗದ ಮುಖ್ಯ ಗುರಿಯಾಯಿತು. ಆದರೆ ಏನು ಮಾಡಿದರೂ ಕಾರ್ಮಿಕವರ್ಗದ ಅರ್ಭಟವನ್ನು ಅಡಗಿಸಲು ಸಾಧ್ಯವಾಗಲಿಲ್ಲ. ಆರ್ಥಿಕ

ವಾಗಿ ಸ್ವಾಮ್ಯದ ವಿನಾಶವನ್ನು ಕಾರ್ಮಿಕವರ್ಗ ಕೇಳಿತು, ಆದರೆ ಸ್ವಾಮ್ಯ ವರ್ಗ ಸ್ವಾಮ್ಯದ ವಿನಾಶಕ್ಕೆ ತಯಾರಿರಲಿಲ್ಲ. ಸ್ವಾಮ್ಯ ವಿನಾಶ ಹೊಂದುವ ವರೆಗೂ ಕಾರ್ಮಿಕವರ್ಗ ತನ್ನ ಚಳವಳಿಯನ್ನು ನಿಲ್ಲಿಸುವಂತಿರಲಿಲ್ಲ. ಇಂತಹ ಬಿಕ್ಕಟ್ಟಿನಲ್ಲಿ ಸ್ವಾಮ್ಯವರ್ಗ ತನ್ನ ಸ್ಥಾನ ಮಾನಗಳನ್ನು ಉಳಿಸಿ ಕೊಳ್ಳುವುದಕ್ಕೆ ರಾಜ್ಯಶಕ್ತಿ (State) ಯನ್ನು ಒಂದು ಅಸ್ತ್ರವಾಗಿ ಉಪ ಯೋಗಿಸಿಕೊಂಡು, ಕಾರ್ಮಿಕರಮೇಲೆ ದಬ್ಬಾಳಿಕೆಯನ್ನು ಹುಚ್ಚು ಹೊಳೆ ಯಂತೆ ಹರಿಸಿತು.

ಇಷ್ಟಾದರೂ, ಕಾರ್ಮಿಕವರ್ಗದ ಚಳವಳಿ 1871 ರಲ್ಲಿ ಫ್ರಾನ್ಸ್ ದೇಶದಲ್ಲಿ ಅತಿ ಉಗ್ರರೂಪವನ್ನು ತಾಳಿತು. ಸ್ವಾಮ್ಯವರ್ಗದ ಸರ್ಕಾರ ಉರುಳಿತು. ಕಾರ್ಮಿಕ ಸರ್ಕಾರದ (Workers' Government) ಸ್ಥಾಪನೆಯನ್ನು ಕಾರ್ಮಿಕರು ಘೋಷಿಸಿದರು. ಇತಿಹಾಸದಲ್ಲಿ ಇದು "ಪ್ಯಾರಿಸ್ ಕಮ್ಯೂನ್'' ಎಂದು ಖ್ಯಾತಿಗೊಂಡಿದೆ. ಕೆಲವು ದಿನಗಳವರೆಗೆ ಕಾರ್ಮಿಕರು ಅಧಿಕಾರದಲ್ಲಿದ್ದು ಸ್ವಾಮ್ಯವರ್ಗದಿಂದ ಬಂದ ಪ್ರತಿಭಟನೆ ಮತ್ತು ಯುದ್ಧವನ್ನು ಸಾಹಸದಿಂದ ಎದುರಿಸಿದರು. ಆದರೆ ಕಾರ್ಮಿಕ ವರ್ಗಕ್ಕೆ ಅನುಭವ ಇರಲಿಲ್ಲ. ಕ್ರಾಂತಿಯೇ ಎಲ್ಲಸಮಸ್ಯೆಗಳಿಗೂ ಪರಿಹಾರ ವೆಂದು ಭಾವಿಸಿದರು; ಮೋಸಹೋದರು. ತಮ್ಮ ಅಧಿಕಾರದ ಅವಧಿಯಲ್ಲಿ ಮತ್ತು ಮುಂದೂ ಸ್ವಾಮ್ಯವರ್ಗದಿಂದ ಬರುವ ಪ್ರತಿಭಟನೆಯನ್ನು ಮುರಿಯ ಲಿಕ್ಕೆ ರಾಜ್ಯಶಕ್ತಿಯ ಉಪಯೋಗ ಅಗತ್ಯವೆಂಬುದನ್ನು ಮರೆತರು. ಕಾರ್ಮಿಕವರ್ಗದ ಸರ್ವಾಧಿಕಾರವನ್ನು ಘೋಷಿಸಲಿಲ್ಲ. ಕ್ರಾಂತಿಯ ಕಾಲದಲ್ಲಿ ನಡೆದ ಈ ಅವಿವೇಕ ಸ್ವಾಮ್ಯವರ್ಗಕ್ಕೆ ಸುಸಮಯವಾಯಿತು. ಸ್ವಾಮ್ಯವರ್ಗ ಅತಿಸುಲಭವಾಗಿ ಕಾರ್ಮಿಕರನ್ನು ಸದೆ ಬಡಿಯಿತು, ಮತ್ತು ಮತ್ತೆ ರಾಜ್ಯಶಕ್ತಿಯನ್ನು ಗಳಿಸಿಕೊಂಡು ತನ್ನ ಅಧಿಕಾರವನ್ನು ಸ್ಥಾಪಿ ಸಿತು. ಕ್ರಾಂತಿ ಅಪಜಯಹೊಂದಿತು.

ಫ್ರಾನ್ಸ್ ದೇಶದಲ್ಲಿ ಕಾರ್ಮಿಕವರ್ಗ ನಡೆಸಿದ ಕ್ರಾಂತಿಗಳು ಅತ್ಯಂತ ಹಿರಿಯ ಪ್ರಮಾಣದವು. ಬಂಡವಾಳ ಆರ್ಥಿಕವ್ಯವಸ್ಥೆ ಸ್ಥಿರವಾದದ್ದು, ಇನ್ನು ಮುಂದೆ ಇದರಲ್ಲಿ ಬದಲಾವಣೆಗಳೇ ಸಾಧ್ಯವಿಲ್ಲ ಎಂಬ ಭ್ರಮೆಯನ್ನು ಫ್ರಾನ್ಸ್ ದೇಶದ ಕ್ರಾಂತಿಗಳು ಮೂಲೆಗೊತ್ತಿದವು. ಇದೇ ತೆರನಾದ ಕ್ರಾಂತಿಗಳು ಯೂರೋಪ್ ಖಂಡದ ಇತರ ದೇಶಗಳಲ್ಲೂ ಸಹ ಸಣ್ಣಪುಟ್ಟ

ಪ್ರಮಾಣದಲ್ಲಿ ಉದ್ಭವಿಸಿದವು. ಕಾರಣಾಂತರಗಳಿಂದ ಇಂಗ್ಲೆಂಡ್‌ದೇಶದಲ್ಲಿ ಕಾರ್ಮಿಕರ ಚಳವಳಿ ಉಗ್ರರೂಪವನ್ನು ತಾಳಲಿಲ್ಲ. ಮುಖ್ಯವಾಗಿ ಕಾರ್ಮಿಕರ ಚಳವಳಿಯ ಉದ್ವೇಗವನ್ನು ಆರಿಸಲು ಇಂಗ್ಲೆಂಡ್ ದೇಶವಲ್ಲಿ ಬಂಡವಾಳ ಆರ್ಥಿಕವ್ಯವಸ್ಥೆ ಕಲ್ಪಿಸಿಕೊಂಡಿದ್ದ ವಸಾಹತುಗಳು ತುಂಬಾ ಸಹಾಯಕ್ಕೆ ಬಂದವು. ವಸಾಹತು ಜನರ ಶೋಷಣೆಯಿಂದ ಅಪಾರಸಂಪತ್ತು ಬಂಡವಾಳ ವರ್ಗದ ಕೈಸೇರಿತ್ತು. ಈ ಅಧಿಕಸಂಪತ್ತಿನ ಬಲದಿಂದ ಬಂಡವಾಳವರ್ಗ ಸುಧಾರಣೆಯನ್ನು ಕೈಗೊಂಡು ಕಾರ್ಮಿಕರ ಬೇಡಿಕೆಗಳಲ್ಲಿ ಕೆಲವನ್ನು ತೃಪ್ತಿ ಪಡಿಸಿತು. ಸಣ್ಣಪುಟ್ಟ ಚೂರುಗಳಂತೆ ಬಿದ್ದ ಸುಧಾರಣೆಗಳು ಹಲವು ಕಾರ್ಮಿಕವರ್ಗದ ಮುಖಂಡರನ್ನು ದಾರಿ ತಪ್ಪುವಂತೆ ಮಾಡಿದವು. ಅವರು ಬಂಡವಾಳಶಾಹಿ ವ್ಯವಸ್ಥೆಯ ಹಿಂಬಾಲಕರಾಗಿ ಕಾರ್ಮಿಕವರ್ಗದ ಚಳವಳಿ ಯನ್ನು ಹಿಂದೆಳೆದರು. ಇಂಗ್ಲಿಷ್ ಕಾರ್ಮಿಕ ಮುಂದಾಳುಗಳು ವಸಾಹತುಗಳಲ್ಲಿ ರುವ ಜನರ ಸುಲಿಗೆಯನ್ನು ಕಣ್ಣಾರೆ ಸಹಿಸಿದರು. ವಸಾಹತುಗಳ ಲೂಟಿಯಲ್ಲಿ ಭಾಗಿಗಳಾದರು. ಬಂಡವಾಳವರ್ಗ ಆಗಿಂದಾಗ್ಗೆ ಎಸೆಯುವ ತುತ್ತುಗಳಿಗೆ ಕೈಚಾಚಿದರು. ಕಾರ್ಮಿಕವರ್ಗದ ಧ್ಯೇಯವನ್ನು ಧೂಳೀಪಟಮಾಡಿದರು. [1]

ಜರ್ಮನಿ, ಇಟಲಿ ಮತ್ತು ರಷ್ಯಾದೇಶಗಳಲ್ಲಿ ನಡೆದ ಕಾರ್ಮಿಕರ ಚಳವಳಿ ಬೇರೊಂದು ರೂಪವನ್ನು ತಾಳಿತು. ಈ ದೇಶಗಳು ಇಂಗ್ಲೇಂಡ್ ಮತ್ತು ಫ್ರಾನ್ಸ್ ದೇಶಗಳ ಹಾಗೆ ಕೈಗಾರಿಕೆಯಲ್ಲೂ ಬಂಡವಾಳಶಾಹಿ ಉದ್ಯಮದಲ್ಲೂ ಅಷ್ಟು ಮುಂದುವರಿದಿರಲಿಲ್ಲ. ಕೈಗಾರಿಕಾ ಕಾರ್ಮಿಕವರ್ಗ

---

(1) ಇಂಗ್ಲೆಂಡ್ ದೇಶದಲ್ಲಿ ಮಾರ್ಕ್ಸ್‌ವಾದ ಬೇರೂರದಿರುವುದಕ್ಕೂ, ಇಂಗ್ಲೀಷ್ ಲೇಬರ್ ಪಕ್ಷ ಕ್ರಾಂತಿಕಾರಿಯಾಗದಿದ್ದಕ್ಕೂ, ಸಣ್ಣಪುಟ್ಟ ಬೇಡಿಕೆ ಗಳಲ್ಲೇ ತೃಪ್ತಿಹೊಂದುವ ನೀತಿಯನ್ನು ಅನುಸರಿಸಿದ್ದಕ್ಕೂ ಮತ್ತು ಪಾರ್ಲಿಯ ಮೆಂಟರೀ ಪ್ರಜಾಸತ್ತೆಯ ಮೂಲಕ ಸುಧಾರಣೆಗಳನ್ನು ಯಶಸ್ವಿಯಾಗಿ ಜಾರಿಗೆ ತಂದಿದ್ದಕ್ಕೂ ವಸಾಹತುಗಳು ಮುಖ್ಯವಾಗಿ ನೆರವಾದವು. ಹಿಂದೆ ಗ್ರೀಕ್ ಮತ್ತು ರೋಮನ್ ಪ್ರಜಾಸತ್ತೆಗಳ ಪ್ರಾಜ್ವಲ್ಯತೆಗೆ ಗುಲಾಮರ ದುಡಿಮೆ ಕಾರಣವಾಗಿದ್ದರೆ, ಇಂಗ್ಲೀಷ್ ಪ್ರಜಾಸತ್ತೆಯ ಪ್ರಾಬಲ್ಯತೆಗೆ ವಸಾಹತುಗಳು ಬೆನ್ನುಮೂಳೆಯಾಗಿ ನಿಂತವು.

ಪ್ರತಿಯಾಗಿ, ಅಷ್ಟೊಂದು ವಸಾಹತುಗಳ ಸೌಕರ್ಯವಿಲ್ಲದೆ ಆರ್ಥಿಕ ಕ್ಷೋಭೆಗೆ ಒಳಗಾಗಿರುವ ದೇಶಗಳಲ್ಲಿನ ರಾಜಕೀಯವನ್ನು ಗಮನಿಸುವುದು ಅವಶ್ಯಕವಾಗಿದೆ.

(Industrial Proletariat) ಅಷ್ಟು ಬೆಳದಿರಲಿಲ್ಲ. ಮೇಲಾಗಿ, ನಿರಂಕುಶಪ್ರಭುತ್ವ ತಾಂಡವವಾಡುತ್ತಿತ್ತು. ಶೋಷಿತವರ್ಗದ ಜೊತೆಗೆ ಸ್ವಾಮ್ಯವರ್ಗವೂ ಸಹ ದಬ್ಬಾಳಿಕೆಯನ್ನು ಅನುಭವಿಸುತ್ತಲಿತ್ತು. ಆದುದ ರಿಂದ ಶೋಷಿತವರ್ಗದ ಚಳವಳಿಗಳು ಸ್ವಾಮ್ಯವರ್ಗದೊಡಗೂಡಿ ನಿರಂಕುಶ ಪ್ರಭುತ್ವದ ನಿರ್ನಾಮಕ್ಕೆ ಮೊದಲು ಶ್ರಮಿಸಬೇಕಾಗಿತ್ತು. ಆದರೂ ಸಹ, ಕಾರ್ಮಿಕರ ಚಳವಳಿ ಸ್ವಾಮ್ಯವರ್ಗದೊಡಗೂಡಿ ಬಹಳಕಾಲ ಮುಂದು ವರಿಯಲು ಸಾಧ್ಯವಿರಲಿಲ್ಲ. ಪ್ರಜಾಪ್ರಭುತ್ವದ ಬೇಡಿಕೆಯ ಜೊತೆಗೆ ಆರ್ಥಿಕ ಸಮಾನತೆಯ ಪ್ರಶ್ನೆಯನ್ನೂ ಸಹ ಶೋಷಿತವರ್ಗ ಮುಂದಿಟ್ಟದ್ದು ಸ್ವಾಮ್ಯವರ್ಗ ಬೆದರಿ ಅಡ್ಡದಾರಿ ಹಿಡಿಯುವಂತೆ ಆಯಿತು. ನಿರಂಕುಶ ಪ್ರಭುತ್ವದ ನಾಶಕ್ಕಿಂತ ಮಿಗಿಲಾಗಿ ಶೋಷಿತವರ್ಗದ ಚಳವಳಿಯನ್ನು ತಡೆಗಟ್ಟುವುದೇ ಸ್ವಾಮ್ಯವರ್ಗದ ಪ್ರಥಮ ಕರ್ತವ್ಯವಾಯಿತು. ಇದಕ್ಕಾಗಿ ನಿರಂಕುಶಪ್ರಭುತ್ವದ ಜೊತೆಯಲ್ಲಿ ಸ್ವಾಮ್ಯವರ್ಗ ರಾಜಿಮಾಡಿಕೊಂಡಿತು. ಶೋಷಿತವರ್ಗದ ಚಳವಳಿಯನ್ನು ತುಳಿಯಲು ಪ್ರಜಾಪ್ರಭುತ್ವದ ಬೇಡಿ ಕೆಗೂ ಸಹ ಸ್ವಾಮ್ಯವರ್ಗ ತಿಲಾಂಜಲಿ ಇತ್ತಿತು. ಸಾಂಕುಶ ಪ್ರಭುತ್ವದ ಸ್ಥಾಪನೆಯ ಹೋರಾಟಕ್ಕೂ ಸಹ ಸ್ವಾಮ್ಯವರ್ಗ ಹಿಂದುಮುಂದು ನೋಡಿತು.

ಬಂಡವಾಳ ಆರ್ಥಿಕವ್ಯವಸ್ಥೆ ವಿನಾಶಕ್ಕಾಗಿ ಫ್ರಾನ್ಸ್ ಮತ್ತು ಹಲವು ದೇಶಗಳಲ್ಲಿ ನಡೆಸಿದ ಕಾರ್ಮಿಕರ ಚಳವಳಿ ಮತ್ತು ಕ್ರಾಂತಿಗಳು ವಿಫಲವಾದರೂ, ಈ ಚಳವಳಿ ಮತ್ತು ಕ್ರಾಂತಿಗಳಿಂದ ಶೋಷಿತವರ್ಗ ಅನೇಕ ಪಾಠಗಳನ್ನು ಕಲಿಯಿತು. ಈ ಚಳವಳಿ ಮತ್ತು ಕ್ರಾಂತಿಗಳನ್ನು ಮಾರ್ಕ್ಸ್–ಏಂಗೆಲ್ಸರು ವಿಮರ್ಶೆಗೆ ಒಳಪಡಿಸಿದರು. ಈ ವಿಮರ್ಶೆಯ ಆಧಾರದಮೇಲೆ ಕ್ರಾಂತಿಯನ್ನು ನಡೆಸುವುದರ ಬಗ್ಗೆ, ಕ್ರಾಂತಿಯ ಕಾಲದಲ್ಲಿ ಶೋಷಿತವರ್ಗ, ಅದರಲ್ಲೂ ಮುಖ್ಯವಾಗಿ ಕಾರ್ಮಿಕವರ್ಗ, ಮಾಡಬಹು ದಾದ ತಪ್ಪುಗಳ ಬಗ್ಗೆ, ಸ್ವಾಮ್ಯವರ್ಗದ ವರ್ತನೆಯ ಬಗ್ಗೆ, ಅಂತಹ ಕಾಲಗಳಲ್ಲಿ ಕಾರ್ಮಿಕವರ್ಗ ಅನುಸರಿಸಬೇಕಾದ ಕ್ರಮಗಳ ಬಗ್ಗೆ ಅಮೂಲ್ಯ ಸಲಹೆಗಳನ್ನೂ ಮತ್ತು ಕಾರ್ಮಿಕವರ್ಗದ ಕರ್ತವ್ಯಗಳ ಬಗ್ಗೆ ಎಚ್ಚರಿಕೆ ಯನ್ನೂ ಮಾರ್ಕ್ಸ್–ಏಂಗೆಲ್ಸ ಕೊಟ್ಟಿದ್ದಾರೆ. ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯದ ನಾಶ ಮತ್ತು ತತ್ಪರಿಣಾಮವಾಗಿ ಶೋಷಣೆಯಿಂದ

ಕಾರ್ಮಿಕವರ್ಗದ ವಿಮೋಚನೆ ಕಾರ್ಮಿಕವರ್ಗದಿಂದಲೇ ಮಾತ್ರ ಸಾಧ್ಯವೆಂಬುದನ್ನು ಈಗ ನಡೆದಿರುವ ಕ್ರಾಂತಿಗಳು ಕೃತಪಡಿಸಿವೆ ಎಂದು ತಿಳಿಸಿದರು. ಎಲ್ಲ ವರ್ಗಗಳಿಗಿಂತಲೂ ಅತಿ ಕ್ರಾಂತಿಕಾರಕ ವರ್ಗವೆಂದರೆ ಕಾರ್ಮಿಕವರ್ಗವೆಂದೂ, ಮಿಕ್ಕ ವರ್ಗಗಳೆಲ್ಲವೂ ಪ್ರತಿಗಾಮಿವರ್ಗಗಳಾಗುವುವೆಂದೂ, ಆರ್ಥಿಕ ಪ್ರಶ್ನೆ ಬಂದಾಗ ಕಾರ್ಮಿಕವರ್ಗ ಮಾತ್ರ ಬಂಡವಾಳಶಾಹಿ ವ್ಯವಸ್ಥೆಯ ನಿರ್ಮೂಲಕ್ಕೂ ಮತ್ತು ಸ್ವಾಮ್ಯದ ಚ್ಯುತಿಗೂ ದೃಢವಾಗಿ ನಿಲ್ಲುತ್ತದೆಂದೂ ತಿಳಿಸಿದರು.

ಎರಡನೆಯದಾಗಿ, ಸ್ವಾಮ್ಯದ ಚ್ಯುತಿಗಾಗಿ ಕ್ರಾಂತಿಯನ್ನು ಆರಂಭಿಸಿರುವಾಗ ಮೊದಲಿನಲ್ಲಿ ಲಭಿಸುವ ಜಯದಲ್ಲೇ ಕಾರ್ಮಿಕವರ್ಗ ತೃಪ್ತರಾಗಕೂಡದು; ಕಾರ್ಮಿಕವರ್ಗ ಗಳಿಸುವ ವಿಜಯವನ್ನು ಪೂರ್ಣಗೊಳಿಸಲೂ, ಕ್ರಾಂತಿಯ ಫಲಗಳನ್ನು ಭದ್ರಪಡಿಸಲೂ, ಸ್ವಾಮ್ಯವರ್ಗದವರಿಂದ ಬರುವ ಪ್ರತಿಭಟನೆಯನ್ನು ದಮನಮಾಡಲೂ "ಕಾರ್ಮಿಕವರ್ಗದ ಏಕೈಕ ಪ್ರಭುತ್ವ" (Dictatorship of the Proletariat) ಅತ್ಯಗತ್ಯವೆಂದರು. ಪ್ರಥಮದಲ್ಲಿ ಲಭಿಸುವ ವಿಜಯದಿಂದಲೇ ಎಲ್ಲವೂ ಸರಿಹೋಗುವುದೆಂದು ಆಶಿಸಿ ಕಾರ್ಮಿಕವರ್ಗ ಸುಮ್ಮನಾಗುವುದು ಉಗ್ರವಾದ ತಪ್ಪಾಗುತ್ತದೆಂದರು. ಏಕೆಂದರೆ, ಸ್ವಾಮ್ಯವರ್ಗ ಸಮಯಕಾದು ಮತ್ತೆ ತಿರುಗಿಬೀಳುತ್ತದೆ. ಕಾರ್ಮಿಕವರ್ಗ ಸಿದ್ಧರಿಲ್ಲದಿದ್ದರೆ ಕ್ರಾಂತಿಯನ್ನು ಸ್ವಾಮ್ಯವರ್ಗ ದಮನಮಾಡುತ್ತದೆ, ಮತ್ತು ಸ್ವಾಮ್ಯವರ್ಗ ತನ್ನ ಪ್ರಭುತ್ವವನ್ನು ಮತ್ತೆ ಘೋಷಿಸುತ್ತದೆ. ಹೀಗಾಗಿ, ಕಾರ್ಮಿಕವರ್ಗಕ್ಕೆ ದಾಸ್ಯವೂ ಶೋಷಣೆಯೂ ಪುನಃ ಪ್ರಾಪ್ತಿಯಾಗುತ್ತದೆ.

ಮೂರನೆಯದಾಗಿ, ಕಾರ್ಮಿಕವರ್ಗದ ಏಕೈಕ ಪ್ರಭುತ್ವದ ಕಾಲದಲ್ಲಿ ರಾಜ್ಯಶಕ್ತಿಯ (The State) ಉಪಯೋಗ ಅತ್ಯಗತ್ಯವೆಂದರು. ಏಕೆಂದರೆ, ಸ್ವಾಮ್ಯವರ್ಗದ ಅಧಿಕಾರದ ಅವಧಿಯಲ್ಲಿ ಶೋಷಿತವರ್ಗ ಸ್ವಾಮ್ಯ ವ್ಯವಸ್ಥೆಯನ್ನು ಪ್ರಶ್ನಿಸದ ಹಾಗೂ, ಮೂಲೋತ್ಪಾಟನೆ ಮಾಡದ ಹಾಗೂ ರಾಜ್ಯಶಕ್ತಿಯು ಉಪಯೋಗಿಸಲ್ಪಟ್ಟಿದೆ; ಆದುದರಿಂದ ಈಗ ಸಮಾಜವಾದೀ ವ್ಯವಸ್ಥೆಯ ಸ್ಥಾಪನೆಯ ಕಾಲದಲ್ಲಿ ಆರ್ಥಿಕ ಬದಲಾವಣೆಗಳನ್ನು ತರುವುದಕ್ಕೂ, ಸ್ವಾಮ್ಯವರ್ಗವನ್ನು ಮುಟ್ಟುಗೋಲು ಹಾಕಲಿಕ್ಕೂ, ಬರುವ ಪ್ರತಿಭಟನೆಯನ್ನು ದಮನಮಾಡಲಿಕ್ಕೂ ರಾಜ್ಯಶಕ್ತಿಯನ್ನು ಕಾರ್ಮಿಕವರ್ಗ ಉಪಯೋಗಿಸಿಕೊಳ್ಳುವುದು ಅಗತ್ಯವಾಗಿದೆಯೆಂದರು.

ನಾಲ್ಕನೆಯದಾಗಿ, ವರ್ಗಗಳ ಇರುವಿಕೆಗೆ ಮತ್ತು ವರ್ಗಹೋರಾಟಕ್ಕೆ ಕಾರಣವಾದ ಉತ್ಪಾದನಸಾಧನಗಳಲ್ಲಿ ಖಾಸಗೀ ಸ್ವಾಮ್ಯ ಮತ್ತು ಬಂಡವಾಳಶಾಹಿ ವ್ಯವಸ್ಥೆ ಇವುಗಳನ್ನು ನಾಶಗೊಳಿಸುವುದು ಮತ್ತು ಉತ್ಪಾದನಾ ಸಾಧನಗಳನ್ನು ಸಮಾಜೀಕರಣಮಾಡುವುದು ಸಮಾಜವಾದೀ ವ್ಯವಸ್ಥೆಯ ತಳಹದಿ. ಇದು ಮೊದಲನೆಯ ಹೆಜ್ಜೆ. ಆದರೆ ಇನ್ನೂ ಬಂಡವಾಳಶಾಹಿ ವ್ಯವಸ್ಥೆಯ ಶೇಷಗಳು, ಬಂಡವಾಳ ವರ್ಗದಿಂದ ನಡೆಯುವ ಸಮಾಜ ವಿನಾಶಕಾರೀ ಪಿತೂರಿಗಳು, ವರ್ಗವೈಷಮ್ಯ, ಮತ್ತು ವರ್ಗಹೋರಾಟ ಇದ್ದೇ ಇರುತ್ತವೆ. ಕ್ರಾಂತಿಯು ನಡೆದ ಮರುಗಳಿಗೆಯಲ್ಲೇ ವರ್ಗರಹಿತ ಸುಖಮಯೀ ಸಮಾಜ ಬರುವುದಿಲ್ಲ. ಆದುದರಿಂದ ಕಾರ್ಮಿಕವರ್ಗ ರಾಜ್ಯಶಕ್ತಿಯನ್ನು (ಬಲಪ್ರಯೋಗ) ಬಂಡವಾಳವರ್ಗದಿಂದ ಬರುವ ಪ್ರತಿಭಟನೆಯನ್ನು ಧ್ವಂಸಮಾಡಲು ಉಪಯೋಗಿಸಬೇಕು. ಇದಕ್ಕಾಗಿ ರಾಜ್ಯಶಕ್ತಿಯ ಆವಶ್ಯಕತೆ ಇದೆ. ಕ್ರಾಂತಿಯನಂತರ ಸಮಾಜವಾದೀ ಸಮಾಜ ವ್ಯವಸ್ಥಿತವಾಗುತ್ತದೆ (Socialist Society). ಆದರೆ ಸಮಾಜವಾದೀ ವ್ಯವಸ್ಥೆಯೇ ಕೊನೆಯಲ್ಲ. ಈ ವ್ಯವಸ್ಥೆ ಸಮವಾದೀ (ಕಮ್ಯೂನಿಸ್ಟ್) ಸಮಾಜಕ್ಕೆ ಪೀಠಿಕೆ.

ಐದನೆಯದಾಗಿ, ಸಮಾಜವಾದೀ ವ್ಯವಸ್ಥೆಯಲ್ಲಿ ಪ್ರತಿಯೊಬ್ಬನಿಗೂ ತನ್ನ ಶಕ್ತ್ಯಾನುಸಾರ ಕೆಲಸಮಾಡುವ ಸಮಾನ ಕರ್ತವ್ಯ ಮತ್ತು ಕೆಲಸಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವ ಹಕ್ಕು ಇರುತ್ತವೆ. ಜನರಿಗೆ ಸೂಕ್ತ ವಿದ್ಯಾಭ್ಯಾಸ, ಉತ್ತಮ ಆವರಣ ಮತ್ತು ಅವಕಾಶಗಳ ನಿರ್ಮಾಣ, ಕರ್ತವ್ಯ ಮತ್ತು ಹಕ್ಕುಗಳ ಬಗ್ಗೆ ಜಾಗೃತಿ, ಅಳಿದುಳಿದ ಬಂಡವಾಳಶಾಹಿ ವ್ಯವಸ್ಥೆಯ ಅವಶೇಷಗಳ ನಾಶ ಮತ್ತು ಉತ್ಪಾದನೆಯನ್ನು ಹೆಚ್ಚಿಸುವುದರ ಮೂಲಕ ಸಂಪತ್ತಿನ ಅಭಿವೃದ್ಧಿ ಇವೆಲ್ಲವೂ ಸಮಾಜವಾದೀ ವ್ಯವಸ್ಥೆ ಬಲಗೊಳ್ಳುವ ಹಾಗೆ ಮಾಡುತ್ತವೆ; ವರ್ಗರಹಿತ ಸಮವಾದೀ (ಕಮ್ಯೂನಿಸ್ಟ್) ಸಮಾಜವನ್ನು ಸಾಧಿಸಲು ಸಾಧ್ಯಮಾಡಿಕೊಡುತ್ತವೆ.

ಆರನೆಯದಾಗಿ, ಕಮ್ಯೂನಿಸ್ಟ್ ಸಮಾಜದ ಆಗಮನ ಹೊಸಯುಗದ ಆರಂಭ. ಈ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರೂ ತಮ್ಮ ಶಕ್ತ್ಯಾನುಸಾರ ದುಡಿಯುವುದು ಮತ್ತು ಅವರವರ ಆವಶ್ಯಕತೆಗಳಿಗನುಸಾರವಾಗಿ ಅನುಕೂಲಗಳನ್ನು ಅನುಭವಿಸುವುದು ಸಹಜವಾಗುತ್ತದೆ. ಈ ವರ್ಗರಹಿತ ವ್ಯವಸ್ಥೆ

ಯಲ್ಲಿ ರಾಜ್ಯಶಕ್ತಿಯ ಆವಶ್ಯಕತೆಯೇ ಇಲ್ಲವಾಗುತ್ತದೆ. ಅದು ನಶಿಸುತ್ತದೆ (The State withers away). ಏಕೆಂದರೆ, ಶೋಷಣೆಗೆ ಒಳಪಟ್ಟಿರುವ ಕಾರ್ಮಿಕರು ಪ್ರತಿಭಟಿಸದ ರೀತಿಯಲ್ಲಿ ಅದುಮಿ ಇಟ್ಟಿರಲು ಮತ್ತು ಸ್ವಾಮ್ಯವನ್ನು ರಕ್ಷಿಸಿಕೊಳ್ಳಲು ಸ್ವಾಮ್ಯವರ್ಗ ರಾಜ್ಯಶಕ್ತಿಯನ್ನು ಉಪಯೋಗಿಸಿಕೊಳ್ಳುತ್ತಲಿತ್ತು. ಈಗಲಾದರೋ ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯ, ಬಂಡವಾಳವರ್ಗ, ಕೂಲಿಗಾಗಿ ವಿಕ್ರಯವಾಗುವ ದುಡಿಮೆ ಎಲ್ಲವೂ ನಾಶಹೊಂದಿವೆ. ಉತ್ಪಾದನಸಾಧನಗಳು ಸಮಾಜೀಕರಣವಾಗಿವೆ. ಎಲ್ಲರೂ ಅವರವರ ಯೋಗ್ಯತಾನುಸಾರ ದುಡಿಯುವ ಸಮಾಜ ವ್ಯವಸ್ಥೆ ಬಂದಿದೆ. ಈ ವರ್ಗರಹಿತಸಮಾಜದಲ್ಲಿ ಶೋಷಣೆಯಾಗಲೀ, ಶೋಷಣೆಯನ್ನು ನಡೆಸುವ ವರ್ಗವಾಗಲೀ, ಸ್ವಾಮ್ಯ ಮತ್ತು ಶೋಷಣೆಗೆ ರಕ್ಷಣೆ ಬೇಕೆನ್ನುವವರಾಗಲೀ ಇಲ್ಲದಿರುವುದರಿಂದ ರಾಜ್ಯಶಕ್ತಿಯ ಪ್ರಯೋಗ ಬೇಕಿಲ್ಲವಾಗುತ್ತದೆ. ಸಮಾಜದ ಮೇಲ್ವಿಚಾರಣೆಯ ಕೆಲಸ ಮಾತ್ರ ಉಳಿಯುತ್ತದೆ (The Administration of Things).[1]

1871 ರಲ್ಲಿ ಫ್ರಾನ್ಸ್‌ದೇಶದಲ್ಲಿ ಆದ ಕಾರ್ಮಿಕರ ಕ್ರಾಂತಿಯ ಪರಾಜಯದಿಂದ ಆರಂಭ, ಯೂರೋಪುಖಂಡದಲ್ಲಿ ಕಾರ್ಮಿಕರ ಚಳವಳಿ ಇಳಿಮುಖವಾಯಿತು. ಕಾರ್ಮಿಕವರ್ಗ ಪರಾಜಯಗಳಿಂದ ಧೃತಿಗೆಡುವಂತಾಯಿತು. ಕ್ರಾಂತಿಯ ಇಳಿಮುಖದಲ್ಲಿ ಮೊದಲನೇ ಅಂತರರಾಷ್ಟ್ರೀಯ (First International) ಗತಿಸಿತು. ಅದರೆ ಕಾರ್ಮಿಕವರ್ಗವನ್ನು

---

(1) ಇಲ್ಲಿ ಉಪಯೋಗಿಸಿರುವ 'ಸಮಾಜವಾದೀ ಸಮಾಜ' 'ಕಮ್ಯೂನಿಸ್ಟ್ ಸಮಾಜ' ವೆಂಬ ನಾಮಾಂಕಿತಗಳ ಸ್ವರೂಪವನ್ನು ಜ್ಞಾಪಕದಲ್ಲಿಡುವುದು ಅಗತ್ಯ. ಹಿಂದೆ (ಪುಟ ೨೯) 'ಕಮ್ಯೂನಿಸ್ಟ್' ಎಂಬ ಶಬ್ದವನ್ನು ತೀವ್ರಗಾಮಿಗಳು ಎಂಬ ಅರ್ಥದಲ್ಲಿ ಮಾರ್ಕ್ಸ್-ಏಂಗೆಲ್ಸರು ಉಪಯೋಗಮಾಡಿ ಇತರ ಸಮಾಜವಾದಿಗಳಿಂದ ತಾವು ಬೇರೆಯವರು ಎಂಬರ್ಥದಲ್ಲಿ ಉಪಯೋಗಿಸಿದರು. ಆದರೆ ಇಲ್ಲಿ ಕಾರ್ಮಿಕವರ್ಗದ ಕ್ರಾಂತಿಯ ನಂತರ ವ್ಯವಸ್ಥಿತವಾಗುವ ಸಮಾಜದ ಸ್ವರೂಪವನ್ನೂ ಮತ್ತು ಅದರ ಎರಡು ರೂಪಗಳನ್ನೂ ಬೇರ್ಪಡಿಸುವ, ವಿಂಗಡಿಸುವ, ಅರ್ಥದಲ್ಲಿ ಸಮಾಜವಾದೀ ಮತ್ತು ಸಮವಾದೀ (ಕಮ್ಯೂನಿಸ್ಟ್) ಎಂಬ ನಾಮಾಂಕಿತಗಳನ್ನು ಉಪಯೋಗಿಸಿದ್ದಾರೆ. ಸಮವಾದೀ (ಕಮ್ಯೂನಿಸ್ಟ್) ಸಮಾಜವೂ ಸಹ ಸಮಾಜವಾದೀ ಸಮಾಜವೇ, ಆದರೆ ಅದಕ್ಕಿಂತ ಮುಂದೆ ಹೋಗಿ ರೂಪಾಂತರ ಹೊಂದಿದೆ.

ಸಚೇತನಗೊಳಿಸಲು, ಹೋರಾಟಕ್ಕೆ ಸಿದ್ಧಪಡಿಸಲು, ಗತಿಸಿದ ಮೊದಲನೆಯ ಅಂತರರಾಷ್ಟ್ರೀಯ ಪುನಃ 1889 ರಲ್ಲಿ "ಎರಡನೆ ಅಂತರರಾಷ್ಟ್ರೀಯ" (Second International) ವೆಂಬ ಹೆಸರಿನಿಂದ ಜನ್ಮ ತಾಳಿತು. ಈ ಮಧ್ಯೆ 1883 ರಲ್ಲಿ ಮಾರ್ಕ್ಸ್ ಮತ್ತು 1895 ರಲ್ಲಿ ಆತನ ಸಹೋದ್ಯೋಗಿ ಏಂಗೆಲ್ಸ್–ವೈಜ್ಞಾನಿಕ ಸಮಾಜವಾದೀ ತತ್ತ್ವದ ಪ್ರತಿಪಾದಕರೂ, ಕಾರ್ಮಿಕವರ್ಗದ ಗುರುಗಳೂ, ಆಜನ್ಮ ಕ್ರಾಂತಿಕಾರಿಗಳೂ, ಇತಿಹಾಸ ಪುರುಷರೂ–ಮರಣ ಹೊಂದಿದರು. ಇಲ್ಲಿಗೆ ಮಾರ್ಕ್ಸ್–ಏಂಗೆಲ್ಸರ ಜೀವಿತ ಕಾಲದಲ್ಲಿ ರೂಪಗೊಂಡ ಸಮಾಜವಾದೀ ಚಳವಳಿಯ ಹಿರಿಯ ಅಂಕ ಮುಗಿಯುತ್ತದೆ.

ಮಾರ್ಕ್ಸ್–ಏಂಗೆಲ್ಸರ ಮರಣ ಮತ್ತು ಕಾರ್ಮಿಕವರ್ಗದ ಚಳವಳಿಯ ಇಳಿಮುಖ ಅಂತರರಾಷ್ಟ್ರೀಯ ಸಮಾಜವಾದದ ರಂಗದಲ್ಲಿ ಸೋಲಿನ ಮನೋಭಾವವನ್ನು ತಂದವು. ಕಾರ್ಮಿಕವರ್ಗದ ವಿಜಯದಲ್ಲಿ ಅಪನಂಬಿಕೆ ವ್ಯಕ್ತಪಡಿಸುವ ಮತ್ತು ಬಂಡವಾಳವರ್ಗದೊಡನೆ ಸಂಧಾನ ಮತ್ತು ಸುಧಾರಣೆಯ ತತ್ತ್ವವನ್ನು ಬೋಧಿಸುವ ವಾದಗಳಿಗೆ ಆಸ್ಪದ ಸಿಕ್ಕಿತು. ಹಲವರು ಮಾರ್ಕ್ಸ್–ಏಂಗೆಲ್ಸರ ವೈಜ್ಞಾನಿಕ ತತ್ತ್ವವನ್ನು ತಿರುಗುಮುರುಗು ಮಾಡಲು ಯತ್ನಿಸಿ, ಆ ವಾದದಲ್ಲಿರುವ ಚೈತನ್ಯವನ್ನು ಮರೆಮಾಚಿದರು; ಅಲ್ಲ ಸಲ್ಲದ ವಾದಗಳನ್ನು ಮಾರ್ಕ್ಸ್–ಏಂಗೆಲ್ಸರ ಮಡಲಿಗೆ ಕಟ್ಟಿದರು. ಇಂಥವರಲ್ಲಿ ಅತಿಮುಖ್ಯವಾದ ವ್ಯಕ್ತಿ ಎಂದರೆ ಜರ್ಮನೀ ದೇಶದ ಕಾರ್ಲ್ ಕಾಟ್ಸ್ಕೀ ಎಂಬ ಸಮಾಜವಾದಿ. ಇವರು ಕಾರ್ಮಿಕವರ್ಗದ ಸೋಲಿಗೂ ಚಳವಳಿಯ ಇಳಿಮುಖಕ್ಕೂ ಕಾರಣವನ್ನು ಅರಿಯಲು ಅಶಕ್ತರಾಗಿದ್ದುದಲ್ಲದೆ, ಮಾರ್ಕ್ಸ್–ಏಂಗೆಲ್ಸರು ಪ್ರತಿಪಾದಿಸಿದಂತೆ ಬಂಡವಾಳ ಆರ್ಥಿಕ ವ್ಯವಸ್ಥೆಯ ಚ್ಯುತಿ ಅಸಂಭವವೆಂದೂ ಬಂಡವಾಳಶಾಹಿ ವ್ಯವಸ್ಥೆಯನ್ನು ಚ್ಯುತಿಗೊಳಿಸಲಿಕ್ಕೆ ಕಾರ್ಮಿಕವರ್ಗದ ಚಳವಳಿ ಅನಗತ್ಯವೆಂದೂ ತೀರ್ಮಾನಿಸಿದರು. ಬಂಡವಾಳ ಆರ್ಥಿಕವ್ಯವಸ್ಥೆ ದೀರ್ಘಕಾಲದವರೆಗೆ ಸುವ್ಯವಸ್ಥಿತ ರೀತಿಯಲ್ಲಿ ಕೆಲಸಮಾಡುವುದೆಂದು ಪ್ರಚಾರಮಾಡಿದರು. ಮಾರ್ಕ್ಸ್–ಏಂಗೆಲ್ಸರ ವಾದ ಮುಪ್ಪಾಗಿದೆ ಎಂದರು. ಮಾರ್ಕ್ಸ್–ಏಂಗೆಲ್ಸರ ವಾದದ ಉಪಯುಕ್ತತೆ ನಶಿಸಿದೆ ಎಂದರು. ಕೊನೆಗೆ ಮಾರ್ಕ್ಸ್–ಏಂಗೆಲ್ಸ್‌ರ ವಾದವೇ ತಪ್ಪೆಂದು ವಾದಿಸಲು ಯತ್ನಿಸಿದರು. ಹಲವು ಬಗೆಯ ಸಮಾಜವಾದಗಳು ಪ್ರಚಾರಕ್ಕೆ ಬಂದವು. ಮಾರ್ಕ್ಸ್–ಏಂಗೆಲ್ಸರು ಯಾವುದನ್ನು ಕಲ್ಪನಾ

ಸಮಾಜವೆಂದು ಟೀಕಿಸಿದ್ದರೋ ಅದೇ ವಾದಸರಣಿಯನ್ನು ಮುಂದುವರಿಸಿದರು. ಸ್ನೇಹದ ಮೂಲಕ, ಕ್ರಿಸ್ತಮತದ ದೀನತ್ವದ ಮೂಲಕ, ಮನವನ್ನು ಒಲಿಸಿಕೊಳ್ಳುವುದರ ಮೂಲಕ, ದಾನದ ಮೂಲಕ, ಅಲ್ಪ ಸ್ವಲ್ಪ ಸುಧಾರಣೆಗಳ ಮೂಲಕ ಮತ್ತು ಮುನಿಸಿಪಾಲಿಟಿಗಳ ಮೂಲಕ ಸಮಾಜವಾದದ ಸ್ಥಾಪನೆಗೆ ನಿಂತರು. ಈ ರೀತಿಯಲ್ಲಿ ಆರಂಭವಾದ ಸುಧಾರಣಾ ಧೋರಣೆ ವಿವಿಧ ದೇಶಗಳಲ್ಲಿ ವಿವಿಧ ಹೆಸರುಗಳಿಂದ ಪ್ರಚಾರಕ್ಕೆ ಬಂದವು. ಹೀಗೆ ಪ್ರಚಾರಕ್ಕೆ ಬಂದವುಗಳಲ್ಲಿ ಇಂಗ್ಲೇಂಡ್ ದೇಶದಲ್ಲಿ ಸ್ಥಾಪನೆ ಹೊಂದಿದ ಫೇಬಿಯನ್ ಸಂಘ (Fabian Society) ಮತ್ತು ಫೇಬಿಯನ್ ತತ್ತ್ವದ ಅನುಯಾಯಿಯಾಗಿ ಹೊರಬಿದ್ದ ಬ್ರಿಟಿಷ್ ಕಾರ್ಮಿಕ ಪಕ್ಷ (British Labour Party) ಮುಖ್ಯವಾದವುಗಳು.

1871 ರ ನಂತರ ಕಾರ್ಮಿಕವರ್ಗದ ಚಳವಳಿ ಇಳಿಮುಖವಾಗಲು ಬಂಡವಾಳಶಾಹಿ ವ್ಯವಸ್ಥೆ ಸ್ವಲ್ಪ ಮಟ್ಟಿಗೆ ಚೇತರಿಸಿಕೊಳ್ಳಲು ಇದ್ದ ಅವಕಾಶಗಳೇ ಕಾರಣವಾಗಿದ್ದವು. ಮುಖ್ಯವಾಗಿ ಬಂಡವಾಳಶಾಹಿ ರಾಷ್ಟ್ರಗಳು ವಸಾಹತುಗಳ ಕಡೆ ನುಗ್ಗಿದವು. ಅತ್ಯಧಿಕ ಲಾಭವನ್ನು ವಸಾಹತುಗಳು ಕೊಟ್ಟವು. ಈ ಲಾಭದಿಂದ ಕಾರ್ಮಿಕವರ್ಗದ ಹಲವು ಬೇಡಿಕೆಗಳನ್ನು ಸಣ್ಣಪುಟ್ಟ ಪ್ರಮಾಣದಲ್ಲಿ ತಣಿಸಿ, ಕಾರ್ಮಿಕರ ಚಳವಳಿಯನ್ನು ಕುಗ್ಗಿಸಲು ಬಂಡವಾಳ ವರ್ಗಕ್ಕೆ ಸಾಧ್ಯವಾಯಿತು. ಆದರೆ ಇದು ಬಹುಕಾಲ ಸಾಗಲಿಲ್ಲ. ದೀರ್ಘ ಕಾಲ ವಸಾಹತುಗಳ ಶೋಷಣೆಯಾಗಲೀ ಅಥವ ಅಮಿತ ಪ್ರಮಾಣದಲ್ಲಿ ವಸಾಹತುಗಳನ್ನು ಹೊಂದುವುದಕ್ಕಾಗಲೀ ಸಾಧ್ಯವಿರಲಿಲ್ಲ. ಆದುದರಿಂದ ಅಳಿದುಳಿದ ವಸಾಹತುಗಳಿಗಾಗಿ ನೂಕುನುಗ್ಗಲು ಆರಂಭವಾಯಿತು. ವಸಾಹತುಗಳಿಗಾಗಿ ಬಂಡವಾಳಶಾಹಿ ರಾಷ್ಟ್ರಗಳಾದ ಇಂಗ್ಲೇಂಡ್, ಫ್ರಾನ್ಸ್ ಮತ್ತು ಜರ್ಮನಿ ಯುದ್ಧಕ್ಕೆ ನಿಂತವು. ಸುಧಾರಕರು ಬಗೆದದ್ದೇ ಒಂದು, ಆದದ್ದು ಇನ್ನೊಂದು. ಬಂಡವಾಳಶಾಹಿ ವ್ಯವಸ್ಥೆ ಸುವ್ಯವಸ್ಥಿತವಾಗಿ ಕೆಲಸ ಮಾಡುವ ಕನಸು ಭಗ್ನವಾಯಿತು.

1900 ರ ನಂತರ ಯುದ್ಧ ಅನಿವಾರ್ಯವಾಗಿ ಯುದ್ಧದ ಕಾರ್ಮೋಡಗಳು ಆಚ್ಛಾದಿಸಿದವು. ಯುದ್ಧ ಪ್ರತಿ ಬಂಡವಾಳಶಾಹಿ ರಾಷ್ಟ್ರ ತನ್ನ ಬಂಡವಾಳಶಾಹಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲಿಕ್ಕಾಗಿ ಹೂಡುವ ಪರಸ್ಪರ ಯಾದವೀಕಲಹವಾಗಿತ್ತು. ಯುದ್ಧ ಸಂಭವಿಸಿದರೆ ವಿವಿಧ ದೇಶಗಳ ಕಾರ್ಮಿಕ

ವರ್ಗಗಳು ಪರಸ್ಪರ ಕಾದಾಡುವ ಪ್ರಮೇಯ ಬಂದಿತು ಈ ಸಮಯದಲ್ಲಿ ನೈಜ ಮಾರ್ಕ್ಸ್ ವಾದಿಗಳು ಕಾರ್ಮಿಕವರ್ಗವನ್ನು ಎಚ್ಚರಿಸಿ ಯುದ್ಧವನ್ನು ಬಹಿಷ್ಕರಿಸುವಂತೆಯೂ ಯುದ್ಧಕ್ಕೆ ಕಾರಣವಾದ ಬಂಡವಾಳ ಆರ್ಥಿಕ ವ್ಯವಸ್ಥೆಯನ್ನು ಮೂಲೋತ್ಪಾಟನೆ ಮಾಡುವಂತೆಯೂ ಕರೆಯಿತ್ತರು. ಆದರೆ ಸುಧಾರಣಾ ಸಮಾಜವಾದಿಗಳ (Reformists) ಮಾರ್ಗವೇ ಬೇರೆಯಾಗಿತ್ತು. ಬಂಡವಾಳವರ್ಗದ ಯುದ್ಧ ಸಿದ್ಧತೆಗೆ ಸಹಾಯಮಾಡಲು ನಿಂತರು. ಯುದ್ಧವನ್ನು ತಾಯ್ನಾಡಿನ ಸಂರಕ್ಷಣಾ ಯುದ್ಧವೆಂದು ಬೊಬ್ಬೆ ಇಟ್ಟರು. ಕಾರ್ಮಿಕವರ್ಗಕ್ಕೆ ದ್ರೋಹಬಗೆಯುವ ಸುಧಾರಣಾತತ್ತ್ವದಿಂದಲೂ ಮತ್ತು ಸಮಯಸಾಧಕ ಮುಂದಾಳುಗಳಿಂದಲೂ ಕಾರ್ಮಿಕವರ್ಗ ಒಡೆದು ಚೂರು ಚೂರಾಯಿತು. ಒಂದು ದೇಶದ ಕಾರ್ಮಿಕ ವರ್ಗದ ಮೇಲೆ ಇನ್ನೊಂದು ದೇಶದ ಕಾರ್ಮಿಕವರ್ಗ ಯುದ್ಧಕ್ಕೆ ನಿಂತಿತು.

ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ರಷ್ಯಾದೇಶದ ಕಾರ್ಮಿಕ ಮುಖಂಡನೂ ಆಜನ್ಮ ಕ್ರಾಂತಿಕಾರಿಯೂ ಆದ ಲೆನಿನ್ನನ ವಾಣಿ ಕೇಳ ಬಂದಿತ್ತು.[1] ಸುಧಾರಕ ಕಾರ್ಮಿಕಮುಖಂಡರ ಮುಖಹೇಡಿತನವನ್ನೂ,

---


(1) ಲೆನಿನ್: (1870–1924)—22 ನೇ ಏಪ್ರಿಲ್ 1870 ರಲ್ಲಿ ರಷ್ಯದ ಸಿಂಬ್ರಿಸ್ಕ್ (ಈಗ ಯುಲ್ಯನಾಸ್ಕ್ ಎಂದು ಹೆಸರು) ಎಂಬ ಸ್ಥಳದಲ್ಲಿ ಜನಿಸಿದನು. ಈತನ ತಂದೆ ಇಲ್ಯಾ ನಿಕಲಾಯಿಚ್ ಯುಲ್ಯನಾವ್, ಸಿಂಬ್ರಿಸ್ಕ್ ಪ್ರಾಂತ್ಯದ ಶಾಲೆಗಳ ಇನ್ಸ್‌ಪೆಕ್ಟರ್ ಆಗಿದ್ದರು. ತನ್ನ ವಿದ್ಯಾರ್ಥಿ ಜೀವನದಲ್ಲೇ ಕ್ರಾಂತಿಕಾರೀ ಚಟುವಟಿಕೆಗಳ ಮೂಲಕ ಸರ್ಕಾರದ ಗಮನಕ್ಕೆ ಬಂದಿದ್ದನು. ಈತನ ಅಣ್ಣ ಕ್ರಾಂತಿಕಾರಕ ಚಟುವಟಿಕೆಗಳಿಗಾಗಿ ಗಲ್ಲಿಗೇರಿಸಲ್ಪಟ್ಟಿದ್ದನು.

ಲೆನಿನ್ ಕೆಲವುಕಾಲ ವಕೀಲವೃತ್ತಿಯಲ್ಲಿದ್ದು, ತರುವಾಯ ಪೀಟರ್ಸ್‌ಬರ್ಗ್ ನಗರದಲ್ಲಿದ್ದ ಮಾರ್ಕ್ಸ್‌ವಾದೀ ಕಾರ್ಮಿಕರ ಗುಂಪನ್ನು ಸೇರಿದನು. ರಷ್ಯನ್ ಕಾರ್ಮಿಕರ ಮುಕ್ತಿಯನ್ನು ಮಾರ್ಕ್ಸ್ ತತ್ತ್ವದಲ್ಲಿ ಕಂಡನು. ಮಾರ್ಕ್ಸ್ ತತ್ತ್ವವನ್ನು ರಷ್ಯಾದ ಪರಿಸ್ಥಿತಿಗೆ ಅನ್ವಯಮಾಡಿ, ರಷ್ಯಾದ ಕಾರ್ಮಿಕರು ಕೈಗೊಳ್ಳಬೇಕಾದ ಪಥವನ್ನು ಸೂಚಿಸಿದನು. ಈತನ ನೇತೃತ್ವದಲ್ಲಿ ಒಂದುಗೂಡಿದ ಕಾರ್ಮಿಕಪಕ್ಷ ಬಾಲ್ಷೆವಿಕ್ಸ್ ಎಂಬ ಹೆಸರು ಪಡೆಯಿತು.

ಸ್ವಾಮ್ಯವರ್ಗದ ನೇತೃತ್ವದಲ್ಲಿ ಸಾಂಕುಶಪ್ರಭುತ್ವದ ಸ್ಥಾಪನೆಗಾಗಿ ನಡೆಯುವ ಕ್ರಾಂತಿಯಲ್ಲೇ ಕಾರ್ಮಿಕರು ಸಂತೃಪ್ತರಾಗದೆ ಸಮಾಜವಾದೀ ಕ್ರಾಂತಿಯಮೂಲಕ ಸಮಾಜವಾದೀ ಸಮಾಜದ ಸ್ಥಾಪನೆಗೆ ಕ್ರಾಂತಿಯನ್ನು ಮುಂದುವರಿಸಬೇಕೆಂದು ಕರೆಕೊಟ್ಟನು. ಈತನ ನೇತೃತ್ವದಲ್ಲಿ ಕಾರ್ಮಿಕರ ಕ್ರಾಂತಿ ಯಶಸ್ವಿಯಾಯಿತು.

ಕಾರ್ಮಿಕವರ್ಗಕ್ಕೆ ಅವರು ಬಗೆದ ದ್ರೋಹವನ್ನೂ ಮತ್ತು ಅವರುಗಳು ಪ್ರಸಾರಮಾಡಿದ ತತ್ತ್ವವನ್ನೂ ಲೆನಿನ್ ಕಟುವಾಗಿ ಖಂಡಿಸಿದನು. ಸಾಮ್ರಾಜ್ಯವಾದಿ ಯುದ್ಧವನ್ನು(Imperialist war) ಕಾರ್ಮಿಕರು ಬಹಿಷ್ಕರಿಸುವಂತೆಯೂ ಯುದ್ಧಕ್ಕೆ ಆಸರೆಯಾಗಿರುವ ಬಂಡವಾಳ ಆರ್ಥಿಕ ವ್ಯವಸ್ಥೆಯನ್ನು ನಾಶಪಡಿಸುವಂತೆಯೂ ಮತ್ತು ಬಂಡವಾಳವರ್ಗದ ಮೇಲೆ ಯುದ್ಧವನ್ನು ಘೋಷಿಸುವಂತೆಯೂ ಕರೆಯಿತ್ತನು. ಆತನ ವಾಣಿ ಯುದ್ಧಮಯ ವಾತಾವರಣದಲ್ಲಿ ಬಂಡವಾಳವರ್ಗವನ್ನು ಸಿಡಿಲಿನಂತೆ ತಟ್ಟಿತು. ಸುಧಾರಕರು ಕಾರ್ಮಿಕವರ್ಗವನ್ನು ಎಳೆದೊಯ್ದ ತಪ್ಪುಹಾದಿ ಬಯಲಾಯಿತು. ಲೆನಿನ್ ತನ್ನ ಕರೆಯನ್ನು ಕಾರ್ಯಗತಮಾಡಲು 1919 ರಲ್ಲಿ ಹೊಸ ಕಾರ್ಮಿಕವರ್ಗದ ರಂಗವೊಂದನ್ನು ರಚಿಸಿದನು. ಈ ರಂಗ ಸಮಾಜವಾದದ ಇತಿಹಾಸದಲ್ಲಿ "ಮೂರನೇ ಅಂತರರಾಷ್ಟ್ರೀಯ" (Third International) ಎಂದು ಹೆಸರು ಪಡೆದಿದೆ. ಲೆನಿನ್ ಮಾರ್ಕ್ಸ್-ಏಂಗೆಲ್ಸರ ತತ್ತ್ವ ಸಮುಚ್ಚಯದ ಆಧಾರದಮೇಲೆ ಹೊಸ ಸಿದ್ಧಾಂತವೊಂದನ್ನು ರಚಿಸಿದನು. ಸಮಾಜವಾದೀ ಕ್ರಾಂತಿಗೆ ಕರೆಯಿತ್ತನು.

ಲೆನಿನ್ನನ ನೂತನ ಸಿದ್ಧಾಂತ ಸಮಾಜವಾದದ ಮುನ್ನಡೆಯಲ್ಲಿ ಅತಿ ಪ್ರಾಮುಖ್ಯವಾದುದು. ಸುಧಾರಕರು ಮಾರ್ಕ್ಸ್‌ವಾದದಲ್ಲಿರುವ ಚೇತನಾ ಶಕ್ತಿ, ಮಾರ್ಕ್ಸ್-ಏಂಗೆಲ್ಸರ ವಿಮರ್ಶಾಕ್ರಮ, ಆ ವಾದದ ಚಾರಿತ್ರಿಕ ಸನ್ನಿವೇಶ ಮತ್ತು ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉಂಟಾಗಿರುವ ಬದಲಾವಣೆಗಳು ಇವುಗಳನ್ನು ತಿಳಿಯಲು ಅಸಮರ್ಥರಾಗಿ ದಾರಿ ತಪ್ಪಿರುವರೆಂದನು. ಮಾರ್ಕ್ಸ್-ಏಂಗೆಲ್ಸರು ತಮ್ಮ ವೈಜ್ಞಾನಿಕ ಸಮಾಜವಾದದ ರಚನೆಗಾಗಿ 19 ನೇ ಶತಮಾನದಲ್ಲಿ ವಿಮರ್ಶೆಮಾಡಿದ ಬಂಡವಾಳ ಆರ್ಥಿಕವ್ಯವಸ್ಥೆಯನ್ನು ಪುನಃ ವಿಮರ್ಶೆಗೊಳಪಡಿಸಿ ಅದರಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಲೆನಿನ್ ನಿರೂಪಿಸಿದನು. ಈಗ 20 ನೇ ಶತಮಾನದಲ್ಲಿ ಬಂಡವಾಳ ಆರ್ಥಿಕವ್ಯವಸ್ಥೆ ಸಾಮ್ರಾಜ್ಯವಾದೀ ರೂಪವನ್ನು (Imperialism) ಹೊಂದಿರುವುದಾಗಿ ವಾದಿಸಿದನು. ಈ ಅವಸ್ಥೆಯಲ್ಲಿ ಬಂಡವಾಳ ಆರ್ಥಿಕ ವ್ಯವಸ್ಥೆ ಮರಣಾವಸ್ಥೆಯಲ್ಲಿದ್ದು (Moribund) ಅದರಿಂದ ಹೊಮ್ಮು



లెనిన్

ತ್ತಿರುವ ವಿರಸಗಳು ಮತ್ತಷ್ಟು ವಿಸ್ತರಣೆ ಮತ್ತು ಗಾತ್ರವನ್ನು ತಾಳಿ ಪ್ರಪಂಚವನ್ನೆಲ್ಲಾ ಅಡ್ಡ ಬೆಳಸಿವೆ ಎಂದನು.[1] ಸಾಮ್ರಾಜ್ಯವಾದೀ ಬಂಡವಾಳ ಆರ್ಥಿಕವ್ಯವಸ್ಥೆ ಸ್ಪರ್ಧೆಯಿಂದ ಪ್ರಪಂಚದಮಾರುಕಟ್ಟೆಯನ್ನೆಲ್ಲಾ ಆಕ್ರಮಿಸಿದೆ ಎಂದೂ, ಸ್ಥಳಸಂಕೋಚವಾಗಿ ಲಾಭಕ್ಕೆ ಧಕ್ಕೆಬಂದಿದೆ ಎಂದೂ, ಹಿಂಗುತ್ತಿರುವ ಲಾಭದ ಅಂಚನ್ನು ತಡೆಗಟ್ಟಲು ಮತ್ತಷ್ಟು ವಸಾಹತು ಮತ್ತು ಮಾರುಕಟ್ಟೆಗಳ ಆಕ್ರಮಣಕ್ಕಾಗಿ ಬಂಡವಾಳಶಾಹಿ ರಾಷ್ಟ್ರಗಳು ಯತ್ನಿಸಿವೆ ಎಂದೂ, ಸ್ಪರ್ಧೆಯ ವ್ಯಾಪಾರ ವೈಷಮ್ಯವನ್ನು ತಂದಿದೆ ಎಂದೂ, ಯುದ್ಧ ಅನಿವಾರ್ಯವಾಗಿದೆ ಎಂದೂ, ಒಂದನೇ ಮಹಾಘೋರ ಯುದ್ಧ (1914–18) ಬಂಡವಾಳ ರಾಷ್ಟ್ರಗಳಲ್ಲೇ ಉಂಟಾಗಿರುವ ಸಾಮ್ರಾಜ್ಯವಾದೀ ಯುದ್ಧವಾಗಿದೆ ಎಂದೂ ಲೆನಿನ್ ತಿಳಿಸಿದನು.

ಸಾಮ್ರಾಜ್ಯವಾದೀ ಬಂಡವಾಳ ಆರ್ಥಿಕವ್ಯವಸ್ಥೆಯ ಕಾಲದ ಆರ್ಥಿಕ ಮತ್ತು ರಾಜಕೀಯ ಪರಿಸ್ಥಿತಿಗಳನ್ನು ಲೆನಿನ್ ವಿವರಿಸಿ ಕಾರ್ಮಿಕವರ್ಗದ ಕರ್ತವ್ಯದಬಗ್ಗೆ ವಿವರಣೆಯಿತ್ತನು ಸಾಮ್ರಾಜ್ಯವಾದೀ ರೂಪ ಬಂಡವಾಳ ಶಾಹಿ ವ್ಯವಸ್ಥೆಯ ಅತ್ಯಂತ ಕ್ರೂರ ರೂಪ, ಶೋಷಣೆಯ ಪರಮಾವಧಿ. ವಂಚನೆ, ಮೋಸ, ಮತ್ತು ಯುದ್ಧ ಸಾಮ್ರಾಜ್ಯವಾದೀ ವ್ಯವಸ್ಥೆಯ ಅಸ್ತ್ರಗಳು. ಇವು ಕಾರ್ಮಿಕ ವರ್ಗವನ್ನು ಮತ್ತಷ್ಟು ಆರ್ಥಿಕ ಅಭದ್ರತೆಯಲ್ಲಿ, ನಿರುದ್ಯೋಗ ದಲ್ಲಿ ಮತ್ತು ಶೋಷಣೆಗೆ ಸಿಲುಕಿಸುತ್ತವೆ. ಸಾಮ್ರಾಜ್ಯವಾದಿ ಬಂಡವಾಳಶಾಹಿ ವ್ಯವಸ್ಥೆ ವಿರಸಗಳಿಂದ ಪಾರಾಗಲು ಸದಾ ಯುದ್ಧದಲ್ಲಿ ನಿರತವಾಗಿರುತ್ತದೆ, ಇಲ್ಲವೇ ಪ್ರಪಂಚವನ್ನು ಯುದ್ಧದ ಕಾರ್ಮೋಡಗಳಿಂದ ಹೆದರಿಸುತ್ತಿರುತ್ತದೆ. ಜನಸಮುದಾಯವನ್ನು ಸದಾ ಯುದ್ಧದ ವಾತಾವರಣದಲ್ಲಿಟ್ಟು ಅದು ತನ್ನ ಕಷ್ಟನಷ್ಟಗಳನ್ನು ಕುರಿತು ಯೋಚಿಸಲೂ ಸಹ ಸಮಯ ಸಿಗದ ಹಾಗೆ ಮಾಡುತ್ತಿರುತ್ತದೆ. ಅಲ್ಲದೆ, ಜನಸ್ತೋಮದಲ್ಲಿ ನಿರುದ್ಯೋಗವನ್ನು ತಪ್ಪಿಸಲು ಬಂಡವಾಳಶಾಹಿ ವ್ಯವಸ್ಥೆಗೆ ಯುದ್ಧವೇ ಹೆದ್ದಾರಿಯಾಗಿದೆ. ಆದುದ ರಿಂದ ಕಾರ್ಮಿಕರು ಜಾಗ್ರತಿಗೊಂಡು, ಸಾಮ್ರಾಜ್ಯವಾದೀ ಸರ್ಕಾರ

---

(1) ಮಾರ್ಕ್ಸ್–ಏಂಗೆಲ್ಸರೂ ಸಹ ಬಂಡವಾಳ ಆರ್ಥಿಕವ್ಯವಸ್ಥೆಯ ಚಲನೆಯ ಬಗ್ಗೆ ಇದೇ ತೀರ್ಮಾನಕ್ಕೆ ಬಂದಿದ್ದರು. ಆದರೆ ಅವರು ತಮ್ಮ ವಿಮರ್ಶೆಯನ್ನು ಪ್ರಕಟಿಸಿದಾಗ ಈ ರೂಪ ವ್ಯಕ್ತವಾಗಿರಲಿಲ್ಲ.

ಗಳಿಗೆ ಮನಸೋಲದೆ, ಯುದ್ಧದಲ್ಲಿ ಭಾಗಿಗಳಾಗದೆ, ಬಂಡವಾಳಶಾಹಿ ವ್ಯವಸ್ಥೆಯ ನಿರ್ಮೂಲಕ್ಕೆ ಸಿದ್ಧರಾಗಬೇಕೆಂದು ಲೆನಿನ್ ಕರೆಕೊಟ್ಟನು.

ಇಷ್ಟಲ್ಲದೆ ಸುಧಾರಕರು ಕಾರ್ಮಿಕರ ಕ್ರಾಂತಿಯ ಬಗ್ಗೆ ತಿಳಿಸಿದ್ದ ತಪ್ಪು ಅಭಿಪ್ರಾಯಗಳನ್ನು ಖಂಡಿಸಿದನು. ಯಾವ ಮಾರ್ಕ್ಸ್‌ವಾದಿಗಳು ಕೇವಲ ವರ್ಗ ಹೋರಾಟವನ್ನು ಮಾತ್ರ ಒಪ್ಪಿಕೊಂಡು, ಬಂಡವಾಳ ಆರ್ಥಿಕವ್ಯವಸ್ಥೆಯನ್ನು ಮೂಲೋತ್ಪಾಟನೆಮಾಡಿರುವ ಕ್ರಾಂತಿಯ ಸಂರಕ್ಷಣೆಗಾಗಿ ಕಾರ್ಮಿಕರ ಏಕೈಕ ಪ್ರಭುತ್ವದ ಆವಶ್ಯಕತೆಯನ್ನು ಒಪ್ಪುವುದಿಲ್ಲವೋ ಅವರುಗಳು ಮಾರ್ಕ್ಸ್‌ವಾದದಲ್ಲಿ ಸ್ವಲ್ಪ ಭಾಗವನ್ನೂ ಅರ್ಥ ಮಾಡಿಕೊಂಡಿಲ್ಲವೆಂದನು.

ಲೆನಿನ್ ಇಪ್ಪತ್ತನೇ ಶತಮಾನದಲ್ಲಿ ಮಾರ್ಕ್ಸ್ ವಾದವನ್ನು ಬೆಳಸಿ, ರಷ್ಯಾದೇಶದಲ್ಲಿ ಕಾರ್ಯಗತಮಾಡಿ, ಯಶಸ್ವಿಯಾದ ಮಹಾ ಪುರುಷ. ಚೈತನ್ಯದಾಯಕ ಮಾರ್ಕ್ಸ್‌ವಾದದ (Creative Marxism) ಸ್ಥಾಪನಾಚಾರ್ಯ. ಆದುದರಿಂದಲೇ ಲೆನಿನ್‌ವಾದವನ್ನು ಸಾಮ್ರಾಜ್ಯ ವಾದಿ ಕಾಲದ ಮಾರ್ಕ್ಸ್‌ವಾದವೆಂದು ಕರೆಯಲಾಗಿದೆ (Leninism is Marxism in the era of Imperialism).

ಅಧ್ಯಯನ.

The class struggles in France : Marx: M & E. S. W. Vol. I, Pages 109–207. Ed. 1951.

The Eighteenth Brumaire of Louis Bonaparte : Marx : M & E. S. W. Vol. I, Pages 211–298. Ed. 1951.

The Critique of Gotha Programme : Marx : M & E. S. W. Vol. II, Pages 13-42. Ed. 1951.

Germany : Revolution and Counter Revolution : Engels.

The Civil War in France : Marx : Historical Writings, Vol. I, Page 416-444.

Letters to Dr Kugelmann on the Paris Commune : Marx : Historical Writings, Vol. I, 493-496

Letters on the Struggle for the Proletarian Party : Historical Writings, Vol. I, 547–581.

On the Paris Commune : Lenin : F. L. P. H. Moscow ; P. P. H. Bombay, 1944.

Selected Works of Lenin, Volumes 5, 6, 7 & 10. L & W. 1937, London.

ರಷ್ಯಾದಲ್ಲಿ ಸಮಾಜವಾದ

ಅಧ್ಯಾಯ 6

ಆಧುನಿಕ ಸಮಾಜವಾದದ (ಮಾರ್ಕ್ಸ್‌ವಾದ) ಇತಿಹಾಸದಲ್ಲಿ 1917 ನೇ ವರ್ಷ ಬಹಳ ಮುಖ್ಯವಾದದ್ದು. ಈ ವರ್ಷ ರಷ್ಯಾದೇಶದ ಕಾರ್ಮಿಕವರ್ಗ ಕಮ್ಯೂನಿಸ್ಟ್ ಪಕ್ಷದ ಮುಖಂಡತ್ವದಲ್ಲಿ ಜಯಪ್ರದವಾಗಿ ಸಮಾಜಕ್ರಾಂತಿಯನ್ನು ನಡೆಸಿತು. ಬಂಡವಾಳಶಾಹಿ ವ್ಯವಸ್ಥೆ ಮತ್ತು ವರ್ಗಗಳು ಮೂಲೋತ್ಪಾಟನೆ ಹೊಂದಿದವು. ಸಮಾಜವಾದೀ ಆರ್ಥಿಕವ್ಯವಸ್ಥೆ ಸ್ಥಾಪನೆಯಾಯಿತು. ರಷ್ಯಾದೇಶದಲ್ಲಿ ಕ್ರಾಂತಿಯು ನಡೆದಂತೆ ಇತರ ದೇಶಗಳಲ್ಲೂ ಕ್ರಾಂತಿ ನಡೆದಿದೆ, ಆದರೆ ಇತರ ದೇಶಗಳಲ್ಲಿ ಆಗಿರುವ ಯಾವ ಕ್ರಾಂತಿಯೂ ಸಹ ರಷ್ಯಾದೇಶದ ಕ್ರಾಂತಿಯ ಸ್ವರೂಪವನ್ನಾಗಲೀ ಅಥವಾ ರಷ್ಯಾದ ಕ್ರಾಂತಿಯ ವೈಶಿಷ್ಟ್ಯವನ್ನಾಗಲೀ ಹೊಂದಿಲ್ಲ. ಇತರ ದೇಶಗಳ ಕ್ರಾಂತಿಗಳು ಕೊನೆಗೊಂಡಂತೆ ರಷ್ಯಾದೇಶದ ಕ್ರಾಂತಿಯನ್ನೂ ಸಹ ಸಾಂಕುಶ ಪ್ರಭುತ್ವದ ಸ್ಥಾಪನೆಯಲ್ಲಿ ಮತ್ತು ಪೌರ ಮತ್ತು ರಾಜಕೀಯ ಹಕ್ಕುಗಳ ಘೋಷಣೆಯಲ್ಲಿ ಮುಕ್ತಾಯಗೊಳಿಸಲು ಸ್ವಾಮ್ಯವರ್ಗ ಯತ್ನಿಸಿತು (Bourgeoisie Revolution). ಆದರೆ ಸಂಘಟನೆ ಹೊಂದಿದ್ದ ಕಾರ್ಮಿಕವರ್ಗ ಆರ್ಥಿಕ ಪ್ರಶ್ನೆಯನ್ನು ಮುಂದಿಟ್ಟು, ಬಂಡವಾಳಶಾಹಿ ವ್ಯವಸ್ಥೆಯನ್ನು ಚ್ಯುತಿಗೊಳಿಸಲು ಚಳವಳಿ ಹೂಡಿತು. ಬಂಡವಾಳ ಆರ್ಥಿಕ ವ್ಯವಸ್ಥೆಯ ವಿನಾಶ ಮತ್ತು ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯದ ನಾಶ ಇವು ಆಗುವವರೆಗೂ ಕಾರ್ಮಿಕವರ್ಗ ಕ್ರಾಂತಿಯನ್ನು ಮುಂದುವರಿಸಿತು (Proletarian Revolution) ಆರ್ಥಿಕ ಪ್ರಶ್ನೆಯನ್ನು ಮುಂದಿಟ್ಟು, ಆರ್ಥಿಕ ಸಮಾನತೆಗಾಗಿ ಪಣತೊಟ್ಟು, ಮೊಟ್ಟಮೊದಲನೆಯ ಬಾರಿಗೆ ರಷ್ಯಾದ ಕಾರ್ಮಿಕರು ದಿಗ್ವಿಜಯವನ್ನು ಗಳಿಸಿದರು.

ರಷ್ಯಾ ದೇಶದಲ್ಲಿ ವಿಜಯೀಪ್ರದವಾದ ಕಾರ್ಮಿಕರ ಕ್ರಾಂತಿಯಲ್ಲಿ ಕಾರ್ಮಿಕವರ್ಗದ ಮತ್ತು ಕಮ್ಯೂನಿಸ್ಟ್ ಪಕ್ಷದ ಮುಖಂಡನಾಗಿ ನಿಂತ ಲೆನಿನ್ನನ ಪಾತ್ರ ಅತಿ ಮಹತ್ವವಾದದ್ದು. ಕ್ರಾಂತಿಕಾರಕ ಮಾರ್ಕ್ಸ್‌ವಾದ ಕಮ್ಯೂನಿಸ್ಟ್ ಪಕ್ಷದ ಪತಾಕೆಯಾಯಿತು. ಶೋಷಿತವರ್ಗದ ಬೇಡಿಕೆ

ಯಾದ ಆರ್ಥಿಕ ಸಮಾನತೆಯು ಸಮಾಜವಾದೀ ಆರ್ಥಿಕವ್ಯವಸ್ಥೆಯ ಸ್ಥಾಪನೆಯ ಮೂಲಕ ಬರುವುದಾಗಿಯೂ ಸಮಾಜವಾದೀ ವ್ಯವಸ್ಥೆಯ ಅನಿವಾರ್ಯತೆಯನ್ನು ರಷ್ಯಾದೇಶದ ಸ್ಥಿತಿಗತಿಗಳು ಸಾಧ್ಯಮಾಡಿಕೊಟ್ಟಿರುವುದಾಗಿಯೂ ಲೆನಿನ್ ವಿವರಣೆ ಇತ್ತನು. ಅಂತರರಾಷ್ಟ್ರೀಯ ಬಂಡವಾಳಶಾಹಿಯ (International Capitalism) ಭಾಗವಾಗಿ, ಅದರ ಏರಿಳಿತಗಳ ಅಲೆಗೂಸಾಗಿ, ಅಬಲವಾಗಿರುವ ಮತ್ತು ವಿರಸಪೂರಿತವಾಗಿರುವ ರಷ್ಯಾದ ಬಂಡವಾಳ ಆರ್ಥಿಕವ್ಯವಸ್ಥೆಯನ್ನು ಕಾರ್ಮಿಕರು ಕಿತ್ತೊಗೆದು, ಸಮಾಜವಾದೀ ಆರ್ಥಿಕವ್ಯವಸ್ಥೆಯನ್ನು ಸ್ಥಾಪಿಸುವಂತೆ ಕಾರ್ಮಿಕರಿಗೆ ಕರೆ ಇತ್ತನು. ಈ ಮಹಾಕಾರ್ಯ ಕಾರ್ಮಿಕರಿಂದಲ್ಲದೆ ಮತ್ತಾರಿಂದಲೂ ಸಾಧ್ಯವಿಲ್ಲವೆಂದನು. ಕಾರ್ಮಿಕರ ವಿಮೋಚನೆ, ಶೋಷಣೆಯ ನಾಶ, ವರ್ಗಗಳ ನಾಶ, ಎಲ್ಲವೂ ರಷ್ಯಾದೇಶದ ಬಂಡವಾಳ ವರ್ಗವನ್ನೂ ಅದಕ್ಕೆ ಆಶ್ರಯದಾತವಾಗಿರುವ ರಷ್ಯಾದ ರಾಜಮನೆತನ, ಅದರ ಪೀಳಿಗೆಯವರು ಮತ್ತು ಹಿಂಬಾಲಕರನ್ನು ಸದೆಬಡಿಯುವುದರಲ್ಲೂ ಮತ್ತು ಕಾರ್ಮಿಕರ ಆಡಳಿತದ ಘೋಷಣೆಯಲ್ಲೂ ಅಡಗಿರುವುದಾಗಿ ತಿಳಿಸಿದನು.

ರಷ್ಯಾದಲ್ಲಿ ಸಮಾಜವಾದೀ ವ್ಯವಸ್ಥೆಯ ಸ್ಥಾಪನೆಯ ಸಾಧ್ಯತೆಯನ್ನು ಮಾತ್ರ ಹೇಳಿ ಲೆನಿನ್ ತನ್ನ ವಿವರಣೆಯನ್ನು ಮುಗಿಸಲಿಲ್ಲ. ಕಾರ್ಮಿಕ ವರ್ಗದ ಮುಖಂಡತ್ವದಲ್ಲಿ ಎಲ್ಲಾ ಶೋಷಿತವರ್ಗಗಳನ್ನು ಸಂಘಟಿಸಿ, ಕ್ರಾಂತಿಮುಖರನ್ನಾಗಿ ಮಾಡಿದನು. ಕಾರ್ಮಿಕವರ್ಗಕ್ಕೆ ಎಚ್ಚರಿಕೆಯಿತ್ತು ಗಳಿಸಿರುವ ವಿಜಯವನ್ನು ಸಂರಕ್ಷಿಸಲೂ, ಬಂಡವಾಳವರ್ಗದಿಂದ ಬರುವ ಪ್ರತಿಭಟನೆಯನ್ನು ಮುರಿಯಲೂ ಮತ್ತು ಸಮಾಜವಾದೀ ಆರ್ಥಿಕ ವ್ಯವಸ್ಥೆಯನ್ನು ಸ್ಥಾಪಿಸಲೂ ಕಾರ್ಮಿಕವರ್ಗದ ಏಕೈಕ ಪ್ರಭುತ್ವ (The Dictatorship of the Proletariat) ಮತ್ತು ರಾಜ್ಯಶಕ್ತಿಯ ಉಪಯೋಗ ಇವು (The Retention of the State) ಅತ್ಯಗತ್ಯವಾಗಿವೆಯೆಂದು ತಿಳಿಸಿದನು. ಅದರಂತೆ ಕಾರ್ಮಿಕರ ಆಡಳಿತ ಮತ್ತು ಕಾರ್ಮಿಕವರ್ಗದ ಏಕೈಕ ಪ್ರಭುತ್ವ ಸ್ಥಾಪಿತವಾದವು.

ರಷ್ಯಾದ ಮಹಾಕ್ರಾಂತಿಯಲ್ಲಿ ನಾಯಕ ಲೆನಿನ್ನನ ಮುಖಂಡತ್ವದಷ್ಟೇ ರಷ್ಯಾದ ಕಮ್ಯೂನಿಸ್ಟ್ ಪಕ್ಷದ ಪಾತ್ರವೂ ಹಿರಿದಾಗಿದೆ. ಲೆನಿನ್ನನಂತಹ

ವ್ಯಕ್ತಿಯನ್ನು ಮುಖಂಡನನ್ನಾಗಿ ಪಡೆದದ್ದು ರಷ್ಯಾದ ಕಮ್ಯೂನಿಸ್ಟ್ ಪಕ್ಷದ ಭಾಗ್ಯವೆನ್ನಬಹುದು. ಮಾರ್ಕ್ಸ್ ತತ್ತ್ವ ಕಮ್ಯೂನಿಸ್ಟ್ ಪಕ್ಷಕ್ಕೆ ತಾತ್ವಿಕ ತಳಹದಿಯಾಯಿತು. ಕಮ್ಯೂನಿಸ್ಟ್ ಪಕ್ಷವು ಕಾರ್ಯಾಚರಣೆಯಲ್ಲಿ ತೊಡಗಿ ಅಪಾರ ಅನುಭವವನ್ನು ಗಳಿಸಿತ್ತು; ಜನಪ್ರಿಯವಾಗಿತ್ತು. ಜನಸಮುದಾಯದ ಆಶೋತ್ತರಗಳಿಗೆ ಮಾರ್ಕ್ಸ್–ಏಂಗೆಲ್ಸರ ವಾದದಿಂದ ಭರವಸೆಯನ್ನು ದೊರಕಿಸಿಕೊಟ್ಟು, ಜನಸಮುದಾಯವು ರಾಜಕೀಯ ಜಾಗೃತಿಯನ್ನೂ ಮತ್ತು ಕ್ರಾಂತಿಕಾರ ತೀಕ್ಷ್ಣತೆಯನ್ನೂ ಹೊಂದುವಂತೆ ಮಾಡಿತು. ಕಾರ್ಮಿಕರ ಕ್ರಾಂತಿಯು ಯಶಸ್ವಿಯಾದ ನಂತರ ಸಮಾಜವಾದೀ ಮಾರ್ಗದಲ್ಲಿ ಸಮಾಜದ ಪುನರ್ರಚನೆಯ ಕರ್ತವ್ಯಗಳ ಕಡೆಗೆ ಕಮ್ಯೂನಿಸ್ಟ್ ಪಕ್ಷ ಗಮನಕೊಟ್ಟಿತು.

ಬಹುಶಃ ರಷ್ಯಾದ ಕಾರ್ಮಿಕವರ್ಗ ಸಾಧಿಸಿದ ಘಟನೆಯ ಮಹತ್ವವನ್ನು ಅದು ಅರಿಯುವುದಕ್ಕೆ ಸಮಯವಿತ್ತೋ ಇಲ್ಲವೋ ಕಾಣದು. ಆದರೆ ರಷ್ಯಾದ ಸಮಾಜವಾದೀ ಕ್ರಾಂತಿ ವಿಶ್ವದ ಘಟನೆಯಾಗಿತ್ತು. ಅದುವರೆಗೂ ಶಾಶ್ವತವೆಂದು ನಂಬಿದ್ದ ಖಾಸಗೀ ಸ್ವಾಮ್ಯ, ಬಂಡವಾಳ ಆರ್ಥಿಕವ್ಯವಸ್ಥೆ, ಅವನ್ನು ಪುಷ್ಟೀಕರಿಸುವ ತತ್ತ್ವ, ರಾಜಕೀಯ, ನ್ಯಾಯ ಎಲ್ಲವೂ ತಲೆಕೆಳಗಾದುದನ್ನು ರಾಜಕಾರಣಪಟುಗಳು ಕಂಡರು. ಅವರ ಪಾಲಿಗೆ ನಾಗರಿಕತೆಯೇ ಮುಕ್ತಾಯಗೊಂಡಂತೆ ಭಾಸವಾಯಿತು. ಖಾಸಗೀ ಸ್ವಾಮ್ಯದ ವಿರುದ್ಧ ರಷ್ಯಾದ ಕಾರ್ಮಿಕವರ್ಗ ನಡೆಸಿದ ಕ್ರಾಂತಿ ಇತರ ಬಂಡವಾಳಶಾಹಿ ದೇಶಗಳ ಕಾರ್ಮಿಕವರ್ಗಕ್ಕೆ ಹರಡದಂತೆ ತಡೆಯಲೂ ಮತ್ತು ರಷ್ಯಾದ ಕಾರ್ಮಿಕ ಕ್ರಾಂತಿಯನ್ನು ಮುರಿಯಲೂ ಬಂಡವಾಳಶಾಹಿ ಸರ್ಕಾರಗಳಾದ ಅಮೆರಿಕಾ, ಇಂಗ್ಲೇಂಡ್, ಫ್ರಾನ್ಸ್ ಇತ್ಯಾದಿ ದೇಶಗಳು ತಮ್ಮ ಸೈನ್ಯಗಳನ್ನು ನುಗ್ಗಿಸಿದವು. ರಷ್ಯಾದಲ್ಲಿ ವಿನಾಶಮಾಡಲ್ಪಟ್ಟಿದ್ದ ಬಂಡವಾಳವರ್ಗ ದಂಗೆ ಏಳುವಂತೆ ಪ್ರೇರೇಪಿಸಿದವು. ಈ ಸಂದಿಗ್ಧ ಪರಿಸ್ಥಿತಿಯಲ್ಲಿ ರಷ್ಯಾದ ಸಮಾಜವಾದೀ ಕ್ರಾಂತಿಯ ಅಳಿವು ಅಥವಾ ಉಳಿವು ತೀರ್ಮಾನವಾಗಬೇಕಾಗಿತ್ತು.

ಆದರೆ ರಷ್ಯಾದ ಕಾರ್ಮಿಕವರ್ಗ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ದಿಟ್ಟತನದಿಂದಲೂ ಧೈರ್ಯದಿಂದಲೂ ಪರಿಸ್ಥಿತಿಯನ್ನು ಎದುರಿಸಿತು. ವಿದೇಶಿ ಸೈನ್ಯಗಳನ್ನು ಹಿಮ್ಮೆಟ್ಟಿಸಲಾಯಿತು. ದಂಗೆ ಎದ್ದಿದ್ದ ಬಂಡವಾಳ

ವರ್ಗದ ಪೀಳಿಗೆಗಳನ್ನು ಧ್ವಂಸಮಾಡಲಾಯಿತು. ಈ ಸಮಯದಲ್ಲಿ ರಷ್ಯಾದ ಕಾರ್ಮಿಕವರ್ಗಕ್ಕೆ ಅಂತರರಾಷ್ಟ್ರೀಯ ಕಾರ್ಮಿಕವರ್ಗ ನೀಡಿದ ಬೆಂಬಲ, ಕೊಟ್ಟ ಪ್ರೋತ್ಸಾಹ ಮತ್ತು ತೋರಿಸಿದ ಸಹಾನುಭೂತಿ ಚಿರಸ್ಮರಣೀಯ ವಾಗಿವೆ. ಇತಿಹಾಸದಲ್ಲಿ ಮೊಟ್ಟಮೊದಲನೆಯ ಬಾರಿಗೆ ಪ್ರಪಂಚದ ಆರನೇ ಒಂದು ಭಾಗದಷ್ಟು ಪ್ರದೇಶದಲ್ಲಿ ಸಮಾಜವಾದೀ ವ್ಯವಸ್ಥೆ ಸ್ಥಾಪನೆ ಯಾಯಿತು.

ಕೂಡಲೇ ಕಮ್ಯೂನಿಸ್ಟ್ ಪಕ್ಷ ವಿರಸಗಳಿಗೂ, ಆರ್ಥಿಕ ದುಃಸ್ಥಿತಿಗೂ ಶೋಷಣೆಗೂ, ನಿರುದ್ಯೋಗಕ್ಕೂ ಆವಾಸಸ್ಥಾನವಾಗಿದ್ದ ಬಂಡವಾಳಆರ್ಥಿಕ ವ್ಯವಸ್ಥೆ ಮತ್ತು ಅದರ ಪ್ರತಿನಿಧಿಯಾದ ಬಂಡವಾಳವರ್ಗದ ವಿನಾಶಕ್ಕೆ ಗಮನಕೊಟ್ಟಿತು. ದೇಶದ ಸಂಪತ್ತು ಮತ್ತು ಉತ್ಪಾದನಾ ಸಾಧನಗಳು ಸಮಾಜದ ಸ್ವತ್ತೆಂದು ಘೋಷಿಸಲಾಯಿತು. ದೇಶದ ಕೈಗಾರಿಕಾ ಉದ್ಯಮ ಗಳು, ಸಂಚಾರ ಮಾರ್ಗಗಳು, ಬ್ಯಾಂಕುಗಳು, ಗಣಿಗಳು, ಭೂಮಿ ಇತ್ಯಾದಿ ಎಲ್ಲವೂ ರಾಷ್ಟ್ರೀಕರಣವಾದವು. ಪ್ರತಿಯೊಬ್ಬನೂ ಅವನವನ ಯೋಗ್ಯತಾ ನುಸಾರ ದುಡಿಯಲು ಮತ್ತು ಪ್ರತಿಫಲ ಹೊಂದಲು ಶಾಸನವಾಯಿತು. ಎಲ್ಲರೂ ದುಡಿಮೆಯುವರಾದರು. ಉತ್ಪಾದನೆಯಿಂದ ದೊರಕುವ ಹೆಚ್ಚು ಸಂಪತ್ತು ಸಮಾಜಕ್ಕೆ ಸೇರುವಂತಾಯಿತು. ಉಳುವವನಿಗೆ ಮಾತ್ರ ಭೂಮಿ ಎಂದು ಘೋಷಿಸಲಾಯಿತು. ಜಮೀನ್‌ದಾರವರ್ಗಕ್ಕೆ ಸೇರಿದ ಭೂಮಿಯನ್ನು ಯಾವ ಪರಿಹಾರವನ್ನೂ ಕೊಡದೆ ವಶಪಡಿಸಿಕೊಂಡು ರೈತರಿಗೆ ಮುಫ ತ್ತಾಗಿ ಹಂಚಲಾಯಿತು. ಬಡರೈತರಿಗೆ ಸಹಾಯಕ ಬೇಸಾಯ ಸಾಮಗ್ರಿ ಗಳನ್ನೂ ಸಹ ಕೊಡಲಾಯಿತು. ನಿರುದ್ಯೋಗವನ್ನು ಹೋಗಲಾಡಿಸಲು, ಬಡತನವನ್ನು ನೀಗಿಸಲು ಮತ್ತು ದೇಶದ ಆರ್ಥಿಕ ಅಭಿವೃದ್ಧಿಯನ್ನು ಶೀಘ್ರವಾಗಿ ಸಾಧಿಸಲು ಉತ್ಪಾದನೆಯಕಡೆ ಗಮನಕೊಡಲಾಯಿತು.

ಈ ಉದ್ದೇಶ ಸಾಧಿಸಲು ಯೋಜನೆ ಮತ್ತು ಯೋಜನೆಗೆ ಒಳಪಟ್ಟ ಕೈಗಾರಿಕಾ ಮತ್ತು ಬೇಸಾಯ ರಂಗಗಳ ಅಭಿವೃದ್ಧಿ ರಾಷ್ಟ್ರದ ಪ್ರಮುಖ ಅಂಗವಾಯಿತು. ಮೂಲಕೈಗಾರಿಕೆಗಳನ್ನು (Capital Industries) ಸ್ಥಾಪಿಸುವುದಕ್ಕೆ ಹೆಚ್ಚು ಗಮನಕೊಡಲಾಯಿತು. ವ್ಯವಸಾಯ ಕ್ಷೇತ್ರದಲ್ಲಿ ಸಾಮೂಹಿಕ ವ್ಯವಸಾಯದಿಂದ ಆಗುವ ಪ್ರಯೋಜನಗಳನ್ನು ಸಣ್ಣಪುಟ್ಟ ಸ್ವಾವಲಂಬೀ ಹಿಡುವಳಿದಾರರಿಗೆ ತಿಳಿಸಿ ಅವರುಗಳನ್ನು ಪರಸ್ಪರ ಸಹಾಯದ

ಬೇಸಾಯ ಕ್ಷೇತ್ರಗಳಲ್ಲಿ ಒಟ್ಟುಗೂಡಿಸಲು (Co-operative Farming) ಯತ್ನಿಸಲಾಯಿತು. ಇದರ ಜೊತೆಗೆ ಸಾಮೂಹಿಕ ಬೇಸಾಯ ಕ್ಷೇತ್ರಗಳನ್ನು (Collective Farming) ನಿರ್ಮಿಸಲಾಯಿತು. ಇದರ ಫಲವಾಗಿಯೂ ಮತ್ತು ಉತ್ಪಾದನೆ ಹೆಚ್ಚಿಸಲು ಉಪಯೋಗಿಸಲಾದ ಆಧುನಿಕ ಉಪಕರಣಗಳು, ವಿಜ್ಞಾನ, ಔದ್ಯೋಗಿಕ ಪರಿಶ್ರಮ ಇವುಗಳ ನೆರವಿನಿಂದಲೂ ಕೈಗಾರಿಕಾ ಮತ್ತು ಬೇಸಾಯದ ರಂಗಗಳಲ್ಲಿ ಉತ್ಪಾದನೆ ಹೆಚ್ಚಲಾರಂಭಿಸಿತು.

ಒಟ್ಟಿನಲ್ಲಿ ಆದ ಬದಲಾವಣೆಗಳು ಜನಸಮುದಾಯವನ್ನು ಆಕರ್ಷಿಸಿದವು. ಸಮಾಜವಾದೀ ಆರ್ಥಿಕ ವ್ಯವಸ್ಥೆಯು ಮೇಲ್ಮೆ ಪ್ರದರ್ಶನವಾಯಿತು. ನಿರುದ್ಯೋಗವಿಲ್ಲದಂತಾಯಿತು. ಪ್ರತಿಯೊಬ್ಬನೂ ತನ್ನ ಯೋಗ್ಯತಾನುಸಾರದ ದುಡಿಮೆಗೆ ತಕ್ಕಫಲವನ್ನು ಹೊಂದುವ ಅವಕಾಶವನ್ನು ಕಣ್ಣಾರೆ ಕಂಡನು. ಶೋಷಣೆ, ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯ, ಲಾಭಕ್ಕಾಗಿ ಉತ್ಪಾದನೆ ಇವುಗಳಿಲ್ಲದಿರುವ ಸುಗಮ ಸಮಾಜವಾದೀ ಆರ್ಥಿಕ ವ್ಯವಸ್ಥೆಯನ್ನು ಜನತೆ ಕಂಡಿತು. ಸಮಾಜವಾದೀ ಆರ್ಥಿಕವ್ಯವಸ್ಥೆಯಲ್ಲಿ ವ್ಯಕ್ತಿಗಳು ತಮ್ಮ ಸ್ಥಾನಮಾನಗಳನ್ನು ವೀಕ್ಷಿಸಿ ನೋಡಿದರು. ರಾಜಕೀಯ ಮತ್ತು ಸಾಮಾಜಿಕ ಕ್ಷೇತ್ರಗಳಲ್ಲಿರುವ ಸಮಾನತೆಯ ಜೊತೆಗೆ ಆರ್ಥಿಕ ಕ್ಷೇತ್ರದಲ್ಲೂ ಸಮಾನತೆಯು ಇರುವುದನ್ನು ಕಂಡರು. ಸಮಾಜದ ಉತ್ಪಾದನಾ ವಸ್ತುಗಳು ಯಾರಿಗೂ ಸೇರಿರದೆ, ಎಲ್ಲರೂ ಅವುಗಳಿಗೆ ಬಾಧ್ಯರಾಗಿರುವುದನ್ನು ಕಂಡರು. ಅವರವರ ದುಡಿಮೆಗೆ ತಕ್ಕಂತೆ ಪ್ರತಿಫಲ ಹೊಂದಲು ಮತ್ತು ತಾವುಗಳು ಕೆಲಸ ಮಾಡುವ ಕಾರ್ಖಾನೆ ಮತ್ತು ಬೇಸಾಯ ಕೇಂದ್ರಗಳ ಆಡಳಿತದಲ್ಲಿ ಭಾಗವಹಿಸಲು ಇರುವ ಅವಕಾಶವನ್ನು ಜನರು ಕಂಡರು.

ಸಮಾಜವಾದೀ ವ್ಯವಸ್ಥೆ ಸುಗಮವಾಗಿ ಯೋಜನೆಗಳ ಮೂಲಕ ಮುಂದೆ ಸಾಗುತ್ತಿರುವಾಗ ಸಮಾಜವಾದೀ ವ್ಯವಸ್ಥೆಯ ಬಗ್ಗೆ ಕೆಲವು ತಪ್ಪು ಅಭಿಪ್ರಾಯಗಳು ಕಾಣಿಸಿಕೊಂಡವು. ಈ ತಪ್ಪು ಅಭಿಪ್ರಾಯಗಳಿಗೆ ಸಮಾಜವಾದ ಮನ್ನಣೆ ಇತ್ತಿದೆ ಎಂದೂ ಅಪಪ್ರಚಾರ ನಡೆಯಿತು. ಇಂತಹ ಅಭಿಪ್ರಾಯಗಳಲ್ಲಿ ಸಮಾನತೆಯ ಬಗ್ಗೆ ಬಂದ ತಪ್ಪು ವಿವರಣೆ ಬಹು ಮುಖ

ವಾದದ್ದು.[1] ಸಮಾನತೆ ಎಂದರೆ ಎಲ್ಲಾ ವಿಷಯದಲ್ಲೂ ಸಮಾನತೆ ಎಂದೂ, ವ್ಯಕ್ತಿ ವ್ಯಕ್ತಿಗಳಿಗೆ ಯಾವ ವ್ಯತ್ಯಾಸವೂ ಇಲ್ಲವೆಂದೂ, ವೈಯುಕ್ತಿಕ ವ್ಯಕ್ತಿತ್ವಕ್ಕೆ ಅವಕಾಶವೇ ಇಲ್ಲವೆಂದೂ ವಿವರಣೆಗಳು ಬಂದವು. ಲೆನಿನ್ನನ ಮರಣಾನಂತರ ರಷ್ಯಾದ ಕಮ್ಯೂನಿಸ್ಟ್ ಪಕ್ಷದ ನಾಯಕನಾಗಿ ನಿಂತ ಸ್ಟಾಲಿನ್ ಈ ತಪ್ಪು ಅಭಿಪ್ರಾಯವನ್ನು ಮೂದಲಿಸಿದನು. ಸಮಾನತೆಯಬಗ್ಗೆ ಆತನು ಕೊಟ್ಟಿರುವ ವಿವರಣೆ ಬಹು ಮುಖ್ಯವಾದದ್ದು: 'ಸಮಾನತೆಯನ್ನು ತರಲು ಹೊರಟಿರುವ ಸಮಾಜವಾದ ವ್ಯಕ್ತಿಗಳ ಆವಶ್ಯಕತೆಗಳನ್ನೂ ಮತ್ತು ಅವರುಗಳ ಜೀವನವನ್ನೂ ಸಮಗೊಳಿಸುವುದಾಗಿದೆ ಎಂದು ಯೋಚಿಸುವವರು ಇದ್ದಾರೆ. ಇಂತಹ ಭಾವನೆಗಳು ಮಾರ್ಕ್ಸ್–ಲೆನಿನ್ನರ ವಾದದೊಡನೆ ಯಾವ ಸಂಬಂಧವನ್ನೂ ಹೊಂದಿಲ್ಲವೆಂದು ಹೇಳಬೇಕಾಗಿದೆ. ಮಾರ್ಕ್ಸ್‌ವಾದದ ಪ್ರಕಾರ, ಸಮಾನತೆ ಎಂದರೆ ವ್ಯಕ್ತಿಗಳ ಆವಶ್ಯಕತೆಗಳನ್ನೂ ಅವರ ಜೀವನವನ್ನೂ ಸಮಗೊಳಿಸುವುದಲ್ಲ, **ವರ್ಗಗಳನ್ನು ನಾಶಪಡಿಸುವುದಾಗಿದೆ**. ಎಂದರೆ: (1) ಬಂಡವಾಳವರ್ಗವನ್ನು ಉರುಳಿಸಿ, ಅವರಿಗೆ ಸೇರಿರುವುದನ್ನು ವಶಪಡಿಸಿಕೊಂಡು, ಎಲ್ಲಾ ದುಡಿಮೆಮಾಡುವ ಜನರನ್ನೂ ಶೋಷಣೆಯಿಂದ ತಪ್ಪಿಸುವುದು, (2) ಉತ್ಪಾದನಾ ಸಾಧನಗಳನ್ನು ಸಮಾಜದ ವಶಕ್ಕೆ ತಂದು ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವನ್ನು ನಾಶಮಾಡುವುದು, (3) ಪ್ರತಿಯೊಬ್ಬನೂ ತನ್ನ ಶಕ್ತ್ಯಾನುಸಾರ ಕೆಲಸಮಾಡುವ ಸಮಾನಕರ್ತವ್ಯವನ್ನು ಮತ್ತು ಎಲ್ಲ ದುಡಿಮೆಯ ಜನರು ಕೆಲಸಕ್ಕೆ ತಕ್ಕ ಪ್ರತಿಫಲವನ್ನು ಪಡೆಯುವ ಸಮಾನ ಹಕ್ಕನ್ನು (ಸಮಾಜವಾದೀ ಸಮಾಜ) ಹೊಂದುವುದು.[2] ಮಾರ್ಕ್ಸ್‌ವಾದವು ಸಮಾಜವಾದೀ ವ್ಯವಸ್ಥೆಯ ಕಾಲವಲ್ಲಾಗಲೀ ಅಥವಾ

---

(1) ಕೆಲವು ಕಾಲ ಹಿಂದುಳಿದ ರಷ್ಯಾದಲ್ಲಿ ಸಮಾಜವಾದೀ ವ್ಯವಸ್ಥೆ ಸಾಧ್ಯವೇ ಎಂಬುದರ ವಿಷಯುವಾಗಿ ಬಹಳ ಜಿಜ್ಞಾಸೆ ನಡೆಯಿತು. ಈ ಜಿಜ್ಞಾಸೆಯನ್ನು 9 ಮತ್ತು 10 ನೇ ಅಧ್ಯಾಯಗಳಲ್ಲಿ ಚರ್ಚಿಸಲಾಗಿದೆ.

(2) ಸಮಾಜವಾದೀ ಕ್ರಾಂತಿಯಾದ ಕೂಡಲೆ ಸಮಾಜವಾದೀ ಸಮಾಜ (Socialist Society) ವ್ಯವಸ್ಥೆ ಹೊಂದುತ್ತದೆ. ತದನಂತರ ಸಮವಾದೀ (ಕಮ್ಯೂನಿಸ್ಟ್) ಸಮಾಜ ರೂಪಗೊಳ್ಳುತ್ತದೆ. ಈ ಸಂದರ್ಭದಲ್ಲಿ ಸಮಾಜವಾದೀ ಮತ್ತು ಸಮವಾದೀ (ಕಮ್ಯೂನಿಸ್ಟ್) ಎಂಬ ಶಬ್ದಗಳ ಪ್ರಯೋಗಾರ್ಥಕ್ಕೂ ಮತ್ತು ವಿವರಣೆಗೂ ಪುಟ 29 ನೋಡಿ.

ಕಮ್ಯೂನಿಸ್ಟ್ ವ್ಯವಸ್ಥೆಯ ಕಾಲದಲ್ಲಾಗಲೀ ಜನರ ಅಭಿರುಚಿ ಮತ್ತು ಆವಶ್ಯಕತೆಗಳು ಗುಣದಲ್ಲಾಗಲೀ ಗಾತ್ರದಲ್ಲಾಗಲೀ ಒಂದೇ ಸಮಾನವಾಗಿರುವುದಿಲ್ಲವೆಂಬ ಆಧಾರದ ಮೇಲೆ ಮುಂದುವರೆದಿದೆ. ಇದೇ ಮಾರ್ಕ್ಸ್‌ವಾದದಲ್ಲಿ ಸಮತ್ವ ಶಬ್ದಕ್ಕೆ ಇರುವ ಅರ್ಥ. ಮಾರ್ಕ್ಸ್‌ವಾದ ಇನ್ನಾವ ವಿಧವಾದ ಸಮಾನತೆಯನ್ನು ಒಪ್ಪಿಲ್ಲ ಮತ್ತು ಅಂಗೀಕರಿಸಿಯೂ ಇಲ್ಲ.

'ಸಮಾಜವಾದ ವ್ಯಕ್ತಿಗಳ ಜೀವನ ಮತ್ತು ಅಭಿರುಚಿಯನ್ನು ಮಟ್ಟ ಮಾಡು (Levelling) ವುದರ ಮೂಲಕ ಸಮಾನತೆ ತರುತ್ತಿದೆ ಎನ್ನುವ ಅಭಿಪ್ರಾಯಕ್ಕೆ ಬರುವುದೂ ಮತ್ತು ಮಾರ್ಕ್ಸ್‌ವಾದಿಗಳ ಪ್ರಕಾರ ಎಲ್ಲರೂ ಒಂದೇ ವಿಧವಾದ ಬಟ್ಟೆಯನ್ನು ಧರಿಸಬೇಕು, ಒಂದೇ ವಿಧವಾದ ಆಹಾರವನ್ನು ಒಂದೇ ಪ್ರಮಾಣದಲ್ಲಿ ಎಲ್ಲರೂ ತೆಗೆದುಕೊಳ್ಳಬೇಕು ಎನ್ನುವುದೂ ಮಾರ್ಕ್ಸ್‌ವಾದವನ್ನು ಅಪಹಾಸ್ಯಕ್ಕೆ ಗುರಿಮಾಡುವುದಾಗಿದೆ.

'ಮಾರ್ಕ್ಸ್‌ವಾದ ಎಲ್ಲರನ್ನೂ ಒಂದೇ ಮಟ್ಟಕ್ಕೆ ತರುವ ಕ್ರಿಯೆಗೆ ವಿರುದ್ಧವಾದ ಶಕ್ತಿ ಎಂಬುದನ್ನು ಎಷ್ಟು ಬೇಗನೆ ತಿಳಿದುಕೊಂಡರೆ ಅಷ್ಟು ಉತ್ತಮ. ಈ ಕಾರಣದಿಂದಲೇ ಮಾರ್ಕ್ಸ್-ಏಂಗೆಲ್ಸರು ತಮ್ಮ ಕಮ್ಯೂನಿಸ್ಟ್ ಪ್ರಣಾಳಿಕೆಯಲ್ಲಿ ಪ್ರಾಚೀನ ಸಮಾಜವಾದಗಳನ್ನು ಬಹುಉಗ್ರವಾಗಿ ಟೀಕಿಸಬೇಕಾಯಿತು. ಪ್ರಾಚೀನ ಸಮಾಜವಾದಗಳು ಎಲ್ಲರಲ್ಲಿಯೂ ವಿರಕ್ತಿಯನ್ನೂ ಮತ್ತು ಅತಿ ಅನಾಗರಿಕ ಸಮಾಜದಲ್ಲಿರುವ ಸಮಾನತೆಯನ್ನೂ ಬೋಧಿಸಿದ್ದರಿಂದ ಅವನ್ನು ಪ್ರಗತಿ ವಿರೋಧಿ ಎಂದರು. ಸಮಾನತೆಗಾಗಿ ಕಾರ್ಮಿಕರು ಮಾಡುತ್ತಿರುವ ಬೇಡಿಕೆಯ ನಿಜಸ್ವರೂಪವೆಂದರೆ ವರ್ಗಗಳನ್ನು ನಾಶಮಾಡಬೇಕೆನ್ನುವ ಬೇಡಿಕೆಯಾಗಿದೆ.'[1]

ಈ ವಿವರಣೆ ಸಮಾಜವಾದೀ ಆರ್ಥಿಕವ್ಯವಸ್ಥೆಯಲ್ಲಿ ವ್ಯಕ್ತಿಗಳ ಆರ್ಥಿಕ ಸ್ಥಾನಮಾನಗಳನ್ನು ಅರಿಯುವುದಕ್ಕೆಸಾಧ್ಯಮಾಡಿಕೊಟ್ಟಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವಂತೆ ವ್ಯಕ್ತಿಗಳು ಉತ್ಪಾದನಾ ಸಾಧನಗಳನ್ನು ಖಾಸಗಿಯಾಗಿ ಹೊಂದಿರಲೂ ಮತ್ತು ಕೂಲಿಗಾರರನ್ನು ನೇಮಿಸಿಕೊಂಡು ತಮಗೆ ಲಾಭ ದೊರಕುವ ರೀತಿಯಲ್ಲಿ ಪದಾರ್ಥಗಳನ್ನು ಉತ್ಪಾದಿಸಿ

(1) 17 ನೇ ಕಮ್ಯೂನಿಸ್ಟ್ ಪಕ್ಷದ ಕಾಂಗ್ರೆಸಿಗೆ ಸ್ಟಾಲಿನ್ ಇತ್ತ ವರದಿಯಿಂದ: (Stalin Reports–P. P. H. Bombay, 1944, Page 161).

ವಿಕ್ರಯಮಾಡಲೂ ಸಮಾಜವಾದೀ ಆರ್ಥಿಕವ್ಯವಸ್ಥೆಯಲ್ಲಿ ಅವಕಾಶವೇ ಇಲ್ಲ. ಈ ಬಗೆಯ ಸ್ವಾತಂತ್ರ್ಯ ಆರ್ಥಿಕ ರಂಗದಲ್ಲಿ ವರ್ಗ ವಿರಸ, ಶೋಷಣೆ, ನಿರುದ್ಯೋಗಗಳನ್ನು ತರುವುದರಿಂದಲೂ, ಸಮಾಜವನ್ನು ಇಬ್ಭಾಗವಾಗಿ–ಸ್ವಾಮ್ಯವುಳ್ಳವರ್ಗ ಮತ್ತು ಸ್ವಾಮ್ಯವಿಲ್ಲದವರ್ಗ–ಒಡೆಯುವುದರಿಂದಲೂ, ಐಶ್ವರ್ಯವಂತರಾದವರು ಇನ್ನೂ ಐಶ್ವರ್ಯವಂತರಾಗುವಂತೆ ಮತ್ತು ಸ್ವಾಮ್ಯವಿಲ್ಲದವರು ಇನ್ನೂ ದುಃಸ್ಥಿತಿಯ ಜೀವನ ನಡೆಸುವಂತೆ ಮಾಡುವುದರಿಂದಲೂ ಬಂಡವಾಳಶಾಹಿ ವ್ಯವಸ್ಥೆ ಮತ್ತು ಅದರ ಪ್ರತಿನಿಧಿ ಬಂಡವಾಳವರ್ಗವನ್ನು ತೊಡೆದು ಹಾಕಲಾಗಿದೆ. ಉತ್ಪಾದನಾ ಸಾಧನಗಳನ್ನು ಖಾಸಗಿಯಾಗಿ ಹೊಂದಿರುವುದು ಸಮಾಜಕ್ಕೆ ಕಂಟಕವೆಂದು ಬಗೆದು ಅವುಗಳನ್ನು ಸಮಾಜೀಕರಣ ಮಾಡಲಾಗಿದೆ. ದುಡಿಮೆ ಮಾಡಲು ಮತ್ತು ದುಡಿಮೆಗೆ ತಕ್ಕ ಪ್ರತಿಫಲ ಪಡೆಯಲು ಹಕ್ಕು ಇದೆ. ಶೋಷಣೆಗೆ ಅವಕಾಶವಿಲ್ಲದಿರುವ ಹೊಸ ಬಗೆಯ ಸಮಾಜವಾದೀ ಸ್ವಾತಂತ್ರ್ಯವನ್ನೂ ಸಮಾನತೆಯನ್ನೂ ವ್ಯಕ್ತಿಗಳು ಹೊಂದಿದ್ದಾರೆ. ಉತ್ಪಾದನಾ ಸಾಧನಗಳಲ್ಲಿ ಸ್ವಾಮ್ಯ, ಸಮಾಜದ ಏಳಿಗೆಗೆ ಮತ್ತು ವ್ಯಕ್ತಿಗಳ ಅಭಿವೃದ್ಧಿಗೆ ಅಡ್ಡಿಬರುವ ಆರ್ಥಿಕ ಸ್ವಾತಂತ್ರ್ಯ ಇವುಗಳು ಹೊರತು, ಮಿಕ್ಕ ಎಲ್ಲ ವಿಧದ ಸ್ವಾತಂತ್ರ್ಯಗಳನ್ನು ವ್ಯಕ್ತಿಗಳು ಅನುಭವಿಸಲು ಬಾಧ್ಯರಿದ್ದಾರೆ.

ರಷ್ಯಾದಲ್ಲಿ ಸಮಾಜವಾದೀ ವ್ಯವಸ್ಥೆ ಆರ್ಥಿಕವಾಗಿ ವರ್ಗರಹಿತ ಸಮಾಜವನ್ನು ಉದ್ಘೋಷಿಸಿದ್ದರೆ, ರಾಜಕೀಯ ರಂಗದಲ್ಲಿ ಪ್ರಜಾಸತ್ತಾತ್ಮಕ ಧ್ಯೇಯಗಳಿಗೆ ಮಾನ್ಯತೆ ಕೊಟ್ಟಿದೆ. [1]

---

(1) ಸೋವಿಯಟ್ ಪ್ರಜಾಪ್ರಭುತ್ವಕ್ಕೂ ಬಂಡವಾಳಶಾಹಿ ಪ್ರಜಾಪ್ರಭುತ್ವಕ್ಕೂ ಹಲವು ವ್ಯತ್ಯಾಸಗಳಿವೆ. ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯ, ಕೂಲಿಯವರನ್ನು ನೇಮಿಸಿಕೊಂಡು ಲಾಭಕ್ಕಾಗಿ ನಡೆಯುವ ಉತ್ಪಾದನೆ, ಖಾಸಗೀ ಆರ್ಥಿಕ ವ್ಯವಹಾರ ಉದ್ಯಮಗಳಲ್ಲಿ ಸರ್ಕಾರ ಪ್ರವೇಶಿಸದಿರುವುದು, ಇವು ಬಂಡವಾಳಶಾಹಿ ಪ್ರಜಾಸತ್ತೆರಾಷ್ಟ್ರಗಳ ಆರ್ಥಿಕವ್ಯವಸ್ಥೆಯಾಗಿದೆ. ಇದಕ್ಕೆ ಪ್ರತಿಯಾಗಿ ಸಮಾಜವಾದೀ ಆರ್ಥಿಕವ್ಯವಸ್ಥೆ ಸೋವಿಯಟ್ ಪ್ರಜಾಸತ್ತೆಯ ಆಧಾರವಾಗಿದೆ ಆರ್ಥಿಕವ್ಯವಸ್ಥೆಗೂ ರಾಜ್ಯವ್ಯವಸ್ಥೆಗೂ ನಿಕಟ ಸಂಬಂಧವಿದೆ ಎಂದು ಸೋವಿಯಟ್ ಪ್ರಜಾಸತ್ತೆ ತಿಳಿಸುತ್ತದೆ. ಬಂಡವಾಳ ಆರ್ಥಿಕವ್ಯವಸ್ಥೆಯ

ಮೊದಲನೆಯದಾಗಿ, ರಷ್ಯಾದಲ್ಲಿದ್ದ ವಿವಿಧ ಜನಾಂಗಗಳಿಗೆ ಸ್ವಯಂ ನಿರ್ಣಯದ ಹಕ್ಕನ್ನು (Right of Self Determination) ನೀಡಲಾಗಿದೆ. ಪ್ರತಿ ಜನಾಂಗ ತನ್ನ ಸ್ವಂತ ಇಚ್ಛೆಯಿಂದ ಸಮಾಜವಾದೀ ರಾಜ್ಯವ್ಯವಸ್ಥೆಯಲ್ಲಿ ಭಾಗವಹಿಸಲು ಅವಕಾಶ ಕೊಡಲಾಗಿದೆ. ಈ ಜನಾಂಗಗಳು ರಷ್ಯಾದೇಶದಲ್ಲಿ " ಸಂಯುಕ್ತ ಸಮಾಜವಾದೀ ಸೋವಿಯಟ್ ರಾಷ್ಟ್ರಗಳು " (Union of the Soviet Socialist Republics) ಎಂಬ ಹೆಸರಿನಿಂದ ಒಂದು ಒಕ್ಕೂಟಕ್ಕೆ ಸೇರಿವೆ.

ಎರಡನೆಯದಾಗಿ, ಕ್ರಾಂತಿಯ ಕಾಲದಲ್ಲಿ ಕಾರ್ಮಿಕವರ್ಗದ ಅಧಿಕಾರವನ್ನು ವ್ಯಕ್ತಪಡಿಸುವ ಸೋವಿಯಟ್‌ಗಳು (ಆಡಳಿತ ಸಮಿತಿಗಳು) ಪ್ರತಿ ಸರ್ಕಾರದ ಹಾಗೆ (Counter Government) ದೇಶದಾದ್ಯಂತ ಉದ್ಭವಿಸಿದವು. ಕಾರ್ಮಿಕರ ಏಕೈಕ ಪ್ರಭುತ್ವವನ್ನು ಪ್ರತಿಬಿಂಬಿಸುವ ಕೇಂದ್ರಗಳಾದವು. ಸೋವಿಯಟ್‌ಗಳಿಂದ ಚುನಾಯಿತರಾದ ಪ್ರತಿನಿಧಿಗಳಿಂದ ಪ್ರಾಂತೀಯ ಮತ್ತು ಕೇಂದ್ರಸರ್ಕಾರ ರಚನೆಯಾಯಿತು.

ಮೂರನೆಯದಾಗಿ, ಸೋವಿಯಟ್ ಪೌರರು ವಾಕ್‌ಸ್ವಾತಂತ್ರ್ಯವನ್ನೂ, ಅಭಿಪ್ರಾಯ ಸ್ವಾತಂತ್ರ್ಯವನ್ನೂ, ಸಂಘ ಸ್ವಾತಂತ್ರ್ಯವನ್ನೂ, ಮತಕೊಡುವ

ಆಧಾರದಮೇಲೆ ರೂಪಿತವಾಗಿರುವ ಪ್ರಜಾಸತ್ತೆ ನೈಜ ಪ್ರಜಾಸತ್ತೆಯಾಗುವುದಿಲ್ಲ (Real Democracy). ಹಣದ ಪ್ರಭಾವವಿದ್ದು, ರಾಜಕೀಯವೂ, ಸಾರ್ವಜನಿಕ ಜೀವನವೂ ಹಣವುಳ್ಳವರ ಅಥವ ಅವರ ಹಿಂಬಾಲಕರ ಅಥವ ರಾಜಕೀಯ ನಡೆಸಿ ಹಣ ಸಂಪಾದನೆ ಮಾಡಿಕೊಳ್ಳುವವರ ಸ್ವತ್ತು ಅಥವ ಉದ್ಯೋಗವಾಗುತ್ತದೆ. ಸರ್ಕಾರವು ಹಣಗಾರರ ಅಥವ ಸ್ವಾಮ್ಯವುಳ್ಳವರ ಹಿತರಕ್ಷಣೆಗಾಗಿ ಇರುತ್ತದೆ. ವರ್ಗಗಳ ಇರುವಿಕೆಯನ್ನೂ ಸ್ವಾಮ್ಯದ ಪ್ರಭಾವವನ್ನೂ ನಾಶಪಡಿಸಲು ಹೋರಾಟ ಹೂಡಿದ ರಷ್ಯಾದ ಸಮಾಜವಾದೀ ಕ್ರಾಂತಿ ತನ್ನದೇ ಆದ ಮತ್ತು ಕಾರ್ಮಿಕವರ್ಗದ ಏಕೈಕ ಪ್ರಭುತ್ವವಿರುವ ಕಾರ್ಮಿಕರ ಪ್ರಜಾಸತ್ತೆಯನ್ನು ಸ್ಥಾಪಿಸಿದೆ. ಹೊಸ ಸಮಾಜವಾದೀ ಆರ್ಥಿಕವ್ಯವಸ್ಥೆಯ ಸನ್ನಿವೇಶದಲ್ಲಿ ಹೊಸ ರೂಪದ ರಾಜಕೀಯವ್ಯವಸ್ಥೆಗೆ ಅಣಿಮಾಡಿದೆ. ಆದುದರಿಂದ ರಷ್ಯಾದ ಕಾರ್ಮಿಕರ ಪ್ರಜಾಸತ್ತೆಯನ್ನು ಬಂಡವಾಳಶಾಹಿ ಪ್ರಜಾಸತ್ತೆ ಕೊಟ್ಟಿರುವ ಲಕ್ಷಣಗಳಿಂದ ಅಳೆದು ನೋಡುವುದು ತಪ್ಪಾಗುತ್ತದೆ.

ಬಂಡವಾಳಶಾಹಿ ಪ್ರಜಾಸತ್ತೆಗೂ ಪಾರ್ಲಿಯಮೆಂಟರೀ ಪ್ರಜಾಸತ್ತೆಗೂ ಇರುವ ಸಂಬಂಧದಬಗ್ಗೆ ಮತ್ತು ಪ್ರಜಾಸತ್ತೆಯಬಗ್ಗೆ ಮಾರ್ಕ್ಸ್‌ವಾದದ ಧೋರಣೆ ಬಗ್ಗೆ ಮುಂದೆ 9 ನೇ ಅಧ್ಯಾಯವನ್ನು ನೋಡಿ.

ಸ್ವಾತಂತ್ರ್ಯವನ್ನೂ ಮತ್ತು ಪ್ರತಿನಿಧಿಯಾಗಿ ಚುನಾವಣೆಗೆ ನಿಲ್ಲುವ ಸ್ವಾತಂತ್ರ್ಯದ ಹಕ್ಕನ್ನೂ ಪಡೆದಿದ್ದಾರೆ. ಆದರೆ ಯಾವ ವ್ಯಕ್ತಿಗೂ ಬಂಡವಾಳ ಆರ್ಥಿಕವ್ಯವಸ್ಥೆಯನ್ನು ಪುಷ್ಟೀಕರಿಸಿ ಪ್ರಚಾರಮಾಡುವ ಸ್ವಾತಂತ್ರ್ಯಕ್ಕೂ ಅಥವಾ ಆ ರೀತಿಯ ವ್ಯವಸ್ಥೆಯನ್ನು ತರುವ ಉದ್ದೇಶ ದಿಂದ ರಾಜಕೀಯಪಕ್ಷವೊಂದರ ನಿರ್ಮಾಣಕ್ಕೂ ಅವಕಾಶವಿಲ್ಲ. ಏಕೆಂದರೆ, ಶೋಷಣೆ ಮತ್ತು ಬಂಡವಾಳ ಆರ್ಥಿಕವ್ಯವಸ್ಥೆಯ ನಿರ್ಮೂಲಕ್ಕಾಗಿ ಕ್ರಾಂತಿಯು ನಡೆದಿದೆ. ಆದುದರಿಂದ ಕ್ರಾಂತಿಯ ರಕ್ಷಣೆ, ವ್ಯವಸ್ಥೆಹೊಂದು ತ್ತಲಿರುವ ಸಮಾಜವಾದೀ ವ್ಯವಸ್ಥೆಯ ಸಂರಕ್ಷಣೆ ಕಾರ್ಮಿಕವರ್ಗದ ಪ್ರಥಮ ಕರ್ತವ್ಯವಾಗಿದೆ. ಸ್ವಾಮ್ಯದ ಪುಷ್ಟೀಕರಣದ ಬಗ್ಗೆ ಅಭಿಪ್ರಾಯ ಸ್ವಾತಂತ್ರ್ಯ, ಪ್ರಚಾರ ಸ್ವಾತಂತ್ರ್ಯ, ಇತ್ಯಾದಿ ಕೊಡಲು ಕಾರ್ಮಿಕವರ್ಗ ಇನ್ನೂ ಸಿದ್ಧವಾಗಿಲ್ಲ. ಆದುದರಿಂದ ಕ್ರಾಂತಿಯ ವಿರುದ್ಧ ವರ್ತಿಸುವವ ರನ್ನು ಮತ್ತು ಅಭಿವೃದ್ಧಿ ಹೊಂದುತ್ತಿರುವ ಸಮಾಜವಾದೀ ವ್ಯವಸ್ಥೆಗೆ ಚ್ಯುತಿ ತರುವ ಕ್ರಿಯಾತ್ಮಕರನ್ನು ದಂಡಿಸಲಾಗುವುದು.

ನಾಲ್ಕನೆಯದಾಗಿ, ಸೋವಿಯಟ್ ಪ್ರಜಾಪ್ರಭುತ್ವದಲ್ಲಿ ವಿವಿಧ ರಾಜ ಕೀಯ ಪಕ್ಷಗಳ ರಚನೆಗೆ ಸ್ವಾತಂತ್ರ್ಯವಿಲ್ಲ; ಒಂದೇ ಒಂದು "ಮುಂದಾಳು ಸಮೂಹ" (Vanguard) ಇರಲು ಅವಕಾಶವಿದೆ.[1] ಇದಕ್ಕೆ ಕಾರಣ ಗಳನ್ನು ಕೊಡಲಾಗಿದೆ. ಕೇವಲ ಭಿನ್ನಾಭಿಪ್ರಾಯವನ್ನು ವ್ಯಕ್ತಪಡಿಸುವುದಾ ಗಿದ್ದರೆ ವಿವಿಧ ಮತ್ತು ಪ್ರತಿ (Counter) ರಾಜಕೀಯ ಪಕ್ಷಗಳ ನಿರ್ಮಾಣ

---

1. ಈ ಮುಂದಾಳು ಸಮೂಹವನ್ನು ಪಕ್ಷ (Party) ಎಂದು ಸಂಭೋದಿಸು ವುದೂ ಉಂಟು. ಆದರೆ ಇದು ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿರುವ ರಾಜ ಕೀಯ ಪಕ್ಷಗಳಂತೆ (Political Parties) ರಾಜಕೀಯ ಪಕ್ಷವಲ್ಲ. ಸಮಾಜವಾದೀ ವ್ಯವಸ್ಥೆಯಲ್ಲಿ ವರ್ಗಗಳು ನಾಶಮಾಡಲ್ಪಟ್ಟಿರುವುದರಿಂದ ವರ್ಗಹಿತವನ್ನು (class-interest) ಸಂರಕ್ಷಿಸಲಿಕ್ಕೆ ಯಾವ ರಾಜಕೀಯ ಪಕ್ಷದ ಆವಶ್ಯಕತೆಯೂ ಇಲ್ಲ. ವರ್ಗರಹಿತ (class-less) ಸಮಾಜದಲ್ಲಿ ಸಮಾಜವಾದೀ ವ್ಯವಸ್ಥೆಯ ಅಭಿವೃದ್ಧಿಗಾಗಿ ಮುಂದಾಳತ್ವವನ್ನು ನಿರ್ವಹಿಸುವ ಪ್ರಶ್ನೆ ಮಾತ್ರ ಇರುತ್ತದೆ. ಆದುದರಿಂದ ಈ ಮುಂದಾಳು ಸಮೂಹದ ನೇತೃತ್ವವನ್ನು ಏಕಪಕ್ಷದ ಸರ್ಕಾರ ವೆಂದು ಬಗೆಯುವುದು ತಪ್ಪಾಗುತ್ತದೆ. ಸಮಾಜವಾದೀ ವ್ಯವಸ್ಥೆಯಲ್ಲಿ ಪಕ್ಷದ ಆವಶ್ಯಕತೆಯೇ ಇಲ್ಲದಿರುವಾಗ ಏಕಪಕ್ಷದ ಸರ್ಕಾರದ (one party Government) ಸಮಸ್ಯೆಯೇ ಉದ್ಭವಿಸುವುದಿಲ್ಲ.

ವಿಲ್ಲದೆ ಅದನ್ನು ವ್ಯಕ್ತಪಡಿಸಲು ಸಾಧ್ಯವಿದೆ. ಬರುವ ಅಭಿಪ್ರಾಯ ಬಹುಮತದ್ದು ಇಲ್ಲವೇ ಅಲ್ಪಸಂಖ್ಯಾತರದು. ಸಮಾಜ ವ್ಯವಸ್ಥೆ ನಡೆಯಬೇಕಾದರೆ ಬಹುಮತದ ಅಭಿಪ್ರಾಯಕ್ಕೆ ಮಾನ್ಯತೆ ಇರಬೇಕು. ಭಿನ್ನಾಭಿಪ್ರಾಯವುಳ್ಳವರು ಒಂದು ಸಮಸ್ಯೆ ನಿರ್ಧಾರವಾಗುವ ವೇಳೆಯಲ್ಲಿ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸಲು ಅವಕಾಶವಿದೆ. ಭಿನ್ನಾಭಿಪ್ರಾಯವನ್ನು ಸಭೆ ಬಹುಮತದಿಂದ ಅನುಮೋದಿಸುವುದಾದರೆ ಅದೇ ಕಾರ್ಯನೀತಿಯಾಗುತ್ತದೆ, ಶಾಸನವಾಗುತ್ತದೆ. ಇಲ್ಲವಾದರೆ, ಅಲ್ಪ ಸಂಖ್ಯಾತರು ಬಹುಮತ ಇರುವ ಅಭಿಪ್ರಾಯಕ್ಕೆ ತಲೆಬಾಗಬೇಕು.

ಅಭಿಪ್ರಾಯಗಳಲ್ಲಿ ಭಿನ್ನತೆ ಎರಡು ರೂಪಗಳಲ್ಲಿವೆ. ಒಂದನೆಯದು, ಆರ್ಥಿಕ ಸಮಾನತೆ ಇಲ್ಲದಿರುವ ವ್ಯವಸ್ಥೆಯಲ್ಲಿ ಬರಬಹುದಾದ ಭಿನ್ನಾಭಿಪ್ರಾಯಗಳು. ಭಿನ್ನಾಭಿಪ್ರಾಯ ಸ್ವಾಭಾವಿಕವಾದರೂ, ಸ್ವಾಮ್ಯದ ಪ್ರಶ್ನೆ ಬಂದಾಗ ಸ್ವಾಮ್ಯ ಉಳ್ಳವರ ಮತ್ತು ಇಲ್ಲದವರ ಅಭಿಪ್ರಾಯ ಪರಸ್ಪರ ವ್ಯತಿರಿಕ್ತವಾಗಿ ಇರುತ್ತದೆ. ಏಕೆಂದರೆ, ಸ್ವಾಮ್ಯದ ಪ್ರಶ್ನೆ ಒಂದು ವರ್ಗದ ಜನರಿಗೆ ಸಂಬಂಧಿಸಿದೆ ಮತ್ತು ಸ್ವಾಮ್ಯವರ್ಗದ ಸ್ಥಾನಮಾನಗಳು ಅವರು ಹೊಂದಿರುವ ಸ್ವಾಮ್ಯದಿಂದ ನಿರ್ಧಾರವಾಗುತ್ತಿವೆ. ಆದುದರಿಂದ, ಸ್ವಾಮ್ಯ ವರ್ಗದ ಅಭಿಪ್ರಾಯವು ಪ್ರತ್ಯೇಕತೆ ಅಥವಾ ವಿಶೇಷಣತೆಯನ್ನು ಹೊಂದಿರುವಂತೆ ಖಾಸಗೀ ಸ್ವಾಮ್ಯವು ಮಾಡಿವೆ. ಈ ವಿಶೇಷಣತೆಯಿಂವ ಕೂಡಿರುವ ಭಿನ್ನಾಭಿಪ್ರಾಯ ಮೂಲಭೂತವಾದದ್ದು; ಮತ್ತು ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯಕ್ಕೆ ಎಡೆಯಿರವ ಆರ್ಥಿಕ ವ್ಯವಸ್ಥೆಗಳಲ್ಲೆಲ್ಲಾ ಸ್ವಾಮ್ಯದ ರಕ್ಷಣೆಯೇ ವರ್ಗ ರಾಜಕೀಯಕ್ಕೂ (Class-politics) ಮತ್ತು ವಿವಿಧ ರಾಜಕೀಯ ಪಕ್ಷಗಳು ಜನ್ಮತಾಳುವುದಕ್ಕೂ ಕಾರಣವಾಗಿದೆ. ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿರುವ (Capitalist or Bourgeoisie Democracy) ವಿವಿಧ ರಾಜಕೀಯ ಪಕ್ಷಗಳ ಒಳಂತರಾಳ (ಸಮಾಜವಾದೀ ಪಕ್ಷಗಳು ಹೊರತು) ಇದೇ ಆಗಿದೆ. ಇದರಿಂದಾಗಿ, ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿರುವ ವಿವಿಧ ರಾಜಕೀಯ ಪಕ್ಷಗಳ ಸ್ವರೂಪವನ್ನೂ ಮತ್ತು ಧ್ಯೇಯಗಳನ್ನೂ ವಿಂಗಡಿಸುವಾಗ ಇವು ಖಾಸಗೀ ಸ್ವಾಮ್ಯದ ಬಗ್ಗೆ ಹೊಂದಿರುವ ಧೋರಣೆಯನ್ನು ಮುಖ್ಯವಾಗಿ ಪರಿಗಣಿಸಬೇಕು. ಆಗಲೇ ಖಾಸಗೀ ಸ್ವಾಮ್ಯ ಇರುವ ಎಡೆ, ವಿವಿಧ

ರಾಜಕೀಯ ಪಕ್ಷಗಳು ತಮ್ಮ ಇರುವಿಕೆಯನ್ನು ಸಮರ್ಥಿಸಿಕೊಂಡಿರುವುದೂ ಮತ್ತು ಬಗೆಹರಿಯದ ಭಿನ್ನಾಭಿಪ್ರಾಯವು ಸಮಾಜದಲ್ಲಿ ಪ್ರವೇಶಿಸಿ ವರ್ಗ ವಿರಸಕ್ಕೆ ಕಾರಣವಾಗಿರುವುದೂ ಅರ್ಥವಾಗುತ್ತದೆ. ಆದರೆ ಈಗ ಕಾರ್ಮಿಕರ ಕ್ರಾಂತಿಯು ವಿವಿಧ ರಾಜಕೀಯ ಪಕ್ಷಗಳ ಇರುವಿಕೆಗೆ ಆಧಾರವಾಗಿದ್ದ ಖಾಸಗೀ ಸ್ವಾಮ್ಯವನ್ನು ನಾಶಪಡಿಸಿದೆ, ಮತ್ತು ಹಾಗೆಯೇ ಭಿನ್ನಾಭಿಪ್ರಾಯದಲ್ಲಿದ್ದ ಪ್ರತ್ಯೇಕತೆ ಅಥವ ವಿಶೇಷಣತೆಯೂ ಸಹ ನಾಶಹೊಂದಿದೆ.

ಎರಡನೆಯದು, ಆರ್ಥಿಕ ಸಮಾನತೆ ಇರುವ ವ್ಯವಸ್ಥೆಯಲ್ಲಿ ಬರಬಹುದಾದ ಭಿನ್ನಾಭಿಪ್ರಾಯಗಳು. ಈ ವರ್ಗರಹಿತ ಸಮಾಜ ವ್ಯವಸ್ಥೆಯಲ್ಲಿ ಭಿನ್ನಾಭಿಪ್ರಾಯಗಳಿಗೆ ವಿಶೇಷಣತೆಯಾಗಲೀ ಅಥವಾ ಪ್ರತ್ಯೇಕತೆಯಾಗಲೀ ಇರುವುದಿಲ್ಲ; ವಿಶೇಷಣಕ್ಕೆ ಕಾರಣವಾಗಿದ್ದ ಸ್ವಾಮ್ಯವನ್ನು ನಾಶಪಡಿಸಲಾಗಿದೆ. ಸಮಾಜವಾದೀ ವ್ಯವಸ್ಥೆ ವ್ಯಕ್ತಿಗಳಿಗೆ ಆರ್ಥಿಕವಾಗಿ ಸಮಾನ ಸ್ಥಾನಮಾನಗಳನ್ನು ಗಳಿಸಿಕೊಟ್ಟಿದೆ. ಇಂತಹ ವ್ಯವಸ್ಥೆಯಲ್ಲಿ ಸಂಭವಿಸುವ ಭಿನ್ನಾಭಿಪ್ರಾಯಗಳು ಸಾಮಾನ್ಯ ಸ್ವಭಾವದ್ದಾಗಿವೆ. ಆದುದರಿಂದಲೇ ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವನ್ನು ರಕ್ಷಿಸಲು ಇರುವ ವಿವಿಧ ರಾಜಕೀಯ ಪಕ್ಷಗಳಿಗೆ ಸ್ಥಳವಿಲ್ಲ. ಸಂಭವಿಸುವ ಸಾಮಾನ್ಯಭಿನ್ನಾಭಿಪ್ರಾಯಗಳು ಬಹುಮತದ ತತ್ತ್ವದ ಮೇಲೆ ನಿರ್ಧಾರವಾಗುವುದರಿಂದ, ಅಭಿವೃದ್ಧಿ ಸಾಧಿಸಬೇಕಾಗಿರುವ ರಷ್ಯಾದ ಸಮಾಜವಾದೀ ವ್ಯವಸ್ಥೆಯಲ್ಲಿ ಮುಂದಾಳತ್ವ ವಹಿಸಲು ಕಮ್ಯೂನಿಸ್ಟ್ ಪಕ್ಷಕ್ಕೆ ಮುಂದಾಳು ಸಮೂಹ ಮಾತ್ರ ಅವಕಾಶವಿದೆ. ಈ ಪಕ್ಷದ ಪ್ರಥಮ ಕರ್ತವ್ಯವೆಂದರೆ ಕ್ರಾಂತಿಯಿಂದ ಲಭಿಸಿರುವ ಸಮಾಜವಾದೀ ವ್ಯವಸ್ಥೆಯನ್ನು ಸಂರಕ್ಷಿಸುವುದು ಮತ್ತು ಸಮಾಜವಾದೀ ವ್ಯವಸ್ಥೆಗೆ ಕುಂದು ತರುವ ಪ್ರತಿಗಾಮಿ ಶಕ್ತಿಗಳನ್ನು (Reactionary forces) ದಮನಮಾಡುವುದು. ಸಮಾಜವಾದೀ ವ್ಯವಸ್ಥೆ ಕ್ರಮೇಣ ಬಲಗೊಂಡ ಹಾಗೆ, ಬೇರೂರಿದಹಾಗೆ, ಯಾವ ಪಕ್ಷದ ಆವಶ್ಯಕತೆಯೂ ಇಲ್ಲವಾಗುತ್ತದೆ. ಸಮಾನ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಸ್ಥಾನಮಾನಗಳನ್ನು ಪಡೆದಿರುವ ಜನ ಸಮುದಾಯ ಬಹುಮತ ಅಭಿಪ್ರಾಯದಂತೆ ಸಮಾಜವನ್ನು ನಿರ್ವಹಿಸುತ್ತದೆ.[1]

(1) ಆರ್ಥಿಕ ಸಮಾನತೆ ಇರುವ ಮತ್ತು ಇಲ್ಲದಿರುವ ಎರಡು ವ್ಯವಸ್ಥೆಗಳಲ್ಲೂ ಬಹುಮತ ತತ್ತ್ವಕ್ಕೆ (Majority Principle) ಮಾನ್ಯತೆ ಇದ್ದರೂ, ಆರ್ಥಿಕ ಸಮಾನತೆ ಇಲ್ಲದಿರುವ (ಖಾಸಗೀ ಸ್ವಾಮ್ಯವಿರುವ) ವ್ಯವಸ್ಥೆಯಲ್ಲಿ ಅಭಿಪ್ರಾಯ ಸೂಚನೆಯಲ್ಲಿ ಸ್ವಾಮ್ಯವರ್ಗಕ್ಕಿರುವ ಸೌಲಭ್ಯಗಳನ್ನು ಗಮನಿಸುವುದು ಅಗತ್ಯವಾಗಿದೆ.


ಐದನೆಯದಾಗಿ, ಕಾರ್ಮಿಕ ಪ್ರಜಾಸತ್ತೆ (Proletarian Democracy) ಬಂಡವಾಳಶಾಹಿ ಪ್ರಜಾಸತ್ತೆಯಿಂದ ಬೇರೆಯಾಗಿದೆ. ಬಂಡವಾಳ ಪ್ರಜಾಸತ್ತೆಯಲ್ಲಿ ಇರುವುದು ನಾಮಾಂಕಿತದ ಪ್ರಜಾಸತ್ತೆ. ಬಂಡವಾಳ ಶಾಹಿ ಪ್ರಜಾಸತ್ತೆ ಸ್ವಾಮ್ಯದ ಮೇಲೆ ನಿಂತಿರುವುದರಿಂದ ವ್ಯಕ್ತಿಗಳ ಸಾಮಾಜಿಕ ಮತ್ತು ಆರ್ಥಿಕ ಸ್ಥಾನಮಾನಗಳು ಅಸಮಾನವಾಗಿವೆ. ಸ್ವಾಮ್ಯವನ್ನು ಹೊಂದಿರುವ ವರ್ಗ ರಾಜ್ಯಶಕ್ತಿಯನ್ನು ತನ್ನ ಹಣದ ಬಲದಿಂದ ತನ್ನ ಉಪಯೋಗಕ್ಕೆ ತಿರುಗಿಸಿಕೊಳ್ಳಲು ಅವಕಾಶವಿದೆ. ಸ್ವಾಮ್ಯವನ್ನು ಹೊಂದಿರದ ವ್ಯಕ್ತಿಗಳು ಗಣನೆಗೆ ಬರುವುದಿಲ್ಲ. ಅವರು ರಾಜಕೀಯ ಹಕ್ಕುಗಳನ್ನು ಅನುಭವಿಸಲು ಹಣದ ಚೈತನ್ಯ ಸಾಲದೆ ಇರುತ್ತಾರೆ. ಪ್ರಜಾಸತ್ತೆ ಹಣವಿದ್ದವರಿಗೆ ಮಾತ್ರ ಮೀಸಲಾದ ಸ್ವತ್ತಾಗಿದೆ. ಪ್ರಜಾಸತ್ತೆಯ ಸೋಗಿನಲ್ಲಿ ಬಂಡವಾಳವರ್ಗ ಕಾರ್ಮಿಕರನ್ನು ಮತ್ತಷ್ಟು ಶೋಷಣೆಮಾಡುತ್ತಿದೆ. ಸತ್ವವುಳ್ಳ ಪ್ರಜಾಸತ್ತೆಯನ್ನು ತರುವ ದೃಷ್ಟಿಯಿಂದಲೇ ರಷ್ಯಾದ ಕಾರ್ಮಿಕರ ಕ್ರಾಂತಿ ಬಂಡವಾಳಶಾಹಿ ವ್ಯವಸ್ಥೆಯನ್ನು ನಿರ್ಮೂಲಮಾಡಿದೆ. ಮೂಲೋತ್ಪಾಟನೆಯಾದ ದೇಶೀಯ ಬಂಡವಾಳವರ್ಗದಿಂದ ಮತ್ತು ಹೊರ ಬಂಡವಾಳಶಾಹಿ ರಾಷ್ಟ್ರಗಳಿಂದ ಬರುವ ಪ್ರತಿಭಟನೆಯನ್ನೂ ಮತ್ತು ಕ್ರಾಂತಿಗೆ ವಿರುದ್ಧನಡೆಸುವ ವಿನಾಶಕಾರ್ಯಗಳನ್ನೂ ತಡೆಗಟ್ಟುವ ದೃಷ್ಟಿಯಿಂದ ನಿರೋಧ ಕ್ರಮಗಳನ್ನು ಕೈಗೊಳ್ಳಲಾಗಿದೆ. ಸ್ವಾಮ್ಯವರ್ಗದಮೇಲೆ ಕಾರ್ಮಿಕ ವರ್ಗದ ಏಕೈಕ ಪ್ರಭುತ್ವವನ್ನು ಘೋಷಿಸಲಾಗಿದೆ. ಸ್ವಾಮ್ಯವರ್ಗದ ರಾಜಕೀಯ ಸ್ವಾತಂತ್ರ್ಯದ ಮೇಲೆ ಮುಟ್ಟುಗೋಲು ಹಾಕಲಾಗಿದೆ. ಆದುದರಿಂದ ಕಾರ್ಮಿಕವರ್ಗದ ಶತ್ರುವಾದ ಬಂಡವಾಳವರ್ಗದ ಮೇಲೆ ಸರ್ವಾಧಿಕಾರ, ಕಾರ್ಮಿಕವರ್ಗಕ್ಕೆ ಮಾತ್ರ ಅನ್ವಯಿಸುವ ಹಾಗೆ ಪ್ರಜಾಸತ್ತೆ ಇದೆ. ಇದೇ ರಷ್ಯಾದ ಸಮಾಜವಾದೀ ವ್ಯವಸ್ಥೆಯಲ್ಲಿರುವ ಕಾರ್ಮಿಕ ಪ್ರಜಾಸತ್ತೆ.

ಸೋವಿಯಟ್ ರಾಷ್ಟ್ರದ ಇತಿಹಾಸದಲ್ಲಿ 1936 ಬಹಳ ಮುಖ್ಯವಾದ ವರ್ಷ. 1917 ರಿಂದ 1936 ರ ವರಗೆ ಅನೇಕ ಸಮಸ್ಯೆಗಳು ಬಗೆಹರಿದಿದ್ದವು ಮತ್ತು ಅನೇಕ ಪರಿಹಾರಕ ಮತ್ತು ಅಭಿವೃದ್ಧಿ ಕಾರ್ಯಗಳನ್ನು ಕೈಗೊಳ್ಳಲಾಗಿದ್ದಿತು. ಮೊದಲನೆಯದಾಗಿ, ಸಮಾಜವಾದೀ ವ್ಯವಸ್ಥೆ ಬೇರೂರಿ ಯೋಜನೆಗಳಿಂದ ಸಂಪತ್ತು ವರ್ಷೇ ವರ್ಷೇ ಸಾಂಗವಾಗಿ ಕ್ರಮವಾಗಿ ವೃದ್ಧಿಹೊಂದಿದ್ದಿತು. ಸಾಧಿಸಲು ಅಸಾಧ್ಯವೆಂದು ಬಗೆದ ಆರ್ಥಿಕ

ಯೋಜನೆಗಳನ್ನು ಜನಸಮುದಾಯ ಅತಿ ಉತ್ಸಾಹದಿಂದ ಕೈಗೊಂಡು ಅವಧಿಗೆ ಮುಂಚೆಯೇ ಯೋಜನೆಗಳನ್ನು ಮುಗಿಸಿತ್ತು. ನಿರುದ್ಯೋಗ ಮತ್ತು ಶೋಷಣೆ ಕಣ್ಮರೆಯಾಗಿದ್ದವು. ಜನಸಮುದಾಯಕ್ಕೆ ಉತ್ತಮ ಆರ್ಥಿಕ ಮಟ್ಟವೂ ದೇಶಕ್ಕೆ ಸ್ವಯಂ ಸಂಪೂರ್ಣತೆಯೂ ಬಂದಿದ್ದಿತು. ಬಂಡವಾಳ ವರ್ಗಗಳ ಅವಶೇಷಗಳು ಇಲ್ಲವಾಗಿ ವರ್ಗರಹಿತ ಸಮಾಜ ರೂಪ ಗೊಂಡಿದ್ದಿತು.

ಎರಡನೆಯದಾಗಿ, ರಷ್ಯಾದ ಸುಮಾರು 17 ವಿವಿಧ ಜನಾಂಗಗಳಿಗೆ ದೊರೆಕಿದ ಸ್ವಯಂ ನಿರ್ಣಯದ ಹಕ್ಕು, ಸಾಂಸ್ಕೃತಿಕ ರಕ್ಷಣೆ ಮತ್ತು ಪ್ರೋತ್ಸಾಹ ಅಲ್ಪ ಸಂಖ್ಯಾತ ಜನಾಂಗಗಳ ಸಮಸ್ಯೆಯನ್ನು ಬಗೆಹರಿಸಿದ್ದಿತು. ಅವರುಗಳೆಲ್ಲರೂ ಸಂತುಷ್ಟರಾಗಿ ಸೋವಿಯಟ್ ರಾಷ್ಟ್ರದ ಸರ್ವತೋಮುಖದ ಅಭಿವೃದ್ಧಿಗೆ ಬೆಂಬಲನೀಡಿದ್ದರು. ಹಿಂದುಳಿದ ಜನಾಂಗಗಳು ಅತಿ ಶೀಘ್ರದಲ್ಲೇ ಮುಂದುವರಿದ ಜನಾಂಗಗಳ ಸಮಕ್ಕೆ ಬರತೊಡಗಿದ್ದವು.

ಮೂರನೆಯದಾಗಿ, ದೇಶದ ಆರ್ಥಿಕಾಭಿವೃದ್ಧಿಯ ಜೊತೆಜೊತೆಯಲ್ಲೇ ಜನಸಮುದಾಯದ ಯೋಗಕ್ಷೇಮಕ್ಕೆ ಕೊಟ್ಟ ಹೆಚ್ಚಿಗೆ ಗಮನದಿಂದ ಅನಕ್ಷರಸ್ಥರು ಅಕ್ಷರಸ್ಥರಾಗಿದ್ದರು. ಔದ್ಯೋಗಿಕ ಶಿಕ್ಷಣವನ್ನು ಜನಸಮುದಾಯದಲ್ಲಿ ಹರಡಲೂ, ಹೆಚ್ಚು ಹೆಚ್ಚು ಮಂದಿ ಜ್ಞಾನಾರ್ಜನೆಮಾಡಲೂ, ಕೈಗೊಂಡ ಕ್ರಮಗಳಿಂದ ಔದ್ಯೋಗಿಕ ಶಿಕ್ಷಣ ಕೇಂದ್ರಗಳೂ ವಿಶ್ವವಿದ್ಯಾನಿಲಯಗಳೂ ಅಧಿಕ ಪ್ರಮಾಣದಲ್ಲಿ ಸ್ಥಾಪಿತವಾಗಿದ್ದವು. ಜನರ ಆರೋಗ್ಯ ಭಾಗ್ಯವನ್ನು ಕಾಪಾಡಲು ವಿಶ್ರಾಂತಿ ಗೃಹಗಳು, ವೇತನವುಳ್ಳ ವಿರಾಮ ಮತ್ತು ವೈದ್ಯಕೀಯ ಸೌಲಭ್ಯ ಇವುಗಳನ್ನು ಹೇರಳವಾಗಿ ಒದಗಿಸಲಾಗಿದ್ದಿತು. ಸ್ತ್ರೀಯರ ಸ್ಥಾನಮಾನಗಳನ್ನು ರಕ್ಷಿಸಲು, ಅವರು ದೇಶದ ಅಭಿವೃದ್ಧಿಕಾರ್ಯಗಳಲ್ಲಿ ಪುರುಷರಂತೆ ಸಮಾನ ಭಾಗಿಗಳಾಗಲು ಮತ್ತು ನಾಡಿನ ಸುಸಂಸ್ಕೃತ ತಾಯಂದಿರಾಗಲು ಹೆಚ್ಚು ಗಮನಕೊಡಲಾಗಿತ್ತು. ಜನರು ನಿತ್ಯ ಬಳಕೆಯ ಸ್ವತ್ತುಗಳನ್ನು (Personal belongings) ಖಾಸಗಿಯಾಗಿ ಹೊಂದಿರಲು, ಬರುವ ವರಮಾನವನ್ನು ತಮಗೆ ಇಷ್ಟಬಂದಂತೆ ಖರ್ಚುಮಾಡಲು ಅಥವಾ ಕೂಡಿಡಲು, ಅಥವಾ ನಿತ್ಯಬಯಕೆಯ ಸ್ವತ್ತುಗಳನ್ನೂ ಕೂಡಿಟ್ಟ ಹಣವನ್ನೂ ಮಕ್ಕಳು ಮರಿಗೆ ಬಿಟ್ಟು ಹೋಗಲು ಶಾಸನದ ರಕ್ಷಣೆ ಕೊಡಲಾಗಿತ್ತು.



ಜೋಸೆಫ್ ಸ್ಟಾಲಿನ್

ನಾಲ್ಕನೆಯದಾಗಿ, ಜನಸಮುದಾಯದಲ್ಲಿ ರಾಜಕೀಯ ಜಾಗೃತಿಯನ್ನು ತರಲೂ ಮತ್ತು ಸಮಾಜ ವ್ಯವಸ್ಥೆಯಲ್ಲಿ ಪ್ರತಿಯೊಬ್ಬರ ಸ್ಥಾನಮಾನ, ಹಕ್ಕುಗಳು ಮತ್ತು ಕರ್ತವ್ಯಗಳನ್ನು ತಿಳಿಸಲೂ ಮಾರ್ಕ್ಸ್–ಎಂಗೆಲ್ಸರ ಸಮಾಜವಾದೀ ತತ್ತ್ವವನ್ನು ಪ್ರಚಾರ ಮಾಡಲಾಗಿತ್ತು. ಮನುಷ್ಯ ಸ್ವಭಾವ ಆವರಣದ ಪ್ರಭಾವದಿಂದ ಹೇಗೆ ಬಹುಮಟ್ಟಿಗೆ ನಿರ್ಧಾರವಾಗುತ್ತದೆ ಮತ್ತು ಹೊಸ ಸಮಾಜವಾದೀ ವ್ಯವಸ್ಥೆಯ ಆವರಣದಲ್ಲಿ ಮನುಷ್ಯ ಸ್ವಭಾವ ಹೇಗೆ ಪರಿವರ್ತನೆ ಹೊಂದಿದೆ ಮತ್ತು ಹೊಂದುತ್ತಿದೆ ಎಂಬುದು ಜನಸಮುದಾಯಕ್ಕೆ ಸ್ವಂತ ಅನುಭವದ ಮಾತಾಗಿತ್ತು.

ಈ ಮೇಲ್ಕಂಡ ರೀತಿಯಲ್ಲಿ ಪ್ರವರ್ಧಮಾನಕ್ಕೆ ಬರುತ್ತಿದ್ದ ಸಮಾಜವಾದೀ ವ್ಯವಸ್ಥೆಯ ಮುಂದೋಟವನ್ನು ನಿರ್ದೇಶಿಸುವ ರೀತಿಯಲ್ಲಿ ಸ್ಟಾಲಿನ್ನನ ಮುಂದಾಳತ್ವದಲ್ಲಿ ಒಂದು ಸಂವಿಧಾನವು 1936 ರಲ್ಲಿ ರಚಿತವಾಯಿತು. ಈ ಸಂವಿಧಾನವನ್ನು ಸೋವಿಯಟ್ ಜನರು 1917 ರಿಂದ 1936 ರ ವರೆಗೆ ಸಾಮಾಜಿಕ, ರಾಜಕೀಯ ಮತ್ತು ಆರ್ಥಿಕ ಕ್ಷೇತ್ರಗಳಲ್ಲಿ ಸಾಧಿಸಿರುವ ಮುಂದೋಟದ ಕ್ರೋಢೀಕರಣ ಎಂಬಂತೆ, ಮತ್ತು ಇನ್ನೂ ಮುಂದುವರೆಯುವುದಕ್ಕೆ ನಿರ್ಮಿಸಿಕೊಂಡ ಸಾಧನವೆಂಬಂತೆ ಆಚರಣೆಗೆ ತರಲಾಯಿತು. 1936 ರ ಸಂವಿಧಾನದ ಬಗ್ಗೆ ಸ್ಟಾಲಿನ್ ವಿವರಣೆ ಇತ್ತು ಸೋವಿಯಟ್ ಜನರು ಸಮಾಜವಾದೀ ವ್ಯವಸ್ಥೆಯನ್ನು ದಾಟಿ ಕಮ್ಯೂನಿಸ್ಟ್ ವ್ಯವಸ್ಥೆಗೆ ಹೋಗುವುದಕ್ಕೆ ನಿರ್ಮಿಸಿಕೊಂಡ ಗುರುತಿನಂತಿದೆ ಎಂದನು.

ಸೋವಿಯಟ್ ಕ್ರಾಂತಿ ಮತ್ತು ರಷ್ಯಾದ ಸಮಾಜವಾದೀ ವ್ಯವಸ್ಥೆಯ ಮುಂದೋಟ ಪ್ರಪಂಚದ ಇತಿಹಾಸದಲ್ಲಿ ಒಂದು ಘಟನಾತ್ಮಕ ವಿಷಯವಾಗಿದೆ. ಇತರ ದೇಶಗಳಮೇಲೆ ಇದು ಬೀರಿರುವ ಪ್ರಭಾವ ಅಷ್ಟಿಷ್ಟಲ್ಲ. ದಿಕ್ಕೆಟ್ಟಿರುವ ಜನಸಮುದಾಯಕ್ಕೆ, ಆರ್ಥಿಕ ದುಃಸ್ಥಿತಿ, ಶೋಷಣೆ ಮತ್ತು ದಬ್ಬಾಳಿಕೆಗೆ ಸಿಕ್ಕಿ ನರಳುತ್ತಿರುವ ಕಾರ್ಮಿಕವರ್ಗಕ್ಕೆ ಸೋವಿಯಟ್ ರಷ್ಯಾ ವಿಮೋಚನೆಯ ಹೆಗ್ಗುರುತಾಗಿದೆ. ಈ ಕ್ರಾಂತಿಯ ಪ್ರಭಾವ ದಿನದಿನಕ್ಕೆ ಪ್ರಪಂಚದ ಮೂಲೆಮೂಲೆಗೂ ಹಬ್ಬುತ್ತಿದೆ. ವೈಜ್ಞಾನಿಕ ಸಮಾಜವಾದದ ಮುನ್ನಡೆಯಲ್ಲಿ ರಷ್ಯಾದ ಮಹಾ ಕ್ರಾಂತಿ ಮತ್ತು ಪ್ರಥಮಬಾರಿಗೆ ಅಲ್ಲಿ ವ್ಯವಸ್ಥೆ ಹೊಂದಿದ ಸಮಾಜವಾದೀ ವ್ಯವಸ್ಥೆ ಮಾರ್ಕ್ಸ್ ತತ್ತ್ವ ಸಾಧಿಸಿರುವ ಒಂದು ದೊಡ್ಡ ದಿಗ್ವಿಜಯವಾಗಿದೆ. ಈ ದಿಗ್ವಿಜಯ ರಷ್ಯಾಕ್ಕೆ ಕೊನೆಯಾಗದೆ ಪ್ರಪಂಚವನ್ನೇ ಸುತ್ತುವರಿಯಲು ಮುಂದೆ ಸಾಗಿದೆ.

ಅಧ್ಯಯನ :

Russian Revolution : P. Arnot : L & W., London.
The History of the October Revolution : Stalin and Others : P. P. H. Bomby, 1944.
History of the Communist Party of the Soviet Union : F. L. P. H., Moscow.
Problems of Leninism : Stalin : F. L. P. H., Moscow.
Soviet Communism : Sydney and Beatrice Webb : Longmans.
Law of the Soviet State : Vyshinsky : Mac Millan, N. Y. 1948.

ಸಮಾಜವಾದವೇ ಅಥವಾ ಬಂಡವಾಳವಾದವೇ?

ಅಧ್ಯಾಯ—7.

ಒಂದನೇ ಮಹಾಯುದ್ಧ (1914–18) ವಿರಸಪೂರಿತ ಬಂಡವಾಳಶಾಹಿ ವ್ಯವಸ್ಥೆಯ ಪ್ರತಿಬಿಂಬವಾಯಿತು. ಲಾಭ ತರಬಲ್ಲ ಮಾರುಕಟ್ಟೆಗಳಿಗಾಗಿ ಪ್ರಮುಖ ಬಂಡವಾಳಶಾಹಿ ರಾಷ್ಟ್ರಗಳಾದ ಇಂಗ್ಲೆಂಡ್, ಫ್ರಾನ್ಸ್, ಅಮೆರಿಕಾ ಗಳಿಗೂ ಮತ್ತು ಎದುರಾಳಿ ಜರ್ಮನಿಗೂ ಉಂಟಾದ ಯಾದವೀಕಲಹ ದಿಂದ ಉಂಟಾದ ಪರಿಣಾಮಗಳು ಅಷ್ಟಿಷ್ಟಲ್ಲ. ಯುದ್ಧದಿಂದ ನೊಂದ ರಷ್ಯಾದ ಜನಸಮುದಾಯ ಕ್ರಾಂತಿಕಾರಕ ಮಾರ್ಗವನ್ನು ಹಿಡಿಯಿತು; ಯುದ್ಧಕ್ಕೆ ಮತ್ತು ಶೋಷಣೆಗೆ ಕಾರಣಭೂತವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ಕ್ರಾಂತಿಯ ಮೂಲಕ ದಮನಮಾಡಿತು ; ಸಮಾಜವಾದೀ ವ್ಯವಸ್ಥೆಯ ಉದಯವನ್ನು ಘೋಷಿಸಿತು.

ರಷ್ಯಾದಲ್ಲಿ ಉಂಟಾದ ಸಮಾಜವಾದೀ ಕ್ರಾಂತಿ, ಇತರ ಬಂಡ ವಾಳಶಾಹಿ ರಾಷ್ಟ್ರಗಳ ಕಾರ್ಮಿಕವರ್ಗಕ್ಕೆ ಕ್ರಾಂತಿಪಥವನ್ನು ತೋರಿ ಸಿತು. ಜನತೆಯ ಸಮ್ಮುಖದಲ್ಲಿ ಬಂಡವಾಳಶಾಹಿ ಸರ್ಕಾರ ಮತ್ತು ಬಂಡವಾಳಶಾಹಿ ವ್ಯವಸ್ಥೆ ಅಪರಾಧಿಗಳಾಗಿ ಕಂಡುಬಂದವು. ಕಾರ್ಮಿಕವರ್ಗದ ಮುಂದಾಳತ್ವದಲ್ಲಿ ಸಮಾಜವಾದೀ ಕ್ರಾಂತಿಯನ್ನು [1] ನಡೆಸಲು ಜನಸಮುದಾಯ ಸಿದ್ಧವಾಯಿತು. ಈ ಸಂದರ್ಭದಲ್ಲಿ ಸುಧಾರಕರು

---

(1) ಕಾರ್ಲ್ ಕಾಟ್ಸ್‌ಕೀ, ಬರ್ನ್‌ಸ್ಟೈನ್, ಹಿಲ್‌ಫರ್‌ಡಿಂಗ್, ಮ್ಯಾಕ್‌ಡೂನಾಲ್ಡ್, ಹಿಂಡ್‌ಮನ್, ಟುರಾಟಿ, ವಾನಡ್‌ರ್‌ವೆಲ್ಡೇ, ಚರ್‌ನಾವ್, ಮಾರ್ಟಾವ್, ಲಾಂಗ್ವೇ ಮತ್ತು ಇತರರು. ಇವರಲ್ಲಿ ಅನೇಕರು ತಾವೂ ಸಹ ಮಾರ್ಕ್ಸ್‌ವಾದಿಗಳೆಂದು ಕರೆದುಕೊಳ್ಳುತ್ತಿದ್ದರು. ಆದರೆ ಮಾರ್ಕ್ಸ್‌ವಾದದ ತಿರುಳಾದ ಕಾರ್ಮಿಕರ ಕ್ರಾಂತಿಕಾರೀ ಚಳವಳಿಯನ್ನಾಗಲೀ, ಬಂಡವಾಳವರ್ಗದಿಂದ ಬರುವ ಪ್ರತಿಭಟನೆಯನ್ನು ಮುರಿಯಲಿಕ್ಕಾಗಿ ಕಾರ್ಮಿಕರು ರಾಜ್ಯಶಕ್ತಿಯನ್ನು ಉಪಯೋಗಿಸುವುದನ್ನಾಗಲೀ ಅನುಮೋದಿಸಲಿಲ್ಲ. ಪ್ರಜಾಸತ್ತೆ ಮಾರ್ಗವನ್ನು ಅನುಸರಿಸುವ ಸಮಾಜವಾದೀ ಪ್ರಜಾಸತ್ತಾತ್ಮಕರು (Social Democrats) ಎಂದು ಕರೆದುಕೊಂಡರು.

ಚೈತನ್ಯದಾಯಕ ರೀತಿಯಲ್ಲಿ ಮಾರ್ಕ್ಸ್‌ವಾದವನ್ನು ಮಂಡಿಸಿದ ಮತು ಮಾರ್ಕ್ಸ್‌ವಾದದ ಕ್ರಾಂತಿಕಾರೀ ಅಂಶಗಳನ್ನು ಎತ್ತಿಹಿಡಿದ ಲೆನಿನ್ನನು ಸಮಾಜ

(Reformists) ಒಡ್ಡಿದ ಅಡಚಣೆ ಮತ್ತು ಅವರುಗಳು ಕಾರ್ಮಿಕವರ್ಗಕ್ಕೆ ಒಗೆದ ದ್ರೋಹ ಸಮಾಜವಾದೀ ಚಳವಳಿಯ ಮುಂದೋಟವನ್ನು ಹಿಡಿದು ನಿಲ್ಲಿಸಿದವು. ಸುಧಾರಕರು ಕಾರ್ಯೋನ್ಮುಖರಾಗಿ ನಿಂತಿದ್ದ ಕಾರ್ಮಿಕ ವರ್ಗವನ್ನು ತಡೆಗಟ್ಟಿದರು, ಕ್ರಾಂತಿ ನಡಸಲು ಸಮಯ ಬಂದಿಲ್ಲವೆಂದು ಬೆದರಿಸಿದರು, ಬಂಡವಾಳವರ್ಗದ ಸರ್ಕಾರದೊಡನೆ ಕಲೆತು ಕ್ರಾಂತಿಯ ಶತ್ರುಗಳಾಗಿ ನಿಂತರು. ಅವರೂ ಜರ್ಮನಿ, ಆಸ್ಟ್ರಿಯಾ, ಇಟಲಿ, ಹಂಗೆರಿ, ಇತ್ಯಾದಿ ಹಲವು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಕ್ರಾಂತಿಯು ನಡೆದು ವಿಫಲಹೊಂದಿತು.

ಯೂರೋಪಿನ ಹಲವು ರಾಷ್ಟ್ರಗಳಲ್ಲಿ ಕಾರ್ಮಿಕರ ಕ್ರಾಂತಿ ವಿಫಲ ವಾದದ್ದರಿಂದ ಬಂಡವಾಳಶಾಹಿ ವ್ಯವಸ್ಥೆ ಮತ್ತೆ ಜೀವದಾನ ಪಡೆಯಿತು. ಅನೇಕ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಲೆನಿನ್ ಖಂಡಿಸಿದ ಸುಧಾರಕ ಸಮಾಜ ವಾದೀ ತತ್ತ್ವ ಗರಿಕಟ್ಟಿಕೊಳ್ಳಲೂ ಅವಕಾಶಸಿಕ್ಕಿತು. ಸುಧಾರಕ ಸಮಾಜ ವಾದದ ಜೊತೆಗೆ ವಿವಿಧ ರೂಪದ ವಾದಗಳು ಸಮಾಜವಾದವೆಂಬ ಶಿರೋ ನಾಮೆಯಲ್ಲಿ ತಲೆಹಾಕಿದವು. ಆದರೆ ಯಾವ ಹೊಸವಾದವೂ ಬಂಡವಾಳ ಶಾಹಿ ವ್ಯವಸ್ಥೆ ತನ್ನೊಡನೆ ತಂದಿದ್ದ ವರ್ಗವಿರಸ, ಆರ್ಥಿಕಮುಃಸ್ಥಿತಿ, ನಿರುದ್ಯೋಗ, ಯುದ್ಧ, ಶೋಷಣೆ ಮತ್ತು ಪ್ರಜಾಸತ್ತೆಯ ಸೋಗಿನಲ್ಲಿ ನಡೆಯುವ ವರ್ಗ-ರಾಜಕೀಯ ಇವುಗಳನ್ನು ಮಾರ್ಕ್ಸ್‌ವಾದದಂತೆ ವಿಮರ್ಶಿ ಸಲೂ, ಇವುಗಳಿಗೆ ಕಾರಣವಾದ ಬಂಡವಾಳಶಾಹಿ ವ್ಯವಸ್ಥೆಯ ಅಂತರಾಳ ವನ್ನು ಭೇದಿಸಲೂ ಅಶಕ್ತವಾಗಿದ್ದಿತು. ಆದರೆ, ನೊಂದ ಜನತೆ ಮಾತ್ರ ಪರಿಹಾರವನ್ನು ಹುಡುಕುತ್ತಿತ್ತು.

ಈ ಹೊಸ ವಾದಗಳು ಸಮಾಜದ ಅವ್ಯವಸ್ಥೆಗೆ ಬಗೆ ಬಗೆಯ ಕಾರಣ ಗಳನ್ನು ಹುಡುಕಿ ಬಗೆ ಬಗೆಯ ರೂಪದ ಉತ್ತರಗಳನ್ನು ಕೊಟ್ಟವು.

ವಾದೀ ಪ್ರಜಾಸತ್ತಾತ್ಮಕರನ್ನು ಅನುಕೂಲಸಿಂಧುಗಳೆಂದೂ (opportunists), ಸ್ವಪಕ್ಷ ದ್ರೋಹಿ (Renegades) ಗಳೆಂದೂ ಘೋಷಿಸಿದನು. ಕ್ರಾಂತಿಕಾರೀ ಪಕ್ಷದ ಮೂರನೇ ಅಂತರರಾಷ್ಟ್ರೀಯವನ್ನು ಸ್ಥಾಪಿಸಿದನು. ಲೆನಿನ್ನನ ಹಿಂಬಾಲ ಕರನ್ನು ಕಮ್ಯೂನಿಸ್ಟರೆಂದೂ, ಸುಧಾರಕ ಸಮಾಜವಾದಿಗಳನ್ನು ಸಮಾಜವಾದಿ ಗಳೆಂದೂ (Social Democrats or Socialists) ಕರೆಯುವುದು ರೂಢಿಗೆ ಬಂದಿತು.

ಸಮಾಜವಾದದ ಧ್ಯೇಯ ಹೊಸದಲ್ಲವೆಂದು ಕ್ರೈಸ್ತ ಸಮಾಜವಾದಿಗಳು ಹೇಳಿದರು. ಏಸುಕ್ರಿಸ್ತ ಮತ್ತು ಇತರ ಸಾಧುಸಂತರು ಹೇಳಿರುವ ನೀತಿಗಳನ್ನು ಉದಹರಿಸಲಾಯಿತು. ಜನರು ಕ್ರಿಸ್ತನ ಬೋಧನೆಗಳನ್ನು ಮರೆತಿರುವುದೇ ಅವ್ಯವಸ್ಥೆಗೆ ಕಾರಣವೆಂದರು. ಆದುದರಿಂದ ಕ್ರಿಸ್ತನ ಉಪದೇಶಗಳಲ್ಲಿ ನಂಬಿಕೆಯಿಟ್ಟು ಸನ್ಮಾರ್ಗಿಗಳಾಗಬೇಕೆಂದರು. ದಾನಧರ್ಮಗಳನ್ನು ಮಾಡುವುದಾದರೆ, ನೆರೆಹೊರೆಯವರನ್ನು ಸಹೋದರ ಸಹೋದರಿಯರೆಂದು ಭಾವಿಸುವುದಾದರೆ ಎಲ್ಲವೂ ಸರಿಹೋಗುವುದೆಂದರು. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ತಪ್ಪಿಲ್ಲ; ಮುಖ್ಯ, ಬಂಡವಾಳಗಾರರು ತಾವು ಗಳಿಸುತ್ತಿರುವ ವರಮಾನ ಮತ್ತು ಹೊಂದಿರುವ ಸಂಪತ್ತು ಎಲ್ಲವೂ ಸಮಾಜಕ್ಕೆ ಸೇರಿದ್ದೆಂದು ಬಗೆದು, ತಾವು ಸಮಾಜದ ಧರ್ಮದರ್ಶಿಗಳೆಂದು (Trustees) ಭಾವಿಸುವುದಾದರೆ ವರ್ಗರಹಿತ, ವಿರಸರಹಿತ ಮತ್ತು ಶೋಷಣಾರಹಿತ ಸುಖೀಸಮಾಜ ಆಗಮಿಸುತ್ತದೆ ಎಂದರು.

ವಿಕಾಸಸಮಾಜವಾದಿಗಳು[1] ತಮ್ಮ ವಾದವನ್ನು ಮಂಡಿಸಿ, ಸಮಾಜವಾದ ಒಂದು ಧ್ಯೇಯ ಅಥವಾ ಗುರಿ ಮಾತ್ರ ಎಂದರು. ಆದುದರಿಂದ ಅದು ಕೂಡಲೇ ಬರಲು ಸಾಧ್ಯವಿಲ್ಲ; ಸಾವಧಾನವಾಗಿ ಅದು ಬರಬೇಕು.

---

(1) ಎಡ್ವರ್ಡ್ ಬರ್ನ್‌ಸ್ಟೈನ್ ಎಂಬ ಜರ್ಮನೀ ದೇಶದ ಸುಧಾರಕ ಸಮಾಜವಾದಿ ವಿಕಾಸಸಮಾಜವಾದವನ್ನು ಪ್ರತಿಪಾದಿಸಿದನು. ಮಾರ್ಕ್ಸ್ ವಿಮರ್ಶಿಸಿದ ರೀತ್ಯಾ ಬಂಡವಾಳ ಆರ್ಥಿಕ ವ್ಯವಸ್ಥೆಯ ಪತನ ಮತ್ತು ಸಮಾಜವಾದೀ ವ್ಯವಸ್ಥೆಯ ಆಗಮನ ಇವು ದುಸ್ಸಾಧ್ಯವೆಂದೂ, ಸದ್ಯದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಪತನ ಸಂಭವಿಸುವುದಿಲ್ಲವೆಂದೂ ಈತನ ವಾದವಾಗಿದ್ದಿತು. ಕ್ರಮೇಣ ಕಾರ್ಲ್‌ಕಾಟ್‌ಸ್ಕೀ ಮತ್ತು ಇತರರು ವಿಕಾಸವಾದದ ಆರಾಧಕರಾದರು.

ವಿಕಾಸ ಸಮಾಜವಾದದ ಜೊತೆಗೆ ಇನ್ನೂ ಹಲವು ಬಗೆಯ ವಾದಗಳು ಪ್ರತಿಪಾದಿತವಾದವು. ಇವುಗಳನ್ನು ಎರಡು ಬಗೆಯಾಗಿ ವಿಂಗಡಿಸಬಹುದು.

ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಕೆಲವು ದೋಷಗಳನ್ನು ಎಲ್ಲರೂ ಒಪ್ಪುವ ರೀತಿಯಲ್ಲಿ ತಿದ್ದುಪಡಿ ಮಾಡುವುದರ ಮೂಲಕ ಧ್ಯೇಯವನ್ನು ಸಾಧಿಸಬೇಕಾಗಿದೆ ಎಂದರು.

ಒಂದು ಆರ್ಥಿಕ ವಾದ, ಇನ್ನೊಂದು ರಾಜಕೀಯ ವಾದ. ಬಂಡವಾಳ ಆರ್ಥಿಕವ್ಯವಸ್ಥೆ ನಿರೀಕ್ಷಣೆ ಮಾಡಿದಂತೆ ಸುಗುಮವಾಗಿಯೂ ವ್ಯವಸ್ಥಿತ ರೀತಿಯಲ್ಲಿಯೂ ವರ್ತಿಸದಿದ್ದುದು ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರನ್ನು ದಿಗ್ಭ್ರಮೆಗೊಳಿಸಿತು. ಬಂಡವಾಳಶಾಹಿ ಅರ್ಥಶಾಸ್ತ್ರವನ್ನು ಮರುವಿಮರ್ಶೆಗೆ ಒಳಪಡಿಸಲಾಯಿತು. ಈ ರೀತಿ ಹೊರಬಿದ್ದ ಹೊಸ ವಾದಗಳಲ್ಲಿ ಜೆ. ಎಂ. ಕೀನ್ಸ್ ಎಂಬ ಅರ್ಥಶಾಸ್ತ್ರಜ್ಞನ ವಾದವು ಬಹು ಮುಖ್ಯವಾದದ್ದು. ಕೂಡಾಣಿಕೆ (Savings) ಮತ್ತು ಬಂಡವಾಳ ವಿನಿಯೋಗದ (Investment) ನೀತಿ ಮತ್ತು ಹಣಕಾಸಿನ ನೀತಿಯ ಮೂಲಕ ನಿರುದ್ಯೋಗವನ್ನೂ, ಆರ್ಥಿಕ ಕ್ಷೋಭೆಯನ್ನೂ, ತಡೆಗಟ್ಟುವುದು ಸಾಧ್ಯವೆಂದನು. ಒಟ್ಟಿನಲ್ಲಿ, ಆಧುನಿಕ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರು ಆರ್ಥಿಕ ಕ್ಷೇತ್ರದಲ್ಲಿ ಸರ್ಕಾರ ಪ್ರವೇಶಿಸುವುದನ್ನು ಅಂಗೀಕರಿಸಿದ್ದಾರೆ. ಮೊದಲು ಆರ್ಥಿಕ ಕ್ಷೇತ್ರದಲ್ಲಿ ಸರ್ಕಾರವು ಪ್ರವೇಶಿಸಕೂಡದೆಂಬುದು ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರ ವಾದವಾಗಿತ್ತು. (ಪುಟ 64, 65 ನೋಡಿ.)

ರಾಜಕೀಯ ವಾದಗಳಲ್ಲಿ 'ಬಹುವಾದ' (Pluralism) ಬಹು ಮುಖ್ಯವಾದದ್ದು. ಡುಗ್ವೀ (Duguit) ಮತ್ತು ಕ್ರಾಬೆ (Krabbe) ಈ ವಾದದ ಪ್ರಮುಖ ಪ್ರತಿಪಾದಿತರು. ಎಲಿಯಟ್, ಲಾಸ್ಕೀ, ಬಾರ್ಕರ್ ಇವರುಗಳು ಈ ವಾದವನ್ನು ಬೆಳಸಿದ್ದಾರೆ. ಯುದ್ಧಗಳಿಗೂ, ರಾಜ್ಯದಲ್ಲಿ ಸರ್ವಾಧಿಕಾರ ಛಾಯೆಗಳಿಗೂ ಮತ್ತು ನಶಿಸುತ್ತಿರುವ ವ್ಯಕ್ತಿ ಸ್ವಾತಂತ್ರ್ಯಗಳಿಗೂ ಸಾರ್ವಭೌಮ ತತ್ತ್ವದ (Sovereignty) ಆರಾಧನೆಯೇ ಪ್ರಮುಖ ಕಾರಣವಾಗಿವೆ ಎಂದು ವಾದಿಸಲಾಗಿದೆ. ಸಾರ್ವಭೌಮ ತತ್ತ್ವದ ನಿರಾಕರಣೆಗೆ ಕರೆಕೊಡಲಾಗಿದೆ.

ಈ ವಾದಗಳ ಬಗ್ಗೆ ಹೆಚ್ಚು ಪ್ರಸ್ತಾವನೆ ಅನಗತ್ಯ. ಸಾರ್ವಭೌಮ ತತ್ತ್ವವು ಕುಸಿದಿಲ್ಲ ಮತ್ತು ಕುಸಿಯುವ ಚಿನ್ಹೆಗಳೂ ಇಲ್ಲ.

ಫೇಬಿಯನ್ ಸಮಾಜವಾದಿಗಳು[1] ತಮ್ಮ ವಾದವನ್ನು ಮಂಡಿಸಿ, ಕಾರ್ಮಿಕರು ತಮ್ಮ ವಿಮೋಚನೆಗಾಗಿ ಕ್ರಾಂತಿಕಾರ ಚಳವಳಿಯನ್ನು ಮೊದಲು ಬಿಡಬೇಕೆಂದರು. ವರ್ಗಗಳಾಗಲೀ ಮತ್ತು ವರ್ಗವಿರಸವಾಗಲೀ ಇಲ್ಲವೆಂದರು. ಕಾರ್ಮಿಕರು ತಮ್ಮ ಧ್ಯೇಯ ಸಾಧನೆಗಾಗಿ ಕ್ರಾಂತಿಯ ಮೂಲಕ ಏಕೈಕ ಕಾರ್ಮಿಕರ ಪ್ರಭುತ್ವವನ್ನು ರಚಿಸುವುದೂ, ಒಪ್ಪದವರನ್ನು ಒಪ್ಪುವ ಹಾಗೆ ಬಲಾತ್ಕಾರಪಡಿಸುವುದೂ ಪ್ರಜಾಪ್ರಭುತ್ವದ ತತ್ತ್ವಕ್ಕೆ ವಿರುದ್ಧವಾಗಿದೆ ಎಂದರು. ಮೊದಲು ಮಾಡಬೇಕಾಗಿರುವ ಕೆಲಸವೆಂದರೆ ಎಲ್ಲರಿಗೂ ಬೇಕಾಗಿರುವ ಸೌಲಭ್ಯಗಳನ್ನು ಸ್ವಲ್ಪ ಪ್ರಮಾಣದಲ್ಲಿ ಸಾರ್ವಜನಿಕರೇ ಒಟ್ಟಿನಲ್ಲಿ ನಡಸಬೇಕು. ಈ ರೀತಿಯ ಸಾರ್ವಜನಿಕ ಉದ್ಯಮಗಳಿಂದ (Public Utilies) ಆಗುವ ಪ್ರಯೋಜನಗಳನ್ನು ಜನರಿಗೆ ತಿಳಿಸಬೇಕು. ಉದಾಹರಣೆಗೆ—ಒಂದು ಊರಿಗೆ ದೀಪ, ನೀರು, ಹಾಲು, ಇತ್ಯಾದಿ ಎಲ್ಲರಿಗೂ ಬೇಕಾದ್ದರಿಂದ ಇವುಗಳನ್ನು ಖಾಸಗೀ ಉದ್ಯಮಕ್ಕೆ ಬಿಡದೆ ಮುನಿಸಿಪಾಲಿಟಿ ಅಥವಾ ಗ್ರಾಮಪಂಚಾಯಿತಿ ವಹಿಸಿಕೊಂಡು ನಡೆಸಬೇಕು. ಇಷ್ಟುಮಾಡಿದರೆ, ಸಾರ್ವಜನಿಕ ಉದ್ಯಮಗಳಿಂದ ಆಗುವ ಪ್ರಯೋಜನಗಳಿಂದ ಜನರು ಪರಿವರ್ತನೆ ಹೊಂದುವರು. ಅವ್ಯವಸ್ಥೆಗೆ

---

(1) ಜಾರ್ಜ್ ಬರ್ನಾರ್ಡ್ ಷಾ, ಸಿಡ್ನಿ ವೆಬ್ ಮತ್ತು ಇತರರಿಂದ ಪ್ರತಿಪಾದಿತವಾದ ವಾದ. ಮಾರ್ಕ್ಸ್-ಎಂಗೆಲ್ಸರು ಬಂಡವಾಳ ಆರ್ಥಿಕವ್ಯವಸ್ಥೆಯ ಬಗ್ಗೆ ಮಾಡಿದ ವಿಮರ್ಶೆಯನ್ನು ಅಂಗೀಕರಿಸಲು ನಿರಾಕರಿಸಿದರು. ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರ ತತ್ತ್ವ ಮತ್ತು ಸಂಪ್ರದಾಯಕ್ಕೆ ಮನ್ನಣೆಕೊಡಲಾಯಿತು. ಜಾನ್ ಸ್ಟೂವರ್ಟ್ ಮಿಲ್ ಮತ್ತು ಜವನ್ಸ್‌ರ ಅರ್ಥಶಾಸ್ತ್ರಗಳಿಂದ ಸ್ಫೂರ್ತಿ ಪಡೆದು ಹೊಸಬಗೆಯ ಸಮಾಜವಾದೀ ತತ್ತ್ವದ ಪ್ರತಿಪಾದನೆಗೆ ಮಾರ್ಗದರ್ಶನವನ್ನು ಅವರು ಕಂಡರು. ಬಹಳ ಕಾಲದವರೆಗೆ ಫೇಬಿಯನ್ನರು ಒಂದು ಸಣ್ಣ ಗುಂಪಾಗಿಯೇ ಉಳಿದಿದ್ದರು. ಕ್ರಮೇಣ 1918 ರಲ್ಲಿ ಫೇಬಿಯನ್ ತತ್ತ್ವಗಳನ್ನು ಬ್ರಿಟಿಷ್ ಲೇಬರ್‌ಪಕ್ಷ ಅಂಗೀಕರಿಸಿ ಸಮಾಜವಾದೀ ಕಾರ್ಯಕ್ರಮವನ್ನು ಮಂಡಿಸಿತು. ಇದರಿಂದಾಗಿ ಬ್ರಿಟಿಷ್ ಸಮಾಜವಾದದ ಹುಟ್ಟು ಮತ್ತು ಹಿನ್ನೆಲೆ ಬೇರೆಯಾಯಿತು.

ರೋಮ್ ದೇಶದ ಫೇಬಿಯಸ್ ಎಂಬ ಯೋಧನು ಶತ್ರುಗಳನ್ನು ಸದೆಬಡಿಯಲು ಅನುಸರಿಸಿದ ಚಾಕಚಕ್ಯತೆಗಳಿಗೆ ಮೆಚ್ಚಿಗೆ ಸೂಚಿಸಿ ಸಂಘಕ್ಕೆ ಫೇಬಿಯನ್ ಸಂಘವೆಂದು ಹೆಸರು ಕೊಡಲಾಯಿತು.

ಕಾರಣವಾದ ಬಂಡವಾಳ ಆರ್ಥಿಕವ್ಯವಸ್ಥೆಯ ನಾಶಕ್ಕೆ ಬೆಂಬಲವೂ ಬಹುಮತವೂ ಸಿಕ್ಕುತ್ತದೆ. ಸಮಾಜವಾದದ ಸ್ಥಾಪನೆ ಸುಗಮವಾಗುತ್ತದೆ.

ಗಿಲ್ಡ್ ಸಮಾಜವಾದಿಗಳು [1] ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉಂಟಾಗಿರುವ ಅವ್ಯವಸ್ಥೆಗಳಿಗೆ ಉತ್ಪಾದನಾ ಸಾಧನಗಳ ನಿರ್ವಹಣೆಯಲ್ಲೂ ಮತ್ತು ರಾಜ್ಯಾಡಳಿತದಲ್ಲೂ ದುಡಿಯುವವರಿಗೆ ಮತ್ತು ಜನಸಮುದಾಯಕ್ಕೆ ಸರಿಸಮಾನ ಪ್ರಾತಿನಿಧ್ಯ ಮತ್ತು ಪ್ರಜಾಸತ್ತೆ ಇಲ್ಲದಿರುವುದೇ ಕಾರಣವೆಂದು ತಿಳಿಸಿದರು. ಆದುದರಿಂದ ಆರ್ಥಿಕ ಕ್ಷೇತ್ರದಲ್ಲಿ ಪ್ರತಿಯೊಂದು ಗುಂಪಿಗೂ ಪ್ರಾಧಾನ್ಯತೆ ಮತ್ತು ಪ್ರಾತಿನಿಧ್ಯವೂ, ಮತ್ತು ಅದರಂತೆ ಪ್ರತಿಯೊಂದು ಗುಂಪಿಗೂ ಪ್ರಾತಿನಿಧ್ಯ ಇರುವಂತೆ ವಿಧಾನಸಭೆಯೊಂದನ್ನು ರಚಿಸಬೇಕೆಂದರು. ಆಗ ಯಾವ ವರ್ಗವೂ ಮೇಲುಗೈ ಆಗದೆ, ವರ್ಗವಿರಸಕ್ಕೆ ಆಸ್ಪದವಿಲ್ಲದೆ, ರಾಜಕೀಯ ಪ್ರಜಾಸತ್ತೆಯ ಜೊತೆಗೆ ಆರ್ಥಿಕ ಪ್ರಜಾಸತ್ತೆಯೂ ಲಭಿಸುವುದೆಂದರು.

ಸಿಂಡಿಕ ಸಮಾಜವಾದಿಗಳು [2] (Syndicalists) ತಮ್ಮ ವಾದವನ್ನು ಮಂಡಿಸಿ, ಇತರ ಸಮಾಜವಾದೀ ಮಾರ್ಗಗಳಿಂದ ಸಮಾಜವಾದದ ಆಗಮನ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ನಾಶ ಇವು ನಿಧಾನವಾಗುವುದೆಂದೂ, ಆದುದರಿಂದ ಕಾರ್ಮಿಕರು ಸಾರ್ವತ್ರಿಕ ಮುಷ್ಕರವನ್ನು ಹೂಡಬೇಕೆಂದೂ, ಅದರ ಮೂಲಕ ಸಮಾಜವಾದ ಕೂಡಲೇ ಲಭಿಸುವುದೆಂದೂ ಸೂಚಿಸಿದರು.

---

(1) ಜಿ. ಡಿ. ಎಚ್. ಕೋಲ್, ಪೆಂಟಿ, ಎಸ್. ಜಿ. ಹಾಬ್‌ಸನ್ ಮತ್ತು ಇತರರಿಂದ ಪ್ರತಿಪಾದಿತವಾದ ವಾದ. ವಿಲಿಯಮ್ ಮಾರಿಸ್ ಮತ್ತು ಜಾನ್ ರಸ್ಕಿನರ ಬರೆವಣಿಗೆಗಳು ಈ ವಾದದ ಪ್ರತಿಪಾದಕರಮೇಲೆ ತುಂಬಾ ಪರಿಣಾಮವನ್ನು ಉಂಟುಮಾಡಿದವು. ಬಂಡವಾಳ ಆರ್ಥಿಕವ್ಯವಸ್ಥೆ ಒಂದು ಯಾಂತ್ರಿಕ ವ್ಯವಸ್ಥೆಯಾಗಿ ವ್ಯಕ್ತಿಯೂ ಸಹ ಒಂದು ಯಂತ್ರವಾಗುತ್ತಿರುವುದನ್ನು ತಡೆಗಟ್ಟುವುದು ಅಗತ್ಯವಾಗಿದೆ ಎಂದು ರಸ್ಕಿನ್ನನ ವಾದವಾಗಿತ್ತು.

ಫೇಬಿಯನ್ ಸಮಾಜವಾದಿಗಳಿಗಿಂತ ಗಿಲ್ಡ್ ಸಮಾಜವಾದಿಗಳು ಸ್ವಲ್ಪ ಉಗ್ರವಾದಿಗಳು. ಫೇಬಿಯನ್ನರು ನಂಬಿದ್ದಂತೆ ಕೇವಲ ಸುಧಾರಣೆಗಳಿಂದ ಸಮಾಜವಾದೀ ವ್ಯವಸ್ಥೆ ಬರುವುದಿಲ್ಲವೆಂದು ತಿಳಿಸಿದರು. ಆದರೆ ಅವರಂತೆಯೇ ಮಾರ್ಕ್ಸ್ ವಾದಸರಣಿಗೆ ವಿರೋಧವನ್ನು ವ್ಯಕ್ತಪಡಿಸಿದರು.

(2) ಬ್ಲಾಂಕ್ವೀ ಎಂಬಾತನು ಈ ತತ್ತ್ವದ ಮೂಲ ಪ್ರತಿಪಾದಕನು. ಕಾಲಕ್ರಮೇಣ ತತ್ತ್ವ ಹಲವು ರೂಪಾಂತರಗಳನ್ನು ತಾಳಿತು. ಕೆಲವರು ಬಾಕುನಿನ್ ಎಂಬ

ಈ ವಾದಗಳ ಬಗ್ಗೆ ಹೆಚ್ಚು ಪ್ರಸ್ತಾವನೆ ಇಲ್ಲಿ ಅನಾವಶ್ಯಕ. ಮುಖ್ಯವಾಗಿ 1919 ರ ನಂತರ ಚುನಾವಣೆಗಳಲ್ಲಿ ಬಹುಮತಗಳಿಸಿ, ಕ್ರಾಂತಿ ಇಲ್ಲದೆ, ಮೊಟ್ಟಮೊದಲನೆಯಬಾರಿಗೆ ದುಡಿಮೆಗಾರರ ಸರ್ಕಾರ (ಲೇಬರ್ ಸರ್ಕಾರ) ಸ್ಥಾಪಿತವಾದ ದೇಶವೆಂದರೆ ಇಂಗ್ಲೇಂಡ್. ಆದರೆ ಈ ಸರ್ಕಾರ ಬಹು ಕಾಲವಿರಲಿಲ್ಲ. ಇದ್ದಷ್ಟು ಕಾಲದಲ್ಲೂ ಸಮಾಜವಾದೀ ನೀತಿಯನ್ನು ಸರ್ಕಾರ ಅನುಸರಿಸಲಿಲ್ಲ. ಸಮಾಜವಾದದ ಸೋಗಿನಲ್ಲಿ ಸ್ವಾಮ್ಯವರ್ಗದ ಪ್ರತಿನಿಧಿಗಳು ಶಾಸನ ಸಭೆಯಲ್ಲೂ ಮತ್ತು ಮಂತ್ರಿಮಂಡಲದಲ್ಲೂ ಇದ್ದದ್ದರಿಂದ ಸ್ವಾಮ್ಯಕ್ಕೆ ಚ್ಯುತಿ ಬರುವ ಕಾನೂನುಗಳು ಬರಲಿಲ್ಲ. ಎಲ್ಲವೂ ಬಾಯಿಮಾತಿನ ಮತ್ತು ಭಾಷಣಗಳ ಸಮಾಜವಾದವಾಯಿತೇ ವಿನಾ ಕಾರ್ಯತಃ ಕಾರ್ಮಿಕವರ್ಗಕ್ಕೆ ಯಾವ ಸೌಲಭ್ಯಗಳೂ ದೊರೆಯಲಿಲ್ಲ. ಲೇಬರ್‌ಸರ್ಕಾರ ಬರುವ ಮುಂಚೆ ಯಾವ ಆರ್ಥಿಕ ವ್ಯವಸ್ಥೆ ಇದ್ದಿತೋ ಅದೇ ವ್ಯವಸ್ಥೆ ಯಾವ ಬದಲಾವಣೆಗಳನ್ನೂ ಹೊಂದದೆ ಮುಂದುವರಿಯಿತು. ಕಾರ್ಮಿಕರ ಸರ್ಕಾರ ಬಂದರೂ ಸಮಾಜವಾದೀ ವ್ಯವಸ್ಥೆಯನ್ನು ತರುವುದು ಅಸಾಧ್ಯವೆಂಬುದನ್ನು ಕಾರ್ಮಿಕವರ್ಗಕ್ಕೆ ಬಂಡವಾಳವರ್ಗ ವೇದ್ಯಪಡಿಸಿತು; ಯಾವ ಬಣ್ಣದ ಸರ್ಕಾರವೇ ಬರಲಿ, ಯಾವ ಭಾಷಣವೇ ನಡೆಯಲಿ, ಖಾಸಗೀ ಸ್ವಾಮ್ಯಕ್ಕೆ ಧಕ್ಕೆ ಬರುವುದಿಲ್ಲವೆಂಬುದು ಖಚಿತವಾಯಿತು.

ಉಳಿದ ಬಂಡವಾಳಶಾಹಿ ದೇಶಗಳಲ್ಲಿ ಕಾರ್ಮಿಕವರ್ಗದ ಚಳವಳಿಗಳು ಬಗೆ ಬಗೆಯ ಸುಧಾರಕ ಸಮಾಜವಾದೀತತ್ತ್ವಗಳ ಮತ್ತು ಸುಧಾರಕ ಮುಖಂಡರುಗಳ ಪ್ರಭಾವಕ್ಕೆ ಸಿಲುಕಿದವು. ಈ ಬಗೆ ಬಗೆಯ ಸಮಾಜವಾದಿಗಳು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ತಮ್ಮ ಚಟುವಟಿಕೆಯನ್ನು

ಅರಾಜಕವಾದಿ (anarchist) ಯ ಹಿಂಬಾಲಕರಾದರು. ಕಾರ್ಮಿಕರ ಪ್ರಭುತ್ವಕ್ಕೆ ಅಡ್ಡಿಬರುವ ಬಂಡವಾಳವರ್ಗವನ್ನು ಶಕ್ತಿಪ್ರದರ್ಶನ ಮೂಲಕ ದಮನಮಾಡಬೇಕೆಂದರು. ಯಾವ ಸಂಘ ವ್ಯವಸ್ಥೆಯಾಗಲೀ, ಕಟ್ಟುಪಾಡುಗಳಾಗಲೀ ಸಮಾಜದಲ್ಲಿ ಇರಕೂಡದೆಂದರು. ಇನ್ನು ಕೆಲವರು ಸಿಂಡಿಕವಾದ (Syndicalism) ವನ್ನು ಮಂಡಿಸಿದ ಜಾರ್ಜ್ಸ್ ಸೊರೆಲ್ ಎಂಬಾತನ ಹಿಂಬಾಲಕರಾದರು. ವಾಸ್ತವ ಮುಷ್ಕರಕ್ಕಿಂತ ಮುಷ್ಕರ ನಡೆಯುತ್ತದೆಂಬ ಧ್ಯೇಯದ ಪಠನೆಯೇ ಕಾರ್ಮಿಕರ ಪ್ರಭುತ್ವವನ್ನು ತರುತ್ತದೆಂದರು.

ನಿಲ್ಲಿಸಿದರು ; ಬದಲಾಗಿ, ಕಮ್ಯೂನಿಸ್ಟ್ ಪಕ್ಷದ ಅವಹೇಳನದಲ್ಲೂ ಮಾರ್ಕ್ಸ್-ಏಂಗೆಲ್ಸರ ವಾದವನ್ನು ತಿರುಗುಮುರುಗು ಮಾಡುವುದರಲ್ಲೂ ತಲ್ಲೀನರಾದರು.

ಸೋವಿಯಟ್ ರಷ್ಯಾದ ದೂಷಣೆ ಇವರ ನಿತ್ಯದ ಪಾರಾಯಣೆಯಾಯಿತು. ಇವರುಗಳು ಬಗೆದಂತೆ ಕಾರ್ಮಿಕವರ್ಗಕ್ಕೆ ಶಾಸನ ಸಭೆಯಲ್ಲಿ ಬಹುಮತ ದೊರೆಯಲೂ ಇಲ್ಲ. ಮತ್ತು ವಾಸ್ತವವಾಗಿ ಸ್ವಾಮ್ಯದ ಆಧಾರದಮೇಲೆ ನಡೆಯುವ ರಾಜಕೀಯದಲ್ಲಿ ಕಾರ್ಮಿಕ ವರ್ಗ ಚುನಾವಣೆಗಳಲ್ಲಿ ಬಹುಮತಗಳಿಸಲು ಸಾಧ್ಯವೂ ಇರಲಿಲ್ಲ. ಬಂಡವಾಳವರ್ಗಕ್ಕೆ ಇದ್ದ ವಿಶೇಷ ಸೌಲಭ್ಯಗಳಾದ ಹಣ, ಮುದ್ರಣಾಲಯ, ಪ್ರಚಾರ ಸೌಕರ್ಯ, ಪ್ರತಿಯಾಗಿ ಕಾರ್ಮಿಕವರ್ಗಕ್ಕಿದ್ದ ಆಜನ್ಮದೌರ್ಬಲ್ಯ. ಎಲ್ಲವೂ ಸುಧಾರಕ ಮುಖಂಡರುಗಳ ಕನಸನ್ನು ಭಗ್ನಗೊಳಿಸಿದವು. ಸುಧಾರಕ ಸಮಾಜವಾದೀ ಮುಖಂಡರು ಸಮಾಜವಾದೀ ವ್ಯವಸ್ಥೆಯನ್ನು ನಿರೀಕ್ಷಣೆಮಾಡಿ ಬೇಸತ್ತರು. ತಮ್ಮ ವಾದದಲ್ಲಿ ತಪ್ಪೇನೂ ಇಲ್ಲವೆಂದು ಬಂಡವಾಳಶಾಹಿ ಸರ್ಕಾರಗಳಲ್ಲಿ ಮಂತ್ರಿಗಳಾಗಲು ಒಪ್ಪಿದರು; ಬಂಡವಾಳಶಾಹಿ ವ್ಯವಸ್ಥೆ ಶಾಶ್ವತವೆಂದರು.

ಸುಧಾರಕ ಸಮಾಜವಾದೀ ತತ್ತ್ವದ ಮತ್ತು ಅದರ ಮುಖಂಡರ ಆಶೋತ್ತರಗಳನ್ನು ಭಂಗಮಾಡುವಂತೆ ಎರಡು ಪ್ರಾಮುಖ್ಯ ಘಟನೆಗಳು ನಡೆದವು. ಈ ಎರಡು ಮುಖ್ಯ ಘಟನೆಗಳು ಸುಧಾರಕ ಸಮಾಜವಾದೀ ತತ್ತ್ವದ ನಿಷ್ಪ್ರಯೋಜಕತೆಯನ್ನು ಬಯಲುಮಾಡಿದವು. ಒಂದನೇ ಘೋರ ಯುದ್ಧಾನಂತರ ಸುಧಾರಕ ಸಮಾಜವಾದಿಗಳು ಬಗೆದಂತೆ ಬಂಡವಾಳಶಾಹಿ ವ್ಯವಸ್ಥೆ ಸುವ್ಯವಸ್ಥಿತವಾಗಿರುವುದರ ಬದಲು ಪುನಃ ದಿನಚರಿಯಲ್ಲಿ ರೋಗಗ್ರಸ್ತವಾಯಿತು. 1926 ರಲ್ಲಿ ಆರ್ಥಿಕ ಮುಗ್ಗಟ್ಟು ಪ್ರಾರಂಭವಾಗಿ ಬಂಡವಾಳಶಾಹಿ ದೇಶಗಳಲ್ಲಿರುವ ಕಾರ್ಮಿಕವರ್ಗವನ್ನು ಪುನಃ ನಿರುದ್ಯೋಗದ ಸಾಗರದಲ್ಲಿ ಮುಳುಗಿಸಿತು. ಅಗಾಧ ಸಂಪತ್ತಿನ ನಡುವೆ ದಾರಿದ್ರ್ಯ ಮತ್ತು ದುಃಸ್ಥಿತಿ ತಾಂಡವಾಡಲಾರಂಭಿಸಿದವು. ಇಂತಹ ಸನ್ನಿವೇಶದಲ್ಲಿ ಯಾವ ಆರ್ಥಿಕದುಃಸ್ಥಿತಿಗೂ ಈಡಾಗದೆ ಆರ್ಥಿಕಾಭಿವೃದ್ಧಿಯನ್ನು ಗಳಿಸುತ್ತಿದ್ದ ದೇಶವೆಂದರೆ ಸಮಾಜವಾದೀ ಆರ್ಥಿಕ ವ್ಯವಸ್ಥೆಯ ಸೋವಿಯಟ್ ರಷ್ಯಾ ಮಾತ್ರವಾಗಿತ್ತು.

ಎರಡನೆಯದಾಗಿ, 1921 ರಲ್ಲಿ ಇಟಲಿಯಲ್ಲಿ ಮತ್ತು 1933 ರಲ್ಲಿ ಜರ್ಮನಿಯಲ್ಲಿ ಅಧಿಕಾರಕ್ಕೆ ಬಂದ ಫ್ಯಾಸಿಸ್ಟ್ ಸರ್ಕಾರಗಳು, ಖಾಸಗೀ ಸ್ವಾಮ್ಯಕ್ಕೆ ಅಪಾಯ ಒದಗಿರುವಾಗ ಪ್ರಜಾಸತ್ತೆಗಿಂತ ಬಂಡವಾಳಶಾಹಿ ವ್ಯವಸ್ಥೆಯ ಸಂರಕ್ಷಣೆಯೇ ಬಂಡವಾಳವರ್ಗದ ಅಂತರಾಳವೆಂದು ಪ್ರಕಟನೆ ಮಾಡಿದುವು. ಚುನಾವಣೆಗಳ ಮೂಲಕ ಜನತಾಭಿಪ್ರಾಯವನ್ನು ನಿರೀಕ್ಷಿಸುವುದೂ ರಾಜ್ಯನಿರ್ವಹಣೆಯನ್ನು ಜನಸಮುದಾಯಕ್ಕೆ ಬಿಡುವುದೂ ಅಪಾಯವೆಂದು ಬಂಡವಾಳವರ್ಗ ಬಗೆಯಿತು. ಪ್ರಜಾಸತ್ತೆ ಚುನಾವಣೆಗಳನ್ನು ಫ್ಯಾಸಿಸ್ಟ್ ಸರ್ಕಾರಗಳು ಧೂಳಿಪಟ ಮಾಡಿದವು.

ಈರೀತಿಯಾಗಲು ಇಟಲಿ, ಜರ್ಮನಿ, ಆಸ್ಟ್ರಿಯಾ ಮತ್ತು ಇತರ ದೇಶಗಳಲ್ಲಿ ಇದ್ದ ಆರ್ಥಿಕ ಪರಿಸ್ಥಿತಿಯೇ ಮೂಲಕಾರಣವಾಗಿತ್ತು. ಯುದ್ಧಾನಂತರ ಅಧಿಕಾರಕ್ಕೆ ಬಂದ ಬಂಡವಾಳಶಾಹಿ ಸರ್ಕಾರಗಳಿಗೆ ಜನಸಮುದಾಯದ ಆಶೋತ್ತರಗಳನ್ನು ನೆರವೇರಿಸಲು ದುಸ್ಸಾಧ್ಯವಾಯಿತು. ಜನರಲ್ಲಿ ಅತೃಪ್ತಿಹೆಚ್ಚಿತು. ನಿರುದ್ಯೋಗವೂಸಹ ಹೆಚ್ಚಿತು. ಯುದ್ಧದಲ್ಲಿಸೋತಅಥವಾ ನಿರಾಶೆಹೊಂದಿದ್ದ ಬಂಡವಾಳಶಾಹಿ ರಾಷ್ಟ್ರಗಳಿಗೆ ಲಾಭದ ಉದ್ಯಮಗಳನ್ನು ನಡೆಸಲು, ಹೆಚ್ಚು ಜನರಿಗೆ ಉದ್ಯೋಗ ಕಲ್ಪಿಸಲು ಮತ್ತು ತಿಮಿಂಗಿಲದಂತೆ ಇದ್ದ ಹಿರಿಯ ಬಂಡವಾಳಶಾಹಿ ರಾಷ್ಟ್ರಗಳೊಡನೆ ಪೈಪೋಟಿ ನಡೆಸಿ ಸರಕುಗಳನ್ನು ಮಾರಲು ಚೈತನ್ಯವಿರಲಿಲ್ಲ. ಒಂದುಪಕ್ಷ ಇದ್ದರೂ, ಹಿರಿಯ ಬಂಡವಾಳಶಾಹಿ ರಾಷ್ಟ್ರಗಳಾದ ಇಂಗ್ಲೇಂಡ್, ಫ್ರಾನ್ಸ್ ಮತ್ತು ಅಮೆರಿಕಾ ಅಡ್ಡಿಬಂದವು. ಹೀಗಾಗಿ ಕಾರ್ಮಿಕವರ್ಗದಲ್ಲಿ ಆರ್ಥಿಕದುಃಸ್ಥಿತಿಯಿಂದ ಅಶಾಂತಿ ಹೆಚ್ಚಿತು. ಮಾರ್ಕ್ಸ್–ಎಂಗೆಲ್ಸರ ಸಮಾಜವಾದೀ ತತ್ತ್ವದ ಸತ್ಯ ಕಾರ್ಮಿಕವರ್ಗಕ್ಕೆ ಪುನಃ ಮನದಟ್ಟಾಯಿತು. ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಕಾರ್ಮಿಕರ ಚಳವಳಿ ಆರಂಭವಾಯಿತು. ಬಂಡವಾಳವರ್ಗ ತನ್ನ ಸ್ವಾಮ್ಯಕ್ಕೆ ಅಪಾಯ ಒದಗಿರುವುದನ್ನು ಕಾರ್ಮಿಕರ ಚಳವಳಿಯಲ್ಲಿ ಕಂಡು ಹೆದರಿತು. ಚುನಾವಣೆಗಳ ಮೂಲಕ ರಾಜ್ಯಶಕ್ತಿಯನ್ನು ತಮ್ಮ ಹತೋಟಿಯಲ್ಲಿಟ್ಟುಕೊಳ್ಳುವುದು ಬಂಡವಾಳವರ್ಗಕ್ಕೆ ಕಠಿಣವಾಯಿತು. ಇನ್ನು ಹೆಚ್ಚುಕಾಲ ನಿಧಾನಿಸಿದರೆ ಬಂಡವಾಳಶಾಹಿ ವ್ಯವಸ್ಥೆಗೇ ಮಿತ್ತೆಂದು ಬಗೆದು ಪ್ರಜಾಸತ್ತೆ ಸರ್ಕಾರವನ್ನು ಉರುಳಿಸಿ ಸರ್ವಾಧಿಕಾರವುಳ್ಳ (Dictatorship) ಸರ್ಕಾರಗಳು ಘೋಷಿತವಾದವು. ಇಟಲಿಯಲ್ಲಿ ಮುಸಲೋನಿ, ಜರ್ಮನಿ

ಯಲ್ಲಿ ಹಿಟ್ಲರ್, ಸ್ಪೇಯಿನಿನಲ್ಲಿ ಫ್ರಾಂಕೊ, ಸರ್ವಾಧಿಕಾರವುಳ್ಳ ಸರ್ಕಾರಗಳ ಮುಖಂಡರಾದರು.

ಅಧಿಕಾರಕ್ಕೆ ಬಂದ ಫ್ಯಾಸಿಸ್ಟ್ ಸರ್ಕಾರಗಳು ದಬ್ಬಾಳಿಕೆಯ ಮೂಲಕ ಕಾರ್ಮಿಕವರ್ಗವು ಸಂಘಟನೆ ಹೊಂದುವುದನ್ನೂ, ಸಮಾಜವಾದೀ ಚಳವಳಿ ಬಲಗೊಳ್ಳುವುದನ್ನೂ ಮುರಿದವು. ಕಾರ್ಮಿಕರ ಸಂಘಗಳನ್ನೂ ಮತ್ತು ಕಮ್ಯೂನಿಸ್ಟ್ ಪಕ್ಷಗಳನ್ನೂ ನ್ಯಾಯಬಾಹಿರವೆಂದು ಘೋಷಿಸಿದವು. ಸಮಾಜವಾದೀ ವ್ಯವಸ್ಥೆ ದೈವನಿಯಮಕ್ಕೆ ವಿರುದ್ಧವೆಂದೂ, ಸಮಾಜವಾದ ಅನೀತಿಯ ಮತ್ತು ಅಸ್ವಾಭಾವಿಕ ವಾದವೆಂದೂ ಅಪಪ್ರಚಾರ ಮಾಡಿದವು. ಕ್ರಿಸ್ತ ಜಗದ್ಗುರುಗಳಿಂದ ಧರ್ಮರಕ್ಷರೆಂಬ ಬಿರುದುಗಳನ್ನೂ ಸಹ ಸರ್ವಾಧಿಕಾರಿಗಳು ಪಡೆದರು. ಸಮಾಜವಾದೀ ಚಳವಳಿಯನ್ನು ಮುರಿಯಲು ಫ್ಯಾಸಿಸ್ಟ್ ಸರ್ಕಾರಗಳು ಕೈಗೊಂಡ ಕಾರ್ಯಕ್ರಮಗಳನ್ನು ಬಂಡವಾಳಶಾಹಿ ಪ್ರಜಾಸತ್ತೆಗಳಾದ ಫ್ರಾನ್ಸ್, ಇಂಗ್ಲೇಂಡ್, ಅಮೆರಿಕಾ ರಾಷ್ಟ್ರಗಳು ಅನುಮೋದಿಸಿದುವು. ಕಮ್ಯೂನಿಸ್ಟರನ್ನು ಧ್ವಂಸಮಾಡಲು ರಕ್ಷಕ ಸರ್ಕಾರಗಳು ಬಂದಿವೆಯೆಂದು ಬಗೆದು ಸರ್ವಾಧಿಕಾರಿಗಳಿಗೆ ಬೆಂಬಲವನ್ನೂ ಪ್ರೋತ್ಸಾಹವನ್ನೂ ಕೊಟ್ಟವು.

ಸಮಾಜವಾದವನ್ನು ದೂರ ಇಟ್ಟು, ಖಾಸಗೀ ಸ್ವಾಮ್ಯಕ್ಕೆ ಧಕ್ಕೆ ಬರದ ರೀತಿಯಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಫ್ಯಾಸಿಸ್ಟ್ ಸರ್ಕಾರಗಳು ಬದುಕಿಸುವುದಾದರೂ ಎಂತು ? ಇತರ ಬಲಿಷ್ಠ ಬಂಡವಾಳಶಾಹಿ ರಾಷ್ಟ್ರಗಳೊಡನೆ ಆರ್ಥಿಕ ಪೈಪೋಟಿ ಅಸಾಧ್ಯದಮಾತು. ಉಳಿದಿರುವುದು ಒಂದೇ ಮಾರ್ಗ—ಯುದ್ಧ. ಯುದ್ಧ ಸಿದ್ಧತೆಯಿಂದ ಸೈನ್ಯ ಜಮಾವಣೆ ಆಗಿ, ಮದ್ದುಗುಂಡುಗಳ ಕಾರ್ಖಾನೆಗಳು ಬೆಳೆದು, ನಿರುದ್ಯೋಗಿಗಳಿಗೆ ಉದ್ಯೋಗ ಸಿಗುತ್ತದೆ. ಯುದ್ಧದ ಮೂಲಕ ತಿಮಿಂಗಿಲದ ಹಾಗಿರುವ ಹಿರಿಯ ಬಂಡವಾಳಶಾಹಿ ರಾಷ್ಟ್ರಗಳನ್ನು ಸೋಲಿಸಿದರೆ, ಅವುಗಳು ಸುರಕ್ಷಿತವಾಗಿ ಹೊಂದಿರುವ ವಸಾಹತುಗಳು ಮತ್ತು ಮಾರುಕಟ್ಟೆಗಳು ಸಿಗುತ್ತವೆ ; ಸ್ವದೇಶದಲ್ಲಿ ಬಂಡವಾಳಶಾಹಿ ವ್ಯವಸ್ಥೆಗೆ ಒದಗಿರುವ ಬಿಕ್ಕಟ್ಟು ಪರಿಹಾರವಾಗುತ್ತದೆ. ಈ ಉದ್ದೇಶದಿಂದ ಇಟಲಿ ಮತ್ತು ಜರ್ಮನಿ ದೇಶಗಳ ಬಂಡವಾಳವರ್ಗ ಹಿಟ್ಲರ್ ಮತ್ತು ಮುಸಲೋನಿಗಳ ಮೂಲಕ ತಮ್ಮ ದೇಶಗಳಿಗೆ ಅನ್ಯಾಯವಾಗಿರುವುದೆಂಬ ಕೂಗನ್ನು ಎಬ್ಬಿಸಿದವು. ಕತ್ತಿಗಳನ್ನು ಝಳಪಿಸಿದರು. ಒಂದನೇ ಮಹಾ

ಯುದ್ಧಾನಂತರ ಅತೃಪ್ತಿ ಹೊಂದಿದ್ದ ಇತರ ಸಣ್ಣಪುಟ್ಟ ಬಂಡವಾಳಶಾಹಿ ರಾಷ್ಟ್ರಗಳೊಡನೆ ಸಂಧಾನ ಬೆಳಸಿದರು. ಪೌರ್ವಾತ್ಯದಲ್ಲಿ ಬಂಡವಾಳಶಾಹಿ ಆಂಗ್ಲ ಮತ್ತು ಅಮೆರಿಕಾ ರಾಷ್ಟ್ರಗಳ ಆರ್ಥಿಕ ದಬ್ಬಾಳಿಕೆಯನ್ನು ತಡೆಯಲು ಅಸಾಧ್ಯವಾಗಿ ಸಮಯಕಾಯುತ್ತಿದ್ದ ಜಪಾನೀ ಬಂಡವಾಳವರ್ಗ ಹಿಟ್ಲರ್ ಮುಸಲೋನಿಯರ ಮೈತ್ರಿ ಬೆಳಸಿತು. ಜರ್ಮನೀ, ಇಟಲೀ ಮತ್ತು ಜಪಾನ್ ಸರ್ಕಾರಗಳು ದೌರ್ಜನ್ಯ ನಡೆಸಲು ಸಿದ್ಧವಾದವು.

ಪೌರ್ವಾತ್ಯದಲ್ಲಿ ಜಪಾನೀ ಬಂಡವಾಳಗಾರರು ವಸಾಹತು ಮತು ಮಾರುಕಟ್ಟೆಗಳ ದಾಹಪೀಡಿತರಾಗಿ 1931 ರಲ್ಲಿ ಚೀಣದಮೇಲೆ ಆಕ್ರಮಣ ವನ್ನಾರಂಭಿಸಿ ಮಂಚೂರಿಯಾ ಪ್ರಾಂತವನ್ನು ವಶಪಡಿಸಿಕೊಂಡಿದ್ದರು. ಅಷ್ಟಕ್ಕೇ ತೃಪ್ತರಾಗದೆ, ಚೀಣವನ್ನು ಸಂಪೂರ್ಣವಾಗಿ ನುಂಗಲು ಸೈನ್ಯಗಳನ್ನು ನುಗ್ಗಿಸಿದರು. ಆಂಗ್ಲ ಮತ್ತು ಅಮೆರಿಕದ ವಸಾಹತು ಮತ್ತು ಮಾರುಕಟ್ಟೆ ಗಳ ಮೇಲೆ ಆಕ್ರಮಣವನ್ನು ಆರಂಭಿಸಲು ಸಮಯ ನಿರೀಕ್ಷಿಸಿದರು. ಅತ್ತ ಯೂರೋಪಿನಲ್ಲಿ ಮುಸಲೋನಿಯು ಇಂಗ್ಲೇಂಡ್, ಫ್ರಾನ್ಸ್ ಮತ್ತು ಅಮೆರಿಕ ಸಮ್ಮತಿಯಿಂದ ಅಬಿಸೀನಿಯ ದೇಶವನ್ನು ವಶಪಡಿಸಿಕೊಂಡನು; ತೃಪ್ತ ನಾಗದೆ, ಇಂಗ್ಲೆಂಡ್ ಮತ್ತು ಫ್ರಾನ್ಸ್ ದೇಶಗಳಿಗೆ ಸೇರಿದ್ದ ಆಫ್ರಿಕದ ವಸಾಹತುಗಳ ಮೇಲೆ ದೃಷ್ಟಿ ತಿರುಗಿಸಿದನು. ಹಿಟ್ಲರ್ ಸೈನ್ಯ ಜಮಾವಣೆ ಯನ್ನು ಆರಂಭಿಸಿ, ಸುಸಜ್ಜಿತನಾಗಿ, ಯೂರೋಪಿನ ಪುಟ್ಟ ರಾಷ್ಟ್ರಗಳಾದ ಆಸ್ಟ್ರಿಯಾ ಮತ್ತು ಜಕೊಸ್ಲಾವೇಕಿಯಾ ರಾಷ್ಟ್ರಗಳನ್ನು ವಶಪಡಿಸಿಕೊಂಡನು. ಪೋಲೆಂಡಿನ ಆಕ್ರಮಣಕ್ಕೆ ಸಿದ್ಧನಾದನು.

ಫ್ಯಾಸಿಸ್ಟ ಸರ್ಕಾರಗಳು ನಡೆಸುತ್ತಿದ್ದ ದೌರ್ಜನ್ಯಗಳನ್ನು ತಡೆ ಗಟ್ಟಲು "ಲೀಗ್ ಆಫ್ ನೇಷನ್ಸ್" ಎಂಬ ವಿಶ್ವಸಂಸ್ಥೆಯಾಗಲೀ ಅಥವಾ ವೈಯಕ್ತಿಕವಾಗಿ ಹಿರಿಯ ಬಂಡವಾಳಶಾಹಿ ರಾಷ್ಟ್ರಗಳಾಗಲೀ ಮುಂದೆ ಬರಲಿಲ್ಲ. ಇದೇ ಸಮಯದಲ್ಲಿ ಸೋವಿಯಟ್ ರಷ್ಯಾಮತ್ತು ಬಂಡವಾಳಶಾಹಿ ರಾಷ್ಟ್ರಗಳಲ್ಲಿರುವ ಕಮ್ಯೂನಿಸ್ಟ ಪಕ್ಷಗಳು ಫ್ಯಾಸಿಸ್ಟ ದೌರ್ಜನ್ಯವನ್ನು ಸಾಮೂಹಿಕ ಯತ್ನದಿಂದ ತಡೆಗಟ್ಟುವ ಹೊರತು ಪ್ರಪಂಚದಲ್ಲಿ ಶಾಂತಿ ಅಸಾಧ್ಯವೆಂದು ತಿಳಿಸಿದವು. ಸಣ್ಣಪುಟ್ಟ ರಾಷ್ಟ್ರಗಳಿಗೆ ರಾಷ್ಟ್ರ ಭದ್ರತೆಯ ಭರವಸೆಯನ್ನು ಕೊಟ್ಟು ಸಾಮೂಹಿಕ ಭದ್ರತೆಯ (Collective Security) ಮೂಲಕ ಆಕ್ರಮಣಕ್ಕೆ ಪ್ರತಿಭಟನೆಯನ್ನು ಏರ್ಪಡಿಸ ಬೇಕೆಂದು ಕರೆಯಿತ್ತವು.

ಫ್ಯಾಸಿಸ್ಟ್ ಸರ್ಕಾರಗಳ ದೌರ್ಜನ್ಯಗಳ ಬಗ್ಗೆ ಸಮಾಜವಾದಿಗಳೆಂದು ಕರೆದುಕೊಳ್ಳುವ ಸುಧಾರಕರೂ ಸಹ ತಟಸ್ಥರಾಗಿ ನಿಂತರು. ಸುಧಾರಕ ಸಮಾಜವಾದಿಗಳ ಪ್ರತಿಗಾಮಿ ತತ್ತ್ವ ಅವರನ್ನು ನಿರ್ವೀರ್ಯರನ್ನಾಗಿ ಮಾಡಿತ್ತು. ಅಮೆರಿಕಾ, ಇಂಗ್ಲೇಂಡ್ ಮತ್ತು ಫ್ರಾನ್ಸ್ ದೇಶಗಳ ಬಂಡವಾಳಶಾಹಿ ಸರ್ಕಾರಗಳು ಹಿಟ್ಲರ್-ಮುಸಲೋನಿಯರು ಪ್ರಪಂಚವನ್ನು ಕಮ್ಯೂನಿಸಂ ನಿಂದ ರಕ್ಷಣೆ ಮಾಡುವರೆಂಬ ಭ್ರಮೆಗೆ ಒಳಗಾಗಿ ಫ್ಯಾಸಿಸ್ಟ್ ಸರ್ಕಾರಗಳ ಆಕ್ರಮಣ ನೀತಿಯನ್ನು ವಿರೋಧಿಸಲು ಇಷ್ಟಪಡಲಿಲ್ಲ. ನಾಗಾಲೋಟದಿಂದ ಅಭಿವೃದ್ಧಿಯನ್ನು ಸಾಧಿಸುತ್ತಿದ್ದ ಸೋವಿಯಟ್ ರಷ್ಯಾ ಬಂಡವಾಳಶಾಹಿ ವ್ಯವಸ್ಥೆಯ ಭದ್ರತೆಗೆ ಪ್ರಥಮ ಶತ್ರುವೆಂದೇ ಬಗೆದರು. ಹಿಟ್ಲರ್ ಮತ್ತು ಮುಸಲೋನಿಯವರು ವಿಧಿಸಬಹುದಾದ ಎಂತಹ ಷರತ್ತನ್ನಾದರೂ ಒಪ್ಪಿಕೊಳ್ಳಲು ಸಿದ್ಧರಿದ್ದರೇ ಹೊರತು ರಷ್ಯಾದೊಡನೆ ಮಾತ್ರ ಯಾವ ಸಂಧಾನಕ್ಕಾಗಲಿ ಅಥವಾ ರಕ್ಷಣಾ ಒಪ್ಪಂದಕ್ಕಾಗಲಿ ಸಿದ್ಧರಾಗಿರಲಿಲ್ಲ. ಒಳಗೊಳಗೇ ಫ್ಯಾಸಿಸ್ಟ್ ಸರ್ಕಾರಗಳಿಂದ ಬಂಡವಾಳಶಾಹಿ ವ್ಯವಸ್ಥೆಗೆ ಭದ್ರತೆ ಸಿಕ್ಕುವಂತಾಯಿತು. ಸೋವಿಯಟ್ ರಷ್ಯಾ ಫ್ಯಾಸಿಸ್ಟ್ ಸರ್ಕಾರಗಳ ಪರಮ ಶತ್ರು ಎಂಬ ಹಿಟ್ಲರ್ ಮತ್ತು ಮುಸಲೋನಿಯರ ಕೂಗು ಬಂಡವಾಳಶಾಹಿ ಸರ್ಕಾರಗಳನ್ನು ಸಂತೈಸಿತು. ಫ್ಯಾಸಿಸ್ಟ್ ಸರ್ಕಾರಗಳು ರಷ್ಯಾದಮೇಲೆ ಯುದ್ಧಹೂಡಿ ಅದನ್ನು ನಿರ್ನಾಮ ಮಾಡುವುದನ್ನು ಆಶಿಸಿದರು. ಆ ತರುವಾಯ ಸಮಸ್ಯೆಗಳನ್ನು ಹೇಗಾದರೂ ಬಗೆಹರಿಸಿಕೊಳ್ಳಬಹುದೆಂಬ ಹಗಲುಗನಸಿನ ರಾಜ್ಯದಲ್ಲಿ ಬಂಡವಾಳಶಾಹಿ ರಾಷ್ಟ್ರಗಳು ಕಾಲ ಕಳೆದವು. ಇದಕ್ಕಾಗಿ ಫ್ಯಾಸಿಸ್ಟ್ ಸರ್ಕಾರಗಳ ಮೈತ್ರಿಯನ್ನು ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳು ಬೆಳಸಿದವು.

ಫ್ಯಾಸಿಸ್ಟ್ ಸರ್ಕಾರಗಳ ದೌರ್ಜನ್ಯಗಳನ್ನು ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳು ತಡೆಗಟ್ಟದಿದ್ದುದಕ್ಕೂ, ಅವುಗಳನ್ನು ಸಂತುಷ್ಟಿಪಡಿಸುವ ನೀತಿಯನ್ನು ಅನುಸರಿಸಿದ್ದಕ್ಕೂ ಹಲವು ಕಾರಣಗಳಿವೆ. ಮುಖ್ಯವಾಗಿ ಹಿರಿಯ ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳು ತಮ್ಮ ಉಳಿವನ್ನು ಫ್ಯಾಸಿಸ್ಟ್ ಸರ್ಕಾರಗಳ ಉಳಿವಿನಲ್ಲಿ ಕಂಡವು. ಫ್ಯಾಸಿಸ್ಟ್ ರಾಷ್ಟ್ರಗಳ ಹೆದರಿಕೆಗಿಂತ ಮಿಗಿಲಾಗಿ, ಯುದ್ಧಾನಂತರ ಕಮ್ಯೂನಿಸ್ಟ್ ತತ್ತ್ವದ ಪ್ರಭಾವವು ಇತರ ಬಂಡವಾಳಶಾಹಿ ರಾಷ್ಟ್ರಗಳಿಗೆ ಹಬ್ಬದಂತೆ ತಡೆಗಟ್ಟುವುದು ಆವಶ್ಯಕವಾಗಿತ್ತು. ಹಿರಿಯ ಬಂಡವಾಳಶಾಹಿ ರಾಷ್ಟ್ರಗಳಲ್ಲೇ

ಆರ್ಥಿಕ ಪರಿಸ್ಥಿತಿ ವಿಷಮಿಸಿ ಕಾರ್ಮಿಕರ ಚಳವಳಿಯ ಒತ್ತಡವನ್ನು ತಡೆಗಟ್ಟುವುದು ಅಸಾಧ್ಯವಾಗಿರುವಾಗ, ಜರ್ಮನಿ ದೇಶವನ್ನೂ ಮತ್ತು ಇತರ ಸಣ್ಣಪುಟ್ಟ ಬಂಡವಾಳಶಾಹಿ ರಾಷ್ಟ್ರಗಳನ್ನೂ ಸಮಾಜವಾದೀ ತತ್ತ್ವದ ಪ್ರಭಾವದಿಂದ ಸಂರಕ್ಷಿಸುವುದು ಅಸಾಧ್ಯದ ಮಾತಾಗಿತ್ತು. ಆದರೆ ಇದು ಅಸಾಧ್ಯವೆಂದು ಬಗೆದು ಬಿಟ್ಟುಬಿಡುವುದೂ ಸಹ ವಿವೇಚನಾರಹಿತ ನೀತಿಯಾಗುವುದಲ್ಲದೆ ಆತ್ಮಹತ್ಯದ ನೀತಿಯಾಗುತ್ತದೆ. ಏಕೆಂದರೆ, ಹಲವು ಸಮಾಜವಾದೀ ರಾಷ್ಟ್ರಗಳ ಜನನಕ್ಕೆ ಆಸ್ಪದ ಕೊಟ್ಟಂತಾಗುತ್ತದೆ. ಅದುದ ರಿಂದ ಏಕಮಾತ್ರವಿರುವ ಸೋವಿಯಟ್ ರಾಷ್ಟ್ರಕ್ಕೆ ಮತ್ತೊಂದು ಸಮಾಜ ವಾದೀ ರಾಷ್ಟ್ರದ ಜನನದಿಂದ ಬೆಂಬಲ ಸಿಗದಹಾಗೆ ನೋಡಿಕೊಳ್ಳುವುದು ಹಿರಿಯ ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳಿಗೆ ಹಗಲಿರುಳಿನ ಚಿಂತನೆ ಯಾಯಿತು. ಅದರಲ್ಲೂ ಅತ್ಯಂತ ಹೇರಳವಾಗಿ ಖನಿಜಸಂಪತ್ತುಳ್ಳ ಮತ್ತು ಕೈಗಾರಿಕೆಯಲ್ಲಿ ಮುಂದುವರಿದ ಜರ್ಮನಿ ದೇಶ ಸಮಾಜ ವಾದೀ ರಾಷ್ಟ್ರವಾಗುವುದಾದರೆ! ಇಂತಹ ಸಂದಿಗ್ಧ ಪರಿಸ್ಥಿತಿಯಲ್ಲಿ ಯಾವ ಮಾರ್ಗದಿಂದಾದರೂ ಸರಿಯೆ, ಯೂರೋಪಿನ ಹಲವು ದೇಶಗಳಲ್ಲಿ ಬಂಡವಾಳ ಆರ್ಥಿಕವ್ಯವಸ್ಥೆಯನ್ನು ಸಂರಕ್ಷಿಸುವವರು ಅಮಿತವಾಗಿ ವಂದನಾರ್ಹರೇ ಹೊರತು ಶತ್ರುಗಳಲ್ಲ. ಯುದ್ಧಾನಂತರ ಯೂರೋಪಿನ ಹಲವು ರಾಷ್ಟ್ರಗಳಲ್ಲಿ ಕುಸಿದು ಬೀಳುತ್ತಿದ್ದ ಬಂಡವಾಳ ಆರ್ಥಿಕವ್ಯವಸ್ಥೆಗೆ ಫ್ಯಾಸಿಸ್ಟ್ ಸರ್ಕಾರಗಳು ಕೊಟ್ಟ ರಕ್ಷಣೆ ಸಾಮಾನ್ಯದ ಕೆಲಸವೇನೂ ಆಗಿ ರಲಿಲ್ಲ.[1]

ಇದರ ಪರಿಣಾಮವಾಗಿ ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳು ಯೂರೋಪಿನ ಹಲವು ರಾಷ್ಟ್ರಗಳಲ್ಲಿ ಉಂಟಾದ ರಾಜಕೀಯ ಬದಲಾವಣೆ ಗಳನ್ನೂ, ಅಧಿಕಾರಕ್ಕೆ ಬಂದಾಗಿನಿಂದ ಫ್ಯಾಸಿಸ್ಟ್ ಸರ್ಕಾರಗಳು ಮಂಡಿಸಿದ ಆರ್ಥಿಕ, ರಾಜಕೀಯ ಮತ್ತು ಸಾಮಾಜಿಕ ರೀತಿನೀತಿಗಳನ್ನೂ ಸಹಾನು ಭೂತಿಯಿಂದ ಕಂಡವು. ಮೊದಲನೆಯದಾಗಿ, ಫ್ಯಾಸಿಸ್ಟ್ ಸರ್ಕಾರಗಳು ಅನುಸರಿಸಿದ ಸರ್ವಾಧಿಕಾರೀ ತತ್ತ್ವಕ್ಕೆ (Dictatorship) ಅನುಮೋ ದನೆ ಸಿಕ್ಕಿತು. ಸರ್ವಾಧಿಕಾರೀ ರಾಜ್ಯವ್ಯವಸ್ಥೆ (Totalitarian State

(1) ಎರಡನೇ ಮಹಾಯುದ್ಧಾನಂತರ ಇದೇ ತೆರನಾದ ಸಮಸ್ಯೆ ಬಂಡವಾಳ ಶಾಹಿ ಪ್ರಜಾಸತ್ತೆ ರಾಷ್ಟ್ರಗಳನ್ನು ಪುನಃ ಕಾಡತೊಡಗಿತು : 8 ನೇ ಅಧ್ಯಾಯವನ್ನು ನೋಡಿ.

Structure) ಫ್ಯಾಸಿಸ್ಟ್ ರಾಷ್ಟ್ರಗಳ ಆಂತರಿಕಪ್ರಶ್ನೆಯೆಂದೂ, ಸಮಾಜದಲ್ಲಿ ಉಂಟಾಗಿರುವ ಅಲ್ಲೋಲಕಲ್ಲೋಲವನ್ನೂ ವರ್ಗವೈಷಮ್ಯವನ್ನೂ ಅಡಗಿಸಲು ಸರ್ವಾಧಿಕಾರೀ ರಾಜ್ಯವ್ಯವಸ್ಥೆ ಆವಶ್ಯಕವೆಂದೂ, ಸರ್ವಾಧಿಕಾರೀ ಸರ್ಕಾರಗಳಿಂದ ಪ್ರಜಾಸತ್ತೆಗೆ ಅಪಾಯವಿಲ್ಲವೆಂದೂ ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳು ಸಮರ್ಥಿಸಿದವು. ಫ್ಯಾಸಿಸ್ಟ್ ರಾಜ್ಯಗಳಲ್ಲಿ ಕಾರ್ಮಿಕರ ಚಳವಳಿಯನ್ನು ಮುರಿಯುವುದಕ್ಕೂ, ವರ್ಗವೈಷಮ್ಯವನ್ನು ತಡೆಗಟ್ಟುವುದಕ್ಕೂ, ಬಂಡವಾಳ ಆರ್ಥಿಕವ್ಯವಸ್ಥೆಯ ಉಳಿವಿಗೆ ಬಲಾತ್ಕಾರದ ಬೆಂಬಲವನ್ನು ಚುನಾವಣೆಗಳ ಮೂಲಕ ಗಳಿಸಿಕೊಳ್ಳುವುದಕ್ಕೂ, ಸರ್ವಾಧಿಕಾರೀ ರಾಜ್ಯವ್ಯವಸ್ಥೆ ಫ್ಯಾಸಿಸ್ಟ್ ರಾಷ್ಟ್ರಗಳಲ್ಲಿರುವ ಬಂಡವಾಳ ವರ್ಗಕ್ಕೆ ಆಪತ್ಕಾಲದ ಅಸ್ತ್ರವಾಯಿತು. ರಾಜ್ಯಶಕ್ತಿ (The State) ಯ ಉಪಯೋಗ ಬಹಿರಂಗವಾಗಿ ಪ್ರದರ್ಶನವಾಯಿತು.

ಎರಡನೆಯದಾಗಿ, ಬಂಡವಾಳಶಾಹಿ ವ್ಯವಸ್ಥೆಯ ಉಳಿವಿಗಾಗಿ ಫ್ಯಾಸಿಸ್ಟ್ ಸರ್ಕಾರಗಳು ಕೈಕೊಂಡ ಆರ್ಥಿಕ ನೀತಿಗಳು ಅತಿ ಗಮನಾರ್ಹವಾಗಿವೆ. ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳೂ ಸಹ ಅದೇಬಗೆಯ ರೀತಿನೀತಿಗಳನ್ನು ತಮ್ಮ ದೇಶಗಳಲ್ಲಿ ಒಂದಲ್ಲ ಒಂದು ವಿಧದಲ್ಲಿ ಅನುಸರಿಸಿದವು. ಯುದ್ಧಾನಂತರ ಯೂರೋಪಿನ ಹಲವು ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಖಾಸಗೀ ಬಂಡವಾಳ ಉದ್ಯಮಗಳು ಅನೇಕ ಈತಿಬಾಧೆಗಳಿಗೆ ಒಳಗಾಗಿದ್ದವು. ಮುಖ್ಯವಾಗಿ, ಹೆಚ್ಚುವೇತನ ಮತ್ತು ಸೌಲಭ್ಯಗಳಿಗಾಗಿ ನಡೆಯುವ ಕಾರ್ಮಿಕರ ಚಳವಳಿಯಿಂದ ಬಂಡವಾಳವರ್ಗಕ್ಕೆ ರಕ್ಷಣೆ ಬೇಕಾಗಿದ್ದಿತು. ಉತ್ಪಾದನೆಯಾಗುವ ವಸ್ತುಗಳು ಮಾರಾಟವಾಗುವ ಭರವಸೆ ಬಂಡವಾಳವರ್ಗಕ್ಕೆ ಬೇಕಾಗಿದ್ದಿತು. ಅಲ್ಪಸ್ವಲ್ಪ ರೀತಿಯಲ್ಲಿ ಬಂಡವಾಳಉದ್ಯಮಿಗಳ ಖಾಸಗೀ ಏರ್ಪಾಡುಗಳು—ಉತ್ಪಾದನೆಯ ಪ್ರಮಾಣದಬಗ್ಗೆ ಒಪ್ಪಂದ, ಮಾರಾಟದ ಬಗ್ಗೆ ಒಪ್ಪಂದ, ಅನೇಕ ಬಂಡವಾಳ ಉದ್ಯಮಗಳನ್ನು ಒಟ್ಟುಗೂಡಿಸುವುದರ ಮೂಲಕ ಉತ್ಪಾದನೆ ಮತ್ತು ಮಾರಾಟಗಳ ಸಂಘಟಿತ ನಿರ್ವಹಣೆ, ಅಥವ ಅನೇಕ ಬಂಡವಾಳ ಉದ್ಯಮಗಳನ್ನು ಒಬ್ಬ ಹಿರಿಯ ಬಂಡವಾಳಉದ್ಯಮಿ ವಹಿಸಿಕೊಳ್ಳುವುದು – ಪರಿಸ್ಥಿತಿಯನ್ನು ಎದುರಿಸಲು ಸಾಲದಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ಖಾಸಗೀ ಸ್ವಾಮ್ಯಕ್ಕೆ ಚ್ಯುತಿತರದ, ಲಾಭ ದೊರೆತು ಉತ್ಪಾದನೆ ಮೊದಲಿನಂತೆಯೇ ನಡೆಯಲಿಕ್ಕೆ ಅವಕಾಶವಿರುವ ಅಥವಾ ಬಂಡವಾಳಉದ್ಯಮಗಳಿಗೆ ನಷ್ಟ ಸಂಭವಿಸದಂತೆ ಭರವಸೆ

ನೀಡುವ ಮತ್ತು ಅಧಿಕ ನಿರುದ್ಯೋಗ ಪ್ರಾಪ್ತಿಯಾಗದಂತೆ ನೋಡಿಕೊಳ್ಳುವ ಆರ್ಥಿಕ ನೀತಿ ಬೇಕಾಗಿದ್ದಿತು. ಫ್ಯಾಸಿಸ್ಟ್ ಸರ್ಕಾರಗಳು ಹೊಸ ವಿಧದ ಆರ್ಥಿಕ ನೀತಿಯ ಮೂಲಕ ಬಂಡವಾಳವರ್ಗದ ಆಶೋತ್ತರಗಳನ್ನು ನೆರವೇರಿಸಿತು. ಬಂಡವಾಳಉದ್ಯಮಗಳ ಮೇಲ್ವಿಚಾರಣೆಯನ್ನು (Management) ಫ್ಯಾಸಿಸ್ಟ್ ಸರ್ಕಾರಗಳೇ ವಹಿಸಿಕೊಂಡವು.

ಫ್ಯಾಸಿಸ್ಟ್ ಸರ್ಕಾರಗಳು ಅನುಸರಿಸಿದ ಆರ್ಥಿಕ ನೀತಿಯಲ್ಲಿ ಒಂದು ವಿಶೇಷವಿದೆ. ಇಂತಹ ಆರ್ಥಿಕ ನೀತಿಯಿಂದ ಖಾಸಗೀ ಸ್ವಾಮ್ಯಕ್ಕಾಗಲೀ ಅಥವಾ ಲಾಭಕ್ಕಾಗಲೀ ಚ್ಯುತಿ ಬರುವುದಿಲ್ಲ. ಬಂಡವಾಳಉದ್ಯಮಗಳು ಖಾಸಗೀ ವ್ಯಕ್ತಿಗಳ ಬಳಿಯಲ್ಲೇ ಉಳಿಯುವುವು. ಆದರೆ ಬಂಡವಾಳ ಗಾರರು ಸರ್ಕಾರ ಕೈಗೊಂಡ ನಿರ್ಧಾರಗಳಿಗೆ ಅನುಸಾರವಾಗಿ ಉತ್ಪಾದನೆ ಮಾಡಬೇಕು, ಮಾರಬೇಕು. ಮಾರುಕಟ್ಟೆಯನ್ನು ಕಲ್ಪಿಸಿಕೊಡುವ ಜವಾಬ್ದಾರೀ ಸರ್ಕಾರದ್ದು. ಹೀಗಾಗಿ ಜರ್ಮನೀ ಮತ್ತು ಇಟಲೀ ದೇಶ ಗಳಲ್ಲಿ ರಾಷ್ಟ್ರವೇ ಬಂಡವಾಳ (State Capitalism) ಉದ್ಯಮದಾರ ನಾಯಿತು.

ಮೂರನೆಯದಾಗಿ, ಈ ಪರಿವರ್ತನೆಗಳು ಫ್ಯಾಸಿಸ್ಟ್ ರಾಜ್ಯಗಳಲ್ಲಿ ಒಂದು ಹೊಸ ಬಗೆಯ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆ ಗಳನ್ನು ತಂದವು.[1] ಫ್ಯಾಸಿಸ್ಟ್ ರಾಷ್ಟ್ರಗಳಲ್ಲಿ ಸ್ವಾಮ್ಯವನ್ನು ಹೊಂದಿರುವ ಬಂಡವಾಳವರ್ಗ, ಸ್ವಾಮ್ಯವನ್ನು ಹೊಂದಿಲ್ಲದಿರುವ ಕಾರ್ಮಿಕವರ್ಗ ಎರಡೂ ರಾಷ್ಟ್ರದ ಅಂಗಗಳು. ರಾಷ್ಟ್ರದ ಹಿತದೃಷ್ಟಿಯಿಂದ ಉಭಯ ವರ್ಗ ಗಳೂ ಸರ್ಕಾರದ ನಿರ್ಧಾರಗಳಿಗೆ ತಲೆಬಾಗಬೇಕು. ಸರ್ಕಾರದ ಮಧ್ಯಸ್ತಿಕೆ ಯನ್ನು ಉಭಯ ವರ್ಗಗಳೂ ಒಪ್ಪಬೇಕು. ಸರ್ಕಾರ ಮತ್ತು ಅದರ ಮುಖಂಡ ಎಲ್ಲರ ಹಿತವನ್ನೂ ಬಯಸುವುದರಿಂದ ಯಾವ ವರ್ಗಕ್ಕೂ ಅನ್ಯಾಯ ಮಾಡುವುದಿಲ್ಲ. ಆದುದರಿಂದ ವರ್ಗಗಳ ಹಿತವನ್ನು ಪ್ರತಿಬಿಂಬಿಸಲಿಕ್ಕಿರುವ ವಿವಿಧ ರಾಜಕೀಯ ಪಕ್ಷಗಳೂ ಅನಾವಶ್ಯಕ. ರಾಷ್ಟ್ರದ ಹಿತದ ಪ್ರತಿನಿಧಿ

---

(1) ಇಂತಹ ವ್ಯವಸ್ಥೆಯನ್ನು "ಸಂಸ್ಥಾ ರಾಜ್ಯವ್ಯವಸ್ಥೆ" (Corporative State) ಎಂದು ಕರೆಯಲಾಗಿದೆ.

ಯಾಗಿ ಏಕಮಾತ್ರ ರಾಜಕೀಯ ಪಕ್ಷವಿರಲು ಸಾಧ್ಯ.[1] ಅದು ಎಲ್ಲರ ಹಿತವನ್ನು ಬಯಸುತ್ತದೆ. ಈಗ ಖಾಸಗೀ ಸ್ವಾಮ್ಯವು ರಾಷ್ಟ್ರದ ಹಿತವನ್ನು ಬಯಸುವ ರೀತಿಯಲ್ಲಿ ಇರುವುದರಿಂದ ಕಾರ್ಮಿಕವರ್ಗ ಸ್ವಾಮ್ಯದ ವಿರುದ್ಧ ಚಳವಳಿ ಹೂಡುವುದು ಅನಾವಶ್ಯಕವಾಗುವುದಲ್ಲದೆ ದೇಶದ್ರೋಹವಾಗುತ್ತದೆ. ರಾಷ್ಟ್ರದ ಹಿತದೃಷ್ಟಿಯಿಂದ ಜನಜೀವನವು ನಿರ್ದಿಷ್ಟ ಕ್ರಮದಲ್ಲಿ ಹೋಗುವಂತೆ ತೀರ್ಮಾನಿಸಲು ಸರ್ಕಾರಕ್ಕೆ ಹಕ್ಕಿದೆ.

ಫ್ಯಾಸಿಸ್ಟ್ ಸರ್ಕಾರಗಳು ಅನುಸರಿಸಿದ ಆರ್ಥಿಕ ರೀತಿನೀತಿಗಳು ಫ್ಯಾಸಿಸ್ಟ್ ರಾಷ್ಟ್ರಗಳಿಗೇ ಮುಕ್ತಾಯಗೊಳಲಿಲ್ಲ. ಹದಗೆಟ್ಟ ಆರ್ಥಿಕಪರಿಸ್ಥಿತಿ ಹಿರಿಯ ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳನ್ನೂ ಸಹ ರಾಷ್ಟ್ರವೇ ಬಂಡವಾಳಉದ್ಯಮದಾರನಾಗುವ (State Capitalism) ಆರ್ಥಿಕ ನೀತಿಯನ್ನು ಅನುಸರಿಸುವಂತೆ ಬಲಾತ್ಕರಿಸಿತು. ಹಾಗೆ ಬಲಾತ್ಕರಿಸಿದ ಆರ್ಥಿಕ ಪರಿಸ್ಥಿತಿಗಳಲ್ಲಿ ಯುದ್ಧಾನಂತರ ಹಿರಿಯ ಬಂಡವಾಳಶಾಹಿ ಪ್ರಜಾಸತ್ತೆರಾಷ್ಟ್ರಗಳು ಎದುರಿಸಬೇಕಾದ ಸಮಸ್ಯೆಗಳೇ ಮುಖ್ಯಕಾರಣವಾಗಿದ್ದವು. ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳು (ಇಂಗ್ಲೇಂಡ್, ಫ್ರಾನ್ಸ್, ಬೆಲ್ಜಿಯಂ, ಜರ್ಮನೀ ಇಟಲಿ, ಇತ್ಯಾದಿ) ಒಂದನೇ ಮಹಾಯುದ್ಧದಲ್ಲಿ ತೊಡಗಿರುವಾಗ ವಸಾಹತುಗಳಲ್ಲಿರುವ ವ್ಯಾಪಾರವರ್ಗ ಮತ್ತು ಯುದ್ಧದಿಂದ ದೂರವಿದ್ದ ಅಥವಾ ಯುದ್ಧದಿಂದ ಅತಿಯಾದ ನಷ್ಟವನ್ನು ಹೊಂದದ ಬಂಡವಾಳಶಾಹಿ ರಾಷ್ಟ್ರಗಳು (ಅಮೆರಿಕಾ ಮತ್ತು ಜಪಾನ್) ಮಾರುಕಟ್ಟೆಯನ್ನು ಕಸಿದುಕೊಂಡಿದ್ದವು.

---

(1) ಫ್ಯಾಸಿಸ್ಟ್ ರಾಷ್ಟ್ರಗಳಲ್ಲಿ ಪ್ರತಿಪಾದಿತವಾಗಿರುವ ಏಕಪಕ್ಷದ ಸರ್ಕಾರದ (One-Party Government) ತತ್ತ್ವಕ್ಕೂ ಕಾರ್ಮಿಕ ಪ್ರಜಾಸತ್ತೆಯಲ್ಲಿ ಪ್ರತಿಪಾದಿತವಾಗಿರುವ ಮುಂದಾಳುಸಮೂಹದ (Vanguard) ತತ್ತ್ವಕ್ಕೂ (ಪುಟ 104) ಯಾವ ಹೋಲಿಕೆಯೂ ಇಲ್ಲ. ಒಂದರಲ್ಲಿ ವರ್ಗಗಳು ಇದ್ದು ಎಲ್ಲ ವರ್ಗಗಳನ್ನೂ ಪ್ರತಿನಿಧಿಸುವ ರೀತಿಯಲ್ಲಿ ಏಕಪಕ್ಷವಿದೆ, ಇನ್ನೊಂದರಲ್ಲಿ ವರ್ಗಗಳೇ ಇಲ್ಲದಿರುವ ವರ್ಗರಹಿತ ಸಮಾಜವಿದೆ ಮತ್ತು ರಾಜಕೀಯ ಪಕ್ಷದ ಅವಶ್ಯಕತೆಯೇ ಇಲ್ಲವಾಗಿದೆ. ಮುಂದಾಳತ್ವವನ್ನು ಕೊಡಲು ಮುಂದಾಳು ಸಮೂಹವಿದೆ. ಫ್ಯಾಸಿಸ್ಟ್ ರಾಷ್ಟ್ರಗಳ ಸಾಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗೂ ಮತ್ತು ಸಮಾಜವಾದೀ ರಾಷ್ಟ್ರಗಳ ಸಮಾಜಿಕ ಮತ್ತು ಆರ್ಥಿಕ ವ್ಯವಸ್ಥೆಗೂ ಇರುವ ವೆತ್ಯಾಸವೇ ಈ ಬಗೆಯ ರೂಪಭೇದಕ್ಕೆ ಕಾರಣವಾಗಿದೆ.

ಯುದ್ಧಾನಂತರ ಈ ಬಂಡವಾಳಶಾಹಿ ರಾಷ್ಟ್ರಗಳು ಆರ್ಥಿಕ ಪೈಪೋಟಿ ನಡೆಸಿ ತಮ್ಮ ಸರಕುಗಳನ್ನು ಪ್ರಪಂಚದ ಮಾರುಕಟ್ಟೆಯಲ್ಲಿ ಮಾರುವ ಪರಿಸ್ಥಿತಿ ಬಂದಿತು.

ಎರಡನೆಯದಾಗಿ, ಯುದ್ಧಾನಂತರ ವಸಾಹತುಗಳು ಮತ್ತು ಆಶ್ರಿತ ರಾಷ್ಟ್ರಗಳು ವಿಮುಕ್ತರಾಗಲು ಸ್ವಾತಂತ್ರ್ಯ ಚಳವಳಿಯನ್ನು ಹೂಡಿದವು. ಮೊದಲಿನಂತೆ ವಸಾಹತುಜನರ ಶೋಷಣೆ ದುಸ್ಸಾಧ್ಯವಾಯಿತು. ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳು ತಮ್ಮ ಬಂಡವಾಳದ ರಕ್ಷಣೆಗಾಗಿ ವಸಾಹತುಗಳಲ್ಲಿನ ಚಳವಳಿಗಳನ್ನು ದಮನಮಾಡುವ ಪ್ರಸಂಗ ಬೇರೆ ಬಂದಿತು. ವಸಾಹತುಗಳ ಶೋಷಣೆಯಿಂದ ಬರುತ್ತಿದ್ದ ಅಧಿಕ ಲಾಭದ ಚೂರುಪಾರುಗಳನ್ನು ತಮ್ಮ ದೇಶದ ಕಾರ್ಮಿಕವರ್ಗಕ್ಕೆ ಎಸೆದು ಕಾರ್ಮಿಕ ವರ್ಗವನ್ನು ಸಂತೈಸುವುದು ಹಿರಿಯ ಬಂಡವಾಳಶಾಹಿ ರಾಷ್ಟ್ರಗಳಿಗೆ ತಪ್ಪಿ ಹೋಯಿತು.

ಮೂರನೆಯದಾಗಿ, ಬಂಡವಾಳಶಾಹಿ ವ್ಯವಸ್ಥೆ ತರುವ ಶೋಷಣೆ ಮತ್ತು ಆರ್ಥಿಕ ದುಃಸ್ಥಿತಿಯಿಂದ ಪಾರಾಗಲು ಸೋವಿಯಟ್ ಕ್ರಾಂತಿ ತೋರಿಸಿದ ಹೆದ್ದಾರಿ ವಸಾಹತು ಜನರಮೇಲೆ ಪ್ರಭಾವವನ್ನು ಬೀರಿತು. ವಸಾಹತುಗಳು ಸಮಾಜವಾದೀ ಪಥದ ಕಡೆ ಹೋಗುವುದನ್ನು ತಡೆಯುವ ಕೆಲಸ ವಸಾಹತುಗಳನ್ನು ಹೊಂದಿರುವ ಬಂಡವಾಳಶಾಹಿ ರಾಷ್ಟ್ರಗಳಿಗೆ ಪ್ರಾಪ್ತಿಯಾಯಿತು.

ಅಧಿಕಸಂಖ್ಯೆಯಲ್ಲಿ ಕಾಡತೊಡಗಿದ ಸಮಸ್ಯೆಗಳಿಂದ ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳು ಎದೆಗುಂದಿದವು. ವಸಾಹತುಗಳ ಮತ್ತು ಮಾರುಕಟ್ಟೆಗಳ ಸಂರಕ್ಷಣೆಗೆ ಇನ್ನೊಬ್ಬರನ್ನು ಆಶ್ರಯಿಸಿ ರಕ್ಷಣೆ ಪಡೆಯುವ ಪ್ರಸಂಗ ಬಂದಿತು. ಫ್ಯಾಸಿಸ್ಟ್ ರಾಷ್ಟ್ರಗಳೊಡನೆ ಸಂಧಾನಕ್ಕೆ ನಿಂತು ತಮ್ಮ ತಮ್ಮೊಳಗೇ ಪೈಪೋಟಿ ತರವಲ್ಲವೆಂದೂ, ಉಭಯ ಬಂಡವಾಳಶಾಹಿ ರಾಷ್ಟ್ರಗಳಿಗೂ ಹಾನಿಯೆಂದೂ ಹಿಟ್ಲರ್ ಮುಸಲೋನಿಗಳಲ್ಲಿ ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳು ಪ್ರಾರ್ಥಿಸಿದವು. ಸರಕುಗಳ ಉತ್ಪಾದನೆ, ಮಾರಾಟ, ಬೆಲೆ, ಲಾಭ ಇವುಗಳ ಬಗ್ಗೆ ಸಂಯುಕ್ತ ಒಪ್ಪಂದಗಳನ್ನು ಮಾಡಿಕೊಂಡರು. ರಾಜ್ಯವ್ಯವಸ್ಥೆಯ ಬಗ್ಗೆ ಭಿನ್ನಾಭಿಪ್ರಾಯ ಮತ್ತು ವ್ಯತ್ಯಾಸಗಳಿದ್ದರೂ— ಒಂದು ಬಂಡವಾಳಶಾಹಿ ಪ್ರಜಾಸತ್ತೆ, ಇನ್ನೊಂದು ನಿರಂಕುಶ ಫ್ಯಾಸಿಸ್ಟ್ ಪ್ರಭುತ್ವ—ಆರ್ಥಿಕ ವ್ಯವಹಾರ ಮತ್ತು

ವ್ಯಾಪಾರದ ಬಗ್ಗೆ ಉಭಯತ್ರರ ಹಿತಗಳು ಒಂದೇ ಎಂದರು. ಒಂದು ಪಕ್ಷ, ಫ್ಯಾಸಿಸ್ಟ್ ಸರ್ಕಾರಗಳಿಗೆ ಸಾಕಷ್ಟು ವಸಾಹತು ಮತ್ತು ಮಾರುಕಟ್ಟೆ ಇಲ್ಲದಿದ್ದರೆ ಆಕ್ರಮಣಕ್ಕೆ ಅಖಂಡ ಭೂಭಾಗವಿದೆ ಎಂದು ಸೋವಿಯಟ್ ರಷ್ಯಾದಕಡೆ ಕೈತೋರಿಸಿದರು.

ಬಗೆದದ್ದು ಒಂದು, ಆದದ್ದು ಇನ್ನೊಂದು. ಬಂಡವಾಳಶಾಹಿ ಪ್ರಜಾಸತ್ತೆಗಳ ಜೀವಾಳ ಫ್ಯಾಸಿಸ್ಟ್ ಸರ್ಕಾರಗಳಿಗೆ ವೇದ್ಯವಾಯಿತು. ದಾಹ ಪೀಡಿತನಂತೆ ಹಿಟ್ಲರ್ ಪೋಲೆಂಡ್ ರಾಷ್ಟ್ರದ ಮೇಲೆ ತನ್ನ ಕಣ್ಣು ತಿರುಗಿಸಿದನು. ಬಂಡವಾಳಶಾಹಿ ವ್ಯವಸ್ಥೆಯ ಸಂರಕ್ಷಕನಾದ ಹಿಟ್ಲರ್, ಸಮಸ್ತ ಬಂಡವಾಳಶಾಹಿ ರಾಷ್ಟ್ರಗಳನ್ನು ತನ್ನ ದಾಸಾನುದಾಸರಾಗುವಂತೆ ಮಾಡಲು ರಚಿಸಿಕೊಂಡಿದ್ದ ವ್ಯೂಹ ಇಂಗ್ಲೇಂಡ್, ಫ್ರಾನ್ಸ್, ಅಮೆರಿಕಾಗಳಿಗೆ ಅರಿವಾಯ್ತು. ತಮ್ಮ ರಕ್ಷಕನ ಮೇಲೇ ಯುದ್ಧಕ್ಕೆ ನಿಂತು ದಾಸ್ಯದಿಂದ ಪಾರಾಗುವ ಪ್ರಸಂಗ ಇಂಗ್ಲೇಂಡ್ ಮತ್ತು ಫ್ರಾನ್ಸ್‌ಗಳಿಗೆ ಬಂದಿತು.

ಬಂಡವಾಳಶಾಹಿ ವ್ಯವಸ್ಥೆಯ ವಿರಸಗಳು ಪುನಃ ಬಂಡವಾಳಶಾಹಿ ರಾಷ್ಟ್ರಗಳನ್ನು ಯುದ್ಧಕ್ಕೆ ಈಡುಮಾಡುತ್ತವೆ ಎಂದು ಕಮ್ಯೂನಿಸ್ಟ್ ಪಕ್ಷಗಳು ಮುನ್‌ಸೂಚಕವಾಗಿ ಹೇಳುತ್ತಿದ್ದುದು ನಿಜವಾಯಿತು. ಸುಧಾರಕ ಸಮಾಜವಾದೀ ಮುಖಂಡರು ಕಾರ್ಮಿಕವರ್ಗಕ್ಕೆ ಪ್ರಸಾರ ಮಾಡುತ್ತಿದ್ದ ವಾದ ಸುಳ್ಳಾಯಿತು. ಪ್ರಜಾಸತ್ತೆಗೆ ಧಕ್ಕೆಬಂದಿದೆ ಎಂದು ಸುಧಾರಕರು ಗೊಣಗಿದರೇ ವಿನಾ ಯುದ್ಧಕ್ಕೆ ಕಾರಣವನ್ನೂ ಮತ್ತು ಅದರಲ್ಲಿ ತಮ್ಮ ದೇಶಗಳ ಪಾತ್ರವನ್ನೂ ಕಾರ್ಮಿಕವರ್ಗಕ್ಕೆ ತಿಳಿಸಲು ಸುಧಾರಕರು ಮರೆಮಾಚಿದರು. ಸಾಮೂಹಿಕ ಭದ್ರತೆಗಾಗಿ ಶ್ರಮಿಸಬೇಕೆಂದೂ, ಫ್ಯಾಸಿಸ್ಟ್ ಸರ್ಕಾರಗಳು ಮಾನವ ನಾಗರಿಕತೆಯ ಶತ್ರುಗಳೆಂದೂ, ಪ್ರತಿಭಟನೆಯಿಂದಲೇ ಅವುಗಳ ಸೊಕ್ಕನ್ನು ಮುರಿಯಲು ಸಾಧ್ಯವೆಂದೂ ಪದೇ ಪದೇ ಹೇಳುತ್ತಿದ್ದ ಕಮ್ಯೂನಿಸ್ಟ್ ಪಕ್ಷಗಳನ್ನು ರಷ್ಯಾದ ಕೈಗೊಂಬೆಗಳೆಂದು ಮೂದಲಿಸುವುದರಲ್ಲೇ ಸುಧಾರಕರು ಕಾಲನೂಕಿದರು. ಸೋವಿಯಟ್ ರಷ್ಯಾದ ಇರುವಿಕೆ ಮತ್ತು ಮೊದಲಿಂದಲೂ ಅದು ಫ್ಯಾಸಿಸ್ಟ್ ಸರ್ಕಾರಗಳ ಬಗ್ಗೆ ಕೊಡುತ್ತಿದ್ದ ಎಚ್ಚರಿಕೆ ಸುಧಾರಕರಿಗೆ ವಿಷವಾಗಿತ್ತು.

1938 ರಲ್ಲಿ ಎರಡನೇ ಮಹಾಯುದ್ಧ ಆರಂಭವಾಯಿತು. ಸೋವಿಯಟ್ ರಷ್ಯಾ ರಾಜತಾಂತ್ರಿಕ ಬುದ್ಧಿವಂತಿಕೆಯಿಂದ ಬಂಡವಾಳಶಾಹಿ ರಾಷ್ಟ್ರಗಳಲ್ಲೇ

ಉಂಟಾದ ಯುದ್ಧದಿಂದ ದೂರ ಸರಿದು ನಿಂತಿತು. ಯುದ್ಧದ ಆರಂಭದಲ್ಲಿ ಹಿಟ್ಲರ್ ಮತ್ತು ಮುಸಲೋನಿಯರು ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳನ್ನು ಸಂಪೂರ್ಣವಾಗಿ ಸದೆಬಡಿದರು. ಪೌರ್ವಾತ್ಯದಲ್ಲಿ ಜಪಾನ್ ಅಮೆರಿಕಾವನ್ನು ಸದೆಬಡಿಯಿತು. ಆದರೆ ರಷ್ಯಾ ಮಾತ್ರ ಜರ್ಮನಿ, ಇಟಲಿ ಮತ್ತು ಜಪಾನುಗಳ ಸನ್ನಾಹಕ್ಕೆ ಅಡ್ಡಿ ಬರುವ ಹಾಗೆ ಉಳಿದಿತ್ತು. ಅದನ್ನು ದಮನಮಾಡಿದ ಹೊರತು ಫ್ಯಾಸಿಸ್ಟ್ ಸರ್ಕಾರಗಳ ವಿಜಯ ಸಂಪೂರ್ಣವಾದಂತಿರಲಿಲ್ಲ. ಈ ನಿರ್ಧಾರದಿಂದ ಹಿಟ್ಲರ್ 1942 ರಲ್ಲಿ ರಷ್ಯಾದಮೇಲೆ ಯುದ್ಧ ಘೋಷಿಸಿದನು

ಅದೇ ಫ್ಯಾಸಿಸ್ಟ್ ದೌರ್ಜನ್ಯದ ಅಂತ್ಯವಾಯಿತು. ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳ ಸೈನ್ಯಗಳನ್ನು ಹಿಟ್ಲರ್ ನುಚ್ಚುನೂರು ಮಾಡಿದ್ದನು, ಆದರೆ ಸೋವಿಯಟ್ ರಷ್ಯಾದ ಜನತಾ ಸೈನ್ಯಕ್ಕೆ ಅದುವರೆಗೆ ಅಜೇಯವೆನಿಸಿದ್ದ ಫ್ಯಾಸಿಸ್ಟ್ ಸೈನ್ಯಗಳು ಶರಣಾಗತವಾದುವು. ಯುದ್ಧ ಕೊನೆಗೊಂಡಿತು. ರಷ್ಯಾ ಯುದ್ಧದಲ್ಲಿ ಪ್ರವೇಶಿಸಿದನಂತರ ಅಮೆರಿಕಾ, ಇಂಗ್ಲೆಂಡ್ ಮತ್ತು ಫ್ರಾನ್ಸ್ ರಾಷ್ಟ್ರಗಳು ರಷ್ಯಾದೊಡನೆ ಸಖ್ಯ ಬೆಳಸಿದವು. ಈ ನಾಲ್ಕು ರಾಷ್ಟ್ರಗಳೂ ಒಟ್ಟುಗೂಡಿ ಎರಡನೇ ಮಹಾಯುದ್ಧದಲ್ಲಿ ವಿಜಯಗಳಿಸಿದವು.

ಯಾವ ರಾಷ್ಟ್ರದ ಅಳಿವಿಗಾಗಿ ಬಂಡವಾಳಶಾಹಿ ಪ್ರಜಾಸತ್ತೆ ಸರ್ಕಾರಗಳು 1917 ರನಂತರ ಶ್ರಮಿಸಿದವೋ ಅದೇ ಸೋವಿಯಟ್ ರಷ್ಯಾ ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳನ್ನು ತನ್ನ ತ್ಯಾಗದಿಂದ ರಕ್ಷಿಸಿತು. ಸುಧಾರಕ ಸಮಾಜವಾದಿಗಳು ಮುಖಭಂಗಹೊಂದಿದರು. ಬಂಡವಾಳಶಾಹಿ ವ್ಯವಸ್ಥೆಯ ಹೊಲಸು ಜನಸಮುದಾಯಕ್ಕೆ ವೇದ್ಯವಾಯಿತು. ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳಲ್ಲಿ ಮಾರ್ಕ್ಸ್–ಏಂಗೆಲ್ಸರ ಸಮಾಜವಾದೀ ತತ್ತ್ವ ಜನಪ್ರಿಯವಾಯಿತು.

ಅಧ್ಯಯನ:

Marxism and Revisionism : Lenin : Marx-Engels-Marxism, Pages 219-228, F. L. P. H., Moscow.

Fabian Essays, with a New Introduction by G. B. Shaw.

Fascism and Social Revolution . R. P. Dutt : Martin Lawrence, London, 1934.

World Politics : R. P. Dutt : Victor Gollanez. Ltd., 1936.

Light on Moscow : D. N Pritt : Pelican.

Must the War Spread ? D. N. Pritt : Pelican.

The Theory of Capitalist Development :
P. M. Sweezy : Denis Dobson, London, 1946.

Studies in the Development of Capitalism :
M. Dobb : Routledge, London.

Political Economy and Capitalism :
M. Dobb : Routladge, London.

ಆಧುನಿಕ ಸಮಾಜವಾದದ ಮುಂದೋಟ

ಅಧ್ಯಾಯ—8.

ಯುದ್ಧ ಅಥವಾ ಯುದ್ಧಸಿದ್ಧತೆ, ಸರ್ವಾಧಿಕಾರ, ಪ್ರಜಾಸತ್ತೆಯ ದಮನ ಇವೇ ವಿರಸಗಳಿಂದ ಪಾರಾಗಲು ಮೃತಪ್ರಾಯ ಬಂಡವಾಳಶಾಹಿ ವ್ಯವಸ್ಥೆಗೆ (Moribund Capitalism) ಉಳಿದಿರುವ ಮಾರ್ಗ ಗಳೆಂಬುದು ವ್ಯಕ್ತಪಟ್ಟಿದೆ. ಬಂಡವಾಳಶಾಹಿ ರಾಷ್ಟ್ರಗಳಲ್ಲೇ ಯುದ್ಧ ಅನಿವಾರ್ಯವೆಂಬುದನ್ನು ಎರಡನೇ ಮಹಾಯುದ್ಧ ಸ್ಥಿರಪಡಿಸಿದೆ. ಅಷ್ಟು ಮಾತ್ರವಲ್ಲದೆ, ಎರಡನೇ ಮಹಾಯುದ್ಧ ಬಂಡವಾಳಶಾಹಿ ವ್ಯವ ಸ್ಥೆಗೆ ಚ್ಯುತಿಯನ್ನು ತರುವ ಹೊಸ ಶಕ್ತಿಗಳನ್ನು ಬಂಡವಾಳಶಾಹಿ ವ್ಯವ ಸ್ಥೆಯ ಗರ್ಭದಿಂದ ಹೊರಹಾಕಿತು. ಮೊದಲನೆಯದಾಗಿ, ಯುದ್ಧ ದಿಂದ ನೊಂದ ಜನರು ರೊಚ್ಚಿದ್ದು ತಮ್ಮ ದುಃಸ್ಥಿತಿಗೆ ಬಂಡವಾಳಶಾಹಿ ವ್ಯವ ಸ್ಥೆಯೇ ಕಾರಣವೆಂದು ಕೈ ತೋರಿಸಿದರು. ಎರಡನೆಯದಾಗಿ, ಯುದ್ಧ ದಲ್ಲಿ ಭಾಗವಹಿಸಿದ್ದ ಹಲವು ಬಂಡವಾಳಶಾಹಿ ರಾಷ್ಟ್ರಗಳಾದ ಬ್ರಿಟನ್, ಫ್ರಾನ್ಸ್, ಬೆಲ್ಜಿಯಂ, ಹಾಲೆಂಡ್, ಇತ್ಯಾದಿ ರಾಷ್ಟ್ರಗಳು ಉಳಿಯುವುದೇ ಕಷ್ಟವಾಗಿ, ಯುದ್ಧದಲ್ಲಿ ಜಯ ಪಡೆದರೂ ನಿಸ್ತೇಜವಾಗಿ ಬದುಕಿ ಬಂದವು. ಈ ಬಂಡವಾಳಶಾಹಿ ರಾಷ್ಟ್ರಗಳ ದೌರ್ಬಲ್ಯ ಇವುಗಳ ಅಧೀನ ರಾಷ್ಟ್ರಗಳಿಗೆ ಮತ್ತು ವಸಾಹತುಗಳಿಗೆ ಅನುಕೂಲದ ಸಮಯವಾಯಿತು. ಶತಮಾನ ಗಳಿಂದಿದ್ದ ದಾಸ್ಯ ಮತ್ತು ಶೋಷಣೆಯನ್ನು ಕಿತ್ತೊಗೆಯಲು ರಾಷ್ಟ್ರೀಯ ಚಳ ವಳಿಗಳು (National Movements) ಎದ್ದವು. ಮೂರನೆಯದಾಗಿ, ಪರಕೀಯ ಬಂಡವಾಳಶಾಹಿ ರಾಷ್ಟ್ರಗಳು ದೇಶೀಯ ಬಂಡವಾಳವರ್ಗ ದೊಡನೆ ಪಾಲುದಾರರಾಗಿ ಶೋಷಣೆ ನಡೆಸುತ್ತಿದ್ದ ಪ್ರದೇಶಗಳಲ್ಲಿ ರಾಷ್ಟ್ರೀಯ ಚಳವಳಿ ಹೆಚ್ಚು ಆರ್ಥಿಕ ಸ್ವರೂಪವನ್ನು ತಾಳಿತು. ಪರಕೀಯ ಶೋಷಣೆ ಯಿಂದ ಪಾರಾಗಲು ಯತ್ನ ನಡೆದಿದ್ದಲ್ಲದೆ, ದೇಶೀಯ ಬಂಡವಾಳವರ್ಗ ದಿಂದ ಆಗುತ್ತಿದ್ದ ಶೋಷಣೆಯಿಂದಲೂ ಸಹ ವಿಮುಕ್ತವಾಗಲು ಚಳವಳಿ ಹುಟ್ಟಿತು.

ಪರಕೀಯ ಮತ್ತು ದೇಶೀಯ ಬಂಡವಾಳವರ್ಗದ ಶೋಷಣೆಯಿಂದ ಪಾರಾಗಲು ಎದ್ದ ಚಳವಳಿ ಆಧುನಿಕ ಸಮಾಜವಾದದ ಮುಂದೋಟದಲ್ಲಿ ಅತಿ ಮುಖ್ಯವಾದದ್ದು. ಈ ಚಳವಳಿ ಘೋರ ಯುದ್ಧದಲ್ಲಿ ದಿಗ್ವಿಜಯಿ

ಯಾದ ಸೋವಿಯಟ್ ರಾಷ್ಟ್ರದ ಸಾಧನೆಗಳಿಂದ ಪ್ರಚೋದನೆ ಹೊಂದಿತು. ಶೋಷಣೆಯಿಂದ ವಿಮೋಚನೆ, ರಾಷ್ಟ್ರದ ಏಳಿಗೆ ಮತ್ತು ಆರ್ಥಿಕಾಭಿವೃದ್ಧಿಯನ್ನು ಹಲವು ರಾಷ್ಟ್ರಗಳು ಮಾರ್ಕ್ಸ್‌ವಾದದಲ್ಲಿ ಕಂಡವು. ಹೀಗೆ ಕಂಡು, ಸಮಾಜವಾದೀ ವ್ಯವಸ್ಥೆಯನ್ನು ತರಲು ಹೋರಾಟ ನಡೆಸಿ ಯಶಸ್ವಿಯಾದ ರಾಷ್ಟ್ರಗಳೆಂದರೆ ಚೀಣಾ, ಪೂರ್ವ ಜರ್ಮನಿ, ಪೋಲೆಂಡ್, ಜೆಕೋಸ್ಲವಾಕಿಯಾ, ಯುಗಾಸ್ಲಾವಿಯ, ಹಂಗೇರಿ, ರುಮಾನಿಯಾ, ಬಲ್ಗಾರಿಯಾ, ಅಲ್ಬೇನಿಯಾ, ಉತ್ತರ ಕೊರಿಯಾ ಮತ್ತು ವಿಯಟ್ನಾಮ್ ದೇಶಗಳು.

ಆಧುನಿಕ ಚೀಣಾದ ನವೋದಯ 1911 ರಲ್ಲಿ ಉಂಟಾಯಿತು. ಈ ವರ್ಷ ಚೀಣಾ ದೇಶದಲ್ಲಿ ಮಾಂಚೂ ರಾಜಮನೆತನದ ನಿರಂಕುಶ ಪ್ರಭುತ್ವದಿಂದ, ಊಳಿಗಮಾನ್ಯ ಪಾಳೆಯಗಾರರ ಉಪಟಳದಿಂದ ಮತ್ತು ವಿದೇಶೀ ಬಂಡವಾಳಗಾರರ ಶೋಷಣೆಯಿಂದ ಪಾರಾಗಲು ಡಾ॥ ಸನ್-ಯಾಟ್-ಸೆನ್ ಅವರ ನೇತೃತ್ವದಲ್ಲಿ ಕ್ರಾಂತಿ ನಡೆಯಿತು. ಆದರೆ ಕ್ರಾಂತಿಯ ಹಿರಿಯ ಉದ್ದೇಶಗಳು ಸಫಲವಾಗಲಿಲ್ಲ. ರಾಜಮನೆತನವೊಂದು ಅಳಿಯಿತೇ ವಿನಾ ಇನ್ನಾವುದರಲ್ಲೂ ಕ್ರಾಂತಿಯ ಫಲಗಳನ್ನು ಜನಸಮುದಾಯ ಉಣಲಿಲ್ಲ. ಅಧಿಕಾರಕ್ಕೆ ಬಂದ ಸರ್ಕಾರ ಜನಸಮುದಾಯದ ಶೋಷಣೆಯನ್ನು ಮುಂದುವರಿಸಿತು ; ಅದರ ಮುಖಂಡ ಚಿಯಾಂಗ್-ಕೈ-ಷೇಕ್ ದೇಶೀಯ ಮತ್ತು ವಿದೇಶೀ ಬಂಡವಾಳವರ್ಗದ ಕೈಗೊಂಬೆಯಾದನು. ಬಂಡವಾಳ ಆರ್ಥಿಕವ್ಯವಸ್ಥೆಯ ಮತ್ತು ಖಾಸಗಿ ಸ್ವಾಮ್ಯದ ರಕ್ಷಣೆಗಾಗಿ ಸರ್ವಾಧಿಕಾರಿ ಸರ್ಕಾರದ ಸ್ಥಾಪನೆಗೆ ಸನ್ನಾಹ ನಡೆಯಿತು. ಆರ್ಥಿಕ ರಂಗದಲ್ಲಿ ಜನಸಮುದಾಯ ಕೇಳುತ್ತಿದ್ದ ಬದಲಾವಣೆಗಳು ಬರಲಿಲ್ಲ. ಪ್ರತಿಯಾಗಿ, ದಬ್ಬಾಳಿಕೆಯ ಮೂಲಕ ಜನಸಮುದಾಯದ ಆಶೋತ್ತರಗಳನ್ನು ಅದುಮಿಡಲು ಯತ್ನ ನಡೆಯಿತು. ಆದರೆ, ಜಾಗೃತಿಗೊಂಡಿದ್ದ ಜನಸಮುದಾಯ ಬಂಡವಾಳವರ್ಗದ ಕೈಗೊಂಬೆ ಸರ್ಕಾರವನ್ನು ಪದಚ್ಯುತಿಗೊಳಿಸಲೂ ಮತ್ತು ಆರ್ಥಿಕ ರಂಗದಲ್ಲಿ ಈಡೇರದಿದ್ದ ಆಶೋತ್ತರಗಳನ್ನು ಪೂರ್ಣಗೊಳಿಸಲೂ ಕಮ್ಯೂನಿಸ್ಟ್ ಪಕ್ಷದ ನಾಯಕತ್ವದಲ್ಲಿ ಮತ್ತೆ ಕ್ರಾಂತಿಗೆ ಸಿದ್ಧವಾಯಿತು. ಬಂಡವಾಳವರ್ಗದ, ಊಳಿಗಮಾನ್ಯ ಹಿತಗಳ ಪ್ರತಿನಿಧಿಗಳಾದ ಪಾಳೆಯಗಾರರ ಮತ್ತು ಜಮೀನ್ದಾರರ ಪ್ರತಿಭಟನೆ

ಜನತಾ ಸೈನ್ಯದ ಎದುರಿನಲ್ಲಿ ಕುಸಿದುಬಿದ್ದಿತು. ಚಿಯಾಂಗ್‌ನ ಸರ್ಕಾರ ವನ್ನು ಉಳಿಸಲು ಅಮೆರಿಕಾ ಸರ್ಕಾರ ನೀಡಿದ ತನು, ಮನ, ಧನಗಳ ಸಹಾಯ ವಿಫಲವಾಯಿತು. 1948 ರಲ್ಲಿ ಚೀಣೀ ಜನಸಮುದಾಯ ಜನತಾ ಚೀಣಾರಾಜ್ಯವನ್ನು (People's Republic of China) ಘೋಷಿಸಿತು.

ಚೀಣದಲ್ಲಿ ಘೋಷಣೆಯಾದ ಜನತಾ ರಾಜ್ಯ 1917 ರಲ್ಲಿ ರಷ್ಯಾದಲ್ಲಿ ನಡೆದ ಮಹಾ ಕ್ರಾಂತಿಯಷ್ಟೇ ಮುಖ್ಯವಾದದ್ದು. ಪ್ರಜಾಸತ್ತೆಯ ಅರ್ಥ ಕೇವಲ ಮತಕೊಡುವ ಮತ್ತು ಚುನಾವಣೆಗೆ ನಿಲ್ಲುವ ಹಕ್ಕುಗಳೇ ಆಗಿರದೆ, ಜಾತ್ಯತೀತ ಮತ್ತು ಕ್ಷೇಮಾಭ್ಯುದಯವನ್ನು ಬಯಸುವ ಸದುದ್ದೇಶಗಳೇ ಆಗಿರದೆ, ಆರ್ಥಿಕ ಪ್ರಜಾಸತ್ತೆಯೂ ಅಹುದೆಂದು ಘೋಷಿಸಲಾಯಿತು. ಶೋಷಣೆಗೆ ಆಧಾರವಾದ ಬಂಡವಾಳಶಾಹಿ ವ್ಯವಸ್ಥೆಯ ವಿನಾಶಕ್ಕೂ ಕರೆ ಕೊಡಲಾಯಿತು. ಸ್ವಾಮ್ಯಾಧಾರದಮೇಲೆ ನಡೆಯುವ ಪ್ರಜಾಸತ್ತೆಗೆ ಬದಲು ಸಮಾಜವಾದೀ ಆರ್ಥಿಕವ್ಯವಸ್ಥೆಯನ್ನು ಆಧಾರವನ್ನಾಗಿ ಉಳ್ಳ ಜನತಾ ಪ್ರಜಾಸತ್ತೆ (People's Democracy) ಘೋಷಣೆಯಾಯಿತು. ಅದರಂತೆ ಈಗ ಕಾರ್ಮಿಕವರ್ಗದ ಮುಂದಾಳತ್ವದಲ್ಲಿ ರೈತರು, ಪ್ರಾಜ್ಞರು ಮತ್ತು ಇತರ ಶೋಷಿತ ವರ್ಗಗಳನ್ನೊಳಗೊಂಡಿರುವ ಸರ್ಕಾರ ರಚಿತವಾಗಿದೆ. ಆರ್ಥಿಕ ರಂಗದಲ್ಲಿ ಸಮಾಜವಾದೀ ಆರ್ಥಿಕವ್ಯವಸ್ಥೆಯನ್ನು ತರಲು, ಪರಿಸ್ಥಿತಿಗಳಿಗೆ ಅನುಗುಣವಾಗಿ ರಾಷ್ಟ್ರೀಕರಣ, ಭೂ ಸುಧಾರಣೆ, ಉಳುವವನಿಗೆ ಭೂಮಿ, ಸಾಮೂಹಿಕ ಬೇಸಾಯ ಕ್ಷೇತ್ರಗಳು, ಇತ್ಯಾದಿ ಕ್ರಮಗಳನ್ನು ಜನತಾ ಸರ್ಕಾರ ಕೈಗೊಂಡಿದೆ.

ಚೀಣದಲ್ಲಿ ಉಂಟಾದ ಕ್ರಾಂತಿಯಂತೆ ಪೋಲೆಂಡ್, ಜೆಕೋಸ್ಲವಾಕಿಯಾ, ಹಂಗೇರಿ, ಬಲ್ಗೇರಿಯಾ, ರುಮೇನಿಯಾ, ಯುಗಾಸ್ಲಾವಿಯಾ ಮತ್ತು ಆಲ್ಬೇನಿಯಾ ದೇಶಗಳಲ್ಲಿ ಆರ್ಥಿಕ ಕ್ರಾಂತಿ ನಡೆಯಿತು. ಜನತಾ ಸರ್ಕಾರಗಳು ಅಧಿಕಾರಕ್ಕೆ ಬಂದವು. ಈ ದೇಶಗಳ ಇತಿಹಾಸವೂ ಸಹ ಚೀಣಾ ರಾಷ್ಟ್ರದಂತೆ ದಾಸ್ಯದ, ಶೋಷಣೆಯ ಮತ್ತು ನಿರಂಕುಶ ಪ್ರಭುತ್ವದ ಇತಿಹಾಸವಾಗಿದೆ. ಒಂದನೇ ಮಹಾಯುದ್ಧದ ನಂತರ ಈ ದೇಶಗಳು ಸ್ವತಂತ್ರ ರಾಷ್ಟ್ರಗಳಾಗಿ ಉದಯಿಸಿದವು. ಆದರೆ, ಆರ್ಥಿಕವಾಗಿ ಪರಕೀಯ ಬಂಡವಾಳಶಾಹಿ ರಾಷ್ಟ್ರಗಳಿಂದ ದೇಶವೂ ದೇಶೀಯ ಬಂಡವಾಳವರ್ಗದಿಂದ

ಜನಸಮುದಾಯವೂ ನಿಮೋಚನೆಯನ್ನು ಗಳಿಸಿರಲಿಲ್ಲ. ವಿದೇಶೀ ಬಂಡವಾಳಶಾಹಿ ರಾಷ್ಟ್ರಗಳು ದೇಶದ ಸಂಪತ್ತನ್ನು ಸೂರೆಮಾಡುತ್ತಿದ್ದರೆ, ದೇಶೀಯ ಬಂಡವಾಳವರ್ಗ ಸೂರೆಯಲ್ಲಿ ಪಾಲುದಾರರಾಗಿದ್ದರು. ರೈತರ ಮತ್ತು ಕಾರ್ಮಿಕರ ಜೀವನ ದಾರುಣವಾಗಿತ್ತು. ಫ್ಯಾಸಿಸ್ಟ್ ಸರ್ಕಾರಗಳು ಅಧಿಕಾರಕ್ಕೆ ಬಂದನಂತರ ಈ ದೇಶಗಳನ್ನು ತಮ್ಮ ರಾಷ್ಟ್ರಗಳ ವಸಾಹತುಗಳನ್ನಾಗಿ ಮಾಡಿಕೊಳ್ಳಲು ಯೋಚನೆ ಇದ್ದಿತು. ಆದರೆ ಎರಡನೇ ಮಹಾಯುದ್ಧದಲ್ಲಿ ಸೋವಿಯಟ್ ರಾಷ್ಟ್ರ ಗಳಿಸಿದ ವಿಜಯ ಈ ಸನ್ನಾಹಕ್ಕೆ ಅಡ್ಡಿ ಬಂದಿತು. ಜರ್ಮನ್ ಸೈನ್ಯಗಳು ಸೋತು ಆಕ್ರಮಿತ ಪ್ರದೇಶಗಳಿಂದ ಹಿಮ್ಮೆಟ್ಟುತ್ತಿದ್ದಂತೆ ಕಮ್ಯೂನಿಸ್ಟ್ ಪಕ್ಷದ ನೇತೃತ್ವದಲ್ಲಿ ಕಾರ್ಮಿಕವರ್ಗ ಮತ್ತು ರೈತವರ್ಗ ಒಡಗೂಡಿ, ಜನತಾ ಸರ್ಕಾರವನ್ನು (People's Government) ಸ್ಥಾಪಿಸಿದವು. ಮರು ಅವಸ್ಥೆಯಲ್ಲಿಯೇ ಬಂಡವಾಳಶಾಹಿ ವ್ಯವಸ್ಥೆಯ ನಾಶವನ್ನು ಘೋಷಿಸಲಾಯಿತು ಮತ್ತು ಬಂಡವಾಳಶಾಹಿ ಪ್ರಜಾಸತ್ತೆಯನ್ನು ತರಲು ಯತ್ನಿಸಿದ ಬಂಡವಾಳವರ್ಗವನ್ನು ಸದೆಬಡಿಯಲಾಯಿತು. ಸಮಾಜವಾದೀ ವ್ಯವಸ್ಥೆಯ ಸ್ಥಾಪನೆಯನ್ನು ಘೋಷಿಸಲಾಯಿತು.

ಎರಡನೇ ಮಹಾಯುದ್ಧಾನಂತರ ಹಲವು ರಾಷ್ಟ್ರಗಳಲ್ಲಿ ಆರ್ಥಿಕ ಕ್ರಾಂತಿಯುಂಟಾಗಿ ಸಮಾಜವಾದೀ ವ್ಯವಸ್ಥೆ ಸ್ಥಾಪನೆಯಾದದ್ದು ಹಿರಿಯ ಬಂಡವಾಳಶಾಹಿ ರಾಷ್ಟ್ರಗಳಾದ ಅಮೆರಿಕಾ ಮತ್ತು ಬ್ರಿಟನ್‌ಗಳನ್ನು ಹೆದರಿಕೆಗೆ ಈಡುಮಾಡಿತು. ಯುದ್ಧ ಸಮಾಜವಾದದ ಹರಡುವಿಕೆಗೆ ಆಮಂತ್ರಣವೆಂದು ಬಂಡವಾಳವರ್ಗ ಬಗೆದಿರಲಿಲ್ಲ. ಇಷ್ಟಲ್ಲದೆ, ಇತರ ಬಂಡವಾಳಶಾಹಿ ರಾಷ್ಟ್ರಗಳಲ್ಲೂ ಸಮಾಜವಾದೀವ್ಯವಸ್ಥೆಯ ಸ್ಥಾಪನೆಗೆ ಚಳವಳಿ ಎದ್ದಿದ್ದಿತು. ಯುದ್ಧದಲ್ಲಿ ಜರ್ಝರಿತವಾಗಿ ಹೊರಬಿದ್ದ ಫ್ರಾನ್ಸ್, ಇಟಲಿ, ಜರ್ಮನಿ ಮತ್ತು ಗ್ರೀಸ್ ದೇಶಗಳಲ್ಲಿ ಆರ್ಥಿಕವಾಗಿ ಆಂದೋಳನ ಆಗುವುದರಲ್ಲಿದ್ದಿತು. ಕೂಡಲೆ ಬಂಡವಾಳಶಾಹಿ ವ್ಯವಸ್ಥೆಯನ್ನುಳಿಸಲು ಪ್ರತಿ ರಕ್ಷಣಾ ಕ್ರಮಗಳನ್ನು ಅಮೆರಿಕಾ ಮತ್ತು ಬ್ರಿಟನ್ ಕೈಗೊಂಡವು. ಜನತಾ ಚಳವಳಿಯನ್ನಡಗಿಸಲು ಅಮೆರಿಕಾ ಮತ್ತು ಬ್ರಿಟನ್ ಹಣ, ಮದ್ದುಗುಂಡು ಮತ್ತು ಸೈನ್ಯ ಸಹಾಯವನ್ನು ತಮ್ಮ ಆಶ್ರಿತ ಬಂಡವಾಳವರ್ಗಕ್ಕೆ ನೀಡಿದವು. ಬಂಡವಾಳವರ್ಗ ಧೈರ್ಯ

ಪಡೆದು ಗ್ರೀಸ್‌ನಲ್ಲಿ ಒಳ ಯುದ್ಧವನ್ನು ಘೋಷಿಸಿತು; ಮಿಕ್ಕೆಡೆ ಯುದ್ಧಾನಂತರ ರಚನೆ ಹೊಂದಿದ್ದ ಸಂವಿಧಾನ ಮತ್ತು ಒಪ್ಪಂದಗಳು ಉಲ್ಲಂಘನೆಯಾಗಿ ಬಂಡವಾಳಶಾಹಿ ವ್ಯವಸ್ಥೆಗೆ ರಕ್ಷಣೆ ಕೊಡುವ ಸರ್ಕಾರ ಗಳು ರಚನೆ ಹೊಂದಿದವು. ಆರ್ಥಿಕ ಕ್ರಾಂತಿಗಾಗಿ ಆರಂಭವಾಗಿದ್ದ ಜನತಾ ಚಳವಳಿಯನ್ನು ಬೆದರಿಕೆ, ಕುಹಕ ಮತ್ತು ಬಲಪ್ರಯೋಗಗಳಿಂದ ಅಡ ಗಿಸಲಾಯಿತು.

ಅಮೆರಿಕಾ ಮತ್ತು ಬ್ರಿಟಿಷ್ ಸರ್ಕಾರಗಳು ತಮ್ಮ ಸಹಪಾಠಿ ಬಂಡ ವಾಳಶಾಹಿ ರಾಷ್ಟ್ರಗಳಲ್ಲಿ ಎದ್ದಿದ್ದ ಕ್ರಾಂತಿಯ ಉಬ್ಬರವನ್ನು ತಡೆಗಟ್ಟು ವುದರ ಜೊತೆಗೆ, ವಸಾಹತುಗಳಲ್ಲಿದ್ದ ಜನತಾ ಚಳವಳಿಗಳನ್ನು ಅಡಗಿಸುವ ಪ್ರಮೇಯವೂ ಸಹ ಬಂದಿತು. ವಸಾಹತುಗಳಲ್ಲಿದ್ದ ಚಳವಳಿ ಅಮೆರಿಕಾ ಮತ್ತು ಬ್ರಿಟನ್‌ಗಳ ಸಹಪಾಠಿ ಬಂಡವಾಳಶಾಹಿ ರಾಷ್ಟ್ರಗಳಲ್ಲಿದ್ದ ಕ್ರಾಂತಿಗಿಂತಲೂ ಅಪಾಯಕಾರಿಯಾಗಿದ್ದಿತು. ಬಂಡವಾಳಶಾಹಿ ವ್ಯವಸ್ಥೆಯ ಜೀರ್ಣೋದ್ಧಾ ರಕ್ಕೆ ಆವಶ್ಯಕವಾದ ಮಾರುಕಟ್ಟೆಗಳನ್ನೂ, ಕಚ್ಚಾಪದಾರ್ಥಗಳನ್ನು ಒದಗಿ ಸುವ ವಸಾಹತುಗಳನ್ನೂ ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಹಿಡಿತದಿಂದ ಕಳೆದುಕೊಳ್ಳುವ ಪ್ರಸಂಗವಾಗಿತ್ತು. ವಸಾಹತುಗಳನ್ನು ಹೊಂದಿದ್ದ ಬ್ರಿಟಿಷ್ ರಾಷ್ಟ್ರಕ್ಕೆ ಮಾತ್ರ ವಸಾಹತುಗಳಲ್ಲಿದ್ದ ಚಳವಳಿ ಅಪಾಯಕಾರಿಯಾಗಿದ್ದು ದಲ್ಲದೆ, ವಸಾಹತುಗಳನ್ನು ಹೊಂದಿದ್ದ ಇತರ ಬಂಡವಾಳಶಾಹಿ ರಾಷ್ಟ್ರಗಳಾದ ಫ್ರಾನ್ಸ್, ಇಟಲಿ, ಬೆಲ್ಜಿಯಂ, ಹಾಲೆಂಡ್‌ಗಳಿಗೂ ಸಹ ಅಪಾಯ ಒದ ಗಿದ್ದಿತು. ಆದರೆ ಈ ವಸಾಹತುಗಳನ್ನು ಹೊಂದಿದ್ದ ಯಾವ ಬಂಡವಾಳ ರಾಷ್ಟ್ರವೂ ಸಹ ಏಕಾಂಗಿಯಾಗಿ ಜನತಾ ಚಳವಳಿಯನ್ನು ಅಡಗಿಸಲು ಶಕ್ತಿ ಇರಲಿಲ್ಲ. ಯುದ್ಧದ ಪರಿಣಾಮವಾಗಿ ಈ ಬಂಡವಾಳಶಾಹಿ ರಾಷ್ಟ್ರಗಳು ಶಕ್ತಿಗುಂದಿದ್ದವು. ಈ ರಾಷ್ಟ್ರಗಳ ದುಃಸ್ಥಿತಿಯ ಪರಿಸ್ಥಿತಿಯಲ್ಲಿ ವಸಾಹತು ಗಳೇ ಅನ್ನದಾಯಕವಾಗಿದ್ದವು. ಏನಾದರೂ ಮಾಡಿ ತಮ್ಮ ವಸಾಹತು ಗಳನ್ನು ಉಳಿಸಿಕೊಡಬೇಕೆಂದು ಬಂಡವಾಳಶಾಹಿ ರಾಷ್ಟ್ರಗಳು ತಮ್ಮ ಪರಮ ಮಿತ್ರ ರಾಷ್ಟ್ರವಾದ ಅಮೆರಿಕಾಕ್ಕೆ ಮೊರೆ ಇಟ್ಟವು.

ಅಮೆರಿಕಾ ಈ ಮೊರೆಯನ್ನು ತನ್ನ ದೃಷ್ಟಿಯಿಂದ ನೋಡಿತು. ಮೊದಲನೆಯದಾಗಿ, ಅಮೆರಿಕಾ ಈ ಬಂಡವಾಳಶಾಹಿ ರಾಷ್ಟ್ರಗಳ ಆಪತ್ಕಾಲ ದಲ್ಲಿ ಸಹಾಯಕ್ಕೆ ಬಾರದಿದ್ದರೆ ವಸಾಹತುಗಳು ಸಮಾಜವಾದೀ ವ್ಯವಸ್ಥೆಯನ್ನು

ಅಪ್ಪುವುವು. ಸೋವಿಯಟ್ ರಾಷ್ಟ್ರದ ಹಿರಿಮೆ ಎಲ್ಲ ಕಡೆಗೂ ಹಬ್ಬುತ್ತವೆ. ಇದರಿಂದ ಅಮೆರಿಕಾಕ್ಕೂ ಅಪಾಯಸಿದ್ಧ. ಹೆಚ್ಚು ಹೆಚ್ಚು ಭೂಪ್ರದೇಶ ಗಳು ಸಮಾಜವಾದೀ ರಾಷ್ಟ್ರಗಳಾಗುತ್ತವೆ. ಇದನ್ನು ತಡೆಗಟ್ಟಿಯೇ ತೀರ ಬೇಕು.

ಎರಡನೆಯದಾಗಿ, ತನ್ನ ಸಹಪಾಠಿ ಮತ್ತು ಹಿಂಬಾಲಕ ಬಂಡವಾಳ ಶಾಹಿ ರಾಷ್ಟ್ರಗಳು ವಸಾಹತುಗಳನ್ನು ಕಳೆದುಕೊಂಡಿದ್ದಾದರೆ ಈ ರಾಷ್ಟ್ರ ಗಳಲ್ಲಿ ಆರ್ಥಿಕ ಪರಿಸ್ಥಿತಿ ಇನ್ನೂ ವಿಷಮಿಸಿ ಸಮಾಜವಾದೀ ಕ್ರಾಂತಿಗೆ ರೆಕ್ಕೆ ಬಂದಂತಾಗುತ್ತದೆ. ಅಲ್ಲದೆ, ತನ್ನ ಸಹಪಾಠಿ ಮತ್ತು ಹಿಂಬಾಲಕ ಬಂಡವಾಳಶಾಹಿ ರಾಷ್ಟ್ರಗಳೂ ಸಮಾಜವಾದೀ ರಾಷ್ಟ್ರಗಳಾದರೆ ಅಮೆರಿಕಾ ತಾನು ಒಂಟಿಯಾಗಿ ಉಳಿಯಬೇಕಾಗುತ್ತದೆ.

ಮೂರನೆಯದಾಗಿ, ತನ್ನ ಸ್ವಪ್ರಯೋಜನ ದೃಷ್ಟಿಯಿಂದಲೂ ಸಹ ವಸಾಹತುಗಳುಳ್ಳ ಬಂಡವಾಳಶಾಹಿ ರಾಷ್ಟ್ರಗಳ ನೆರವಿಗೆ ಹೋಗುವುದು ವಿವೇಕದ ಮಾರ್ಗವಾಗಿದೆ. ಸಹಾಯ ಕೊಡುವುದಾಗಿ ಭರವಸೆ ಕೊಟ್ಟಲ್ಲಿ, ಪ್ರತಿಯಾಗಿ ಸಹಪಾಠಿ ಮತ್ತು ಹಿಂಬಾಲಕ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮತ್ತು ಅವುಗಳಿಗೆ ಸೇರಿರುವ ವಸಾಹತುಗಳಲ್ಲಿ ಅಮೆರಿಕವು ತನ್ನ ಆರ್ಥಿಕ ಆಧಿಪತ್ಯವನ್ನು ಸ್ಥಾಪಿಸಲು ಅವಕಾಶವೂ ಸಹ ಸಿಗುತ್ತದೆ.

ಅದರಂತೆ ಅಮೆರಿಕಾ ವಸಾಹತುಗಳಲ್ಲಿದ್ದ ಜನತಾ ಚಳವಳಿಗಳನ್ನು ಅಡಗಿಸಲು ಪರೋಕ್ಷವಾಗಿಯೂ ನೇರವಾಗಿಯೂ ಬ್ರಿಟನ್, ಫ್ರಾನ್ಸ್, ಹಾಲೈಂಡ್, ಇತ್ಯಾದಿಗಳಿಗೆ ಸಹಾಯ ನೀಡಿತು. ಈ ಸಹಾಯದಿಂದ ಮಲಯಾ, ಇಂಡೋ ಚೈನಾ, ಕೆನ್ಯಾ, ಉತ್ತರ ಆಫ್ರಿಕಾ, ಇತ್ಯಾದಿ ಪ್ರದೇಶಗಳಲ್ಲಿ ಅತಿ ಕ್ರೂರವಾಗಿ ಜನತಾ ಚಳವಳಿಯನ್ನು ಅಡಗಿಸಲಾ ಯಿತು. ಆದರೆ, ಹಲವೆಡೆ ದಬ್ಬಾಳಿಕೆ ವಿಫಲವಾಗಿ ಅನೇಕ ವಸಾಹತುಗಳು ಸ್ವಾತಂತ್ರ್ಯಗಳಿಸಿವೆ.

ಯುದ್ಧಾನಂತರ ಅಮೆರಿಕಾ ಹಲವು ಬಂಡವಾಳಶಾಹಿ ರಾಷ್ಟ್ರಗಳನ್ನು ಕ್ರಾಂತಿಯ ಉಬ್ಬರದಿಂದ ಸಂರಕ್ಷಿಸಿದರೂ, ಅಮೆರಿಕಾ ಮೊದಲುಗೊಂಡು ಎಲ್ಲ ಬಂಡವಾಳಶಾಹಿ ರಾಷ್ಟ್ರಗಳೂ ಬಂಡವಾಳ ಆರ್ಥಿಕವ್ಯವಸ್ಥೆಯ ವಿರಸ ಗಳಿಗೆ ಸೆರೆಯಾಗಿವೆ. ಯುದ್ಧ ಕೆಲವು ವರ್ಷ ಕೆಲವು ಜನರಿಗೆ ಉದ್ಯೋಗ ದೊರಕಿಸಿ ಅವರ ಗಮನವನ್ನು ಸೆಳೆಯುವಂತಾದರೂ, ಯುದ್ಧಾನಂತರ

ಪುನಃ ಆರ್ಥಿಕ ಅಧೋಗತಿ ಜನರನ್ನು ಆವರಿಸಿದೆ. ಲಾಭದಾಯಕ ಉತ್ಪನ್ನ, ಲಾಭ ತರಬಲ್ಲ ಮಾರುಕಟ್ಟೆಗಳು, ಉತ್ಪನ್ನವಾದ ಸರಕುಗಳ ಮಾರಾಟ ಬಂಡವಾಳಶಾಹಿ ವ್ಯವಸ್ಥೆಯ ಜೀವನಾಡಿಗಳು. ಆದರೆ ಇವು ಮಾಯವಾಗ ತೊಡಗಿವೆ. ಯುದ್ಧದ ಪರಿಣಾಮವಾಗಿ ಬಂಡವಾಳಶಾಹಿ ರಾಷ್ಟ್ರಗಳಿಗೆ ಉಂಟಾಗಿರುವ ದೌರ್ಬಲ್ಯದ ಜೊತೆಗೆ ಬಂಡವಾಳಶಾಹಿ ರಾಷ್ಟ್ರಗಳ ಅಧೀನದಲ್ಲಿದ್ದ ಅನೇಕ ವಸಾಹತುಗಳು ಮತ್ತು ಅಧೀನ ದೇಶಗಳು ಸ್ವತಂತ್ರವಾಗಿ ಮಾರುಕಟ್ಟೆಗಳು ನಶಿಸಿವೆ. ಬಂಡವಾಳಶಾಹಿ ರಾಷ್ಟ್ರಗಳು ದಲಿತ ರಾಷ್ಟ್ರಗಳ ಶೋಷಣೆಯನ್ನು ಮುಂದುವರಿಸುವುದು ಅಸಾಧ್ಯವಾಗಿದೆ. ಈ ಪರಿಸ್ಥಿತಿಯ ಫಲವಾಗಿ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಲಾಭದಾಯಕ ಉತ್ಪನ್ನಕ್ಕೆ ಧಕ್ಕೆ ಬಂದು ಉತ್ಪಾದನೆ ಮತ್ತು ಉದ್ಯೋಗ ಕ್ಷೀಣಿಸುತ್ತಿವೆ, ನಿರುದ್ಯೋಗ ಹೆಚ್ಚುತ್ತಿದೆ, ಜನರ ಆರ್ಥಿಕಮಟ್ಟ ಕಡಿಮೆಯಾಗುತ್ತಿದೆ. ಅಲ್ಲದೆ, ಅಮೆರಿಕದ ಬಂಡವಾಳ ವರ್ಗ ತನ್ನ ಲಾಭದಾಹವನ್ನು ತಣಿಸಿಕೊಳ್ಳಲು ಅನುಸರಿಸಿರುವ ಆರ್ಥಿಕ ನೀತಿಯೂ ಸಹ ಪರಿಸ್ಥಿತಿ ಮತ್ತಷ್ಟು ಉಲ್ಬಣ ಹೊಂದುವಂತೆ ಮಾಡಿದೆ. ಎರಡು ಘೋರ ಯುದ್ಧಗಳಿಂದಲೂ ಅತಿಯಾದ ಯಾವ ನಷ್ಟವನ್ನೂ ಹೊಂದದೆ ಅಮೆರಿಕಾ ಹೊರಬಿತ್ತು. ಯುದ್ಧಗಳ ಕಾಲದಲ್ಲಿ ಹೊರಗಿನ ಬಂಡವಾಳಶಾಹಿ ರಾಷ್ಟ್ರಗಳಿಗೆ ಅಮೆರಿಕದ ಸರಬರಾಜೇ ಮುಖ್ಯ ರಹವಾಗಿತ್ತು. ಈ ಪರಿಣಾಮವಾಗಿ ಅಮೆರಿಕಾ ದೇಶದಲ್ಲಿ ಅಗಾಧ ಪ್ರಮಾಣದಲ್ಲಿ ಉತ್ಪಾದನೆಯು ವೃದ್ಧಿ ಹೊಂದಲು ಅವಕಾಶ ಸಿಕ್ಕಿತು. ಎರಡನೇ ಯುದ್ಧಾನಂತರ ಈ ಅಧಿಕ ಪ್ರಮಾಣದಲ್ಲಿ ಉತ್ಪಾದನೆ ಆಗುತ್ತಿರುವ ಸರಕುಗಳ ಮಾರಾಟ ಅಮೆರಿಕಾಕ್ಕೆ ಸಮಸ್ಯೆಯಾಯಿತು. ಸುಭದ್ರವಾದ ಮಾರುಕಟ್ಟೆಗಳನ್ನು ಹೊಂದಿಸಿಕೊಳ್ಳುವ ಪ್ರಮೇಯ ಬಂದಿತು. ಈ ಸಮಯಕ್ಕೆ ಸರಿಯಾಗಿ ಇಂಗ್ಲೆಂಡ್, ಫ್ರಾನ್ಸ್, ಇಟಲಿ, ಇತ್ಯಾದಿ ಬಂಡವಾಳಶಾಹಿ ರಾಷ್ಟ್ರಗಳಿಂದ ಬಂದ ಮೊರೆ ಅಮೆರಿಕಾಕ್ಕೆ ಸುಸಮಯವಾಯಿತು. ಭದ್ರತಾಭರವಸೆಯನ್ನು ಕೊಡುವ ನೆಪದಲ್ಲಿ ಅಮೆರಿಕಾ ತನ್ನ ಆರ್ಥಿಕ ಯಜಮಾನಿಕೆಯನ್ನು ಸ್ಥಾಪಿಸಿತು. ಇದೇ ಮಿಕ್ಕ ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳಿಗೆ ಕಂಟಕವಾಗಿದೆ. ಅಮೆರಿಕದೊಡನೆ ಮಿಕ್ಕಿತರ ಬಂಡವಾಳಶಾಹಿ ರಾಷ್ಟ್ರಗಳು ಸ್ಪರ್ಧೆ ನಡೆಸಲೂ ಮತ್ತು ಅಮೆರಿಕಾದ ಒತ್ತಾಯಗಳಿಗೆ ಪ್ರತಿಭಟನೆ ಸೂಚಿಸಲೂ ಅಶಕ್ತವಾಗಿವೆ. ಮಾರುಕಟ್ಟೆಗಳನ್ನು ಕಳೆದುಕೊಂಡಿರುವ

ಈ ಬಂಡವಾಳಶಾಹಿ ರಾಷ್ಟ್ರಗಳ ಆರ್ಥಿಕ ವ್ಯವಸ್ಥೆ ಮತ್ತನ್ನು ಆರ್ಥಿಕ ಬಿಕ್ಕಟ್ಟಿಗೆ ತುತ್ತಾಗುವಂತೆ ಆಗಿದೆ ಮತ್ತು ಅಂತರ್ಯದಲ್ಲೇ ವೈಷಮ್ಯವು ಬಂಡವಾಳ ಆರ್ಥಿಕ ವ್ಯವಸ್ಥೆಯುಳ್ಳ ರಾಷ್ಟ್ರಗಳಲ್ಲಿ ನೆಲೆ ಹೊಂದುವಂತೆ ಆಗಿದೆ.

ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಯುದ್ಧಾನಂತರ ಅಧಿಕಾರಕ್ಕೆ ಬಂದ ಸರ್ಕಾರಗಳು ಎಲ್ಲವನ್ನೂ ಸರಿಪಡಿಸಲಾಗುವುದೆಂದು ವಾಗ್ದಾನ ಮಾಡಿದವು. ಆದರೆ ದುಃಸ್ಥಿತಿಗೆ ಈಡಾಗಿರುವ ಜನಸಮುದಾಯದ ಒತ್ತಾಯ ಈ ಸರ್ಕಾರ ಗಳನ್ನು ಉಭಯ ಸಂಕಟಕ್ಕೆ ಸಿಲುಕಿಸಿವೆ. ಪರಿಸ್ಥಿತಿಯನ್ನು ಸರಿಪಡಿಸಲು ಹೊರಟರೆ ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳ ಬೇಕಾಗಿದೆ; ಉದ್ಯಮಗಳನ್ನು ಸ್ಥಾಪಿಸಲು ಮತ್ತು ಉದ್ಯೋಗವನ್ನು ಕಲ್ಪಿಸಲು ಎಲ್ಲೆಲ್ಲಿ ಲಾಭಸಿಗುವುದಿಲ್ಲವೆಂದು ಖಾಸಗೀ ಬಂಡವಾಳ ಹಿಂಜರಿ ಯುವುದೋ ಅಲ್ಲೆಲ್ಲಾ ಸರ್ಕಾರವೇ ಪ್ರವೇಶಿಸಬೇಕಾಗಿದೆ! ಆರ್ಥಿಕ ಕ್ಷೇತ್ರ ದಲ್ಲಿ ಸರ್ಕಾರ ಪ್ರವೇಶಿಸಕೂಡದೆಂಬ ಧೋರಣೆಗೆ ಊನಬಂದಿದೆ! ಆದರೆ ಸರ್ಕಾರಕ್ಕೆ ಬಂಡವಾಳವಾದರೂ ಎಲ್ಲಿಂದ ಬರಬೇಕು? ಖಾಸಗೀ ಸ್ವಾಮ್ಯ, ಪ್ರೈವೋಟ, ಖಾಸಗೀ ಉದ್ಯಮ, ಖಾಸಗೀ ಬಂಡವಾಳ ಇವುಗಳಿಗೆ ಸಂರಕ್ಷಣೆ ಕೊಡುವುದಾಗಿ ಬಂದ ಸರ್ಕಾರಗಳ ಪಾಡೇನು?

ಈ ವೈಪರೀತ್ಯವೇ ಸಮಾಜವಾದೀ ಆರ್ಥಿಕವ್ಯವಸ್ಥೆ ಸ್ಥಾಪನೆಯಾಗ ದಿರುವ ರಾಷ್ಟ್ರಗಳ ವಿಶೇಷ ಸಂಗತಿಯಾಗಿದೆ. ಒಂದುಕಡೆ, ಬಂಡವಾಳ ವ್ಯವಸ್ಥೆಯ ರಕ್ಷಣೆಯ ಕೆಲಸವಾಗಬೇಕಾಗಿದೆ, ಇನ್ನೊಂದುಕಡೆ ದಾರುಣ ಪರಿಸ್ಥಿತಿಯಿಂದ ನರಳುತ್ತಿರುವ ಜನಸಮುದಾಯದ ಆರ್ಥಿಕ ಪರಿಸ್ಥಿತಿ ಯನ್ನು ಸುಧಾರಿಸಬೇಕಾಗಿದೆ. ವಿಧಿ ಇಲ್ಲದೆ, ಸರ್ಕಾರ ಆರ್ಥಿಕ ಕ್ಷೇತ್ರದಲ್ಲಿ ಪ್ರವೇಶಿಸತೊಡಗಿದೆ. ಸ್ವಾಮ್ಯಕ್ಕೆ ಮತ್ತು ಬಂಡವಾಳಶಾಹಿ ವ್ಯವಸ್ಥೆಗೆ ಧಕ್ಕೆ ಬರದಂತೆ ಸ್ವಚ್ಛ ಬಂಡವಾಳಶಾಹಿ ವ್ಯವಸ್ಥೆಗೆ ಕೆಲವು ತಿದ್ದುಪಡಿಗಳನ್ನು ತರಲಾಗಿದೆ. ಲಾಭದ ಮಿತಿ, ಬೆಲೆಗಳ ನಿರ್ಧಾರ, ಉದ್ಯಮಗಳನ್ನು ಸ್ಥಾಪಿ ಸಲು ಲೈಸನ್ಸ್, ಆಮದು ರಫ್ತಿನಮೇಲೆ ನಿರ್ಬಂಧ, ಕನಿಷ್ಠ ಕೂಲಿಯ ಮತ್ತು ವೇತನದ ನಿರ್ಧಾರ, ಹತೋಟಿಗಳು, ಯೋಜನೆ, ಸರ್ಕಾರಿ ಉದ್ಯಮಗಳು, ಇತ್ಯಾದಿಗಳ ಮೂಲಕ ಜನಸಮುದಾಯದ ಆಕಾಂಕ್ಷೆಗಳನ್ನು ನೆರವೇರಿ

ಸಲು ಸರ್ಕಾರಗಳು ಹೊರಟಿವೆ.[1] ಸರ್ಕಾರ ಆರ್ಥಿಕ ಕ್ಷೇತ್ರದಲ್ಲಿ ಪ್ರವೇಶಿಸಲೇ ಕೂಡದು, ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಸ್ವಯಂ ಹೊಂದಾಣಿಕೆ ಸರ್ಕಾರದ ಪ್ರವೇಶದಿಂದ ಹಾಳಾಗುತ್ತದೆ ಎಂದು ಉದ್ಗಾರ ಮಾಡುತ್ತಿದ್ದ ಬಂಡವಾಳಶಾಹಿ ಅರ್ಥಶಾಸ್ತ್ರಜ್ಞರಲ್ಲಿ ಹಲವರು ಮೌನ ತಾಳಿದ್ದಾರೆ, ಇನ್ನು ಕೆಲವರು ಹೊಸ ಬಂಡವಾಳಶಾಹಿ ಅರ್ಥಶಾಸ್ತ್ರವನ್ನು ರಚಿಸುವುದರಲ್ಲಿ ನಿರತರಾಗಿದ್ದಾರೆ.

ಆದರೆ ಸರ್ಕಾರದ ಯತ್ನಗಳು ಈಡೇರುವಂತಾಗಲು ಬಂಡವಾಳಶಾಹಿ ವ್ಯವಸ್ಥೆ ಅವಕಾಶಕೊಟ್ಟಿಲ್ಲ. ಬಂಡವಾಳಶಾಹಿ ವ್ಯವಸ್ಥೆಯ ವೈಪರೀತ್ಯಗಳನ್ನು ತಡೆಯಲು ವಿಧಿಸಿರುವ ಹಿಡಿತಗಳು (controls) ಖಾಸಗೀ ಲಾಭದಾಯಕ ಉತ್ಪಾದನೆಗೆ ಧಕ್ಕೆ ತಂದಿವೆ; ಉತ್ಪಾದನೆ ಮತ್ತು ಉದ್ಯೋಗ ಮತ್ತಷ್ಟು ಕ್ಷೀಣಿಸುವಂತೆ ಮಾಡಿವೆ.[2] ಇಂತಹ ಪರಿಸ್ಥಿತಿಯಲ್ಲಿ ಉದ್ಯೋಗದ ಕಲ್ಪನೆ ಮತ್ತು ಉತ್ಪಾದನೆ ಕುಗ್ಗದಹಾಗೆ ನೋಡಿಕೊಳ್ಳುವ ಜವಾಬ್ದಾರಿ ಸರ್ಕಾರಕ್ಕೆ ಸೇರಿದ್ದಾಗಿದೆ. ಖಾಸಗೀ ಬಂಡವಾಳಉದ್ಯಮ ಲಾಭಸಿಗುವುದಿಲ್ಲವೆಂದು ಎಲ್ಲೆಲ್ಲಿ ಪ್ರವೇಶಿಸುವುದಿಲ್ಲವೋ ಅಂತಹ ಕಡೆಗಳಲ್ಲಿ ಸರ್ಕಾರವೇ ಪ್ರವೇಶಿಸಬೇಕಾಗಿದೆ. ಇದರ ಪರಿಣಾಮವಾಗಿ ಆರ್ಥಿಕ ವ್ಯವಸ್ಥೆ ಖಾಸಗೀ ಮತ್ತು ಸರ್ಕಾರದ್ದೆಂಬ (Private and Public Sectors) ಎರಡು ವಲಯಗಳ ಆರ್ಥಿಕರಂಗವಾಗಿದೆ. ಇಂತಹ ಮಿಶ್ರ ವ್ಯವಸ್ಥೆಯನ್ನು ಸುಗಮವಾದ ರೀತಿಯಲ್ಲಿ ನಿರ್ವಹಿಸಲು ಹೊರಟಿರುವ ಸರ್ಕಾರಗಳ ಪಾಡು ಬಹು ಚಿಂತಾಜನಕವಾಗಿದೆ.

ಸರ್ಕಾರ ಪ್ರವೇಶಿಸಲು ಇಚ್ಛಿಸುವುದಾದರೂ ಬಂಡವಾಳ ಎಲ್ಲಿಂದ ಬರಬೇಕು? ಅಧಿಕ ತೆರಿಗೆ, ಕಂದಾಯ, ಸಾಲ ಮತ್ತು ಮುದ್ರಣಾಲಯ (Minting) ಇವುಗಳೇ ಉಳಿದಿರುವ ಮಾರ್ಗಗಳು. ಒಂದುವೇಳೆ

---

(1) ಇದು 'ಮಧ್ಯಮ ಮಾರ್ಗ' (The Middle Way) ಎಂದು ಕರೆಯಲ್ಪಟ್ಟಿದೆ.

(2) ಆದರೆ ಇಷ್ಟು ಹಿಡಿತಗಳ ಮಧ್ಯೆ ಖಾಸಗೀ ಉದ್ಯಮ ಇನ್ನೂ ಉತ್ಪಾದನೆಯಲ್ಲಿ ನಿರತವಾಗಿದ್ದರೆ ಮತ್ತು ಉದ್ಯೋಗ ದೊರಕುತ್ತಿದ್ದರೆ, ಹಿಡಿತಗಳು ಲಾಭದಾಯಕ ಉತ್ಪಾದನೆಯನ್ನು ಪೂರ್ಣವಾಗಿ ಬತ್ತುವಂತೆ ಮಾಡಿಲ್ಲವೆಂಬುದು ವೇದ್ಯವಾಗುತ್ತದೆ.

ಈ ಮಾರ್ಗಗಳಿಂದ ಸರ್ಕಾರಕ್ಕೆ ಬಂಡವಾಳ ದೊರೆಯುವಂತಾದರೂ, ಸಮಸ್ಯೆಗಳು ಬಗೆಹರಿಯುವುದರ ಬದಲು ಉಲ್ಬಣ ಹೊಂದುವಂತೇ ಆಗಿದೆ; ಬಂಡವಾಳಶಾಹಿ ಸರ್ಕಾರಗಳು ವಿಧಿಸಿರುವ ಹತೋಟಿ, ಲಾಭದ ಮಿತಿ, ಅಧಿಕ ತೆರಿಗೆ, ಇತ್ಯಾದಿಗಳು ಅನಿರೀಕ್ಷಿತವಾದ ಪರಿಣಾಮಗಳನ್ನು ಖಾಸಗೀ ಬಂಡವಾಳಉದ್ಯಮದಮೇಲೆ ತಂದಿವೆ. ಒಂದನೆಯದಾಗಿ, ಲಾಭ ದಾಯಕ ಉದ್ಯಮಕ್ಕೆ ಚ್ಯುತಿ ಬಂದು ಖಾಸಗೀ ಉದ್ಯಮ ಜಡಸ್ವಭಾವ ಹೊಂದಿದೆ. ಬಂಡವಾಳ ಶೇಖರಣೆ (Capital Formation) ಹಿಂದೆ ಬಿದ್ದಿದೆ. ಲಾಭದ ಮಟ್ಟವನ್ನು ಮೊದಲಿನಂತೆಯೇ ಸರಿತೂಗುವ ದೃಷ್ಟಿ ಯಿಂದ ಖಾಸಗೀ ಉದ್ಯಮಗಳು ಕೆಲಸಗಾರರನ್ನು ತೆಗೆಯುವುದರಿಂದ ನಿರುದ್ಯೋಗ ಹೆಚ್ಚುತ್ತಿದೆ. ಹೀಗಾಗಿ, ಖಾಸಗೀ ಕ್ಷೇತ್ರಸಮಸ್ಯೆಗಳನ್ನು ಬಗೆ ಹರಿಸುವುದರ ಬದಲು ಅದೇ ಒಂದು ಬಗೆಹರಿಯದ ಸಮಸ್ಯೆಯಾಗಿದೆ. ಎರಡನೆಯದಾಗಿ. ಉಲ್ಬಣಗೊಳ್ಳುತ್ತಿರುವ ಆರ್ಥಿಕ ಪರಿಸ್ಥಿತಿಯನ್ನು ತಡೆಗಟ್ಟಲು ಬಂಡವಾಳಶಾಹಿ ಸರ್ಕಾರ ಹೆಚ್ಚು ಹೆಚ್ಚಾಗಿ ಆರ್ಥಿಕ ಕ್ಷೇತ್ರದ ಎಲ್ಲ ಕಡೆಗಳಲ್ಲೂ ಪ್ರವೇಶಿಸುತ್ತಿದೆ. ಖಾಸಗೀ ಆರ್ಥಿಕ ಕ್ಷೇತ್ರದ ಮೇಲೆ ಹೆಚ್ಚು ಹೆಚ್ಚು ನಿರ್ಬಂಧಗಳು, ಹತೋಟಿ ಮತ್ತು ಕಟ್ಟಕಡೆಯದಾಗಿ ಖಾಸಗೀ ಉದ್ಯಮಗಳ ವಶೀಕರಣ ಅಥವಾ ಮೇಲ್ವಿಚಾರಣೆ ಇವುಗಳು ಅತ್ಯಗತ್ಯವಾಗುತ್ತಿವೆ. [1]

ಆದರೆ ಸ್ವಾಮ್ಯಕ್ಕೆ ರಕ್ಷಣೆಕೊಡಲಾಗಿದೆ ಎಂದೂ, ಅದು ಮೂಲಭೂತ ಹಕ್ಕೆಂದೂ ಸಾರಿ ಅಧಿಕಾರಕ್ಕೆಬಂದ ಸರ್ಕಾರಗಳು ಉತ್ಪಾದನಾ ಸಾಧನಗಳ ರಾಷ್ಟ್ರೀಕರಣವನ್ನು ಬಯಸುವುದಿಲ್ಲ. ಆದುದರಿಂದ ಸ್ವಾಮ್ಯಕ್ಕೆ

(1) ಭಾರತದ ಆರ್ಥಿಕನೀತಿ 'ಮಧ್ಯಮಾರ್ಗ' ದ ನೀತಿಯಾಗಿದೆ. ಖಾಸಗೀ ಉದ್ಯಮಗಳು ಸುವ್ಯವಸ್ಥಿತವಾಗಿ ಕೆಲಸಮಾಡುವಂತೆ ಮಾಡಲು ಸರ್ಕಾರ ಅವು ಗಳ ಮೇಲ್ವಿಚಾರಕನಾಗಿ ಪ್ರವೇಶಮಾಡುತ್ತಲಿದೆ. ಉದಾಹರಣೆಗೆ ಸರ್ಕಾರ ಶೋಲಾಪುರದ ಮಿಲ್ಲುಗಳ ಮೇಲ್ವಿಚಾರಣೆಯನ್ನು ವಹಿಸಿಕೊಂಡಿತು. ಪ್ರತಿ ಬಂಧಕಗಳನ್ನು ಸಂವಿಧಾನಕ್ಕೆ ತಿದ್ದುಪಡಿ ಸೂಚಿಸುವುದರ ಮೂಲಕ ಬಗೆಹರಿ ಸಿದೆ. ಈ ತಿದ್ದುಪಡಿಯನ್ನು ಭಾರತದ ಸಂವಿಧಾನದ 31 ನೇ ವಿಧಿಗೆ (ಸ್ವತ್ತಿನ ಅಧಿ ಕಾರ) ಭಾರತ ಸಂವಿಧಾನದ ನಾಲ್ಕನೇ ತಿದ್ದುಪಡಿ ಶಾಸನದರೀತ್ಯಾ ತರಲಾಗಿದೆ (1955).

ಧಕ್ಕೆ ಬರದ ರೀತಿಯಲ್ಲಿ ಸರ್ಕಾರ ಆರ್ಥಿಕ ಸಮಸ್ಯೆಯನ್ನು ಬಗೆಹರಿಸ ಬೇಕಾಗಿದೆ. "ಮಧ್ಯಮ ಮಾರ್ಗ"ದ ಆರ್ಥಿಕ ನೀತಿ (The Middle way or Mixed Economy) ಬಂಡವಾಳವರ್ಗ ಮತ್ತು ಕಾರ್ಮಿಕವರ್ಗದವರ ಕಣ್ಣೊರಸುವುದಕ್ಕೆ ಉಳಿದಿರುವ ಕೊನೆಯ ಸಾಧನವಾಗಿದೆ. ಒಂದುಕಡೆ ಸರ್ಕಾರೀ ಉದ್ಯಮಗಳ ಸ್ಥಾಪನೆಯ ಮೂಲಕ ಮತ್ತು ಕೆಲವು ಖಾಸಗೀ ಉದ್ಯಮಗಳ ರಾಷ್ಟ್ರೀಕರಣದ ಮೂಲಕ ಸಮಾಜವಾದೀ ಸಮಾಜದ ಸ್ಥಾಪನೆ (Socialistic Society) ಸರ್ಕಾರದ ಗುರಿ ಎಂದು ಶೋಷಿತವರ್ಗಕ್ಕೆ ತಿಳಿಸುತ್ತದೆ—(ಸರ್ಕಾರೀ ಕ್ಷೇತ್ರ: Public Sector). ಇನ್ನೊಂದುಕಡೆ ಸಮಾಜವಾದೀ ಸಮಾಜ ದಲ್ಲಿ ಖಾಸಗೀ ಉದ್ಯಮಕ್ಕೂ ಖಾಸಗೀ ಸ್ವಾಮ್ಯಕ್ಕೂ ಚ್ಯುತಿಬರುವುದಿಲ್ಲ ವೆಂದು ಬಂಡವಾಳವರ್ಗಕ್ಕೆ ಭರವಸೆ ಕೊಡುತ್ತದೆ—(ಖಾಸಗೀ ಕ್ಷೇತ್ರ : Private Sector). ಬಂಡವಾಳಶಾಹಿ ವ್ಯವಸ್ಥೆಯ ನೈಜಸ್ವರೂಪವನ್ನೂ ಮತ್ತು ಶೋಷಣೆಯನ್ನೂ ಮರೆಮಾಚಲು ಯತ್ನಿಸುವ ಸರ್ಕಾರಗಳ ನೀತಿ ಎಲ್ಲಾ ಇದೇ ಆಗಿದೆ. ಪರಿಹಾರದ ಮಾರ್ಗವೆಂದು ಹೇಳಲಾದ "ಮಧ್ಯಮಮಾರ್ಗದ" ಮರೆಯಲ್ಲಿ ಜನಸಮುದಾಯದ ಶೋಷಣೆಯನ್ನು ಬಂಡವಾಳವರ್ಗ ಮುಂದುವರಿಸಲು ಸಾಧ್ಯಮಾಡಿಕೊಂಡಿದೆ. ಖಾಸಗೀ ಉದ್ಯಮಗಳು ಕುಸಿದುಬಿದ್ದ ಹಾಗೆಲ್ಲಾ ಸರ್ಕಾರವೇ ಅವುಗಳ ಮೇಲ್ವಿಚಾ ರಣೆಯನ್ನು ವಹಿಸಿಕೊಂಡು (State Capitalism) ಬಂಡವಾಳವರ್ಗದ ಪರವಾಗಿ ಶೋಷಣೆಮಾಡುವಂತೆ ಆಗಿದೆ.

ಇಂತಹ ವಿರೋಧಾಭಾಸಗಳಿಂದ ಕೂಡಿರುವ ಆರ್ಥಿಕ ನೀತಿಯಿಂದ ಬಂಡವಾಳಶಾಹಿ ರಾಷ್ಟ್ರಗಳ ಆರ್ಥಿಕ ಪರಿಸ್ಥಿತಿ ದಿನೇ ದಿನೇ ಹದಗೆಡುತ್ತಿರು ವುದರಲ್ಲಿ ಆಶ್ಚರ್ಯವೇನೂ ಇಲ್ಲ. "ಮಧ್ಯಮಮಾರ್ಗ" ದ ಮೂಲಕ ನೊಂದ ಜನಸಮುದಾಯವನ್ನು ಬಹುಕಾಲ ವಂಚಿಸುವುದು ಬಂಡವಾಳ ಶಾಹಿ ಸರ್ಕಾರಗಳಿಗೆ ಅಸಾಧ್ಯವಾಗಿದೆ. ಸಮಾಜವಾದೀ ಸಮಾಜದ ಸ್ಥಾಪನೆ ಮತ್ತು ಖಾಸಗೀ ಸ್ವಾಮ್ಯದ ರಕ್ಷಣೆ ಎರಡೂ ಏಕಕಾಲದಲ್ಲಿ ಆಗ ಬೇಕಾಗಿದೆ !

ಬಂಡವಾಳವರ್ಗದ ಪ್ರತಿಕ್ರಿಯೆ ಏನು ? ಕುಸಿದು ಬೀಳುತ್ತಿರುವ ಬಂಡವಾಳಶಾಹಿ ವ್ಯವಸ್ಥೆಯನ್ನು ಉಳಿಸಿಕೊಳ್ಳಲು ಅಲ್ಲ ಸಲ್ಲದ ಮಾರ್ಗಗಳನ್ನು

ಬಂಡವಾಳವರ್ಗ ಹುಡುಕಿದೆ. ಎಲ್ಲೆಲ್ಲಿ ಬಂಡವಾಳಶಾಹಿ ವ್ಯವಸ್ಥೆಗೆ ಅಪಾಯ ಸಂಭವಿಸಿರುವ ಪರಿಸ್ಥಿತಿಗಳು ಬಂದಿವೆಯೋ ಅಲ್ಲೆಲ್ಲಾ ಸಾಧ್ಯವಾದಷ್ಟು ಮುಂಜಾಗ್ರತಾ ರಕ್ಷಣಾ ಕ್ರಮಗಳನ್ನು ಕೈಗೊಂಡಿದೆ. ರಾಜ್ಯಶಕ್ತಿ ಬಂಡವಾಳವರ್ಗದಿಂದ ಕೈತಪ್ಪದ ರೀತಿಯಲ್ಲಿ ಚುನಾವಣೆಗಳನ್ನು ಹಣ ಮತ್ತು ಪ್ರಚಾರಗಳಿಂದ ಅಣುಕು ಚುನಾವಣೆಗಳನ್ನಾಗಿ ಪರಿವರ್ತಿಸಿದೆ. ಎಲ್ಲಿ ವಾಮಪಕ್ಷಗಳಿಗೆ ಬಹುಮತ ದೊರಕುವ ಸಂಭವವಿದೆಯೋ ಅಲ್ಲೆಲ್ಲಾ ವಿಘ್ನಗಳನ್ನು ತಂದು ವಾಮಪಕ್ಷಗಳು ಅಧಿಕಾರಕ್ಕೆ ಬರದಹಾಗೆ ಮಾಡಿದೆ. ಎಲ್ಲಿ ವಾಮಪಕ್ಷದ ಗೆಲವು ಅನಿವಾರ್ಯವೋ ಅಂತಹ ಕಡೆಗಳಲ್ಲಿ ಪ್ರಜಾಸತ್ತೆಗೆ ಧಕ್ಕೆಬಂದಿದೆ ಎಂಬ ಬೊಬ್ಬೆಯನ್ನೆಬ್ಬಿಸಿ ಒಳ ಯುದ್ಧವನ್ನೋ ಅಥವಾ ಸ್ವಾಮ್ಯಪಕ್ಷದ ಸರ್ವಾಧಿಕಾರೀ ಆಡಳಿತವನ್ನೋ ತರಲು ಹಿಂಜರಿದಿಲ್ಲ. ಎರಡನೇ ಮಹಾಯುದ್ಧಾನಂತರ ಫ್ರಾನ್ಸ್, ಇಟಲಿ, ಗ್ರೀಸ್, ಗ್ವಾಟೆಮಾಲಾ, ಇರಾನ್, ಸ್ಯೂಗಿನಿ, ಇತ್ಯಾದಿ ದೇಶಗಳಲ್ಲಿ[1] ನಡೆದಿರುವ ವಿದ್ಯಮಾನಗಳು ಬಂಡವಾಳವರ್ಗದ ವರ್ತನೆಗೆ ಸಾಕ್ಷಿಯಾಗಿವೆ.

---

(1) ಯುದ್ಧಾನಂತರ ಗ್ರೀಸ್ ದೇಶದಲ್ಲಿ ಆರ್ಥಿಕ ಕ್ರಾಂತಿ ಸನ್ನಿಹಿತವಾಗಿತ್ತು. ಅಮೆರಿಕಾ ಮತ್ತು ಬ್ರಿಟಿಷ್ ಬಂಡವಾಳಶಾಹಿ ರಾಷ್ಟ್ರಗಳ ನೆರವು ಪಡೆದು ದೇಶೀಯ ಬಂಡವಾಳವರ್ಗ ಅಂತರಯುದ್ಧವನ್ನು ಪ್ರಾರಂಭಿಸಿತು. ಕ್ರಾಂತಿ ಪರಾಜಯ ಹೊಂದಿತು. ಸ್ವಾಮ್ಯವರ್ಗದ ಸರ್ಕಾರ ಅಧಿಕಾರಕ್ಕೆ ಬಂದಿತು. ಗ್ವಾಟೇಮಾಲಾ ದೇಶದ ಜನಪ್ರಿಯ ಸರ್ಕಾರ ರಾಷ್ಟ್ರದ ಹಿತದೃಷ್ಟಿಯಿಂದ ಅಮೆರಿಕದ ಬಂಡವಾಳಸ್ಥರ ಭೂ ಹಿತಗಳಿಗೆ ಧಕ್ಕೆತರುವ ಕ್ರಮಗಳನ್ನು ಕೈಗೊಂಡಿತು. ಅಮೆರಿಕ ಸರ್ಕಾರ ನೇರವಾಗಿ ಸ್ವತಂತ್ರ ರಾಷ್ಟ್ರದ ಒಳಾಡಳಿತ ವಿಷಯಗಳಲ್ಲಿ ಪ್ರವೇಶಮಾಡಿ ಜನಪ್ರಿಯ ಸರ್ಕಾರ ಉರುಳುವಂತೆ ಮಾಡಿತು. ಅಮೆರಿಕದ ಬಂಡವಾಳಶಾಹಿ ಹಿತಗಳೊಡನೆ ಸಖ್ಯದಿಂದಿರುವ ಸರ್ಕಾರವನ್ನು ಅಧಿಕಾರಕ್ಕೆ ತಂದಿತು. ಇರಾನ್ ದೇಶದ ಮೊಸಾಡಿಕ್ ಸರ್ಕಾರ ಬ್ರಿಟಿಷ್ ಎಣ್ಣೆಹಿತಗಳಿಗೆ ಧಕ್ಕೆತರುವ ಕ್ರಮಗಳನ್ನು ಕೈಗೊಂಡಿತು. ಬ್ರಿಟಿಷ್ ಸರ್ಕಾರ ದೇಶೀಯ ಪ್ರತಿಗಾಮಿ ಶಕ್ತಿಗಳೊಡನೆ ಸಖ್ಯಬೆಳಸಿ ಮೊಸಾಡಿಕ್‌ಸರ್ಕಾರ ಉರುಳುವಂತೆ ಮಾಡಿತು. ಪ್ರತಿಗಾಮಿ ಸರ್ಕಾರ ಅಧಿಕಾರಕ್ಕೆ ಬಂದಿತು. ಸ್ಯೂಗಿನಿ ಇಂಗ್ಲೆಂಡ್‌ದೇಶದ ವಸಾಹತು ಪ್ರವೇಶ. ವಾಮಪಕ್ಷ ಅಧಿಕಾರದಲ್ಲಿದ್ದಿತು. ಸಮಾಜವಾದೀ ಕಾರ್ಯಕ್ರಮವನ್ನು ಸರ್ಕಾರ ಕೈಗೊಂಡಿತು. ಬ್ರಿಟಿಷ್ ಸರ್ಕಾರ ವಾಮಪಕ್ಷದ ಸರ್ಕಾರವನ್ನು ಅಧಿಕಾರದಿಂದ ಉಚ್ಚಾಟನೆಗೊಳಿಸಿತು.

ಯಾವ ಸಂದರ್ಭದಲ್ಲೂ ಸ್ವಯಂ ಪ್ರೇರಿತವಾಗಿ ತನಗೆ ಸೇರಿರುವ ಸ್ವಾಮ್ಯವನ್ನು ಬಂಡವಾಳವರ್ಗ ಬಿಟ್ಟುಕೊಟ್ಟಿಲ್ಲ. ಕಟ್ಟಕಡೆಯವರೆಗೂ ಸ್ವಾಮ್ಯದ ರಕ್ಷಣೆಗಾಗಿ ಹೋರಾಡಿದೆ. ಆಧುನಿಕ ಸಮಾಜವಾದದ ಪ್ರತಿಪಾದಕರಾದ ಮಾರ್ಕ್ಸ್-ಏಂಗೆಲ್ಸರು ನಾಶಹೊಂದುತ್ತಲಿರುವ ಬಂಡವಾಳ ವರ್ಗ ಹೂಡುವ ಆಟಾಟೋಪಗಳನ್ನು ವಿಹಂಗಮವಾಗಿ ವಿವರಿಸಿದ್ದಾರೆ. ಮೊಟ್ಟಮೊದಲನೆಯದಾಗಿ, ಸಮಾಜವಾದದ ಆಗಮನದಿಂದ ಸ್ವಾತಂತ್ರ್ಯಕ್ಕೆ ಚ್ಯುತಿಬರುತ್ತದೆಂದು ಜನಸಮುದಾಯದಲ್ಲಿ ಸ್ವಾಮ್ಯವರ್ಗವು ದಿಗಿಲನ್ನೆಬ್ಬಿಸುತ್ತದೆ. ಮಾನವ ವ್ಯಕ್ತಿ ಜನ್ಮತಃ ಸ್ವಾತಂತ್ರ್ಯ ಪ್ರಿಯನೆಂದೂ, ಸಮಾಜವಾದೀ ವ್ಯವಸ್ಥೆ ಸರ್ವಾಧಿಕಾರೀ ಸರ್ಕಾರವನ್ನು ತರುವುದರಿಂದ ಪ್ರಜಾಸತ್ತೆಗೆ ಧಕ್ಕೆ ಬರುತ್ತದೆಂದೂ, ವಾಕ್‌ಸ್ವಾತಂತ್ರ್ಯ, ಸಭಾ ಸ್ವಾತಂತ್ರ್ಯ, ಇತ್ಯಾದಿಗಳೆಲ್ಲವೂ ಮಾಯವಾಗುತ್ತವೆಂದೂ ಅಪಪ್ರಚಾರ ಮಾಡುತ್ತದೆ. ಆದರೆ ಕಾರ್ಮಿಕವರ್ಗದ ಏಕೈಕ ಪ್ರಭುತ್ವದ ಸರ್ಕಾರ ಏತಕ್ಕಾಗಿ ಬರುತ್ತದೆ, ಅದರ ಸ್ವರೂಪವಾದರೂ ಏನು, ಮತ್ತು ಯಾವ ವರ್ಗದಮೇಲೆ ಏಕೈಕ ಪ್ರಭುತ್ವವನ್ನು ಘೋಷಿಸಲಾಗುತ್ತದೆ ಎಂಬ ವಿಷಯುಗಳನ್ನು ಜನಸಮುದಾಯದಿಂದ ಮರೆಮಾಚುತ್ತದೆ. ಒಂದುವೇಳೆ, ಬಂಡವಾಳವರ್ಗದ ಒಣ ಘೋಷಣೆಗಳಿಂದ ಕಾರ್ಮಿಕವರ್ಗ ಮೋಸ ಹೋಗದೆ ಚಳವಳಿಯನ್ನು ಮುಂದುವರಿಸುವುದಾದರೆ, ಬಂಡವಾಳವರ್ಗವೇ ತನ್ನ ಏಕೈಕ ಸರ್ವಾಧಿಕಾರವನ್ನು ಘೋಷಿಸಿ ಪ್ರಜಾಸತ್ತೆಯನ್ನು ದಮನ ಮಾಡುವ ವಿಷಯವನ್ನು ಮಾತ್ರ ಬಚ್ಚಿಡುತ್ತದೆ. ಎರಡನೆಯದಾಗಿ, ಸಮಾಜವಾದ ನಾಸ್ತಿಕ ಮತ್ತು ಅನೀತಿವಾದವೆಂದೂ, ಪರಲೋಕ ಚಿಂತನೆ, ದೇವರಲ್ಲಿ ಭಕ್ತಿ, ಆಧ್ಯಾತ್ಮಿಕ ಉನ್ನತಿ ಇವುಗಳಿಗೆ ಬದಲಾಗಿ ಕೇವಲ ಆರ್ಥಿಕ ವಿಷಯಕ್ಕೆ ಹೆಚ್ಚು ಗಮನ ಕೊಟ್ಟು ಜನರನ್ನು ಪಶುಜೀವನಕ್ಕೆ ಎಳೆಯಲೆತ್ನಿಸುತ್ತದೆಂದೂ ಪ್ರಚಾರ ಮಾಡುತ್ತದೆ ಆದರೆ, ಆಧ್ಯಾತ್ಮವನ್ನು ಚಿಮ್ಮುಟದಿಂದಲೂ ಸಹ ಮುಟ್ಟುವುದಕ್ಕೆ ಹೆದರುವ ಬಂಡವಾಳವರ್ಗ ಅಧ್ಯಾತ್ಮದ ಸೋಗಿನಲ್ಲಿ ಮಾಡಲಾಗುತ್ತಿರುವ ಅನುಚ್ಚಾರಣೀಯ ಕೃತ್ಯಗಳನ್ನು ಮರೆಮಾಚುತ್ತದೆ. ಯಾವ ಕೃಪೆಯೂ ದಯೆಯೂ ಇಲ್ಲದೆ, ಬಂಡವಾಳಶಾಹಿ ವ್ಯವಸ್ಥೆಯಲ್ಲಿ ನಡೆಯುತ್ತಿರುವ ಮತ್ತು ಇರುವ ಶೋಷಣೆ, ದಾರಿದ್ರ್ಯ, ಆರ್ತನಾದ, ಸ್ವಾರ್ಥ, ನಿರ್ಲಕ್ಷ್ಯ, ಇತ್ಯಾದಿಗಳನ್ನು ವ್ಯವಹಾರಪ್ರಪಂಚವೆಂದು ತಿಳಿಸುತ್ತದೆ. ಮೂರ

ನೆಯದಾಗಿ, ಸಮಾಜವಾದೀ ವ್ಯವಸ್ಥೆಯಲ್ಲಿ ವ್ಯಕ್ತಿಸ್ವಾತಂತ್ರ್ಯಕ್ಕೆ ಮತ್ತು ವ್ಯಕ್ತಿವಿಕಾಸಕ್ಕೆ ಚ್ಯುತಿ ಬರುತ್ತದೆಂದೂ, ಸಮಾಜವಾದೀ ಆರ್ಥಿಕವ್ಯವಸ್ಥೆಯಲ್ಲಿ ಎಲ್ಲರೂ ಇರುವೆಗಳಂತೆ ವ್ಯಕ್ತಿತ್ವವನ್ನು ಕಳೆದುಕೊಳ್ಳುವ ಪ್ರಸಂಗವಿದೆ ಎಂದೂ, ಆದುದರಿಂದ ಸಮಾಜವಾದವನ್ನು ದೂರವಿಡಬೇಕೆಂದೂ ಎಚ್ಚರಿಸುತ್ತದೆ. ಆದರೆ, ಆರ್ಥಿಕ ದುಃಸ್ಥಿತಿ, ಅಭದ್ರತೆ ಮತ್ತು ನಿರುದ್ಯೋಗದಿಂದ ನರಳುತ್ತಿರುವ ವ್ಯಕ್ತಿಗಳಿಗೆ, ದಿನವಹಿ ಬಂಡವಾಳಶಾಹಿ ವ್ಯವಸ್ಥೆಯ ಮತ್ಸ್ಯ ನ್ಯಾಯಕ್ಕೆ ಸಿಕ್ಕಿ ನುಚ್ಚುನೂರಾಗುತ್ತಿರುವ ಅನೇಕ ಸಂಸಾರಗಳಿಗೆ, ಯಾವ ಸ್ವಾತಂತ್ರ್ಯವೂ, ಅನೇಕವೇಳೆ ಉಣಲು ಒಂದು ತುತ್ತು ಅನ್ನವೂ ಸಹ ಇಲ್ಲವೆಂಬುದನ್ನು ತಿಳಿಸುವುದಿಲ್ಲ.

ಒಟ್ಟಿನಲ್ಲಿ, ಎರಡನೇ ಮಹಾಯುದ್ಧದ ನಂತರ ಸಮಾಜವಾದ ಹರಡದ ಹಾಗೆ ಬಂಡವಾಳಶಾಹಿ ಸರ್ಕಾರಗಳು ಶೀಘ್ರವಾಗಿ ಪ್ರತಿಕ್ರಮಗಳನ್ನು ಕೈಗೊಂಡಿವೆ. ಕೆಲವೆಡೆಗಳಲ್ಲಿ ಬಹು ಚಾಕಚಕ್ಯತೆಯಿಂದ ಅಧಿಕಾರಕ್ಕೆ ಬಂದ ಸುಧಾರಕ ಸಮಾಜವಾದೀ ಸರ್ಕಾರಗಳನ್ನು ಕಾಡಿಸಿ, ಅವು ತಮ್ಮ ಸುಧಾರಕ ತತ್ತ್ವಕ್ಕೇ ತಿಲಾಂಜಲಿ ಕೊಡುವಹಾಗೆ ಬಂಡವಾಳವರ್ಗ ಮಾಡಿದೆ. ಸುಧಾರಕ ಸಮಾಜವಾದೀ ಸರ್ಕಾರಗಳ ಧೋರಣೆಯೂ ಸಹ ಬಂಡವಾಳವರ್ಗಕ್ಕೆ ಸಹಾಯ ಮಾಡಿಕೊಟ್ಟಿದೆ.

ದೃಷ್ಟಾಂತಕ್ಕೆ, ಚುನಾವಣೆಗಳಲ್ಲಿ ಬಹುಮತ ಗಳಿಸಿ ಅಧಿಕಾರಕ್ಕೆ ಬಂದ ಇಂಗ್ಲಿಷ್ ಲೇಬರ್ ಪಕ್ಷ ಸಮಾಜವಾದವನ್ನು ತರಲು ಯತ್ನಿಸಿ ವಿಫಲವಾದ ಕಥೆ ಇದೆ. ನಿರ್ದಿಷ್ಟವಾದ ಸಮಾಜವಾದೀ ಕಾರ್ಯಕ್ರಮವನ್ನಿಟ್ಟುಕೊಂಡು ಶಾಸನದ ಮುಖಾಂತರ ಬಂಡವಾಳವರ್ಗವನ್ನು ನಾಶಮಾಡಿ, ಸಮಾಜವಾದೀ ವ್ಯವಸ್ಥೆಯನ್ನು ಇಂಗ್ಲೆಂಡ್ ದೇಶದಲ್ಲಿ ಸ್ಥಾಪಿಸಬಹುದಾಗಿತ್ತು. ಅದರ ಅಂಗವಾಗಿ ಸಮಾಜವಾದೀ ರಾಷ್ಟ್ರಗಳೊಡನೆ ಸ್ನೇಹ ಮತ್ತು ವ್ಯಾಪಾರ ಸಂಬಂಧಗಳನ್ನೂ, ಇಂಗ್ಲೆಂಡ್ ದೇಶಕ್ಕೆ ಸೇರಿರುವ ವಸಾಹತುಗಳ ಜನರಿಗೆ ಸ್ವಾತಂತ್ರ್ಯವನ್ನೂ ತರಬಹುದಾಗಿತ್ತು. ಆದರೆ ಇಂಗ್ಲಿಷ್ ಸುಧಾರಕ ಸಮಾಜವಾದಿಗಳ ಕಾರ್ಯಕ್ರಮವೇ ಬೇರೆಯದಾಗಿತ್ತು. ಸುಧಾರಕ ತತ್ತ್ವವನ್ನು ಅನುಸರಿಸಿ ಹೆಜ್ಜೆಹೆಜ್ಜೆಗೂ ಸ್ವಾಮ್ಯವನ್ನು ಮುಟ್ಟಲು ಲೇಬರ್ ಸರ್ಕಾರ ಹಿಂಜರಿಯಿತು. ಉತ್ಪಾದನಾ ಸಾಧನಗಳಲ್ಲಿ ಅತ್ಯಲ್ಪಭಾಗವನ್ನು, ಅಪಾರ ಪರಿಹಾರದ್ರವ್ಯವನ್ನು ತೆರುವುದರಮೂಲಕ

“ ರಾಷ್ಟ್ರೀಕರಣ ” ಮಾಡಲಾಯಿತು. ಬಂಡವಾಳವರ್ಗಕ್ಕೆ ತೆರಬೇಕಾದ ಪರಿಹಾರದ್ರವ್ಯ, ಅದರಮೇಲಿನ ಬಡ್ಡಿ ಮತ್ತು ಪರಿಹಾರ ದ್ರವ್ಯಕ್ಕೆಂದು ಬಂಡವಾಳವರ್ಗದಿಂದ ತೆಗೆದ ಸಾಲ ಮತ್ತು ಅದರ ಮೇಲಿನ ಬಡ್ಡಿಯನ್ನು ಕಾರ್ಮಿಕರೇ ತೀರಿಸುವಂತಾಯಿತು. ರಾಷ್ಟ್ರೀಕರಣವಾದ ಉದ್ಯಮಗಳನ್ನು (Nationalised Enterprises) ನಡೆಸಲು ನೇಮಿತವಾದ ಸಮಿತಿಗಳಲ್ಲಿ ಬಂಡವಾಳವರ್ಗದ ಪ್ರತಿನಿಧಿಗಳಿಗೆ ಅವಕಾಶವಿದ್ದು, ಸಾರ್ವಜನಿಕ ವೆಚ್ಚದಲ್ಲಿ ಖಾಸಗೀ ಉದ್ಯಮಗಳೂ ಮತ್ತು ಅನಾದರಣೆಯ ದೃಷ್ಟಿಯಿಂದ ರಾಷ್ಟ್ರೀಯ ಉದ್ಯಮಗಳೂ ನಡೆಸಲ್ಪಟ್ಟವು. ಈ ಕಾರಣದಿಂದ ರಾಷ್ಟ್ರೀಕರಣವಾದ ಉದ್ಯಮಗಳಲ್ಲಿ ನಷ್ಟ ಉಂಟಾಗಿ ರಾಷ್ಟ್ರೀಕರಣವಾದ ಉದ್ಯಮಗಳ ಅಸಮರ್ಪಕತೆಯ ಬಗ್ಗೆ ಬಂಡವಾಳವರ್ಗ ಸಾಕಷ್ಟು ಅಪಪ್ರಚಾರ ಮಾಡಿತು. ಒಟ್ಟಿನಲ್ಲಿ ರಾಷ್ಟ್ರೀಕರಣವಾದ ಉದ್ಯಮಗಳಿಂದ ಆದ ಪ್ರಯೋಜನವೆಂದರೆ ಬಂಡವಾಳವರ್ಗಕ್ಕೆ ಆದ ಪ್ರಯೋಜನ. ರಾಷ್ಟ್ರೀಕರಣವಾದ ಉದ್ಯಮಗಳನ್ನೇ ಬಂಡವಾಳವರ್ಗ ತನ್ನ ಪರಿಹಾರ ದ್ರವ್ಯಕ್ಕೆ ಠೇವಣಿಯನ್ನಾಗಿ ಹೊಂದಿತು. ಒಟ್ಟು ಗಂಟಿನಲ್ಲೇ ಪರಿಹಾರದ್ರವ್ಯವನ್ನು ಕೊಡುವುದು ಅಸಾಧ್ಯವಾಗಿ, ಮುಗಿಯದ ಈ ಪರಿಹಾರದ್ರವ್ಯಕ್ಕೆ ವರ್ಷಂಪ್ರತಿ ತೆರಬೇಕಾದ ಬಡ್ಡಿ ರಾಷ್ಟ್ರೀಕರಣವಾದ ಉದ್ಯಮಗಳಮೇಲೆ ಬಿದ್ದಿತು. ಪರಿಹಾರದ್ರವ್ಯಕ್ಕೆ ಹೊಣೆಯಾದ ಸರ್ಕಾರ ಬಂಡವಾಳವರ್ಗದ ಪರವಾಗಿ ರಾಷ್ಟ್ರೀಕರಣವಾದ ಉದ್ಯಮಗಳ ಉಸ್ತುವಾರಿನೋಡುವಂತಾಯಿತು. ವಾಸ್ತವಿಕವಾಗಿ ಕಾರ್ಮಿಕವರ್ಗಕ್ಕೆ ಯಾವ ಪ್ರಯೋಜನವಾಗಲೀ ಸುಧಾರಕ ಸಮಾಜವಾದಕ್ಕೆ ಕೀರ್ತಿಯಾಗಲೀ ಲಭಿಸಲಿಲ್ಲ.[1] ರಾಷ್ಟ್ರದ ವಿದೇಶಾಂಗ ನೀತಿಯಲ್ಲಿ ಲೇಬರ್ ಪಕ್ಷ ಕನ್ಸರ್‌ವೇಟಿವ್ ಪಕ್ಷ ಅನುಸರಿಸಿದ ನೀತಿಯನ್ನೇ ಅನುಸರಿಸಿತು. ರಷ್ಯಾದೊಡನೆ ಮೈತ್ರಿಯನ್ನು ಬೆಳಸಿ ಸಮಾಜವಾದೀ ರಂಗವನ್ನು ಬಲಪಡಿಸುವುದರ ಬದಲು ದ್ವೇಷವನ್ನು ಸಾಧಿಸಿತು; ಅಮೆರಿಕದ ಸಖ್ಯವನ್ನು ಆಶಿಸಿತು. ಲೇಬರ್ ಸರ್ಕಾರ ಹಾಗೆ ಆಶಿಸುವುದಕ್ಕೆ ಕಾರಣಗಳೂ ಇದ್ದವು.

---

(1) See–ಕಮ್ಯೂನಿಸ್ಟ್ ರಿವ್ಯೂ, ಜೂನ್ 1951, ಜುಲೈ 1953

ಲೇಬರ್‌ಪಕ್ಷ ತಂದ ರಾಷ್ಟ್ರೀಕರಣದ ಮಸೂದೆಗಳ ಬಗ್ಗೆ ಬಂಡವಾಳವರ್ಗ ಗಾಬರಿಯಾಗುವುದು ಹೋಗಿ ಸಂತಸದಿಂದಿದ್ದಿತು. ಸಮಾಜವಾದ ಮಕ್ಕಳ ಮೂರು ದಿವಸದ ಆಟಗುಳಿಯಾಗಿ, ಲೇಬರ್ ಸರ್ಕಾರ ಸಮಾಜವಾದೀ ಹಾದಿಯನ್ನು ಬಿಟ್ಟುಬಿಡುವುದೆಂದು ಬಂಡವಾಳವರ್ಗ ಖಚಿತ ಭರವಸೆಯಿಂದ ಕೂಡಿದ್ದಿತು. ಬಂಡವಾಳವರ್ಗ ಅಂದಹಾಗೆಯೇ ಸುಧಾರಕ ಲೇಬರ್‌ಪಕ್ಷ ನಡೆದುಕೊಂಡಿತು. ಲೇಬರ್ ಸರ್ಕಾರ "ಮಧ್ಯಮ ಮಾರ್ಗ"ವನ್ನು ಅನುಸರಿಸಿತು. ಅಪಾರ ಪರಿಹಾರದ್ರವ್ಯವನ್ನು ಕೊಡುವುದರ ಮೂಲಕ ನಡೆದ ಅಲ್ಪ ಸ್ವಲ್ಪ ರಾಷ್ಟ್ರೀಕರಣವನ್ನು ಬಿಟ್ಟರೆ ಉಳಿದಿದ್ದೆಲ್ಲವೂ ಖಾಸಗೀ ಕ್ಷೇತ್ರಕ್ಕೆ ಒಳಪಟ್ಟು ಲಾಭಕ್ಕಾಗಿ ನಡೆಯುವ ಉತ್ಪಾದನೆಯಾಯಿತು. ಈ ಖಾಸಗೀ ಕ್ಷೇತ್ರದಲ್ಲಿ ಉತ್ಪಾದನಾಧನಗಳಲ್ಲಿರುವ ಖಾಸಗೀ ಸ್ವಾಮ್ಯ ಮತ್ತು ಉತ್ಪಾದನೆ ಇವುಗಳ ರಾಷ್ಟ್ರೀಕರಣದ ಗೋಜಿಗೆ ಹೋಗದೆ, ಹತೋಟಿಗಳ ಮೂಲಕ ಸಂಪತ್ತಿನ ಹಂಚಿಕೆಯ ಕೆಲಸಕ್ಕೂ, ಹಾಗೂ ಸಮಾಜವಾದೀ ವ್ಯವಸ್ಥೆಯ ಸ್ಥಾಪನೆಗೂ ಸರ್ಕಾರ ಕೈಹಾಕಿತು.[1] ಸಮಾಜವಾದೀ ಹಾದಿಗೆ ಬಂಡವಾಳವರ್ಗ ಅಸಹಕಾರವನ್ನು ಸೂಚಿಸಿತು. ಇವುಗಳ ಪರಿಣಾಮವಾಗಿ ದೇಶದ ಆರ್ಥಿಕ ಪರಿಸ್ಥಿತಿ

(1) ಬಂಡವಾಳಶಾಹೀ ಅರ್ಥಶಾಸ್ತ್ರಜ್ಞರು ಸರಬರಾಯಿಗೂ ಗಿರಾಕಿಗೂ ಇರುವ ಸಂಬಂಧದ ನಿಯಮಗಳು (Laws of Supply and Demand) ಸಂಪತ್ತಿನ ವಿನಿಯೋಗವನ್ನು ಪ್ರತಿವ್ಯಕ್ತಿ ಸರಿಪ್ರಮಾಣದಲ್ಲಿ ಹೊಂದುವಂತೆ ಮಾಡುತ್ತವೆ ಎಂದು ನಂಬಿದ್ದರು ಪ್ರಾರಂಭದಲ್ಲಿ ಈ ನಿಯಮದ ಸತ್ಯವನ್ನು ಅಂಗೀಕರಿಸಿದ ಜಾನ್ ಸ್ಟೂವರ್ಟ್ ಮಿಲ್ ಎಂಬ ಅರ್ಥಶಾಸ್ತ್ರಜ್ಞನು ನಿಯಮಕ್ಕೆ ವ್ಯತಿರಿಕ್ತವಾಗಿದ್ದ ಆರ್ಥಿಕವ್ಯವಸ್ಥೆಯನ್ನು ಕಂಡನು. ಫ್ರಾಡೊ ಎಂಬ ಫ್ರೆಂಚ್ ಸಮಾಜವಾದಿಯ ಪ್ರಭಾವಕ್ಕೆ ಒಳಗಾಗಿ ಸಂಪತ್ತಿನ ವಿನಿಯೋಗವನ್ನ (Distribution) ಸರಿಪಡಿಸುವುದು ಅವಶ್ಯಕವಾಗಿದೆ ಎಂದು ತಿಳಿಸಿದನು. ಮಿಲ್ ಫೇಬಿಯನ್ನರ ಮೇಲೆ ತುಂಬಾ ಪ್ರಭಾವವನ್ನು ಬೀರಿದನು. (ಪುಟ ೧೧೫ ನೋಡಿ.)

ಮಿಲ್ಲನ ವಾದ ಫೇಬಿಯನ್ನರಿಗೆ ಮಾತ್ರ ಹೊಸದಾಗಿತ್ತು. ಆರಿಸ್ಟಾಟಲ್ ಮೊದಲುಗೊಂಡು ಅನೇಕರು ಸಮಾಜದ ಭದ್ರತೆಯ ದೃಷ್ಟಿಯಿಂದ ಕಡುಬಡವರೂ ಶ್ರೀಮಂತರೂ ಇರುವುದು ಒಳ್ಳೆಯದಲ್ಲವೆಂದು ತಿಳಿಸಿದ್ದರು. ಅಶಾಂತಿಯನ್ನೂ ರಾಜಕೀಯ ವಿಪ್ಲವಗಳನ್ನೂ ತಡೆಗಟ್ಟುವುದಕ್ಕೆ ವರ್ಗದಂತರವನ್ನು ಕಡಿಮೆ ಮಾಡುವುದೂ ಮಧ್ಯಮವರ್ಗವನ್ನು ವೃದ್ಧಿಗೊಳಿಸುವುದೂ ಸಾಧನಗಳೆಂದು ಸೂಚಿಸಿದ್ದರು.

ವಿಷಮಿಸಿತು ; ಉತ್ಪಾದನೆ ಕಡಿಮೆಯಾಗತೊಡಗಿತು. ರಫ್ತಿನಿಂದಲೇ ಜೀವಿಸಬೇಕಾಗಿರುವ ದೇಶ ಅಮೆರಿಕದೊಡನೆ ಪೈಪೋಟಿ ನಡೆಸುವುದು ಅಸಾಧ್ಯವಾಯಿತು. ಸರ್ಕಾರದ ಆದಾಯ-ಖರ್ಚು ಸರಿತೂಗದಾದವು. ಆರ್ಥಿಕ ಪರಿಸ್ಥಿತಿಯನ್ನು ಸುಧಾರಿಸಲು ಲೇಬರ್‌ಪಕ್ಷ ಅಮೆರಿಕದ ಬಳಿ ಸಾಲಕ್ಕೆನಿಂತಿತು ; ತೆರಲಾದ ಬಡ್ಡಿಯ ದರವನ್ನೂ ಸಾಲವನ್ನೂ ರಾಷ್ಟ್ರದ ಮೇಲೆ ಗುಡ್ಡೆಹಾಕಿತು. ಇಷ್ಟಾದರೂ ಆರ್ಥಿಕ ಪರಿಸ್ಥಿತಿ ಉತ್ತಮಗೊಳ್ಳುವ ಸೂಚನೆಗಳೇ ಕಂಡುಬರಲಿಲ್ಲ. ಸಾಲಕ್ಕೆ ಪ್ರತಿಯಾಗಿ ರಾಷ್ಟ್ರದ ಒಳಾಡಳಿತ ಮತ್ತು ಹೊರಾಡಳಿತಗಳಲ್ಲಿ ಪ್ರವೇಶಿಸುವ ಹಕ್ಕನ್ನು ಅಮೆರಿಕ ಪಡೆಯಿತು. ಸ್ವಾಮ್ಯದಮೇಲೆ ಧಾಳಿಯನ್ನು ನಿಲ್ಲಿಸುವುದಾದರೆ, ಸಮಾಜವಾದೀ ರಂಗದ ವಿರುದ್ಧ ಲೇಬರ್ ಸರ್ಕಾರ ನಿಲ್ಲುವುದಾದರೆ, ಸಹಾಯದೊರಕುವುದೆಂದು ಅಮೆರಿಕ ಸರ್ಕಾರ ಖಚಿತಪಡಿಸಿತು.

ಮಿಗಿಲಾಗಿ ಲೇಬರ್ ಸರ್ಕಾರ ಅನುಸರಿಸಿದ ವಸಾಹತಿನ ನೀತಿಗೆ ಅಮೆರಿಕದ ಸ್ನೇಹ ಅತ್ಯಾವಶ್ಯಕವಾಗಿತ್ತು. ವಸಾಹತುಗಳು ಇಂಗ್ಲೆಂಡಿನ

ಆದುದರಿಂದ ಶ್ರೀಮಂತವರ್ಗದ ಮೇಲೆ ಹೆಚ್ಚು ವರಮಾನ ತೆರಿಗೆ ಸಾಯುವ ತೆರಿಗೆ, ವರಮಾನದ ಮತ್ತು ಸ್ವಾಮ್ಯದ ಪರಿಮಿತಿ, ಬಡವರಿಗೆ ಕನಿಷ್ಠ ಕೂಲಿ, ಕೆಲಸದ ಭರವಸೆ, ವಿಮೆ, ಇತ್ಯಾದಿಗಳ ಮೂಲಕ ವಿನಿಯೋಗವನ್ನು ಸರಿಪಡಿಸುವುದಾದರೆ ಎರಡೊಂದು ಕೆಲಸ ಸಾಧಿಸಿದ ಹಾಗೆ ಆಗುತ್ತದೆ. ವರ್ಗದಂತರ ಸರಿತೂಗಿ ಮಧ್ಯಮವರ್ಗ ಹೆಚ್ಚುತ್ತದೆ ; ವರ್ಗವೈಷಮ್ಯವೂ ಕಾರ್ಮಿಕ ಚಳವಳಿಯೂ ಶಮನಹೊಂದುತ್ತವೆ. ಇನ್ನು ಮಾರ್ಕ್ಸ್‌ವಾದಕ್ಕೆ ಸ್ಥಳವೆಲ್ಲಿ? ಸಕಲ ವರ್ಗಗಳ ಹಿತಸಂರಕ್ಷಣೆಯೂ, ಕ್ಷೇಮಾಭ್ಯುದಯ ಚಿಂತನೆಯೂ ನಡೆಯುತ್ತಿರುವಾಗ ಉತ್ಪಾದನಾ ಸಾಧನಗಳ ಸಮಾಜೀಕರಣದ ಪ್ರಮೇಯವೆಲ್ಲಿ? ಒಂದೇ ಕಲ್ಲಿನಿಂದ ಎರಡು ಹಕ್ಕಿಗಳು! ಖಾಸಗೀ ಸ್ವಾಮ್ಯದ ರಕ್ಷಣೆಯೂ ಆಯಿತು, ಕಾರ್ಮಿಕ ವರ್ಗವನ್ನು ಸಂತೈಸಿದ ಹಾಗೂ ಆಯಿತು. ಉತ್ಪಾದನಾ ಸಾಧನಗಳನ್ನು ಸಮಾಜೀಕರಣಮಾಡದೆ ಆರ್ಥಿಕ ಸಮಾನತೆ ಎಷ್ಟು ಸುಲಭವಾಗಿ ಬರಲಿದೆ. ಇದೇ ಸಮಾಜವಾದವಲ್ಲವೆ?

ಭಾರತೀಯ ಸಂಸ್ಕೃತಿ ವರ್ಗದಂತರವನ್ನು ಸರಿತೂಗುವುದಕ್ಕೆ ದಾನ ಧರ್ಮಗಳನ್ನು ನಿರ್ಮಿಸಿತ್ತೆಂದು ಕೆಲವರು ಹೇಳುತ್ತಾರೆ. ಭಾರತದಲ್ಲಿ ಈಗ ಪ್ರಚಾರದಲ್ಲಿರುವ ಸರ್ವೋದಯ ಸಿದ್ಧಾಂತ ದಾನ ಧರ್ಮಗಳ ಮಹತ್ವವನ್ನು ತಿಳಿಸುತ್ತಲಿದೆ.

ಉತ್ಪಾದನಾಕ್ರಮವನ್ನು ನಿರ್ಲಕ್ಷಿಸಿ ವಿನಿಯೋಗಕ್ಕೆ ಗಮನ ಕೊಡುವ ಸಮಾಜವಾದವನ್ನು ಮಾರ್ಕ್ಸ್-ಏಂಗೆಲ್ಸರು ಅಸಹ್ಯದ ಸಮಾಜವಾದವೆಂದು (Vulgar Socialism) ಕರೆದರು. (ಮಾರ್ಕ್ಸ್-ಏಂಗೆಲ್ಸರ ಆರಿಸಲ್ಪಟ್ಟ ಬರೆಹಗಳು. ಭಾಗ 2, ಪುಟ 23, ಸಂಪುಟ 1951.)

ಬಂಡವಾಳಶಾಹಿ ವ್ಯವಸ್ಥೆಗೆ ಮಾರುಕಟ್ಟೆಗಳಾಗಿದ್ದುವಲ್ಲದೆ, ಅವುಗಳ ಶೋಷಣೆಯೇ ಇಂಗ್ಲೇಂಡಿನ ಸಂಪತ್ತು ಮತ್ತು ಅಭಿವೃದ್ಧಿಗೂ, ಬಂಡವಾಳವರ್ಗದ ಧಾರಾಳ ಮನೋಭಾವಕ್ಕೂ (Liberalism) ಮತ್ತು ಕಾರ್ಮಿಕವರ್ಗವನ್ನು ಅಲ್ಪಸ್ವಲ್ಪ ಪರಿಹಾರಗಳ ಮೂಲಕ ಸಮಾಜವಾದೀ ಚಳವಳಿಯಿಂದ ದೂರ ವಿಡುವುದಕ್ಕೂ ಕಾರಣವಾಗಿದ್ದವು. ಲೇಬರ್ ಪಕ್ಷ ಅಧಿಕಾರಕ್ಕೆ ಬಂದನಂತರವೂ ಸಹ ಬಂಡವಾಳಶಾಹಿ ವ್ಯವಸ್ಥೆಯೇ ದೇಶದ ಆರ್ಥಿಕಅಡಿಗಲ್ಲಾಗಿ ಉಳಿದುದರಿಂದ ಮಾರುಕಟ್ಟೆಗಳ ರಕ್ಷಣೆ ಲೇಬರ್ ಸರ್ಕಾರದ ಜವಾಬ್ದಾರಿಯಾಯಿತು. ಈ ಜವಾಬ್ದಾರಿಯ ನಿರ್ವಹಣೆಯಿಂದ ಲಾಭದ ಆಧಾರದಮೇಲೆ ಖಾಸಗೀ ಕ್ಷೇತ್ರದಲ್ಲಿ ನಡೆಯುತ್ತಿದ್ದ ಉತ್ಪಾದನೆ, ಉದ್ಯೋಗ, ಇತ್ಯಾದಿಗಳು ಸಂಪೂರ್ಣವಾಗಿ ಕುಸಿದುಬೀಳುವುದನ್ನು ತಡೆಗಟ್ಟಬೇಕಾಗಿತ್ತು. ಆದುದರಿಂದ ಕನ್‌ಸರ್‌ವೆಟಿವ್ ಪಕ್ಷವಂತೆಯೇ ಲೇಬರ್‌ಪಕ್ಷ ವಸಾಹತುಗಳ ಸ್ವಾತಂತ್ರ್ಯ ಚಳವಳಿಗಳನ್ನು ಮರ್ದನಮಾಡಲು ನಿರ್ಧರಿಸಿತು. ಆದರೆ ಯುದ್ಧದಿಂದ ಉಂಟಾದ ದೌರ್ಬಲ್ಯದಿಂದ ಶಕ್ತಿಸಾಲದಾಗಿತ್ತು. ಅಮೆರಿಕ ದೇಶದ ಶಕ್ತಿಸಹಾಯದ ಆಶ್ರಯಕ್ಕೆ ಲೇಬರ್ ಸರ್ಕಾರ ನಿಂತಿತು.

ಲೇಬರ್ ಸರ್ಕಾರದ ಡೋಲಾಯಮಾನ ಸಮಾಜವಾದೀ ಕಾರ್ಯಕ್ರಮಕ್ಕೂ, "ಮಧ್ಯಮವರ್ಗ" ದ ಆರ್ಥಿಕನೀತಿಗೂ ಲೇಬರ್‌ಪಕ್ಷವನ್ನು ರೂಪಗೊಳಿಸಿದ ಸಂದರ್ಭಗಳೇ ಮುಖ್ಯಕಾರಣವಾಗಿವೆ. ಅಪಾರ ವಸಾಹತುಗಳನ್ನು ಹೊಂದಿ ಶೋಷಣೆಯನ್ನು ನಡೆಸುತ್ತಲಿದ್ದ ಬಂಡವಾಳಶಾಹಿ ವ್ಯವಸ್ಥೆ, ದೇಶದ ಆರ್ಥಿಕ ಮತ್ತು ರಾಜಕೀಯ ವಲಯಗಳಲ್ಲಿ ಧಾರಾಳ ಮನೋಭಾವವನ್ನು ಬಂಡವಾಳವರ್ಗ ಹೊಂದಲು ಸಾಧ್ಯಮಾಡಿಕೊಟ್ಟಿತು. ಸುಧಾರಣೆಗಳ ಮೂಲಕ ಬಂಡವಾಳವರ್ಗ ಆಗಾಗ್ಗೆ ಕಾರ್ಮಿಕವರ್ಗವನ್ನು ಸಂತುಷ್ಟಿಗೊಳಿಸಿತು. ಹೀಗೆ ಸಂತೃಪ್ತಿಸಲ್ಪಟ್ಟ ಕಾರ್ಮಿಕವರ್ಗದಲ್ಲಿ ಕ್ರಾಂತಿಕಾರಕ ಮನೋಭಾವವು ನಶಿಸಿ ಮಾರ್ಕ್ಸ್‌ವಾದ ಬೇರೂರಲು ಕಷ್ಟವಾಯಿತು. ಇದರಿಂದಾಗಿ, ಸುಧಾರಣೆ ಮತ್ತು ತಾತ್ಕಾಲಿಕ ಸಂತುಷ್ಟಿಗಳ ಆಶ್ರಯದಲ್ಲಿ ಬೆಳದ ಕಾರ್ಮಿಕವರ್ಗವು ಮತ್ತು ಅದರ ಮುಖಂಡರು ಸ್ವಾಮ್ಯಮನೋಭಾವ (Bourgeoisie Mentality) ಮತ್ತು ಸುಧಾರಣಾ ನೀತಿಯನ್ನು ಪ್ರದರ್ಶಿಸಿದ್ದರಲ್ಲಿ ಆಶ್ಚರ್ಯವೇನೂ ಇಲ್ಲ. ಬಂಡವಾಳಶಾಹಿ ವ್ಯವಸ್ಥೆಯ ನೈಜಸ್ವರೂಪ ಲೇಬರ್‌ಪಕ್ಷಕ್ಕೆ ತಿಳಿಯದಾಯಿತು. ಹೀಗಿ

ರುವಲ್ಲಿ ವಾಸ್ತವಿಕ ಪ್ರಪಂಚದ ಬಿಸಿ ತಾಕಿದೊಡನೆಯೇ ಸುಧಾರಣಾ ಸಮಾಜವಾದ (Reformist Socialism) ಕರಗಿಹೋದದ್ದರಲ್ಲಿ ವಿಶೇಷವೇನೂ ಇಲ್ಲ.

ಲೇಬರ್‌ಪಕ್ಷದ ಸಮಾಜವಾದೀ ನೀತಿ ಯಾವ ಒಂದು ವರ್ಗದ ನೀತಿಯಾಗಿರಲಿಲ್ಲ. ವರ್ಗಗಳೂ ಮತ್ತು ವರ್ಗವಿರಸವೂ ಇಲ್ಲವೆಂದು ಭಾವಿಸಿ ಬಂಡವಾಳವರ್ಗ ಮತ್ತು ಕಾರ್ಮಿಕವರ್ಗ ಈ ಎರಡರ ಹಿತವನ್ನೂ ಬಯಸುವುದಕ್ಕೆ ಹೊರಟಿತು. ಯಾವ ಒಂದು ವರ್ಗವನ್ನೂ ಸಂತುಷ್ಟಿಗೊಳಿಸಲಾರದೆ ಜನಸಮುದಾಯವನ್ನು ಎದುರುಹಾಕಿಕೊಂಡಿತು. 1952 ರಲ್ಲಿ ನಡೆದ ಚುನಾವಣೆಗಳಲ್ಲಿ ಲೇಬರ್‌ಪಕ್ಷ ಸೋತಿತು. ಪುನಃ ಅಧಿಕಾರಕ್ಕೆ ಬಂದ ಕನ್‌ಸರ್‌ವೆಟಿವ್‌ಪಕ್ಷ ಲೇಬರ್ ಸರ್ಕಾರದ ರೀತಿನೀತಿಗಳನ್ನು ರದ್ದುಗೊಳಿಸಿತು. ಇಂಗ್ಲೆಂಡಿನಲ್ಲಿ ಸುಧಾರಣಾ ಸಮಾಜವಾದದ ಪ್ರಯೋಗ ಅಲ್ಲಿ ಇಲ್ಲಿ ಬಂಡವಾಳಶಾಹಿ ವ್ಯವಸ್ಥೆಗೆ ತರಚಿದ ಘಾಯಗಳೆಂದು ಬಂಡವಾಳವರ್ಗ ಬಗೆದು ಬಂಡವಾಳಶಾಹಿ ವ್ಯವಸ್ಥೆಯನ್ನು ನಿರ್ಭಯವಾಗಿ ಮುಂದುವರಿಸುತ್ತಿದೆ.

ಎರಡನೇ ಯುದ್ಧಾನಂತರ ವಿವಿಧ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಸಮಾಜವಾದಿಗಳೆಂದು ಹೇಳಲ್ಪಡುವ ಸುಧಾರಕ ಸಮಾಜವಾದೀ ಪಕ್ಷಗಳು ಅಧಿಕಾರಕ್ಕೆ ಬಂದುದನ್ನು ಕೆಲವುಕಾಲ ಸಹಿಸಿದ್ದು ಬಂಡವಾಳವರ್ಗದ ಚಾಣಕ್ಯನೀತಿಯೂ ಸಹ ಆಗಿದೆ. ಯುದ್ಧಾನಂತರ ಕಾರ್ಮಿಕವರ್ಗದಲ್ಲಿ ಸಂಘಟನೆ ಇತ್ತು; ಬಂಡವಾಳಶಾಹಿ ವ್ಯವಸ್ಥೆಯ ನಾಶವೇ ಕಾರ್ಮಿಕರಿಗೆ ಮುಕ್ತಿ ಎಂಬ ಜ್ಞಾನೋದಯ ಮೂಡಿತ್ತು. ಬಂಡವಾಳವರ್ಗದಿಂದ ಬರುವ ಪ್ರತಿಭಟನೆಯನ್ನು ಎದುರಿಸಲು ಕಾರ್ಮಿಕವರ್ಗ ಸಿದ್ಧವಾಗಿತ್ತು. ಇಂತಹ ಪರಿಸ್ಥಿತಿಯಲ್ಲಿ ರೊಚ್ಚಿದ್ದಿರುವ ಕಾರ್ಮಿಕವರ್ಗವನ್ನು ಎದುರುಹಾಕಿಕೊಳ್ಳುವುದು ಅಪಾಯಕರವೆಂದು ಬಂಡವಾಳವರ್ಗ ತೀರ್ಮಾನಿಸಿತು. ಕಾರ್ಮಿಕವರ್ಗದ ಚಳವಳಿಯ ಉಬ್ಬರವನ್ನು ತಡೆಯಲು ಸುಧಾರಕ ಸಮಾಜವಾದೀ ಪಕ್ಷಗಳನ್ನು ಪ್ರಜಾಸತ್ತೆಯ ಸಂರಕ್ಷಕಗಳೆಂದು ಬಂಡವಾಳವರ್ಗ ಹೊಗಳಿತು. ಸ್ವಾಮ್ಯದ ರಕ್ಷಣೆಗಾಗಿ ಪ್ರಜಾಸತ್ತೆ ಮತ್ತು ಒಪ್ಪಿಗೆಯ ತತ್ತ್ವ(Consent) ಇವುಗಳ ಹಿಂದೆ ಬಂಡವಾಳವರ್ಗ ಮರೆಹೊಕ್ಕಿತು. ಸ್ವಾಮ್ಯಕ್ಕೆ ಚ್ಯುತಿ ತರುವಂತಹ ಶಾಸನಗಳಿಗೆ ಬಂಡವಾಳವರ್ಗದ ಒಪ್ಪಿಗೆಯೂ ಮತ್ತು

ರಾಷ್ಟ್ರೀಕರಣಮಾಡುವ ಸಂದರ್ಭದಲ್ಲಿ ಖಾಸಗೀ ಸ್ವಾಮ್ಯಕ್ಕೆ ಸೂಕ್ತ ಪರಿಹಾರ ದ್ರವ್ಯವೂ ಅಗತ್ಯವೆಂದರು. ಒಪ್ಪಿಗೆಯಂತೂ ಬರುವಹಾಗೆಯೇ ಇಲ್ಲ, ಪರಿಹಾರವನ್ನು ಕೊಡಲು ಬೊಕ್ಕಸದಲ್ಲಿ ಹಣವಿಲ್ಲ, ಸಮಾಜವಾದ ಹಿಂದಿನ ಬಾಗಿಲಿನಿಂದ ಪರಾರಿಯಾಯಿತು. ಸುಧಾರಕ ಸಮಾಜವಾದಿಗಳಿಂದಲೇ ಸ್ವಾಮ್ಯಕ್ಕೆ ರಕ್ಷಣೆ ಸಿಕ್ಕಿತು.

ಮಿಕ್ಕಿತರ ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಅಮೆರಿಕಾ ನೇರವಾಗಿ ದೇಶದ ಒಳಾಡಳಿತಗಳಲ್ಲಿ ಪ್ರವೇಶಿಸಿ ಕಾರ್ಮಿಕವರ್ಗ ಅಧಿಕಾರಕ್ಕೆ ಬರುವುದನ್ನು ತಡೆಯಿತು. ಚುನಾವಣೆಗಳು ಅಣುಕು ಚುನಾವಣೆಗಳಾದವು. ಕಮ್ಯೂನಿಸ್ಟ್ ಪಕ್ಷ ಚುನಾವಣೆಗಳಲ್ಲಿ ಬಹುಮತಗಳಿಸುವುದನ್ನು ಮುರಿದರು. ಕಮ್ಯೂನಿಸ್ಟ್ ಪಕ್ಷದ ಸದಸ್ಯರನ್ನೊಳಗೊಂಡ ಮಿಶ್ರ ರಾಷ್ಟ್ರೀಯ ಸರ್ಕಾರವಿದ್ದ ಫ್ರಾನ್ಸ್ ಮತ್ತು ಇಟಲಿ ದೇಶಗಳಲ್ಲಿ ಕಮ್ಯೂನಿಸ್ಟರನ್ನು ಅಧಿಕಾರದಿಂದ ಉಚ್ಚಾಟನೆಮಾಡಲಾಯಿತು. ಸುಧಾರಕ ಸಮಾಜವಾದಿಗಳು ಕಮ್ಯೂನಿಸ್ಟ್ ಸದಸ್ಯರ ಉಚ್ಚಾಟನೆಯನ್ನು ಪ್ರಜಾಸತ್ತೆಗೆ ಗೆಲುವೆಂದು ಘೋಷಿಸಿದರು. ಆದರೆ ಸುಧಾರಕ ಸಮಾಜವಾದಿಗಳ ಉಚ್ಚಾಟನೆಯೂ ಬಹು ದೂರವಿರಲಿಲ್ಲ. ಕ್ರಮೇಣ ಸುಧಾರಕರೂ ಸಹ ಉಚ್ಚಾಟನೆ ಹೊಂದಿದರು. ಅಪ್ಪಟ ಪ್ರತಿಗಾಮಿ ಸರ್ಕಾರಗಳು ಬಂದವು.[1]

---

(1) ಎರಡನೇ ಮಹಾಯುದ್ಧದ ಕಾಲದಲ್ಲಿ ಹಿಟ್ಲರ್ ಸೇನೆಗಳಿಂದ ಆಕ್ರಮಿತವಾದ ಪ್ರದೇಶಗಳಲ್ಲಿ ಪ್ರತಿಭಟನೆಯನ್ನು ಸಜ್ಜುಗೊಳಿಸಿದ್ದರಲ್ಲಿ ಕಮ್ಯೂನಿಸ್ಟ್ ಪಕ್ಷದ ಪಾತ್ರ ಬಹಳ ಹಿರಿದಾದುದು. ದೇಶದ ಬಂಡವಾಳವರ್ಗದ ಮುಖಂಡರು ಹಿಟ್ಲರ್ ಜೊತೆಯಲ್ಲಿ ರಾಜಿಸಂಧಾನಗಳನ್ನು ಮಾಡಿಕೊಂಡು ಕೈಗೊಂಬೆ ಸರ್ಕಾರಗಳನ್ನು (Quisling Governments) ರಚಿಸಲು ನಿರತರಾಗಿರುವಾಗ ಕಮ್ಯೂನಿಸ್ಟ್ ಪಕ್ಷ ಜನತಾ ಪ್ರತಿಭಟನಾ ಚಳವಳಿಗೆ ಕರೆಕೊಟ್ಟಿತು. (People's Resistance Movement). ಕಮ್ಯೂನಿಸ್ಟ್ ಪಕ್ಷ ಜನರ ಅಚ್ಚುಮೆಚ್ಚನ್ನೂ ವಿಶ್ವಾಸವನ್ನೂ ಗಳಿಸಿತು. ರಾಷ್ಟ್ರದ ಮುಂದಿನ ನಿರ್ಮಾಣದ ಬಗ್ಗೆ ಸಮಾಜವಾದೀ ಕಾರ್ಯಕ್ರಮವನ್ನು ಮುಂದಿಟ್ಟಿತು. ಯುದ್ಧಾನಂತರದ ಬೆಳವಣಿಗೆಗಳನ್ನು ವೀಕ್ಷಿಸುತ್ತಿದ್ದ ಅಮೆರಿಕಾ ಮತ್ತು ಬ್ರಿಟಿಷ್ ಸರ್ಕಾರಗಳಿಗೆ ಪೂರ್ವಯೂರೋಪಿನ ಹಲವು ದೇಶಗಳಲ್ಲಿ ಕಮ್ಯೂನಿಸ್ಟ್ ಪಕ್ಷದ ದಿಗ್ವಿಜಯ ಎದೆ ಒಡೆಯುವಂತೆ ಮಾಡಿತು. ಅದೇ ರೀತಿಯಲ್ಲಿ ಪಶ್ಚಿಮ ಯೂರೋಪಿನ ರಾಷ್ಟ್ರಗಳಲ್ಲೂ ಕಮ್ಯೂನಿಸ್ಟ್ ವಿಜಯದ ಸಂಭವವಿತ್ತು. ಅಮೆರಿಕಾ ಮತ್ತು ಬ್ರಿಟಿಷ್ ಸರ್ಕಾರಗಳು ಸ್ವಲ್ಪವೂ ಸಿಧಾನಿಸದೆ ಕಮ್ಯೂನಿಸ್ಟ್ ಪಕ್ಷದ ಜನಾನುರಾಗವನ್ನು ಕಡಿಮೆಮಾಡ

ಇಂದಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಪ್ರಪಂಚ ಎರಡು ಭಾಗವಾಗಿ ಒಡೆದು ಕಟ್ಟಕಡೆಯ ಸ್ವರೂಪವನ್ನು ತಾಳುತ್ತಿದೆ. ಒಂದೆಡೆ ರಷ್ಯಾದ ಮುಂದಾಳುತ್ವದಲ್ಲಿ ನಾಗಾಲೋಟದಿಂದ ಮುಂದುವರಿಯುತ್ತಿರುವ ಸಮಾಜವಾದೀ ರಂಗ, ಇನ್ನೊಂದೆಡೆ ಅಮೆರಿಕದ ಮುಂದಾಳತ್ವದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ಸಂರಕ್ಷಿಸಲು ಕಂಕಣಬದ್ಧರಾಗಿರುವ ಬಂಡವಾಳವರ್ಗ. ಸ್ವಾಮ್ಯದ ಸಂರಕ್ಷಣಾರ್ಥವಾಗಿ ಪ್ರಜಾಸತ್ತೆಗೆ ಧಕ್ಕೆಬಂದಿದೆ ಎಂಬ ಕೂಗನ್ನು ಬಂಡವಾಳವರ್ಗ ಎಬ್ಬಿಸಿದೆ. ಪಾರ್ಲಿಯಮೆಂಟರೀ ಪ್ರಜಾಸತ್ತೆಯೇ (Parliamentary Democracy) ಮುಳುಗುತ್ತಿರುವ ಬಂಡವಾಳವರ್ಗಕ್ಕೆ ತೇಲಲು ಉಳಿದಿರುವ ಕೊನೆಯ ಹಲಗೆಯಾಗಿದೆ. ಇದೇ ಇಂದಿನ ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿ ನಡೆಯುತ್ತಿರುವ ರಾಜಕೀಯದ ಗುಟ್ಟಾಗಿದೆ.[2]

ಲಿಕ್ಕೂ ಅದರ ದಮನಕ್ಕೂ ಕ್ರಮಕೈಗೊಂಡವು. ದೇಶದ ಒಳಾಡಳಿತ ವಿಷಯಗಳಲ್ಲಿ ಪ್ರವೇಶಮಾಡಿ ಸ್ವಾಮ್ಯಕ್ಕೆ ರಕ್ಷಣೆಕೊಡುವ ಸರ್ಕಾರವನ್ನು ಅಧಿಕಾರಕ್ಕೆ ತಂದವು. ಈಗಲೂ ಸಹ ಫ್ರಾನ್ಸ್ ಮತ್ತು ಇಟಲೀ ದೆಶಗಳಲ್ಲಿ ಶಾಸನಸಭೆಯಲ್ಲಿರುವ ವಿವಿಧ ರಾಜಕೀಯ ಪಕ್ಷಗಳಲ್ಲಿ ಅತ್ಯಂತ ಹೆಚ್ಚು ಮಂದಿ ಪ್ರತಿನಿಧಿಗಳನ್ನುಳ್ಳ ಮತ್ತು ಅತ್ಯಂತ ಪ್ರಭಾವಶಾಲಿಯೂ ಆದ ಪಕ್ಷವೆಂದರೆ ಕಮ್ಯೂನಿಸ್ಟ್ ಪಕ್ಷವಾಗಿದೆ.

(2) ಖಾಸಗೀ ಸ್ವಾಮ್ಯದ ರಕ್ಷಣೆಗಾಗಿ ಪ್ರಚಾರಕ್ಕೆ ಸ್ವಾತಂತ್ರ್ಯವಿರುವ, ಸ್ವಾಮ್ಯವರ್ಗ ತನ್ನದೇ ಆದ ರಾಜಕೀಯ ಪಕ್ಷವನ್ನು ರಚಿಸಿಕೊಳ್ಳುವುದಕ್ಕೆ ಅವಕಾಶವಿರುವ, ಸ್ವಾಮ್ಯವರ್ಗದ ರಾಜಕೀಯ ಪಕ್ಷ ಚುನಾವಣೆಗಳಲ್ಲಿ ಬಹುಮತಗಳಿಸಿದರೆ ಅಥವಾ ಇತರ ಪಕ್ಷಗಳೊಡನೆ ಸೇರಿ ಬಹುಮತ ಇದೆ ಎನ್ನುವುದಾದರೆ ಸರ್ಕಾರವನ್ನು ರಚಿಸಲು ಅವಕಾಶವಿರುವ (To form a Ministry), ಶಾಸನಸಭೆಯಲ್ಲಿ ಬಹುಮತ ದೊರೆಕಿದರೆ ಮಾತ್ರ ಉತ್ಪಾದನಾ ಸಾಧನಗಳನ್ನು ರಾಷ್ಟ್ರೀಕರಣಮಾಡುವುದಕ್ಕೆ ಸಾಧ್ಯವಿರುವ, ಸ್ವಾಮ್ಯದ ರಕ್ಷಣೆಯನ್ನು ಮೂಲಭೂತ ಹಕ್ಕೆಂಬುದಾಗಿ ಶಾಸನವಿರುವ ರಾಜ್ಯವ್ಯವಸ್ಥೆ ಬಂಡವಾಳಶಾಹೀ ಪ್ರಜಾಸತ್ತೆಯಾಗುತ್ತದೆ. ಉದಾ: ಇಂಗ್ಲೆಂಡ್, ಫ್ರಾನ್ಸ್ ದೇಶಗಳಲ್ಲಿರುವ ರಾಜ್ಯವ್ಯವಸ್ಥೆ. ಸದರೀ ದೇಶಗಳಲ್ಲಿನ ರಾಜ್ಯವ್ಯವಸ್ಥೆಯನ್ನು ಪಾರ್ಲಿಯಮೆಂಟರೀ ಪ್ರಜಾಸತ್ತೆ ಎಂದು ಕರೆಯುವುದೂ ಉಂಟು. ಬಂಡವಾಳ ಆರ್ಥಿಕವ್ಯವಸ್ಥೆಯ ಆಧಾರದಮೇಲೆ ನಡೆಯುವ ರಾಜಕೀಯ ಪ್ರಜಾಸತ್ತೆಯಮೇಲೆ ಬೀರುವ ಪ್ರಭಾವವನ್ನು ಅತಿಯಾಗಿ ವಿವರಿಸಬೇಕಾದ ಪ್ರಮೇಯವೇ ಇಲ್ಲ. ಉತ್ಪಾದನಾ ಸಾಧನಗಳ ಮೇಲಿ

ಮಾರ್ಕ್ಸ್‌ವಾದ ಮಾತ್ರ ಪ್ರಪಂಚದ ಮೂಲೆ ಮೂಲೆಗೂ ಹಬ್ಬುತ್ತಾ ಮನೆಮಾತಾಗುತ್ತಿದೆ. ಪ್ರತಿಗಾಮಿ ಶಕ್ತಿಗಳೂ ಸುಧಾರಕ ಸಮಾಜವಾದಿಗಳೂ ಎಷ್ಟು ತಡೆದರೂ ಮಾರ್ಕ್ಸ್‌ವಾದ ಕಾರ್ಮಿಕರ ಉಸಿರಾಗುತ್ತಿದೆ. ದಿನೇ ದಿನೇ ಬಂಡವಾಳವರ್ಗದ ಕುಹಕಗಳು, ಪ್ರಜಾಸತ್ತೆಯ ಸೋಗು ಮತ್ತು ಸುಧಾರಕ ಸಮಾಜವಾದೀ ಮಾರ್ಗ ಎಲ್ಲವೂ ನಿಷ್ಪ್ರಯೋಜನ

ರುವ ಖಾಸಗಿ ಸ್ವಾಮ್ಯ ಪ್ರಜಾಸತ್ತೆಯನ್ನು ಅಣುಕು ಪ್ರಜಾಸತ್ತೆಯನ್ನಾಗಿ ಮಾಡಿದೆ. ಅಷ್ಟೇ ಅಲ್ಲ. ಸ್ವಾಮ್ಯವರ್ಗ ತನಗಿರುವ ಸಾಧನ ಶಕ್ತಿಗಳ ಮೂಲಕ ಚುನಾವಣೆಗಳ ಮೇಲೆ ಪ್ರಭಾವಬೀರಿ ಉತ್ಪಾದನಾಸಾಧನಗಳ ರಾಷ್ಟ್ರೀಕರಣಕ್ಕೆ ಬಹುಮತದ ಒಪ್ಪಿಗೆಯನ್ನು ದುರ್ಲಭಮಾಡಿದೆ. ತಾತ್ತ್ವಿಕವಾಗಿ (In Theory) ಪ್ರಜಾಸತ್ತೆ ರಾಜ್ಯವ್ಯವಸ್ಥೆಯಲ್ಲಿ ಉತ್ಪಾದನಾಸಾಧನಗಳ ರಾಷ್ಟ್ರೀಕರಣಕ್ಕೆ ಬಹುಮತ ದೊರಕುವ ಸಂಭವವಿದೆ. ಆದರೆ, ಕಾರ್ಯತಃ (In Practice) ಸ್ವಾಮ್ಯಾಧಾರದ ಮೇಲೆ ನಡೆಯುವ ಪ್ರಜಾಸತ್ತೆಯಲ್ಲಿ ಚುನಾವಣೆಗಳು ಸ್ವಾಮ್ಯವರ್ಗಕ್ಕೆ ರಕ್ಷಣಾಕವಚದಂತಿವೆ. ಆದುದರಿಂದಲೇ ಒಂದು ದೇಶದಲ್ಲಿ ಪ್ರಜಾಸತ್ತೆ ಇದೆ ಅಥವ ಇಲ್ಲ ಎಂಬುದನ್ನು ಸ್ವಾಮ್ಯದ ರಕ್ಷಣೆಗಾಗಿ ಇರುವ ಪ್ರಚಾರ ಸ್ವಾತಂತ್ರ್ಯದಿಂದ, ಸ್ವಾಮ್ಯವರ್ಗ ತನ್ನದೇ ಆದ ರಾಜಕೀಯ ಪ್ರತಿಪಕ್ಷವನ್ನು ರಚಿಸಿಕೊಳ್ಳುವುದಕ್ಕೆ ಇರುವ ಸ್ವಾತಂತ್ರ್ಯದಿಂದ ಸ್ವಾಮ್ಯವರ್ಗ ನಿರ್ಧರಿಸುತ್ತದೆ.

ಆದುದರಿಂದ ಒಂದು ದೇಶದ ರಾಜ್ಯವ್ಯವಸ್ಥೆ ಪ್ರಜಾಸತ್ತೆ ವ್ಯವಸ್ಥೆಯೋ ಅಥವಾ ಅಲ್ಲವೇ ಎಂಬುದನ್ನು ನಿರ್ಧರಿಸುವಾಗ ಪ್ರಜಾಸತ್ತೆಯ ಬಗ್ಗೆ ಕೇವಲ ಭಾವರೂಪದ ಲಕ್ಷಣಗಳಿಗೆ (Formal Characteristics) ಗಮನಕೊಟ್ಟರೆ ಅನರ್ಥವಾಗುತ್ತದೆ. ಸ್ವಾಮ್ಯವರ್ಗದ ತಾತ್ತ್ವಿಕತಜ್ಞರು (Theoreticians) ಮಾಡುತ್ತಿರುವುದು ಇದೇ ಕೆಲಸವಾಗಿದೆ. ಪ್ರಜಾಸತ್ತೆಯ ಭಾವರೂಪದ ಲಕ್ಷಣಗಳಾದ ಕಾರ್ಯಾಂಗದಿಂದ ಶಾಸನಾಂಗ ಮತ್ತು ನ್ಯಾಯಾಂಗಗಳ ಬೇರ್ಪಡೆ, ಶಾಸನದ ಆಧಿಪತ್ಯ (Rule of Law), ಪ್ರತಿ ಪಕ್ಷವನ್ನು ರಚಿಸುವುದಕ್ಕೆ ಅವಕಾಶ (Opposition Party), ಪ್ರತಿ ಪಕ್ಷಕ್ಕೆ ಬಹುಮತ ಬಂದರೆ ಸರ್ಕಾರವನ್ನು ರಚಿಸುವುದಕ್ಕೆ ಅವಕಾಶ (To form a Ministry), ಅಧಿಕಾರದಲ್ಲಿರುವ ಪಕ್ಷವನ್ನು ನಿರ್ಭಯದಿಂದ ಟೀಕೆಗೊಳಪಡಿಸುವುದಕ್ಕೆ ಸ್ವಾತಂತ್ರ್ಯ, ಇವುಗಳೇ ಪ್ರಜಾಸತ್ತೆಯ ಮುಖ್ಯ ತಿರುಳೆಂದು ಹೇಳುತ್ತಲಿದ್ದಾರೆ. ರಾಜ್ಯವ್ಯವಸ್ಥೆಗೆ ಅಡಿಪಾಯವಾದ ಆರ್ಥಿಕ ವ್ಯವಸ್ಥೆಯನ್ನು ಪ್ರಜಾಸತ್ತೆ ಲಕ್ಷಣಗಳಿಂದ ಬೇರ್ಪಡಿಸಿದ್ದಾರೆ. ಆರ್ಥಿಕ ವ್ಯವಸ್ಥೆಗೂ ರಾಜ್ಯವ್ಯವಸ್ಥೆಗೂ ಇರುವ ಸಂಬಂಧ ವೇದ್ಯವಾಗಿರುವಾಗ ಪ್ರಜಾಸತ್ತೆ ಲಕ್ಷಣಗಳಿಂದ ಆರ್ಥಿಕ ವ್ಯವಸ್ಥೆಯನ್ನು ಬೇರ್ಪಡಿಸುವುದರ ಮರ್ಮ ಈಗ ಬಹಿರಂಗವಾಗಿ ಕಾಣುತ್ತದೆ.

ವಾಗಿ, ಕಾರ್ಮಿಕವರ್ಗ ಆಧುನಿಕ ಸಮಾಜವಾದದ ಬಾವುಟದ ಅಡಿಯಲ್ಲಿ ಸಂಘಟಿತವಾಗುತ್ತಲಿದೆ. ಕಾರ್ಮಿಕವರ್ಗ ಸಮಾಜವಾದೀ ರಂಗದ ಮುಂದೋಟವನ್ನು ಹರ್ಷಧ್ವನಿಗಳಿಂದ ಸ್ವಾಗತಿಸುತ್ತಲಿದೆ.

1848 ರಲ್ಲಿ ಧ್ವನಿಮಾಡಿದ ಆಧುನಿಕ ಸಮಾಜವಾದ ಒಂದು ಶತಮಾನದಲ್ಲಿ ಇಷ್ಟು ಮುಂದೋಟಗಳಿಸಿರುವುದು ಮಾರ್ಕ್ಸ್–ಏಂಗೆಲ್ಸರ

ಇದೇ ಸಂದರ್ಭದಲ್ಲಿ ಪಾರ್ಲಿಯಮೆಂಟರೀ ಪ್ರಜಾಸತ್ತೆಗೂ ಬಂಡವಾಳ ಆರ್ಥಿಕವ್ಯವಸ್ಥೆಗೂ ಇರುವ ಐತಿಹಾಸಿಕ ಸಂಬಂಧವನ್ನು (Historical Connection) ನೆನಪಿನಲ್ಲಿಡುವುದು ಅಗತ್ಯವಾಗಿದೆ. ಇಂಗ್ಲೆಂಡ್ ದೇಶದಲ್ಲಿ ಪಾರ್ಲಿಮೆಂಟರೀ ಪ್ರಜಾ ಸತ್ತೆ 17 ನೇ ಶತಮಾನದಲ್ಲಿ ಜನ್ಮತಾ 18 ನೇ ಶತಮಾನದಲ್ಲಿ ಪ್ರಬುದ್ಧಾವಸ್ಥೆಗೆ ಬಂದಿತು. ಕ್ರಮೇಣ ಇತರ ರಾಷ್ಟ್ರಗಳಿಗೆ ಹರಡಿತು. ಇದಕ್ಕೆ ಮುಂಚಿತವಾಗಿ ನಿರಂಕುಶ ಪ್ರಭುತ್ವವಿದ್ದಿತು. ಬಂಡವಾಳ ಆರ್ಥಿಕ ವ್ಯವಸ್ಥೆಯ ಉದಯವೂ ಸಹ 16, 17 ನೇ ಶತಮಾನಗಳಲ್ಲಿ ಉಂಟಾಯಿತು. 17 ನೇ ಶತಮಾನದಲ್ಲಿ ನಡೆದ ಇಂಗ್ಲಿಷ್ ಕ್ರಾಂತಿಯೂ (1688), 18 ನೇ ಶತಮಾನದಲ್ಲಿ ನಡೆದ ಫ್ರೆಂಚ್ ಕ್ರಾಂತಿಯೂ (1789) ಬಂಡವಾಳವರ್ಗದ ಹಿತಗಳಿಗೆ ಮಾನ್ಯತೆ ಮತ್ತು ರಕ್ಷಣೆಕೊಡುವ ಸರ್ಕಾರವಿರಬೇಕೆಂದು ನಿರಂಕುಶ ಪ್ರಭುತ್ವವನ್ನು ಮೂಲೆಗೊತ್ತಿದ ಸಂಗತಿ ತಿಳಿದವಿಷಯ. ಹೊಸ ರಾಜ್ಯವ್ಯವಸ್ಥೆ ಜಾರಿಗೆ ಬಂದಿತು. ನಿರಂಕುಶ ವರ್ತನೆಯನ್ನು ತಡೆಗಟ್ಟಲಿಕ್ಕೆ ಕಾರ್ಯಾಂಗವನ್ನು ಶಾಸನಾಂಗ ಮತ್ತು ನ್ಯಾಯಾಂಗಗಳಿಂದ ಪ್ರತ್ಯೇಕಗೊಳಿಸಲಾಯಿತು. ಶಾಸನದ ಆಧಿಪತ್ಯವನ್ನೂ ಶಾಸನದ ಸಮ್ಮುಖದಲ್ಲಿ ಸರ್ವಪ್ರಜೆಗಳಿಗೂ ಸಮಾನತೆಯನ್ನೂ ಸ್ಪಷ್ಟಪಡಿಸಲಾಯಿತು. ಹಿತಗಳ (Interests) ಸಂರಕ್ಷಣೆಯನ್ನು ಚುನಾಯಿತ ಪ್ರತಿನಿಧಿಗಳ ಸಮ್ಮತದ ಮೂಲಕ ಭದ್ರಪಡಿಸಲಾಯಿತು. ಸ್ವಾಮ್ಯಕ್ಕೆ ರಕ್ಷಣೆ ಕೊಡುವ ಮೂಲಭೂತ ಹಕ್ಕುಗಳು ಅಂಗೀಕೃತವಾದವು. ಇದೇ ಬಂಡವಾಳಶಾಹಿ ಪ್ರಜಾಸತ್ತೆ ಆಗಿದೆ; ಇದರ ರಾಜಕೀಯ ರೂಪ ಮಾತ್ರ ಪಾರ್ಲಿಮೆಂಟರೀ ಪ್ರಜಾಸತ್ತೆಯಾಗುತ್ತದೆ.

ಒಂದು ಪಕ್ಷ, ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯ, ವರ್ಗವಿರಸ (ಬಂಡವಾಳ ಆರ್ಥಿಕವ್ಯವಸ್ಥೆ) ಇವು ಅಳಿದು ಸಮಾಜವಾದೀ ಆರ್ಥಿಕವ್ಯವಸ್ಥೆ ಬರುವುದಾದರೆ ಪಕ್ಷ-ಪ್ರತಿಪಕ್ಷಗಳಿಲ್ಲದ (ಆರ್ಥಿಕ ಅರ್ಥದಲ್ಲಿ ಸ್ವಾಮ್ಯ ಇರಬೇಕೆನ್ನುವ, ಇರಕೂಡದೆನ್ನುವ ರಾಜಕೀಯ ಪಕ್ಷಗಳು) ಹೊಸರೂಪದ ರಾಜಕೀಯ ವ್ಯವಸ್ಥೆ (ಕಾರ್ಮಿಕ ಪ್ರಜಾಸತ್ತೆ) ರೂಪಗೊಳ್ಳುತ್ತದೆ. (ಇಂತಹ ವ್ಯವಸ್ಥೆಯಲ್ಲಿ ರಾಜ್ಯಶಕ್ತಿಯ (The State) ಭವಿಷ್ಯದ ಬಗ್ಗೆ ಪುಟ ೮೮ ನೋಡಿ). ಮಾರ್ಕ್ಸ್–

ವಾದದಲ್ಲಿ ಅಡಗಿರುವ ಅದ್ಭುತ ಸತ್ಯಾಂಶಕ್ಕೆ ಒರೆಗಲ್ಲಾಗಿದೆ. ಅವರು ತಿಳಿಸಿದಂತೆ ಬಂಡವಾಳಶಾಹಿ ವ್ಯವಸ್ಥೆ ಜನ್ಮಕೊಟ್ಟಿರುವ ವಿರಸಗಳೇ ಸಮಾಜವಾದೀ ತತ್ತ್ವದ ಮುಂದೋಟಕ್ಕೆ ಕಾರಣವಾಗಿವೆ.

ಏಂಗೆಲ್ಸ್‌ರ ಐತಿಹಾಸಿಕ ಭೌತವಾದದ ಪ್ರಕಾರ ಆರ್ಥಿಕಮಾರ್ಪಾಡಿನೊಡನೆ ರಾಜಕೀಯ ಮತ್ತು ನ್ಯಾಯವ್ಯವಸ್ಥೆಗಳ ಮಾರ್ಪಾಡು ಉಂಟಾಗುವುದು.

ಅಧ್ಯಯನ.

Sharpening of Crisis of Colonial System after world war : E. M. Zhukov. P. P. H. B.

People's Democracy a New form of Political organization of Society : A. I. Sobolev : F. L. P. M.

China : From a Semi Colony to a People's Democracy : G. Astafyev : P. P. H. B.

On People's Democracy in Eastern Europe and China : Published by the C. P. of India, 1951.

China's New Democracy : Moa Tse Tung, S. W. Vol, III, Pages 106-157.

The Dictatorship of People's Democracy : Moa Tse Tung : P, P. H. B.

The Chinese Revolution : Moa Tse Tung : S. W. Vol, III, Pages 72–102.

ಸಮಾಜವಾದದ ಸಮಸ್ಯೆಗಳು

ಅಧ್ಯಾಯ 9.

ವೈಜ್ಞಾನಿಕ ಅಥವಾ ಆಧುನಿಕ ಸಮಾಜವಾದದ ಹುಟ್ಟು, ಅದರ ಇತಿಹಾಸ, ಅದರ ಸ್ವರೂಪ ಮತ್ತು ರಷ್ಯಾ, ಚೀಣಾ ಮೊದಲಾದ ರಾಷ್ಟ್ರಗಳಲ್ಲಿ ಅದು ಕಾರ್ಯಗತವಾಗುತ್ತಲಿರುವುದು, ಇತ್ಯಾದಿ ಸಂಗತಿಗಳನ್ನು ಹಿಂದಿನ ಅಧ್ಯಾಯಗಳಲ್ಲಿ ನೋಡಿದ್ದಾಗಿದೆ. ಈಗ ಆಧುನಿಕ ಸಮಾಜವಾದಕ್ಕೆ ಸಂಬಂಧಿಸಿರುವ ಕೆಲವು ಸಮಸ್ಯೆಗಳನ್ನು ಚರ್ಚಿಸುವುದು ಆವಶ್ಯಕವಾಗಿದೆ. ಮೊದಲನೆಯದಾಗಿ, ಆಧುನಿಕ ಸಮಾಜವಾದಕ್ಕೆ ಪ್ರತಿಯಾಗಿ, ಮತ್ತು ಆ ವಾದದಂತೆ ಕಾರ್ಯಗತ ಹೊಂದುತ್ತಲಿರುವ ವ್ಯವಸ್ಥೆಗೆ ಪ್ರತಿಯಾಗಿ ಬೇರೊಂದು ವಿಧದ ಸಮಾಜವಾದ ಅಥವಾ ಸಮಾಜವಾದೀ ವ್ಯವಸ್ಥೆ ಇರಲು ಸಾಧ್ಯವೇ ಎಂಬ ಪ್ರಶ್ನೆ ಮೂಡುತ್ತದೆ. ಮಾರ್ಕ್ಸ್-ಏಂಗೆಲ್ಸರು ತಮ್ಮ ವಾದ ಹೊರತು ಮಿಕ್ಕ ಎಲ್ಲ ಸಮಾಜವಾದೀ ತತ್ತ್ವಗಳು ಕಲ್ಪನಾ ಸಮಾಜವಾದ, ಅಥವಾ ಅದೇ ಜಾತಿಗೆ ಸೇರಿರುವ ಸಮಾಜವಾದವೇ ವಿನಾ ವೈಜ್ಞಾನಿಕ ಸಮಾಜವಾದವಾಗಲಾರದೆಂದು ಉತ್ತರವಿತ್ತಿದ್ದಾರೆ. ವೈಜ್ಞಾನಿಕ ಸಮಾಜವಾದೀ ತತ್ತ್ವಕ್ಕೆ, ಕಾರ್ಮಿಕವರ್ಗದ ಚಳವಳಿಗೆ, ಸಮಾಜವಾದೀ ವ್ಯವಸ್ಥೆಗೆ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ವಿರಸಗಳೇ ಎಡೆಕೊಟ್ಟಿವೆ ಎಂದೂ, ಕಾರ್ಮಿಕವರ್ಗದ ಹೋರಾಟದ ಫಲವಾಗಿ ಸಮಾಜವಾದೀ ವ್ಯವಸ್ಥೆ ಅನಿವಾರ್ಯವಾಗಿ ಜನ್ಮ ತಾಳುವುದೆಂದೂ ತಿಳಿಸಿದ್ದಾರೆ.

ಸಮಾಜವಾದೀ ವ್ಯವಸ್ಥೆಯನ್ನು ನಿರ್ಧರಿಸುವ ಲಕ್ಷಣಗಳನ್ನು ಮಾರ್ಕ್ಸ್-ಏಂಗೆಲ್ಸರು ತಮ್ಮ ತತ್ತ್ವದಲ್ಲಿ ವರ್ಣಿಸಿದ್ದಾರೆ. ಸಮಾಜದ ಉತ್ಪಾದನಾ ಸಾಧನಗಳನ್ನು ಸಮಾಜೀಕರಣ ಮಾಡುವುದೇ ಬಂಡವಾಳಶಾಹಿ ವ್ಯವಸ್ಥೆ ತಂದೊಡ್ಡಿರುವ ವಿರಸಗಳನ್ನೂ, ವರ್ಗಗಳನ್ನೂ ತೊಡೆಯುವ ಮಾರ್ಗ. ಉತ್ಪಾದನಾ ಸಾಧನಗಳು ಸಮಾಜೀಕರಣವಾಗಿರುವುದೇ ಆಧುನಿಕ ಸಮಾಜವಾದೀ ವ್ಯವಸ್ಥೆಯ ಮುಖ್ಯ ಲಕ್ಷಣ ಮತ್ತು ಅಡಿಪಾಯ. ಅದುದರಿಂದ ಉತ್ಪಾದನಾ ಸಾಧನಗಳ ಸಮಾಜೀಕರಣವಿಲ್ಲದಿರುವ ಆರ್ಥಿಕ ವ್ಯವಸ್ಥೆಗಳೆಲ್ಲವೂ ಸಮಾಜವಾದದ ಸೋಗಿನಲ್ಲಿ ಸ್ವಾಮ್ಯವನ್ನು ಸಂರಕ್ಷಿಸುವ,

ಬಂಡವಾಳಶಾಹಿ ವ್ಯವಸ್ಥೆಯನ್ನು ಸಂರಕ್ಷಿಸುವ, ಹಾಗೆಯೆ ಶೋಷಣೆಯನ್ನು ಮುಂದುವರಿಸುವ ವ್ಯವಸ್ಥೆಗಳಾಗುತ್ತವೆ.

ಸಮಾಜವಾದೀ ವ್ಯವಸ್ಥೆಯ ಆವಶ್ಯಕತೆ ಮತ್ತು ಅದರ ಅನಿವಾರ್ಯತೆ ಬಗ್ಗೆ ವಿವರಣೆ ಇದೆ. ಲಾಭ, ಪ್ರೈಫೋಟ, ಶೋಷಣೆ, ನಿರುದ್ಯೋಗ, ಆರ್ಥಿಕ ಏರಿಳಿತಗಳು, ಆರ್ಥಿಕದುಃಸ್ಥಿತಿ ಮತ್ತು ಯುದ್ಧಗಳು ಇವುಗಳಿಲ್ಲದೆ ಬಂಡವಾಳ ಆರ್ಥಿಕವ್ಯವಸ್ಥೆ ಬದುಕಲು ಸಾಧ್ಯವಿಲ್ಲ. ಈ ರೀತಿ ಬಂಡವಾಳ ವ್ಯವಸ್ಥೆ ಇರಲು ಬಂಡವಾಳಶಾಹಿ ಉತ್ಪಾದನಾಕ್ರಮವೇ ಕಾರಣವಾಗಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದನಾಕಾರ್ಯ ಸಾಮೂಹಿಕವಾಗಿ ಕಾರ್ಮಿಕವರ್ಗದಿಂದ ನಡೆಯುತ್ತಿದೆ. ಆದರೆ, ಉತ್ಪಾದನೆಯಾದ ಸರಕುಗಳು ಮಾತ್ರ ಉತ್ಪಾದನೆ ಮಾಡಿರುವ ಕಾರ್ಮಿಕರ ಸ್ವತ್ತಾಗದೆ ಉತ್ಪಾದನಾ ಸಾಧನಗಳ ಮೇಲೆ ಸ್ವಾಮ್ಯವಿರುವವರಿಗೆ ಸೇರಿದ್ದಾಗಿವೆ. ಇದು ಆರ್ಥಿಕ ಶೋಷಣೆಗೆ, ಅವ್ಯವಸ್ಥೆಗೆ ಮತ್ತು ವರ್ಗವಿರಸಕ್ಕೆ ಕಾರಣವಾಗಿದೆ. ಲಾಭದಾಹ ಮತ್ತು ಶೋಷಣೆಯಿಂದ ಬಹು ಸಂಖ್ಯಾತ ಕಾರ್ಮಿಕವರ್ಗಕ್ಕೆ ಕಡಿಮೆ ಕೂಲಿ ಸಿಗುವಂತಾಗಿ ತಯಾರಾದ ಸರಕುಗಳನ್ನು ಕೊಳ್ಳುವವರಿಲ್ಲವಾಗಿದೆ. ಉತ್ಪನ್ನವಾದ ಸರಕುಗಳನ್ನು ನಾಶಮಾಡಬೇಕು, ಇಲ್ಲವೇ ಮಾರುಕಟ್ಟೆಗಳನ್ನು ಹುಡುಕಿ ಪ್ರೈಫೋಟೆಯಿಂದ ಮಾರಾಟಮಾಡಬೇಕು, ಇಲ್ಲವೇ ಉತ್ಪಾದನೆಯನ್ನು ಕಡಿಮೆಮಾಡಬೇಕು. ಯುದ್ಧ ಹತ್ತಿರದ ಬಂಧುವಾಗುತ್ತದೆ.

ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉತ್ಪಾದನೆ ಸಾಮೂಹಿಕವಾಗಿ ನಡೆಯಲು ಆಧುನಿಕ ಉತ್ಪಾದನಾಶಕ್ತಿಗಳು ಕಾರಣವಾಗಿವೆ. ಅವುಗಳನ್ನು ಉತ್ಪಾದನೆಯಲ್ಲಿ ಬಳಸುವುದಕ್ಕೆ ನೂರಾರು ಜನ ಕಾರ್ಮಿಕರು ಒಂದೆಡೆ ಸೇರಬೇಕು. ಆದರೆ ಈ ಉತ್ಪಾದನಾಶಕ್ತಿಗಳು ಆರ್ಥಿಕ ದುಃಸ್ಥಿತಿಗೆ ಕಾರಣಗಳಲ್ಲ; ಇವುಗಳನ್ನು ಬಳಸುತ್ತಿರುವ ಬಂಡವಾಳಶಾಹಿ ವ್ಯವಸ್ಥೆ, ಬಂಡವಾಳಶಾಹಿ ಉತ್ಪಾದನಾಕ್ರಮ ಕಾರಣವಾಗಿವೆ. ಉತ್ಪಾದನಾಶಕ್ತಿಗಳು ಹೆಚ್ಚಿದಷ್ಟೂ ಅಧಿಕ ಉತ್ಪಾದನೆಗೆ ಸಹಕಾರಿಯಾಗಿವೆ. ಇವುಗಳು ವಿಜ್ಞಾನದ ಬೆಳವಣಿಗೆಯ ಫಲ. ವಿಜ್ಞಾನವನ್ನು ದೂರವಿಡಲು ಸಾಧ್ಯವೇ ಇಲ್ಲ. ಈಗ ಉತ್ಪನ್ನವಾಗುತ್ತಿರುವುದಕ್ಕೆ ಸಹಸ್ರಪಾಲು ಹೆಚ್ಚು ಉತ್ಪನ್ನವಾದರೂ ಪ್ರಪಂಚದ ತುಂಬಾ ಅನ್ನ, ಬಟ್ಟೆ, ವಸತಿಯಿಲ್ಲದ ವ್ಯಕ್ತಿಗಳು ಉಳಿದೇ ಉಳಿಯುತ್ತಾರೆ.

ಆದುದರಿಂದ ಬಂಡವಾಳಶಾಹಿ ಉತ್ಪಾದನಾಕ್ರಮ—**ಉತ್ಪಾದನಾ ಸಾಧನಗಳನ್ನು ಖಾಸಗಿಯಾಗಿ ಹೊಂದಿ ಲಾಭ ಮತ್ತು ಶೋಷಣೆಯ ದೃಷ್ಟಿಯಿಂದ ನಡೆಸುವ ಉತ್ಪಾದನೆ**—ವನ್ನು ನಿರ್ಮೂಲಗೊಳಿಸಿ, ಜನಸಮುದಾಯಕ್ಕೆ ಉಪಯೋಗವಾಗುವ ದೃಷ್ಟಿಯಿಂದ ಶೋಷಣೆಗೆ ಅವಕಾಶವಿಲ್ಲದಿರುವ ರೀತಿಯಲ್ಲಿ ಉತ್ಪಾದನೆ ನಡೆಯಬೇಕು. ಈ ರೀತಿ ಆಗಬೇಕಾದರೆ ಉತ್ಪಾದನಾ ಸಾಧನಗಳಮೇಲೆ ಸಾಮೂಹಿಕ ಸ್ವಾಮ್ಯವನ್ನು ಹೊಂದುವುದರ ಮೂಲಕ ಮಾತ್ರ ಸಾಧ್ಯ. ಸಾಮೂಹಿಕ ಸ್ವಾಮ್ಯವೇ ಸಮಾಜಸ್ವಾಮ್ಯವಾಗಿದೆ, ಸಮಾಜೀಕರಣವಾಗಿದೆ.[1]

ಸಮಾಜೀಕರಣ ಮತ್ತು ಸಮಾಜವಾದೀ ವ್ಯವಸ್ಥೆಯ ಆವಶ್ಯಕತೆ ಈ ರೀತಿ ಇರುವಾಗ ಉತ್ಪಾದನಾ ಸಾಧನಗಳ ಮೇಲೆ ಇರುವ ಖಾಸಗೀ ಸ್ವಾಮ್ಯವನ್ನು ನಾಶಗೊಳಿಸದ ಆರ್ಥಿಕನೀತಿ ಸಮಾಜವಾದೀ ಆರ್ಥಿಕ ನೀತಿಯಾಗಲಾರದು. ಯಾವುದೇ ಆರ್ಥಿಕ ನೀತಿಯನ್ನು ಸಮಾಜವಾದೀ ನೀತಿಯೆ ಅಥವಾ ಅಲ್ಲವೆ ಎಂಬುದನ್ನು ನಿರ್ಧರಿಸಬೇಕಾದರೆ ಸಮಾಜದ ಸಂಪತ್ತು ಸಾಧನಗಳಲ್ಲಿರುವ ಖಾಸಗೀ ಸ್ವಾಮ್ಯದ ಬಗ್ಗೆ ಇರುವ ಧೋರಣೆಯನ್ನು ಮೊದಲು ಪರೀಕ್ಷಿಸಬೇಕು. ಸಮಾಜವಾದ ಖಾಸಗೀ ಸ್ವಾಮ್ಯದ ಬಗ್ಗೆ ತನ್ನ ಧೋರಣೆಯನ್ನು ಸ್ಪಷ್ಟಪಡಿಸಿದೆ.[2] ಉತ್ಪಾದನಾ ಸಾಧನಗಳ ಸಮಾಜೀಕರಣ, ತತ್‌ಪರಿಣಾಮವಾಗಿ ವರ್ಗಗಳ ವಿನಾಶ—ಸ್ವಾಮ್ಯವುಳ್ಳವರು, ಸ್ವಾಮ್ಯ ಇಲ್ಲದವರು–ಸಮಾಜವಾದೀ ವ್ಯವಸ್ಥೆಯಾಗಿದೆ. ಆದುದರಿಂದ, ಇದಲ್ಲದೆ ಬೇರೊಂದು ವಿಧದ ಸಮಾಜವಾದವೆಂದರೆ ಸ್ವಾಮ್ಯಕ್ಕೆ ಧಕ್ಕೆ ತರದ ಆರ್ಥಿಕ ನೀತಿಯಾಗುತ್ತದೆ. ಹೀಗಿರುವಾಗ ಮಧ್ಯಮಮಾರ್ಗದ ಆರ್ಥಿಕ ನೀತಿ[3], ಭಾವಪ್ರಧಾನದ ಅಥವಾ ಕೇವಲ ಗುರಿ ಘೋಷಣೆಯ[4] ಸಮಾಜವಾದ ಇವುಗಳೆಲ್ಲವೂ ಸಮಾಜದ ಸಂಪತ್ ಸಾಧನಗಳಲ್ಲಿ ಖಾಸಗೀಸ್ವಾಮ್ಯವನ್ನೂ, ಬಂಡವಾಳ ಆರ್ಥಿಕವ್ಯವಸ್ಥೆಯನ್ನೂ ಸಂರಕ್ಷಿಸುವ ಆರ್ಥಿಕ ನೀತಿಗಳಾಗಿವೆ.

---

(1) ಅಧ್ಯಾಯ 2, 3 ಮತ್ತು 4, ದ. ನೋಡಿ.

(2) ಪುಟ ೭೭, ದ. ನೋಡಿ

(3) ಪುಟ ೧೩೮, ದ. ನೋಡಿ

(4) ಅಧ್ಯಾಯ 2, ದ. ನೋಡಿ.

ಎರಡನೆಯದಾಗಿ, ಮಾರ್ಕ್ಸ್‌ವಾದ ಪ್ರಜಾಸತ್ತೆ ವಿರೋಧಿಯೇ ಎಂಬ ಪ್ರಶ್ನೆ. ಮಾರ್ಕ್ಸ್‌ವಾದದ ಬಗ್ಗೆ ಸಂದೇಹವನ್ನು ವ್ಯಕ್ತಪಡಿಸಿ, ಮಾರ್ಕ್ಸ್‌ವಾದದಲ್ಲಿ ಪ್ರತಿಪಾದಿತವಾಗಿರುವ ವರ್ಗಹೋರಾಟ, ಕಾರ್ಮಿಕವರ್ಗದ ಕ್ರಾಂತಿ, ಕಾರ್ಮಿಕವರ್ಗದ ಏಕೈಕಪ್ರಭುತ್ವ ಎಲ್ಲವೂ ಪ್ರಜಾಸತ್ತೆ ತತ್ತ್ವಗಳಿಗೆ ವಿರೋಧಿಯಾಗಿವೆಯೆಂದೂ, ಬಂಡವಾಳವರ್ಗದ ಒಪ್ಪಿಗೆಯನ್ನು ಪಡೆಯದೆ ಅವರ ಇಷ್ಟಕ್ಕೆ ವಿರುದ್ಧವಾಗಿ ಸ್ವಾಮ್ಯವನ್ನು ಕಸಿದುಕೊಳ್ಳುವುದು ಪ್ರಜಾಸತ್ತೆಯ ಅಡಿಗಲ್ಲಾದ ಒಪ್ಪಿಗೆಯ (consent) ತತ್ತ್ವಕ್ಕೆ ಧಕ್ಕೆ ಬರುತ್ತದೆಂದೂ ವಾದಿಸಲಾಗಿದೆ ಉತ್ಪಾದನಾ ಸಾಧನಗಳ ಸಮಾಜೀಕರಣವನ್ನೂ ಶೋಷಣೆಯ ವಿನಾಶವನ್ನೂ ಕಾರ್ಮಿಕವರ್ಗ ಬಯಸುವುದಾದರೆ, ಅದು ಬಹು ಸಂಖ್ಯೆಯಲ್ಲಿರುವುದರಿಂದ ಪ್ರಜಾಸತ್ತೆ ತತ್ತ್ವಗಳಿಗೆ ಅನುಸಾರವಾಗಿ ಬಹುಮತಗಳಿಸುವುದರ ಮೂಲಕ ಶಾಸನಮಾಡಬಹುದೆಂದೂ, ಹಾಗಿಲ್ಲದಿದ್ದರೆ ವೈಜ್ಞಾನಿಕ ಸಮಾಜವಾದ ಪ್ರಜಾಸತ್ತೆ ವಿರೋಧಿಯೂ, ಸರ್ವಾಧಿಕಾರೀ ತತ್ತ್ವದ ಪ್ರೇಮಿಯೂ ಆಗುವುದು ಖಂಡಿತದ ವಿಷಯವೆಂದೂ ವಾದಿಸಲಾಗಿದೆ.

ಮಾರ್ಕ್ಸ್‌ವಾದ ಪ್ರಜಾಸತ್ತೆಗೆ ವಿರೋಧಿ ಎಂಬುದು ಬುಡವಿಲ್ಲದ್ದು. ಪ್ರಜಾಸತ್ತೆ ತತ್ತ್ವವನ್ನು ವಿಕಾರಗೊಳಿಸಿರುವ ಮತ್ತು ಗೊಳಿಸುತ್ತಲಿರುವ ವಾಸ್ತವ ಪರಿಸ್ಥಿತಿಗಳನ್ನು ಮರೆಮಾಚಲು ಈ ತೆರನಾದ ಸಂಶಯವನ್ನು ಬಂಡವಾಳವರ್ಗ ಜನಸಮುದಾಯದಲ್ಲಿ ಬಿತ್ತಿದೆ; ಮಾರ್ಕ್ಸ್‌ವಾದದಿಂದ ಪ್ರಜಾಸತ್ತೆಗೆ ಧಕ್ಕೆ ಬಂದಿದೆ ಎಂಬ ಕೂಗು ಪ್ರಜಾಸತ್ತೆಯ ಹೆಸರಿನಲ್ಲಿ ಖಾಸಗೀ ಸ್ವಾಮ್ಯದ ರಕ್ಷಣೆಯನ್ನು ಅಪೇಕ್ಷಿಸಿರುವ ಬಂಡವಾಳವರ್ಗದ ಮಹಾ ಕುಯುಕ್ತಿಯಾಗಿದೆ. ಮಾರ್ಕ್ಸ್‌ವಾದ ಈ ಮುಸುಕನ್ನು ಒಡೆದು ನಿಜಪರಿಸ್ಥಿತಿಯನ್ನು ತಿಳಿಸಿದೆ. ಮೊದಲನೆಯದಾಗಿ, ಸ್ವಾಮ್ಯಕ್ಕೆ ಎಡೆ ಇರುವ ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿ (Capitalist Democracy) ಪ್ರಜಾಸತ್ತೆ ನಗೆಪಾಟಲಿನ ಪ್ರಜಾಸತ್ತೆಯಾಗಿದೆ. ಪೌರರು ಹೊಂದಿರುವರೆಂದು ಹೇಳಲಾದ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳು ಸತ್ವರಹಿತದ ಹಕ್ಕುಗಳಾಗಿವೆ. ಶಾಸನದ ರೀತ್ಯಾ ಬಡವರು, ನಿರುದ್ಯೋಗಿಗಳು ಚುನಾವಣೆಗೆ ನಿಲ್ಲಲು ಹಕ್ಕಿದ್ದರೂ, ಉಮೇದುವಾರರಾಗಿ ನಿಲ್ಲುವ ಕನಸನ್ನು ದೂರವಿಡಬೇಕು. ಇತರ ಕ್ಷೇತ್ರಗಳಲ್ಲೂ ಇದೇ ಪರಿಸ್ಥಿತಿ ಇದೆ. ಹೊಟ್ಟೆ

ಹೊರೆಯುವುದೇ, ಆರ್ಥಿಕ ಭದ್ರತೆಯನ್ನು ತಮ್ಮ ಜೀವನದಲ್ಲಿ ಕಲ್ಪಿಸಿಕೊಳ್ಳುವುದೇ ಶೋಷಿತವರ್ಗದ ಸಮಸ್ಯೆಯಾಗಿರುವಾಗ ರಾಜಕೀಯ ಅವರಿಗೆ ಬೇಡವಾಗಿದೆ; ವಿದ್ಯಾಭ್ಯಾಸ ಹೊಂದಲು ಅಥವಾ ಸಾರ್ವಜನಿಕ ಜೀವನದಲ್ಲಿ ಪ್ರವೇಶಿಸಲು ಹಣದ ಮುಗ್ಗಟ್ಟು ಇದೆ. ಈ ಪರಿಣಾಮವಾಗಿ ಜೀವನದಲ್ಲಿ ನಿರಾಶೆ, ಜಿಗುಪ್ಸೆ, ನಿರುತ್ಸಾಹ, ಅಸಡ್ಡೆ, ನಿಸ್ಸಹಾಯಕತೆ, ಆಶ್ರಯಮನೋಭಾವ, ಯಾಚನೆಯ ಮನೋಭಾವ, ಇತ್ಯಾದಿಗಳನ್ನು ತಾಳಿರುವ ಜನರು ಬಹು ಸಂಖ್ಯೆಯಲ್ಲಿದ್ದಾರೆ.

ಶೋಷಿತವರ್ಗದ ಪರದಾಟ ಸ್ವಾಮ್ಯವುಳ್ಳವರಿಗೆ ಸುಸಮಯವಾಗಿದೆ. ಹಣ ಬಲವಿರುವುದರಿಂದ ಪೌರಜೀವನ ಅವರಿಗೆ ಮೀಸಲಾಗಿದೆ, ಮತ್ತು ರಾಜಕೀಯ ಅವರ ಕಸಬಾಗಿದೆ. ಶಾಸನಸಭೆಗಳಿಗೆ ಪ್ರತಿನಿಧಿಗಳಾಗಿ ಹೋಗಲು ಇವರಿಗೇ ಸಾಧ್ಯ. ಜನಾಭಿಪ್ರಾಯವನ್ನು ಪ್ರಚಾರದ ಮೂಲಕ ತಿರುಗುಮುರಗು ಮಾಡಲು ಹಣ ಬಲವಿದೆ. ಸುದ್ದಿ ಕೇಂದ್ರಗಳು, ವರ್ತಮಾನ ಪತ್ರಿಕೆಗಳು ಸ್ವಾಮ್ಯವರ್ಗದ ವಶದಲ್ಲಿವೆ. ಬಂಡವಾಳವರ್ಗ ಕೊಡುವ ವೇತನದ ಹಂಗಿಗೆ ಸಿಕ್ಕಿ ಅವರು ಹೇಳಿದಹಾಗೆ ನಡೆಯುವ ಜನರಿದ್ದಾರೆ. ಅವರ ಅಭಿಪ್ರಾಯಗಳನ್ನು ಪ್ರತಿಬಿಂಬಿಸಬಲ್ಲ ವಕೀಲರನ್ನು ಮತ್ತು ಪಂಡಿತರನ್ನು ನೇಮಿಸಿಕೊಳ್ಳುವುದಕ್ಕೆ ಹಣವಿದೆ. ಉದರ ನಿಮಿತ್ತವಾಗಿ ದುಡಿಯುವ ಕಾರ್ಮಿಕರ ಮೇಲೆ ಪೂರ್ಣ ಹತೋಟಿ ಹೊಂದಿರಲು ಅವಕಾಶವಿದೆ. ಇಂತಹ ಪರಿಸ್ಥಿತಿಯಲ್ಲಿ ಸರ್ಕಾರ, ರಾಜ್ಯಶಕ್ತಿ, ಬಂಡವಾಳವರ್ಗದ ಹಿತಸಂರಕ್ಷಣಾರ್ಥವಾಗಿ ಉಪಯೋಗವಾಗುವುದರಲ್ಲಿ ಸ್ವಲ್ಪವೂ ಸಂಶಯವಿಲ್ಲ.

ಅನೇಕವೇಳೆ, ಶೋಷಿತವರ್ಗ ಅಜಾಗ್ರತೆಯಿಂದಿದ್ದು ಪ್ರತಿಭಟನೆಯನ್ನು ಸೂಚಿಸುವುದಕ್ಕಾಗಲೀ ಅಥವಾ ತಮ್ಮದೇ ಆದ ರಾಜಕೀಯ ಪಕ್ಷವನ್ನು ರಚಿಸಿಕೊಳ್ಳುವುದಕ್ಕಾಗಲೀ ಯತ್ನಿಸುವುದಿಲ್ಲ. ನಿತ್ಯ ಕೂಳಿನ ಸಂಪಾದನೆ ಕಾರ್ಮಿಕವರ್ಗಕ್ಕೆ ಸಮಸ್ಯೆಯಾಗಿರುವಾಗ ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿ ಹೊಂದಿರಬಹುದಾದ ಸತ್ವರಹಿತದ ಹಕ್ಕುಗಳ ಬಗ್ಗೆ ಪರಿಜ್ಞಾನ ಬರುವುದಿಲ್ಲ. ಸ್ವಾಮ್ಯವೇ ಮುಖ್ಯವಾಗಿರುವ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಶೋಷಿತವರ್ಗವೂ ಸಹ ಸ್ವಾಮ್ಯವನ್ನು ಗಳಿಸಲು, ಹಣ ಶೇಖರಣೆಮಾಡಿ ಸಮಾಜದಲ್ಲಿ ದೊಡ್ಡಸ್ಥಿಕೆ ಪಡೆಯಲು ಪೈಪೋಟಿಗೆ ನಿಲ್ಲು

ವುದು. ಸಣ್ಣ ಪುಟ್ಟ ಬಂಡವಾಳಗಾರರಾಗಲು ಅನೇಕರು ಯತ್ನಿಸುವರು. ಶ್ರೀಮಂತವರ್ಗದ ಮನೋಭಾವನೆ ಸಣ್ಣ ಪುಟ್ಟ ಪ್ರಮಾಣದಲ್ಲಿ ಶೋಷಿತ ವರ್ಗದಲ್ಲಿ ತಲೆಹಾಕುತ್ತದೆ. ಪೈಪೋಟಿಯಲ್ಲಿ ಸೋತವರು ತಮ್ಮ ವಿಧಿಯನ್ನು ಹಳಿದುಕೊಳ್ಳುವರು, ಗೆದ್ದವರು ತಮ್ಮ ಗೆಲುವಿಗೆ ಬಂಡವಾಳಶಾಹಿ ವ್ಯವಸ್ಥೆಯಿಂದ ದೊರೆತ ಸ್ವಾತಂತ್ರ್ಯ ಮತ್ತು ಅವಕಾಶವನ್ನು ಹೊಗಳುವರು; ಗಳಿಸಿರುವ ಸಂಪತ್ತಿನ ರಕ್ಷಣೆಗಾಗಿ ಬಂಡವಾಳಶಾಹಿ ವ್ಯವಸ್ಥೆಯ ಹಿಂಬಾಲಕರಾಗುವರು. ಉಭಯತ್ರರೂ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಅಡಗಿರುವ ಕಣ್ಣುಮುಚ್ಚಾಲೆಯ ಆಟವನ್ನೂ, ಅರಣ್ಯದ ಮೃಗಜೀವನದ ಚಿತ್ರವನ್ನೂ ಮರೆಯುತ್ತಾರೆ. ತಾವಿರುವ ಆರ್ಥಿಕ ವ್ಯವಸ್ಥೆ ಅಭೇದ್ಯವಾದದ್ದೆಂದು ಭಾವಿಸಿ ತಮ್ಮ ಬಾಳನ್ನು ಅದಕ್ಕೆ ಹೊಂದಿಸಿಕೊಳ್ಳಲು ಯತ್ನಿಸುತ್ತಾರೆ. ಈ ಕಾರಣದಿಂದ ಶೋಷಣೆಗೆ ಒಳಗಾಗಿರುವ ವ್ಯಕ್ತಿಗಳು ಜಾಗೃತಿ ಹೊಂದುವುದಿಲ್ಲ; ಜೀವನದಲ್ಲಿರುವ ಆರ್ಥಿಕ ಅಭದ್ರತೆಗೆ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣವೆಂದು ತಿಳಿಯಲು ಅಸಮರ್ಥರಾಗುವರು. ಇಂತಹ ಪರಿಸ್ಥಿತಿಗಳಲ್ಲಿ ಶೋಷಿತವರ್ಗ ಅನೇಕವೇಳೆ ಸ್ವಾಮ್ಯವರ್ಗದ ಬೆಂಬಲಿಗರಾಗುವುದರಲ್ಲಿ ಆಶ್ಚರ್ಯವಿಲ್ಲ. ಸ್ವರಕ್ಷಣೆಗಾಗಿ ಅದನ್ನು ಸ್ವಾಮ್ಯವನ್ನು ಹೊಂದಲು ಯತ್ನಿಸಿರುವ ಶೋಷಿತವರ್ಗದಿಂದ ಸ್ವಾಮ್ಯ ಮತ್ತು ಶೋಷಣೆಯ ರಕ್ಷಕ ಪಕ್ಷಗಳಿಗೆ ಬೆಂಬಲ ಸಿಗುತ್ತದೆ.

ಅಷ್ಟಲ್ಲದೆ ತಾತ್ಕಾಲಿಕ ತೃಪ್ತಿ, ನಿಸ್ಸಹಾಯಕತೆ ಮತ್ತು ಮೌಢ್ಯ ಇವು ಇರುವ ಪರಿಸ್ಥಿತಿಗೆ ಹೊಂದಿಕೊಳ್ಳುವಂತೆ ಶೋಷಿತವರ್ಗವನ್ನು ಬಲಾತ್ಕರಿಸುತ್ತವೆ.[1] ಸಂಪ್ರದಾಯ, ಗಣ್ಯವ್ಯಕ್ತಿಗಳ ಅಭಿಪ್ರಾಯ, ಇವುಗಳಿಂದ ಬಾಳಿನ ಪರಿಸ್ಥಿತಿಗೆ ಸಮರ್ಥನೆ ಬರುತ್ತದೆ. ಇಂತಹ ಪರಿಸ್ಥಿತಿಯಲ್ಲಿ ಪ್ರಶ್ನಾ

---

(1) ಯಾವ ಆರ್ಥಿಕ ಬದಲಾವಣೆಗಳೂ ಇಲ್ಲದ ಮತ್ತು ಬಹುಕಾಲ ದಾಸ್ಯಕ್ಕೆ ಒಳಗಾಗಿರುವ ದೇಶಗಳ ಜನರ ಮನೋಭಾವ ಇನ್ನೂ ಮೌಢ್ಯರೂಪವನ್ನು ತಾಳಿರುತ್ತದೆ; ಅಂಜುಬುರುಕ ಮನೋಭಾವ ಬೆಳೆದಿರುತ್ತದೆ. ಜನರು ಬೋನಿನಲ್ಲಿ ಬಂಧಿತವಾಗಿರುವ ಮೂಷಕಗಳಂತಿರುತ್ತಾರೆ. ಪರಿಹಾರದ ಮಾರ್ಗಗಳು ಪರಲೋಕ ಚಿಂತನೆಯಲ್ಲಿ, ದೈನ್ಯತತ್ತ್ವದಲ್ಲಿ, ಸಂಸಾರದ ಖಂಡನೆಯಲ್ಲಿ, ವಸ್ತು ನಿಗ್ರಹತತ್ತ್ವದಲ್ಲಿ, ವೈರಾಗ್ಯದಲ್ಲಿ, ಹೊಸ ಧರ್ಮದ ಸ್ಥಾಪನೆಯಲ್ಲಿ ಪರ್ಯವಸಾನ ಹೊಂದಿರುತ್ತವೆ.

ಭಾರತದಲ್ಲಿ ಧಾರ್ಮಿಕ ಕ್ರಾಂತಿಯನ್ನು ತರಲು ಯತ್ನಿಸಿ ಬೇರೊಂದು ಧರ್ಮವನ್ನು ಪ್ರಚಾರಮಾಡಿದವರಲ್ಲಿ ಜೈನ ತೀರ್ಥಂಕರರು, ಬುದ್ಧ, ದಾಸರುಗಳು ಬಸವಣ್ಣ ಮುಖ್ಯರಾದವರು. ಭೇದಭಾವಕ್ಕೂ ಶೋಷಣೆಗೂ ಆವಾಸಸ್ಥಾನವಾಗಿದ್ದ ಜಾತಿಪದ್ಧತಿಯನ್ನೂ ಮತ್ತು ಇದನ್ನು ಎತ್ತಿಹಿಡಿದ ಧಾರ್ಮಿಕ ತತ್ತ್ವಗಳನ್ನೂ ಮುಖಂಡರು ಖಂಡಿಸಿದರು. ಪ್ರತಿಯಾಗಿ, ಭೇದಭಾವಕ್ಕೆ ಅವಕಾಶವಿತ್ತಿರುವ ಜಾತಿಪದ್ಧತಿಯನ್ನು ದಮನಮಾಡಬೇಕೆಂದೂ, ದೈವಾನುಗ್ರಹ ಅಥವ ಪರಿಪಕ್ವತೆಯನ್ನು ಸರ್ವರೂ ಸ್ವತಂತ್ರವಾಗಿ ಹೊಂದಲು ಬಾಧ್ಯರೆಂದೂ ಸಾರಿದರು. ಸಕಲ ಕಷ್ಟಗಳ ನಿವಾರಣೆಗೆ ದೈವಾನುಗ್ರಹ ಅಥವ ಪರಿಪಕ್ವತೆಯೇ ಮಾರ್ಗವೆಂದೂ, ವಸ್ತುನಿಗ್ರಹ ಮತ್ತು ಸಂಸಾರ ಬಂಧನದ ತ್ಯಾಗ ಇವುಗಳಿಂದ ಮಾತ್ರ ಮುಕ್ತಿ ಸಾಧಿಸಲು ಸಾಧ್ಯವೆಂದೂ ತಿಳಿಸಿದರು. ಆದರೆ, ಈ ಹೊಸಧರ್ಮಗಳು ಬೋಧಿಸಿದ ಮುಕ್ತಿಮಾರ್ಗ ಹಿಂದೂ ಧರ್ಮ ಬೋಧಿಸದೇ ಇದ್ದ ಮಾರ್ಗವೇನೂ ಆಗಿರಲಿಲ್ಲ.

ಧಾರ್ಮಿಕಮುಖಂಡರ ಗಮನವೆಲ್ಲಾ ವಸ್ತುನಿಗ್ರಹ ಮತ್ತು ಸಂಸಾರ ಬಂಧನದ ತ್ಯಾಗದಲ್ಲಿ ಪರ್ಯವಸಾನಹೊಂದಿತು. ಇವುಗಳಿಗೆ ಪ್ರತಿಕಾರದಂತಿದ್ದ (opposite) ಜನರ ಆರ್ಥಿಕಜೀವನ ಮತ್ತು ಆರ್ಥಿಕವ್ಯವಸ್ಥೆಯ ಬಗ್ಗೆ ಮೌನವನ್ನು ತಾಳಿದರು; ಅವುಗಳ ವಿಮರ್ಶೆಯನ್ನು ಕಡೆಗಣಿಸಿದರು. ಇದರಿಂದ ಉಂಟಾದ ಪರಿಣಾಮಗಳು ಮಹತ್ತರವಾದದ್ದಾದವು. ಆರ್ಥಿಕವ್ಯವಸ್ಥೆಯ ಬಗ್ಗೆ ಪ್ರತಿಭಟನೆ ಧಾರ್ಮಿಕ ಪ್ರತಿಭಟನೆಯ ರೂಪವನ್ನು ತಾಳಿತು. ಶೋಷಣೆಗೆ ಆವಾಸಸ್ಥಾನವಾದ ಆರ್ಥಿಕವ್ಯವಸ್ಥೆಯ ಬಗ್ಗೆ ನೇರವಾದ ಪ್ರತಿಭಟನೆಯನ್ನೂ ವರ್ಗವೈಷಮ್ಯವನ್ನೂ ಹೊಸ ಧರ್ಮಗಳು ತಡೆಗಟ್ಟಿದವು. ಅತೃಪ್ತಿ ಮತ್ತು ಅಸಮಾಧಾನಗಳು ಹಲ್ಲಿಲ್ಲದ ಮೂಕ ಧಾರ್ಮಿಕ ಪ್ರತಿಭಟನೆಯಲ್ಲಿ ಪರ್ಯವಸಾನಹೊಂದಿದುವು. ಜನಸಾಮಾನ್ಯರಿಗೆ ಯಾವ ಪರಿಹಾರವೂ ಸಿಗಲಿಲ್ಲ. ಈ ಧಾರ್ಮಿಕ ತತ್ತ್ವಗಳು ಅನುಸರಣೆಯಲ್ಲಿದ್ದ ಆರ್ಥಿಕವ್ಯವಸ್ಥೆಯನ್ನು ಅಂಗೀಕರಿಸಿದವು. ಹೊಸ ಧರ್ಮಗಳಿಂದ ಅನುಸರಣೆಯಲ್ಲಿದ್ದ ಆರ್ಥಿಕವ್ಯವಸ್ಥೆಯ ಅಂಗೀಕಾರವೇ ಕ್ರಮೇಣ ಈ ಹೊಸ ಧರ್ಮಗಳ ಉತ್ತರೋತ್ತರದ ಇತಿಹಾಸದಲ್ಲಿ ಕೆಲವು ಭಾರತದಿಂದಲೇ ಉಚ್ಚಾಟನೆ ಹೊಂದಲೂ (ಬೌದ್ಧಮ.ತ) ಇನ್ನು ಕೆಲವು ನಿಸ್ಸಹಾಯಕತೆಯ ಪ್ರತಿಬಿಂಬವೆಂಬಂತೆ ಉಳಿಯಲೂ ಕಾರಣವಾಯಿತು.

ಜನಸಾಮಾನ್ಯರೆಲ್ಲರೂ ವಸ್ತುನಿಗ್ರಹವನ್ನೂ ಸಂಸಾರ ಬಂಧನದ ತ್ಯಾಗವನ್ನೂ ಮಾಡಲಿಲ್ಲವಾಗಿ ಹೊಸ ಧರ್ಮಗಳ ತತ್ತ್ವದಲ್ಲಿ ಮಾರ್ಪಾಡುಗಳು ಬಂದವು. ಜನಸಾಮಾನ್ಯರಿಗೆ ಅನ್ವಯವಾಗುವಂತಹ ಒಂದು ತತ್ತ್ವ, ಸಂಸಾರ ಬಂಧನವನ್ನು ತ್ಯಜಿಸಲಿಚ್ಛಿಸಿದವರಿಗೆ ಒಂದು ತತ್ತ್ವ ಅನುಷ್ಠಾನಕ್ಕೆ ಬಂದವು. ವ್ಯವಹಾರ ಪ್ರಪಂಚದ ನಿತ್ಯತೆಯನ್ನು ಅಂಗೀಕರಿಸಲಾಯಿತು. ವ್ಯವಹಾರ ಪ್ರಪಂಚದ ಸಾಮಾನ್ಯಜನರು ಸಂಸಾರ ತ್ಯಜಿಸಿದವರಿಗೆ ಅನ್ನ ಆಹಾರಾದಿ ಸೌಕ

ತ್ಮಕ ಪ್ರತಿಭಟನೆಗಾರರು ಹುಚ್ಚರೆಂದೂ, ಸಮಾಜ ಕಂಟಕರೆಂದೂ ಪರಿಗಣಿತರಾಗುವರು. ಸ್ವಾಮ್ಯದ ಶ್ರೇಷ್ಠತೆಯ ಬಗ್ಗೆ ಸ್ವಾಮ್ಯವರ್ಗ ಪ್ರಸಾರ ಮಾಡುತ್ತಲೇ ಇರುತ್ತದೆ; ಅಥವಾ ಒಂದೊಂದು ವೇಳೆ ಶೋಷಿತವರ್ಗದಿಂದ ಮಿತಿಮೀರಿ ಬರುವ ಪ್ರತಿಭಟನೆಯನ್ನು ಪೋಲೀಸ್ ಮತ್ತು ಸೈನ್ಯಗಳ ಮೂಲಕ ದಮನಮಾಡುತ್ತದೆ. ಈ ಫಲವಾಗಿ ಶೋಷಿತವರ್ಗದ ಜೀವನ ಸೆರೆಮನೆಯ ಸ್ವಾತಂತ್ರ್ಯವಾಗಿದೆ. ಮಾರ್ಕ್ಸ್-ಏಂಗೆಲ್ಸರ ವಾದ ಕಾರ್ಮಿಕ ವರ್ಗದ ಕೃತಕಸ್ವಾತಂತ್ರ್ಯದ ಮುಸುಕನ್ನು ಒಡೆದು, ಜನಸಮುದಾಯದ ನರಕಜೀವನ ಬಂಡವಾಳಶಾಹಿ ವ್ಯವಸ್ಥೆಯಿಂದ ಉಂಟಾಗಿದೆ ಎಂದು

ರ್ಮಗಳನ್ನು ಒದಗಿಸಲು ನಿಂತರು. ಶುದ್ಧ ಚಿಂತನೆ ಸಂಸಾರ ತ್ಯಜಿಸಿಲಿಚ್ಛಿಸಿದವರ ಕರ್ತವ್ಯವಾಯಿತು. ಇವರಿಗೆ ಅನ್ನ ಆಹಾರಾದಿ ಸೌಕರ್ಯಗಳು ದೊರೆತವು ಜನಸಾಮಾನ್ಯರು ಇವರಿಗೆ ಅನ್ನ ಆಹಾರಾದಿ ಸೌಕರ್ಯಗಳನ್ನು ಕೊಡುವುದರ ಮೂಲಕ ಸದ್ಗತಿಪಡೆದರು. ಜನಸಾಮಾನ್ಯರು ತಮ್ಮ ಮುಕ್ತಿಯನ್ನು ತಮ್ಮ ಪರವಾಗಿ ಶುದ್ಧ ಚಿಂತನೆಯಲ್ಲಿ ತೊಡಗಿರುವವರಲ್ಲಿ ಕಂಡರು; ಪ್ರತಿಯಾಗಿ ಶುದ್ಧ ಚಿಂತನೆಯಲ್ಲಿ ನಿರತರಾಗುವವರು ತಮ್ಮ ಮುಕ್ತಿಯನ್ನೂ ತಮ್ಮ ಇರುವಿಕೆಯ ಆವಶ್ಯಕತೆಯನ್ನೂ ವ್ಯವಹಾರ ಪ್ರಪಂಚದಲ್ಲಿ ಸಿಲುಕಿರುವ ಜನಸಾಮಾನ್ಯರಲ್ಲಿ ಕಂಡರು ವ್ಯವಹಾರಪ್ರಪಂಚ ಮೊದಲಿನಂತೆಯೇ ಮುಂದುವರೆಯಿತು.

ಎರಡನೆಯದಾಗಿ ಹಿಂದೂ ಧಾರ್ಮಿಕವ್ಯವಸ್ಥೆ ಹೊಸ ಧರ್ಮಗಳಿಗೆ ಹೆದರಬೇಕಾದ ಪ್ರಮೇಯವೂ ಇರಲಿಲ್ಲ. ಆರ್ಥಿಕವ್ಯವಸ್ಥೆಯಲ್ಲಿ ಯಾವ ಬದಲಾವಣೆಯೂ ಇಲ್ಲದಿದ್ದುದರಿಂದ ಹಿಂದೂ ಜಾತಿ ಪದ್ಧತಿಗೂ ಧಾರ್ಮಿಕವ್ಯವಸ್ಥೆಗೂ ಆಧಾರವಾಗಿದ್ದ ಆರ್ಥಿಕವ್ಯವಸ್ಥೆ ಸ್ವಲ್ಪವೂ ಅಲುಗಾಡದೆ ಮುಂದುವರೆಯಿತು. ಹಿಂದೂಜಾತಿಪದ್ಧತಿಯೂ ಧಾರ್ಮಿಕವ್ಯವಸ್ಥೆಯೂ ಪೂರ್ವದಂತೆಯೇ ಉಳಿದವು ಇದರಿಂದ ಜಾತಿಪದ್ಧತಿಯ ವಿರುದ್ಧ ಮತ್ತು ಹಿಂದೂ ಧಾರ್ಮಿಕವ್ಯವಸ್ಥೆಯ ವಿರುದ್ಧ ದಂಗೆ ಎದ್ದ ಧಾರ್ಮಿಕಮುಖಂಡರು ಹಿಂದೂ ಧರ್ಮದಿಂದ ರೂಪಾಂತರ ಹೊಂದಿದ ಹೊಸ ಧರ್ಮವೊಂದನ್ನೂ ಹಿಂದೂ ಆಚಾರಗಳಿಂದ ಬೇರ್ಪಟ್ಟ ಗುಂಪೊಂದನ್ನೂ ಸ್ಥಾಪಿಸಿದರೇ ವಿನಾ, ಹಿಂದೂ ಧಾರ್ಮಿಕವ್ಯವಸ್ಥೆಯ ಮೇಲೆ ಯಾವ ಪರಿಣಾಮವನ್ನೂ ಉಂಟುಮಾಡಲು ಅಶಕ್ತರಾದರು. ಕಡೆಗೆ ಹೊಸ ಧರ್ಮಗಳು ಹಿಂದೂ ಧರ್ಮದ ಸುಧಾರಿತ ಭಾಗವೆಂದೂ ಅಥವ ಅವುಗಳೂ ಸಹ ಹಿಂದೂ ಧರ್ಮದ ಒಂದು ಹೊಸ ರೂಪವೆಂದೂ ಹಿಂದೂ ಧರ್ಮ ರಕ್ಷಕರು ಸಾರಿದರು. ಹೊಸ ಧರ್ಮಗಳು ಹಿಂದೂ ಧರ್ಮದೊಡನೆ ಸಹ ಧರ್ಮಗಳಂತೆ ಉಳಿದವು; ಈಗಲೂ ಸಹ ಇವೆ.

ತಿಳಿಸಿದೆ. ತಾತ್ಕಾಲಿಕವಾಗಿ ತೃಪ್ತಿಗೊಳ್ಳುವ ಮನೋಭಾವವನ್ನೂ ಶೋಷಿತ ವರ್ಗ ವರ್ಜಿಸಿ, "ಆರ್ಥಿಕದಾಸ್ಯದ ಕರ್ತೃವಾದ ಬಂಡವಾಳಶಾಹಿ ವ್ಯವಸ್ಥೆಯ ಮೇಲೋತ್ಪಾಟನೆಗೆ ಸಂಘಟಿತರಾಗಿ" ಎಂದು ಕರೆಯಿತ್ತಿದೆ.

ಆದರೆ ಅಜಾಗೃತಿ, ಸಂಪ್ರದಾಯಬದ್ಧತೆ, ಜಡತ್ವ ಮತ್ತು ಮುಂದೆ ಆರ್ಥಿಕ ಪರಿಸ್ಥಿತಿ ಉತ್ತಮವಾಗುತ್ತದೆಂಬ ಆಸೆ ಶೋಷಿತವರ್ಗವನ್ನು ಬಹಳಕಾಲದವರಗೆ ಚೇತನಾರಹಿತ ವಸ್ತುವಿನಂತೆ ಇಡಲಾರವು. ಜನಜೀವನವನ್ನು ಆವರಿಸಿರುವ ವಿರಸಪೂರಿತ ಬಂಡವಾಳಶಾಹಿ ವ್ಯವಸ್ಥೆ ನಿರ್ದಾಕ್ಷಿಣ್ಯವಾಗಿ ತನ್ನ ಚಲನವಲನಗಳಿಂದ ದುಃಸ್ಥಿತಿಯನ್ನು ಜನಸಮೂಹಕ್ಕೆ ಕಾಣಿಕೆಯಾಗಿ ಬಿತ್ತುತ್ತಲೇ ಇರುತ್ತದೆ. ಶೋಷಿತವರ್ಗದ ಸಹನೆ ಎಲ್ಲೆ ಮೀರುವಂತೆಯೂ, ಜಡತ್ವ ಕುಲುಕುವಂತೆಯೂ ಆಗುತ್ತದೆ.

ಸ್ವಾಮ್ಯವರ್ಗದ ಧೋರಣೆಯೂ ಸಹ ಶೋಷಿತವರ್ಗದಲ್ಲಿ ಅಶಾಂತಿ ಹೆಚ್ಚಿಸಲು ಸಹಾಯಕವಾಗುತ್ತದೆ. ಲಾಭ ಸಂಗ್ರಹಣಕಾರ್ಯದಲ್ಲಿ ಏಕಾಗ್ರಚಿತ್ತದಿಂದ ಬಂಡವಾಳವರ್ಗ ತಲ್ಲೀನವಾಗಿರುವಾಗ, ಶೋಷಿತವರ್ಗದ ನಿಟ್ಟುಸುರು ಕಣ್ಣಿಗೆ ಬೀಳುವುದಿಲ್ಲ. ಶೋಷಿತವರ್ಗದಲ್ಲಿ ಕಾಣಿಸಿಕೊಳ್ಳುವ ಅತೃಪ್ತಿ ಅಸಮಾಧಾನಗಳು ಸ್ವಾಮ್ಯವರ್ಗವನ್ನು ಕೆರಳಿಸುವುದಕ್ಕೆ ಮಾತ್ರ ಕಾರಣವಾಗುತ್ತವೆ. ಶೋಷಿತವರ್ಗಕ್ಕೆ ಪರಿಹಾರ ನೀಡುವುದರ ಬದಲು, ಸ್ವಾಮ್ಯದ ರಕ್ಷಣೆಗಾಗಿ, ಇರುವ ಸ್ಥಿತಿಗತಿಗಳನ್ನು ಸಮರ್ಥಿಸುವುದಕ್ಕಾಗಿ ಬಂಡವಾಳವರ್ಗ ದಬ್ಬಾಳಿಕೆಯನ್ನು ಆರಂಭಿಸುತ್ತದೆ. ಇವುಗಳೇ ಪೀಠಿಕೆ. ಜನಸಮುದಾಯದಲ್ಲಿರುವ ಅಶಾಂತಿ ಅಸಮಾಧಾನಗಳ ಜೊತೆಗೆ ಉಗ್ರ ಆರ್ಥಿಕಬಿಕ್ಕಟ್ಟೋ ಅಥವಾ ಯುದ್ಧದ ಪರಿಣಾಮಗಳಿಂದಾಗುವ ಆರ್ಥಿಕ ದುಃಸ್ಥಿತಿಯೋ ಕೂಡಿಕೊಂಡರೆ ಸಂದಿಗ್ಧ ಪರಿಸ್ಥಿತಿ ಉಂಟಾಗುತ್ತದೆ. ಶಾಸನಬದ್ಧ ರೀತಿಯಲ್ಲಿ ಗಳಿಸಲಸಾಧ್ಯವಾದ ಪರಿಹಾರಗಳನ್ನು ಶಾಸನಗಳ ಉಲ್ಲಂಘನೆಗಳ ಮೂಲಕ ದೊರಕಿಸಿಕೊಳ್ಳಲು ಶೋಷಿತವರ್ಗ ಯತ್ನಿಸುತ್ತದೆ. ಕ್ರಾಂತಿ ಸನ್ನಿಹಿತವಾಗುತ್ತದೆ. ಕ್ರಾಂತಿಯಲ್ಲಿ ಗೆದ್ದವರ್ಗ ಶಾಸನವನ್ನು ರಚಿಸುತ್ತದೆ ಮತ್ತು ಕ್ರಾಂತಿಯನ್ನು ಸಂರಕ್ಷಿಸಲು ಕ್ರಮಗಳನ್ನು ಕೈಗೊಳ್ಳುತ್ತದೆ.[1]

---

1. ಬಿಕ್ಕಟ್ಟಿನ ಪರಿಸ್ಥಿತಿಯಲ್ಲಿ ಪರಸ್ಪರ ವಿರೋಧಿಗಳೆನಿಸಿದ ಒಪ್ಪಿಗೆಯ ತತ್ತ್ವಕ್ಕೂ ಕ್ರಾಂತಿಗೂ ಇರುವ ಹತ್ತಿರದ ಸಂಬಂಧ ಇದೇ ಆಗಿದೆ.

ಪ್ರಜಾಸತ್ತೆಯ ಬಗ್ಗೆ ಸ್ವಲ್ಪವೂ ಅನುಮಾನಕ್ಕೆ ಅಸ್ಪದವಿಲ್ಲದ ವಿವರಣೆಯನ್ನು ಆಧುನಿಕ ಸಮಾಜವಾದ ಕೊಟ್ಟಿದೆ. ಬಂಡವಾಳಶಾಹಿ ವ್ಯವಸ್ಥೆಯ ನಿರ್ಮೂಲ, ಸಮಾಜದ ಉತ್ಪಾದನಾಸಾಧನಗಳ ಸಮಾಜೀಕರಣ, ವರ್ಗಗಳ ವಿನಾಶ, ಸಮಾಜವಾದೀ ವ್ಯವಸ್ಥೆಯ ಆಗಮನ, ಎಲ್ಲವೂ ಬಹುಮತ ಇರುವ ಶಾಸನಗಳ ಮೂಲಕ ಆಗಲು ಸಾಧ್ಯವಿದೆ. ಆದರೆ ಇದರ ಸಾಧ್ಯತೆ ಕಾರ್ಮಿಕವರ್ಗದ ಜಾಗೃತಿ, ಸಂಘಟನೆ, ಚಳವಳಿ ಮತ್ತು ಬಂಡವಾಳವರ್ಗದ ಧೋರಣೆಗಳನ್ನು ಅವಲಂಬಿಸಿದೆ. ಬಂಡವಾಳ ಆರ್ಥಿಕ ವ್ಯವಸ್ಥೆಯಲ್ಲಿರುವ ವಿರಸಗಳು ಶಾಸನಸಭೆಗಳ ಮೂಲಕ ನಿರ್ನಾಮವಾಗದಿದ್ದರೆ ಬಂಡವಾಳಶಾಹಿ ವ್ಯವಸ್ಥೆಯೇ ಕ್ರಾಂತಿಕಾರಕ ಸನ್ನಿವೇಶವನ್ನು ಕಲ್ಪಿಸಿಕೊಡುತ್ತದೆ. ಕ್ರಾಂತಿಯ ಮೂಲಕ ಜನರು ತಮ್ಮ ಅಶೋತ್ತರಗಳನ್ನು ಈಡೇರಿಸಿಕೊಳ್ಳುವಂತೆ ಆಗುತ್ತದೆ. ಕ್ರಾಂತಿ ಒಬ್ಬೊಬ್ಬರ ಬಯಕೆಗಳಿಂದ ನಿರ್ಮಿತವಾಗುವುದಿಲ್ಲ. ಜನಸಮುದಾಯವೇ ಕೈಕೊಳ್ಳುವ ಕ್ರಮವಾಗಿದೆ.

ಆಧುನಿಕ ಸಮಾಜವಾದ ಕ್ರಾಂತಿಯನ್ನು ಬಯಸುವುದಿಲ್ಲ; ರಕ್ತಪಾತವನ್ನು ಬಯಸುವುದಿಲ್ಲ; ಶಕ್ತಿ ಆರಾಧಕವಲ್ಲ. ಸ್ವಾಭಾವಿಕವಾಗಿ ಅಥವಾ ಅನಿವಾರ್ಯವಾಗಿ ಮೂಡುವ ಕ್ರಾಂತಿಯನ್ನು ಗುರಿಮುಟ್ಟಿಸಲು ಕಾರ್ಮಿಕರೇ ಮುಂದಾಳತ್ವವಹಿಸಬೇಕೆಂದೂ, ರಾಜ್ಯಶಕ್ತಿಯನ್ನು ಸಂಪೂರ್ಣವಾಗಿ ಸ್ವಾಧೀನಪಡಿಸಿಕೊಳ್ಳಬೇಕೆಂದೂ, ಕಾರ್ಮಿಕವರ್ಗದ ಏಕೈಕಪ್ರಭುತ್ವವನ್ನು ಘೋಷಿಸಬೇಕೆಂದೂ ತಿಳಿಸುತ್ತದೆ. ಇಲ್ಲದಿದ್ದ ಪಕ್ಷದಲ್ಲಿ, ಉರುಳಿರುವ ಸ್ವಾಮ್ಯವರ್ಗ ಕಾರ್ಮಿಕವರ್ಗದ ಮೇಲೆ ಹಿಂತಿರುಗಿ ಬಿದ್ದು ರಾಜ್ಯಶಕ್ತಿಯನ್ನು ಪುನಃ ಅಪಹರಿಸುತ್ತದೆಂದೂ, ಸರ್ವಾಧಿಕಾರವನ್ನು ಘೋಷಿಸುತ್ತದೆಂದೂ ಎಚ್ಚರಿಸುತ್ತದೆ. ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವನ್ನು ನಾಶಪಡಿಸಲು ಹೊರಟಿರುವ ಕಾರ್ಮಿಕವರ್ಗದ ಕ್ರಾಂತಿ ಅತಿ ಉಗ್ರರೂಪದ ಬದಲಾವಣೆಗಳನ್ನು ತರಲೊರಟಿರುವ ಕ್ರಾಂತಿಯೆಂದೂ, ಇದಕ್ಕೆ ಸರಿಸಮಾನವಾದ ಸಾಮಾಜಿಕ ಆಂದೋಲನ ಇನ್ನಾವುದೂ ಇಲ್ಲವೆಂದೂ, ಬಂಡವಾಳವರ್ಗದಿಂದ ಅತಿಯಾದ ವಿರೋಧ ಮತ್ತು ಪ್ರತಿಭಟನೆ ಬರುವುದೆಂದೂ, ಆದುದರಿಂದ ಕ್ರಾಂತಿಯ ಸಂರಕ್ಷಣೆಗಾಗಿ ಬಂಡವಾಳವರ್ಗದ ಮೇಲೆ ಕಾರ್ಮಿಕವರ್ಗದ ಏಕೈಕ ಪ್ರಭುತ್ವದ ಘೋಷಣೆ ಅಗತ್ಯವೆಂದೂ ತಿಳಿಸಿದೆ.

ನಿರಂಕುಶ ಪ್ರಭುತ್ವವಿರುವ ಕಡೆಗಳಲ್ಲೆಲ್ಲಾ ಶಾಸನಬದ್ಧ ಚಳವಳಿಯ ಪ್ರಶ್ನೆಯೇ ಉದ್ಭವಿಸುವುದಿಲ್ಲ.[1] ಆಧುನಿಕ ಸಮಾಜವಾದ ಅಂತಹ ಕಡೆಗಳಲ್ಲಿ ಪ್ರಜಾಸತ್ತೆಗಾಗಿ ಶ್ರಮಿಸುವುದು ಮಾತ್ರವಲ್ಲದೆ, ಬಂಡವಾಳಶಾಹಿ ವ್ಯವಸ್ಥೆಯ ನಿರ್ಮೂಲಕ್ಕಾಗಿ ಶಾಸನಬದ್ಧ ಮತ್ತು ಶಾಸನೇತರ ಚಳವಳಿಯನ್ನು ನಡಸಿಯೇ ತೀರಬೇಕೆಂದು ತಿಳಿಸುತ್ತದೆ. ಬಂಡವಾಳಶಾಹಿ ಪ್ರಜಾಸತ್ತೆ ಇರುವ ಕಡೆಗಳಲ್ಲಿ ಶಾಸನಬದ್ಧ ಚಳವಳಿಯನ್ನು ಮಾತ್ರ ಕೈಗೊಳ್ಳುತ್ತದೆ. ಒಂದು ಪಕ್ಷ, ಕ್ರಾಂತಿಕಾರರ ಸನ್ನಿವೇಶ ಬಂದು, ಕ್ರಾಂತಿ ಉಂಟಾದರೆ ಕಾರ್ಮಿಕರೇ ಮುಂದಾಳತ್ವ ವಹಿಸಿ ಕ್ರಾಂತಿಯನ್ನು ಗುರಿ ಮುಟ್ಟಿಸಬೇಕೆಂದು ತಿಳಿಸುತ್ತದೆ. ಇದೇ ಪ್ರಜಾಸತ್ತೆಯ ಬಗ್ಗೆ ವೈಜ್ಞಾನಿಕ ಸಮಾಜವಾದದ ಧೋರಣೆಯಾಗಿದೆ.

ಮೂರನೆಯದಾಗಿ, ವೈಜ್ಞಾನಿಕಸಮಾಜವಾದ ವ್ಯಕ್ತಿಸ್ವಾತಂತ್ರ್ಯಕ್ಕೆ ಚ್ಯುತಿತರುತ್ತದೆ ಎಂಬ ಪ್ರಶ್ನೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿ ವ್ಯಕ್ತಿಗಳು ಹೊಂದಿರಬಹುದಾದ ಕೆಲವು ಬಗೆಯ ಸ್ವಾತಂತ್ರ್ಯಗಳಿಗೆ—ಸ್ವಾಮ್ಯವನ್ನು ಹೊಂದಿರಲು, ಇತರರನ್ನು ಕೂಲಿಗೆ ನೇಮಿಸಿಕೊಳ್ಳಲು, ಲಾಭಕ್ಕಾಗಿ ವ್ಯಾಪಾರಮಾಡಲು, ಉದ್ಯಮವನ್ನು ಆರಂಭಿಸಲು, ಬೇಡವಾದರೆ ಉದ್ಯಮವನ್ನು ಮುಚ್ಚಲು, ಲಾಭದ ಹೆಸರಿನಲ್ಲಿ ಶೋಷಣೆ ನಡೆಸಲು, ನಿರುದ್ಯೋಗಿಯಾಗಲು, ಭಿಕ್ಷಾಟನೆಮಾಡಲು, ದಿವಾಳಿಯಾಗಲು—ಸಮಾಜವಾದೀ ವ್ಯವಸ್ಥೆಯಲ್ಲಿ ಸ್ಥಳವಿಲ್ಲ. ಇದರಿಂದ ಸ್ವಾತಂತ್ರ್ಯಗಳೆಂದು ಹೇಳಲಾದ ಹಲವು ಹಕ್ಕುಗಳಿಗೆ ಸಮಾಜವಾದೀ ವ್ಯವಸ್ಥೆಯಲ್ಲಿ ಚ್ಯುತಿಬರುವುದು ವಾಸ್ತವದ ಅಂಶ. ಆದರೆ ಇವುಗಳ ಚ್ಯುತಿಗಾಗಿ ಪಶ್ಚಾತ್ತಾಪಪಡಬೇಕಾದ ವಿಷಯವಲ್ಲನೆಂದು ವೈಜ್ಞಾನಿಕ ಸಮಾಜವಾದ ತಿಳಿಸುತ್ತದೆ.

---

(1) ನಿರಂಕುಶಪ್ರಭುತ್ವದಲ್ಲಿ ಪ್ರಜೆಗಳಿಂದ ನೇಮಿತವಾದ ಸರ್ಕಾರವಿರುವುದಿಲ್ಲ. ರಾಜನೇ ಸರ್ಕಾರ; ಮಂತ್ರಿಗಳು ಮತ್ತು ಅಧಿಕಾರವರ್ಗ ರಾಜನಿಗೆ ಮಾತ್ರ ಜವಾಬ್ದಾರರಾಗಿರುತ್ತಾರೆ. ರಾಜನ ಅಧಿಕಾರದ ಆಧಾರಸ್ತಂಭಗಳೆಂದರೆ ಸೈನ್ಯ, ಕಂದಾಯ, ಖಜಾನೆ ಮತ್ತು ಹಿಂಬಾಲಕವರ್ಗ. ರಾಜನಿಗೆ ಸೇರಿದ ಸ್ವಾಮ್ಯವೇ ಅಧಿಕಪ್ರಮಾಣದಲ್ಲಿರುವಾಗ ಸಮಾಜದಲ್ಲಿರುವ ಸ್ವಾಮ್ಯವರ್ಗದಲ್ಲಿ ತನ್ನ ಭದ್ರತೆಯನ್ನು ಕಾಣುತ್ತಾನೆ; ಪ್ರತಿಯಾಗಿ ಸ್ವಾಮ್ಯವರ್ಗವೂ ಸಹ ರಾಜನ ಇರುವಿಕೆಯಲ್ಲಿ ಸ್ವಾಮ್ಯಕ್ಕೆ ರಕ್ಷಣೆಯನ್ನು ಕಂಡು ರಾಜಪ್ರಭುತ್ವದ ಆರಾಧಕವಾಗಿರುತ್ತದೆ.

ಬಂಡವಾಳಶಾಹಿ ವ್ಯವಸ್ಥೆ ಎಂತಹ ಕೃತಕರೂಪದ ಸ್ವಾತಂತ್ರ್ಯ ವನ್ನು ಕಾರ್ಮಿಕವರ್ಗಕ್ಕೆ ದಯಪಾಲಿಸಿದೆ ಎಂಬುದು ವೇದ್ಯವಾಗಿರುವ ಅಂಶ. ಸ್ವಾತಂತ್ರ್ಯದ ಹೆಸರಿನಲ್ಲಿ ಬಂಡವಾಳಶಾಹಿ ವ್ಯವಸ್ಥೆ ಜನಸಮು ದಾಯಕ್ಕೆ ಆರ್ಥಿಕದಾಸ್ಯವನ್ನು ಕಲ್ಪಿಸಿದೆ. ಪೌರರು ಹೊಟ್ಟೆಯ ಪಾಡಿಗಾಗಿ ತಮ್ಮ ವ್ಯಕ್ತಿತ್ವವನ್ನೇ ಕಳೆದುಕೊಂಡಿದ್ದಾರೆ. ಬಂಡವಾಳ ಶಾಹಿ ವ್ಯವಸ್ಥೆ ಎಡೆಕೊಟ್ಟಿರುವ ಸ್ವಾತಂತ್ರ್ಯಗಳು ಸ್ವಾಮ್ಯವರ್ಗಕ್ಕೆ ಮಾತ್ರ ಕಲ್ಪಿಸಿರುವ ಸ್ವಾತಂತ್ರ್ಯಗಳಾಗಿವೆ; ಕಾರ್ಮಿಕವರ್ಗದ ಶೋಷಣೆ ಸ್ವಾತಂತ್ರ್ಯದ ಹೆಸರಿನಲ್ಲಿ ನಡೆಯಲು ಅವಕಾಶವಾಗಿದೆ.

ಜನಸಮುದಾಯದ ಏಳಿಗೆಗೇ ಕಂಟಕವಾಗಿರುವ ಬಂಡವಾಳಶಾಹಿ ಸ್ವಾತಂತ್ರ್ಯಗಳಿಗೆ (Capitalist Liberties) ಆಧುನಿಕ ಸಮಾಜ ವಾದೀ ವ್ಯವಸ್ಥೆಯಲ್ಲಿ ಪುರಸ್ಕಾರವಿಲ್ಲ. ಅದಕ್ಕೆ ಪ್ರತಿಯಾಗಿ, ಸರ್ವರ ಏಳಿಗೆಗೂ ಅವಕಾಶವಿರುವಂತಹ ಮೇಲ್ಮಟ್ಟದ ಸಮಾಜವಾದೀ ಸ್ವಾತಂತ್ರ್ಯಕ್ಕೆ (Socialist Liberty) ಮಾತ್ರ ಸ್ಥಳವಿದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವಂತೆ ವ್ಯಕ್ತಿಗಳು ಸಮಾನ ಸಾಮಾಜಿಕ ಮತ್ತು ರಾಜ ಕೀಯ ಹಕ್ಕುಗಳನ್ನು (Social and Political Rights) ಹೊಂದಿರುವುದು ಮಾತ್ರವಲ್ಲದೆ, ಆಧುನಿಕ ಸಮಾಜವಾದೀ ವ್ಯವಸ್ಥೆಯಲ್ಲಿ ಆರ್ಥಿಕವಾಗಿಯೂ ವ್ಯಕ್ತಿಗಳು ಸಮಾನಹಕ್ಕನ್ನು[1] ಪಡೆದಿದ್ದಾರೆ. ಜನ ಜೀವನಕ್ಕೆ ಆಧಾರಭೂತವಾದ ಸಂಪತ್ ಸಾಧನಗಳು ಅಲ್ಪಸಂಖ್ಯಾತರ ಸುಖಕ್ಕಾಗಿ ಇರದೆ ಎಲ್ಲರ ಸುಖಕ್ಕಾಗಿ ಮತ್ತು ಏಳಿಗೆಗಾಗಿ ಮೀಸಲಾಗಿವೆ. ಜನಸಮುದಾಯವನ್ನು ಶೋಷಣೆಯಿಂದ, ನಿರುದ್ಯೋಗದಿಂದ, ಮತ್ತು ಆರ್ಥಿಕದುಃಸ್ಥಿತಿಯಿಂದ ಪಾರುಮಾಡಲು ಸರ್ವಜನದ ಸಂಪತ್ ಸಾಧನ ಗಳನ್ನು ಸಮಾಜೀಕರಣ ಮಾಡಲಾಗಿದೆ.

---

(1) ಆರ್ಥಿಕಸಮಾನತೆಯ ಅರ್ಥಕ್ಕೆ—೧೦೦ ನೇ ಪುಟ ನೋಡಿ. ಈ ಪುಸ್ತ ಕದ ಹಲವೆಡೆಗಳಲ್ಲಿ ಆಧುನಿಕ ಸಮಾಜವಾದೀವ್ಯವಸ್ಥೆ ಆರ್ಥಿಕವಾಗಿಯು ವ್ಯಕ್ತಿ ಗಳಿಗೆ ಸಮಾನತೆ ತರುತ್ತದೆ ಎಂದೂ, ಪ್ರಜಾಸತ್ತೆಯ ಅರ್ಥ ಆರ್ಥಿಕಪ್ರಜಾ ಸತ್ತೆಯೂ ಆಹುದೆಂದೂ ಹೇಳಲಾಗಿದೆ. ಪುಟ ೧೧೬ ರಲ್ಲಿ ಗಿಲ್ಡ್ ಸಮಾಜವಾದ ವನ್ನು ವಿವರಿಸುವಾಗ ಆರ್ಥಿಕಪ್ರಜಾಸತ್ತೆಯನ್ನು ತರುವುದು ಅವರ ಉದ್ದೇಶ ವಾಗಿದೆ ಎಂದು ಹೇಳಲಾಗಿದೆ. ಆದುದರಿಂದ, ಆಧುನಿಕ (ಮಾರ್ಕ್ಸ್ವಾದ)

ಸಮಾಜದ ಸಂಪತ್‌ಸಾಧನಗಳಲ್ಲಿ ಖಾಸಗೀಸ್ವಾಮ್ಯವಿರುವ ಸಮಾಜಗಳಲ್ಲೆಲ್ಲಾ ಸ್ವಾಮ್ಯರಹಿತವರ್ಗದ ಸ್ವಾತಂತ್ರ್ಯ ಆರ್ಥಿಕವಾಗಿ ಭಿನ್ನವಾಗಿದೆ. ಮೇಲಾಗಿ ವ್ಯಕ್ತಿಸ್ವಾತಂತ್ರ್ಯ ಎಲ್ಲ ಕಾಲದಲ್ಲೂ, ಎಲ್ಲ ಸಮಯದಲ್ಲೂ ಒಂದೇ ತೆರನಾಗಿಲ್ಲ. ವ್ಯಕ್ತಿಗಳು ಹೊಂದಿರಬೇಕಾದ ಸ್ವಾತಂತ್ರ್ಯವನ್ನು ಸಮಾಜಕಲ್ಯಾಣದ ದೃಷ್ಟಿಯಿಂದ ಮಿತಗೊಳಿಸಲಾಗಿದೆ. ಯಾವ ಸಮಾಜವೂ ವ್ಯಕ್ತಿಗಳಿಗೆ ಸ್ವೇಚ್ಛಾ ಸ್ವಾತಂತ್ರ್ಯವನ್ನು ಕೊಟ್ಟಿಲ್ಲ. ವ್ಯಕ್ತಿ ಸ್ವಾತಂತ್ರ್ಯ ಮತ್ತು ಸಮಾಜಕಲ್ಯಾಣದ ಪರಿಮಿತಿ ಆಯಾ ಸಮಾಜದ ಆರ್ಥಿಕವ್ಯವಸ್ಥೆಯನ್ನು ಅವಲಂಬಿಸಿದೆ. ವ್ಯಕ್ತಿಗಳ ಸ್ವಾತಂತ್ರ್ಯ ಪ್ರತಿ ಸಮಾಜದ ಆರ್ಥಿಕವ್ಯವಸ್ಥೆ ಎಡೆಕೊಡುವ ಆರ್ಥಿಕಸಂಬಂಧಗಳ---ಕೂಲಿಯವನಾಗಿರಲು, ಭಿಕ್ಷುಕನಾಗಿರಲು, ವ್ಯಾಪಾರಗಾರನಾಗಿರಲು, ಲೇವಾದೇವಿಯವನಾಗಿರಲು, ಜಮೀನ್ದಾರನಾಗಿರಲು, ಗುಲಾಮರನ್ನು ಹೊಂದಿರುವನಾಗಿರಲು, ಕೈಗಾರಿಕೋದ್ಯಮಿಯಾಗಿರಲು, ನಿರುದ್ಯೋಗಿಯಾಗಿರಲು, ದಳ್ಳಾಳಿಯಾಗಿರಲು, ಇತ್ಯಾದಿ — ಪ್ರತಿಬಿಂಬವಾಗಿದೆ. ಈ ಆರ್ಥಿಕ ಸಂಬಂಧಗಳು ಸಮಾಜ ವಿಕಾಸದ ಪ್ರತಿ ಘಟ್ಟದಲ್ಲೂ- ಪ್ರಾಚೀನ, ಊಳಿಗಮಾನ್ಯ ಮತ್ತು ಬಂಡವಾಳಶಾಹಿ ವ್ಯವಸ್ಥೆ — ವಿವಿಧ ರೂಪದಲ್ಲಿವೆ.[1] ಬದಲಾವಣೆ ಹೊಂದಿರುವ, ಹೊಂದುತ್ತಲಿರುವ ಆರ್ಥಿಕ ಸಂಬಂಧಗಳು ವ್ಯಕ್ತಿ ಸ್ವಾತಂತ್ರ್ಯದಲ್ಲೂ ಬದಲಾವಣೆ ತಂದಿವೆ. ಬಂಡವಾಳಶಾಹಿ ವ್ಯವಸ್ಥೆಯ ಆರ್ಥಿಕ ಸಂಬಂಧಗಳು ನಿರ್ಮೂಲಹೊಂದಿದ ಹಾಗೆ ಹೊಸ ಬಗೆಯ ಸಮಾಜವಾದೀ ಆರ್ಥಿಕ ಸಂಬಂಧಗಳು ಹೊರಹೊಮ್ಮುತ್ತವೆ. ಈ ಹೊಸ ಆರ್ಥಿಕ ಸಂಬಂಧಗಳು ಕಲ್ಪಿಸುವ ಹೊಸ

ಸಮಾಜವಾದಕ್ಕೂ ಗಿಲ್ಡ್‌ವಾದಕ್ಕೂ ವ್ಯತ್ಯಾಸವೇ ಇಲ್ಲವೆಂಬ ಸಂಶಯ ಬರಬಹುದು. ಈ ಕಾರಣಗಳಿಂದ ಮಾರ್ಕ್ಸ್‌ವಾದದಲ್ಲಿ ಸಮಾನತೆ (ಆರ್ಥಿಕ) ಎಂಬ ಶಬ್ದ ಪಡೆದಿರುವ ಅರ್ಥವನ್ನು ಜ್ಞಾಪಕದಲ್ಲಿಡುವುದು ಬಹಳ ಅಗತ್ಯವಿದೆ. ಸಂಕ್ಷಿಪ್ತವಾಗಿ ಹೇಳುವುದಾದರೆ ಆರ್ಥಿಕ ಸಮಾನತೆ ಅಥವ ಆರ್ಥಿಕಪ್ರಜಾಸತ್ತೆ ಎಂದರೆ ವರ್ಗವ್ಯತ್ಯಾಸಗಳನ್ನು ನಾಶಪಡಿಸುವುದಾಗಿದೆ. ಮಾರ್ಕ್ಸ್-ಏಂಗೆಲ್ಸರ ಆರಿಸಲ್ಪಟ್ಟ ಪತ್ರವ್ಯವಹಾರ, ಪುಟ 337 ಲಾರೆನ್ಸ್ ಮತ್ತು ವಿಷಾರ್ಟ್ ಪ್ರಕಟಣೆ, 1936

(1) ಆರ್ಥಿಕ ಸಂಬಂಧಗಳಲ್ಲಿ ಉಂಟಾಗಿರುವ ಬದಲಾವಣೆಗಳ ಬಗ್ಗೆ ಮತ್ತು ಅವು ವಿವಿಧ ಕಾಲಗಳಲ್ಲಿ ಇದ್ದ ರೂಪಗಳ ಬಗ್ಗೆ 3 ನೇ ಅಧ್ಯಾಯ ನೋಡಿ.

ಬಗೆಯ ಸಮಾಜವಾದೀ ಸ್ವಾತಂತ್ರ್ಯವನ್ನು ಆದರದಿಂದ ಬರಮಾಡಿಕೊಳ್ಳಬೇಕು.

ಸಮಾಜವಾದೀ ವ್ಯವಸ್ಥೆಯಲ್ಲಿ ಸ್ವಾತಂತ್ರ್ಯಕ್ಕೆ ಚ್ಯುತಿಬರುತ್ತದೆ ಎಂಬ ರೋದನ ಬಂಡವಾಳಶಾಹಿ ವ್ಯವಸ್ಥೆಯೇ ಶಾಶ್ವತ ಮತ್ತು ಚಿರವಾದದ್ದೆಂಬ ಭ್ರಮೆಯ ಪ್ರತಿಫಲವಾಗಿದೆ. ಸದ್ಯಕ್ಕೆ ಆಧುನಿಕ ಸಮಾಜವಾದೀ ವ್ಯವಸ್ಥೆಯನ್ನು ಬಿಟ್ಟರೂ, ಪ್ರಕೃತ ಬಂಡವಾಳಶಾಹಿ ವ್ಯವಸ್ಥೆ ತಂದೊಡ್ಡಿರುವ ವಿರಸಗಳಿಂದ ಪಾರಾಗಲು ಬಂಡವಾಳಶಾಹಿ ಪ್ರಜಾಸತ್ತೆಗಳು ಕೈಗೊಂಡಿರುವ ಆರ್ಥಿಕ ನೀತಿ–ಹತ್ತೋಟಿಗಳು, ಸರ್ಕಾರೀ ಉದ್ಯಮಗಳು, ಕನಿಷ್ಠ ಕೂಲಿಯ ನಿಯಮ, ಲಾಭದ ನಿಯಮ, ಇತ್ಯಾದಿ–ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಸ್ವಾತಂತ್ರ್ಯಗಳಿಗೆ ಧಕ್ಕೆ ತಂದಿದೆ. ಸರ್ಕಾರೀ ಉದ್ಯಮಗಳಲ್ಲಿ ಕೆಲಸ ಮಾಡುತ್ತಿರುವ ನೌಕರರು ಸರ್ಕಾರ ರಚಿಸುತ್ತಿರುವ ಶಿಸ್ತಿನ ನಿಯಮಗಳಿಗೆ ಒಳಪಟ್ಟು ಆರ್ಥಿಕವಾಗಿ ಅಲ್ಲದೆ, ರಾಜಕೀಯ ದೃಷ್ಟಿಯಿಂದಲೂ ಅಸ್ವಾತಂತ್ರ್ಯರಾಗುತ್ತಿದ್ದಾರೆ.[1] ಖಾಸಗೀ ಉದ್ಯಮಗಳಲ್ಲಿರುವ ನೌಕರರ ಸ್ವಾತಂತ್ರ್ಯವನ್ನು ಇನ್ನು ವರ್ಣಿಸಬೇಕಾದ ಪ್ರಮೇಯವೇ ಇಲ್ಲ. ಮುಖ್ಯವಾಗಿ ಗಮನಿಸಬೇಕಾದದ್ದೆಂದರೆ ಆರ್ಥಿಕ ವ್ಯವಸ್ಥೆಯ ಮಾರ್ಪಾಟಿನೊಡನೆ ಆರ್ಥಿಕ ಸಂಬಂಧಗಳಲ್ಲಿ ಉಂಟಾಗುವ ಬದಲಾವಣೆಗಳು, ಮತ್ತು ಈ ಬದಲಾವಣೆಗಳು ಶಾಶ್ವತವೆಂದು ಪರಿಗಣಿಸಲಾಗಿದ್ದ ಹಲವು ವ್ಯಕ್ತಿ

(1) ಸರ್ಕಾರೀ ಕೆಲಸಕ್ಕೆ ಸೇರುವವರು ಸರ್ಕಾರ ರಚಿಸುವ ನಿಯಮಗಳಿಗೆ ತಲೆಬಾಗದಿದ್ದರೆ ಕೆಲಸ ದೊರಕುವುದಿಲ್ಲ. ಆದರೆ, ಉದರಪೋಷಣೆ ಸರ್ಕಾರಿ ಕೆಲಸವನ್ನು ಅಪೇಕ್ಷಿಸುವಂತೆ ಬಲಾತ್ಕರಿಸುತ್ತದೆ. ನಿಯಮಗಳಿಗೆ ತಲೆಬಾಗಲು ಇಷ್ಟವಿಲ್ಲದಿದ್ದರೆ ನಿರುದ್ಯೋಗಿಯಾಗಿ ಇರಬೇಕು, ಇಲ್ಲವೇ ಸಾಕಷ್ಟು ಸ್ವಾಮ್ಯಶಕ್ತಿ ಇರಬೇಕು. ಬಂಡವಾಳಶಾಹಿ ಸಮಾಜ ವ್ಯವಸ್ಥೆಯಲ್ಲಿ ಖಾಸಗೀ ಸ್ವಾಮ್ಯದ ಅವಶ್ಯಕತೆ ಈಗ ಎದ್ದುಕಾಣುತ್ತದೆ. ಸರ್ಕಾರೀ ನೌಕರರಿಗೆ ರಚಿಸುವ ಸೇವಾ ನಿಯಮಗಳು ಇಲ್ಲದಿದ್ದರೆ ಸರ್ಕಾರದ ಕೆಲಸಕಾರ್ಯಗಳು ನಡೆಯುವುದೇ ಅಸಾಧ್ಯವಾಗುತ್ತದೆಂಬ ವಾದವಿದೆ. ಸದ್ಯಕ್ಕೆ ಈ ವಾದದಲ್ಲಿ ಅಡಗಿರುವ ಸತ್ಯ ಅಥವ ಅಸತ್ಯ, ಏನೇ ಇರಲಿ, ಉತ್ಪಾದನಾ ಸಾಧನಗಳ ಸಮಾಜೀಕರಣ ಮುಂದುವರಿದ ಹಾಗೆ ಮತ್ತು ಹೆಚ್ಚು ಹೆಚ್ಚು ಜನರು ಸರ್ಕಾರೀ ಉದ್ಯಮಗಳಲ್ಲಿ ಕೆಲಸಕ್ಕೆ ಸೇರಿಕೊಂಡ ಹಾಗೆ, ಸರ್ಕಾರೀ ಸೇವಾ ನಿಯಮಗಳು ವ್ಯಕ್ತಿಸ್ವಾತಂತ್ರ್ಯದ ಮೇಲೆ ಉಂಟು ಮಾಡುವ ಪರಿಣಾಮಗಳನ್ನು ಗಮನಿಸುವುದು ಬಹು ಅಗತ್ಯವಾಗಿದೆ.

ಸ್ವಾತಂತ್ರ್ಯಗಳಿಗೆ ಚ್ಯುತಿ ತರುವ ಅಂಶ. ಮೃತಪ್ರಾಯ ಬಂಡವಾಳಶಾಹಿ ವ್ಯವಸ್ಥೆಯನ್ನು ವಿಮರ್ಶಿಸಿ, ಅದರ ಅಳಿವು ನಿಶ್ಚಯವೆಂದೂ, ಅದರ ಅಳಿವಿನೊಡನೆ ಹೊಸ ಆರ್ಥಿಕ ಸಂಬಂಧ ಮತ್ತು ಸ್ವಾತಂತ್ರ್ಯಗಳು ಬರುವುವೆಂದೂ ಆಧುನಿಕ ಸಮಾಜವಾದ ತಿಳಿಸುತ್ತದೆ.

ವ್ಯಕ್ತಿಸ್ವಾತಂತ್ರ್ಯ ಕೇವಲ ಒಂದು ಭಾವನೆಯಲ್ಲ; ನಿತ್ಯಜೀವನದಲ್ಲಿ ಜನಸಮುದಾಯ ವಾಸ್ತವವಾಗಿ ಅನುಭವಿಸುವ ಅಂಶವಾಗಿರಬೇಕು. ಅಂತಹ ವಾಸ್ತವ ಅನುಭವವನ್ನು ಆಧುನಿಕ ಸಮಾಜವಾದೀ ವ್ಯವಸ್ಥೆ ಸಮಾಜದ ಸಂಪತ್ ಸಾಧನಗಳಲ್ಲಿ ಖಾಸಗೀ ಸ್ವಾಮ್ಯವನ್ನೂ, ವರ್ಗಗಳನ್ನೂ, ಶೋಷಣೆಯನ್ನೂ, ವಿನಾಶಗೊಳಿಸುವುದರ ಮೂಲಕ ಕಲ್ಪಿಸಿಕೊಡುತ್ತದೆ. ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿ ಸತ್ವಹೀನವಾಗಿರುವ ಸಾಮಾಜಿಕ ಮತ್ತು ರಾಜಕೀಯ ಹಕ್ಕುಗಳು, ಆರ್ಥಿಕ ಸಮಾನತೆಯಿಂದ ಪುಷ್ಟಿಪಡೆದು ವ್ಯಕ್ತಿಜೀವನ ಪ್ರಫುಲ್ಲವಾಗುವಂತೆ ಸಮಾಜವಾದೀ ಆರ್ಥಿಕ ವ್ಯವಸ್ಥೆ ಅಣಿಮಾಡಿಕೊಡುತ್ತದೆ.

ನಾಲ್ಕನೆಯದಾಗಿ, ಸಮಾಜದಲ್ಲಿರುವ ಕುಂದುಕೊರತೆಗಳಿಗೆ ಸ್ವಾಮ್ಯವೇ ಮುಖ್ಯಕಾರಣವೆಂದು ಭಾವಿಸುವುದು ತಪ್ಪಾಗುತ್ತದೆಂದೂ, ಅನೇಕ ಕುಂದು ಕೊರತೆಗಳಿಗೆ ಮನುಷ್ಯ ಸ್ವಭಾವ (Human Nature) ಕಾರಣವಾಗಿದೆಯೆಂದೂ, ವ್ಯಕ್ತಿಗಳ ಮನೋವೃತ್ತಿ ಮತ್ತು ಸ್ವಭಾವವನ್ನು ತಿದ್ದುಪಡಿ ಮಾಡಿದಹೊರತೂ ಸಮಾಜದಲ್ಲಿರುವ ಕುಂದುಕೊರತೆಗಳ ಸಮಸ್ಯೆಯನ್ನು ಬಗೆ ಹರಿಸಿದಂತೆಯೇ ಆಗುವುದಿಲ್ಲವೆಂದೂ, ಸಮಾಜವಾದೀ ವ್ಯವಸ್ಥೆಯಲ್ಲೂ ಮನುಷ್ಯ ಮನೋವೃತ್ತಿ ಮತ್ತು ಸ್ವಭಾವದಿಂದ ಹೊಮ್ಮುವ ದ್ವೇಷ, ಮೋಸ, ಅಸಹನೆ, ದುರಾಸೆ, ಸ್ವಾರ್ಥ, ಇತ್ಯಾದಿ ಇರುವುದಾದರೆ ಸಮಾಜವಾದದ ಹೋರಾಟ ವ್ಯರ್ಥವಾಗುತ್ತದೆಂದೂ, ಈ ದುರ್ಗುಣಗಳೇ ಆದಿಯಿಂದ ಇಲ್ಲಿಯವರೆಗೆ ಸಮಾಜ ಜೀವನವನ್ನು ವಿಕಾರಗೊಳಿಸುತ್ತಲಿವೆಯೆಂದೂ, ಆದುದರಿಂದ ನೈತಿಕ ಕ್ರಾಂತಿಯಿಂದ ಮಾತ್ರ ಸಮಾಜದ ಕುಂದು ಕೊರತೆಗಳನ್ನು ತೊಡೆದುಹಾಕಲು ಸಾಧ್ಯ ಎಂದೂ ವಾದವಿದೆ.

ಮನುಷ್ಯ ಸ್ವಭಾವ ಮತ್ತು ವರ್ತನೆಯ ಬಗ್ಗೆ ಆವರಣ (Environment) ವಾದಕ್ಕೆ ಆಧುನಿಕ ಸಮಾಜವಾದ ಸಮರ್ಥನೆಕೊಟ್ಟಿದೆ. ಮಾನವ ವ್ಯಕ್ತಿ ಸಮಾಜಜೀವಿ ಮತ್ತು ಸಂಘಜೀವಿ. ಆತನ ಸ್ವಭಾವವನ್ನು ಆತನು

ಬೆಳೆಯುವ ವಾತಾವರಣ, ಜೀವಿಸುತ್ತಿರುವ ಸಮಾಜ ವ್ಯವಸ್ಥೆ, ಪಡೆಯುವ ವಿದ್ಯಾಭ್ಯಾಸ, ಸಹವಾಸ, ಸಂಬಂಧಗಳು, ಇತ್ಯಾದಿ ಶಕ್ತಿಗಳು ನಿರ್ಧರಿಸುತ್ತವೆ. ಆತನಿಗೆ ಜನ್ಮತಃ ಶಾಶ್ವತವೆನ್ನುವ ಗುಣಗಳಿಲ್ಲ; ಕ್ರಮೇಣ ಬೆಳವಣಿಗೆಯಲ್ಲಿ ಆತನು ಸ್ವಭಾವಗಳನ್ನು ಹೊಂದುತ್ತಾನೆ. ಬಾಲ್ಯದಲ್ಲಿ ಶಿಕ್ಷಣಪಡೆದ ವ್ಯಕ್ತಿ ಒಂದು ರೀತಿಯಾಗುತ್ತಾನೆ, ಇಲ್ಲದವನು ಒಂದು ರೀತಿಯಾಗುತ್ತಾನೆ. ಬಡತನದಲ್ಲಿ ಸಿಕ್ಕಿರುವವನ ಸ್ವಭಾವ ಒಂದು ರೀತಿಯಾಗುತ್ತದೆ; ಶ್ರೀಮಂತ ಮನೆತನದಲ್ಲಿ ಜನಿಸಿದವನ ವರ್ತನೆಯೇ ಒಂದು ವಿಧವಾಗುತ್ತದೆ. ತನ್ನ ಕಷ್ಟ ಪರಂಪರೆಗಳನ್ನು ಪರಿಹರಿಸಿಕೊಳ್ಳಲು ಹಣ ಸಂಪಾದನೆಮಾಡಲು ಹೊರಟು ಸೋತ ವ್ಯಕ್ತಿಯ ವರ್ತನೆ ಒಂದು ಬಗೆಯಾಗುತ್ತದೆ; ಗೆದ್ದಿರುವವನ ವರ್ತನೆ ಒಂದು ಬಗೆ ಇರುತ್ತದೆ. ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ಆರ್ಥಿಕ ಏರಿಳಿತಗಳಿಗೆ, ಅನಿಶ್ಚಿತ ವಾತಾವರಣಕ್ಕೆ, ಅಭದ್ರತೆಗೆ ಸಿಕ್ಕಿರುವ ವ್ಯಾಪಾರಿ, ಉದ್ಯಮದಾರ, ದಳ್ಳಾಳಿ, ಕೂಲಿಗಾರ, ಇವರುಗಳ ಜೀವನ ನಿತ್ಯದೃಷ್ಟಾಂತಗಳಾಗಿವೆ. ಅನಿಶ್ಚಿತೆ ಮತ್ತು ಅಭದ್ರತೆಗಳಿಂದ ಪಾರಾಗಿ ಬದುಕಬೇಕು ಎಂಬ ಆರ್ಥಿಕ ಒತ್ತಾಯ ಮನುಷ್ಯ ಸ್ವಭಾವ ಮತ್ತು ವರ್ತನೆಯಮೇಲೆ ಪ್ರಭಾವ ಬೀರಿವೆ; ವ್ಯಕ್ತಿಯನ್ನು ಆವರಣದ ಕೈಗೊಂಬೆಯನ್ನಾಗಿ ಮಾಡಿವೆ. ಆದುದರಿಂದ ಮಾನವ ವ್ಯಕ್ತಿಗಳಲ್ಲಿ ಶಾಶ್ವತವಾದ ಸ್ವಭಾವ ಅಥವಾ ಗುಣಗಳಿಲ್ಲ. ಹೊಸ ಆವರಣದಲ್ಲಿ ಹೊಸ ಗುಣಗಳು ಬರುವುವು.

ಸಮಾಜದ ಕುಂದುಕೊರತೆಗಳಿಗೆ ಮನುಷ್ಯ ಸ್ವಭಾವವಾಗಲೀ ಅಥವಾ ನೈತಿಕಚ್ಯುತಿಯಾಗಲೀ ಕಾರಣವಾಗಿಲ್ಲ. ಒಂದು ಪಕ್ಷ ನೈತಿಕಚ್ಯುತಿಯಿಂದ ಮಾನವನ ಅಧೋಗತಿಯುಂಟಾಗಿದೆ ಎಂದು ಭಾವಿಸುವುದಾದರೂ, ಇಷ್ಟೊಂದು ನೀತಿಗಳ ಉಪದೇಶ ನಡೆದಿದ್ದರೂ ನೈತಿಕಸಮಸ್ಯೆ ಏಕೆ ಪರಿಹಾರ ಹೊಂದಿಲ್ಲ ಎಂಬ ಸಮಸ್ಯೆಗೆ ಉತ್ತರ ದೊರೆಯುವುದಿಲ್ಲ ಜನರು ನೀತಿಮಾರ್ಗವನ್ನು ಬೇಡವೆಂದು ನಿರಾಕರಿಸುತ್ತಿದ್ದಾರೆಯೇ ಅಥವಾ ಮನಸ್ಸು ಮಾಡಿದರೂ ಜೀವನದಲ್ಲಿ ಅವುಗಳಿಗೆ ಅವಕಾಶವಿಲ್ಲವೇ ಎಂಬ ಸಮಸ್ಯೆ ತಲೆಹಾಕುತ್ತದೆ. ಮುಖ್ಯವಾಗಿ, ಸುಗುಣಗಳು ಜೀವನದಲ್ಲಿ ಪ್ರಕಾಶಿತವಾಗಲು ಸಮಾಜ ವ್ಯವಸ್ಥೆಯಲ್ಲಿರುವ ಪೈಪೋಟಿ, ನೂಕುನುಗ್ಗಲು, ಅಭದ್ರತೆ, ದಾರಿದ್ರ್ಯ, ನಾಳೆ ಏನೆಂಬ ಚಿಂತನೆ ಮತ್ತು ಡಾಂಬಿಕ ಬದುಕು

ಇವು ಅವಕಾಶಕೊಡುತ್ತಿಲ್ಲ. ಆದುದರಿಂದ ಸುಗುಣಾವಳಿಗಳ ಮತ್ತು ನೀತಿಯ ಉಪದೇಶ, ಉಪದೇಶವಾಗಿ ಉಳಿದಿದೆಯೇ ವಿನಾ, ಜೀವನದಲ್ಲಿ ಬೆರಕೆಯಾಗಿಲ್ಲ.

ಸ್ಥಿತಿಗತಿ ಹೀಗಿರುವಾಗ ನೀತಿಗಳಿಗೆ ಚ್ಯುತಿ ಬಂತೆಂಬ ವಾದಕ್ಕೂ ನೀತಿಗಳ ಸ್ವರೂಪವನ್ನು ಅರಿಯಲು ಪೂಜೆ, ಭಕ್ತಿ ಮತ್ತು ಆಸ್ತಿಕತ್ವ ಇವುಗಳಿಂದ ಸಾಧ್ಯವೆಂಬ ವಾದಕ್ಕೂ ಅವಕಾಶವೇ ಇಲ್ಲ. ಸಮಾಜವಿದೆ; ಜೀವಂತ ವ್ಯಕ್ತಿಗಳಿದ್ದಾರೆ; ಬಂಡವಾಳಶಾಹಿ ವ್ಯವಸ್ಥೆ ವ್ಯಕ್ತಿಗಳ ಸ್ವಭಾವ ಮತ್ತು ವರ್ತನೆಯ ಮೇಲೆ ಬೀರಿರುವ ದುಃಪ್ರಭಾವವಿದೆ. ಈಗ ನೈತಿಕ ಸಮಸ್ಯೆಯ ಪರಿಹಾರಕ್ಕಾಗಿ ಈ ದುಃಪ್ರಭಾವವನ್ನು ತೊಡೆಯಬೇಕು. ಸಮಾಜವಾದೀ ಆವರಣ ವ್ಯಕ್ತಿವರ್ತನೆಯಲ್ಲಿ ಬದಲಾವಣೆಯನ್ನೂ, ಸ್ವಭಾವದಲ್ಲಿ ಪರಿವರ್ತನೆಯನ್ನೂ ತರುವುದರಿಂದ ನೈತಿಕಸಮಸ್ಯೆ ಕ್ರಮೇಣ ತಾನಾಗಿಯೇ ಬಗೆಹರಿಯುತ್ತದೆ.

ಹಾಗಾದರೆ ದೈವಭಾವನೆ (Religion) ಹೇಗೆ ಬಂದಿತು? ಮಾನವ ಜೀವಿಗಳು ಅನುಭವಿಸುತ್ತಿರುವ ಕಷ್ಟಜೀವನ, ನಿರಾಶೆಯ ಜೀವನ, ದೈವ ಭಾವನೆಗೆ ಆಸರೆಯಾಗಿವೆ. ದೈವಭಾವನೆ ಮನುಷ್ಯನಿರ್ಮಿತ ಭ್ರಮೆಯಲ್ಲಿ ಮರೆಹೊಗುವುದಾಗಿದೆ; ದೇವರ ಧ್ಯಾನದಿಂದ ಇಲ್ಲದಿರುವುದನ್ನು ಹೊಂದಿದ ಹಾಗೆ ಮನೋಶಮನವನ್ನು ಕಲ್ಪಿಸಿಕೊಳ್ಳುವುದಾಗಿದೆ. (Religion is the opium of the masses). ಬಂಡವಾಳಶಾಹಿ ವ್ಯವಸ್ಥೆಯ ವಿರಸಗಳೂ, ಅನಿರೀಕ್ಷಿತವಾಗಿ ಸಂಭವಿಸುವ ತೊಂದರೆಗಳೂ (ಉದಾ. ನಿರುದ್ಯೋಗ, ವ್ಯಾಪಾರದಲ್ಲಿ ನಷ್ಟ, ಇತ್ಯಾದಿ), ತನ್ನನ್ನು ಸುತ್ತುವರಿಯದಿರಲೆಂದು ಕೃತಕ ಮಾನಸಿಕ ಪರಿಹಾರವನ್ನು ನಿರ್ಮಿಸಿಕೊಳ್ಳುವುದಾಗಿದೆ. ಸಂಪ್ರದಾಯ, ಹೆದರಿಕೆ ಮತ್ತು ಅನಿಶ್ಚಿತ ವಾತಾವರಣ ದೈವಭಾವನೆಯ ಹಿತವನ್ನು ಬಲಪಡಿಸುತ್ತವೆ. ಈ ಹೆದರಿಕೆಯನ್ನೂ ಕೃತಕ ಮಾನಸಿಕ ಪರಿಹಾರವನ್ನೂ ಭ್ರಮೆಯನ್ನೂ ತೊಡೆದುಹಾಕಿದ ಹೊರತು ಮಾನವ ವ್ಯಕ್ತಿಗಳ ವಿಕಾಸಕ್ಕೆ ಅವಕಾಶವಿಲ್ಲ. ದೈವಭಾವನೆಯ ಬಗ್ಗೆ ಸಮಾಜವಾದದ ದೃಷ್ಟಿ ನಾಸ್ತಿಕವಾದವಾದರೂ ವೈಜ್ಞಾನಿಕ ದೃಷ್ಟಿಯಾಗಿದೆ.

ಐದನೆಯದಾಗಿ, ವ್ಯಕ್ತಿಗಳ ಬಾಳಿನಲ್ಲಿ ಮತ್ತು ಸಮಾಜದ ಬೆಳವಣಿಗೆಯಲ್ಲಿ ಅರ್ಥನೇ ಪ್ರಾಧಾನ್ಯವಲ್ಲವೆಂದೂ, ಇತರ ಶಕ್ತಿಗಳಾದ ಮನುಷ್ಯನ

ಬುದ್ಧಿ ಬಲ, ಧಾರ್ಮಿಕ ತತ್ತ್ವಗಳು, ರಾಜಕೀಯ ವ್ಯವಸ್ಥೆ, ನ್ಯಾಯ ವ್ಯವಸ್ಥೆ, ಇತ್ಯಾದಿಗಳು ತಮ್ಮ ಪ್ರಭಾವವನ್ನು ಬೀರಿವೆ ಮತ್ತು ಬೀರುತ್ತಲಿವೆ ಎಂದೂ ಕೆಲವರು ವಾದಿಸಿದ್ದಾರೆ. ಉದಾತ್ತ ಧ್ಯೇಯಕ್ಕಾಗಿ ತ್ಯಾಗ, ದೇಶಕ್ಕಾಗಿ ಮತ್ತು ನಂಬಿದವರಿಗಾಗಿ ಪ್ರಾಣತ್ಯಾಗ, ಆಧ್ಯಾತ್ಮಿಕ ಚಿಂತನೆ, ಫಲಾಫಲವಿಲ್ಲದ ಕೆಲಸ ಇವುಗಳು ವ್ಯಕ್ತಿಗಳ ಬಾಳಿನಲ್ಲಿ ಇವೆ. ಆದುದರಿಂದ ಮಾರ್ಕ್ಸ್‌ವಾದದ ಪ್ರಕಾರ ಆರ್ಥಿಕ ಅಂಶ, ರಾಜಕೀಯ, ನ್ಯಾಯ, ಧಾರ್ಮಿಕ ವ್ಯವಸ್ಥೆ ಮತ್ತು ಭಾವನೆಗಳು ಎಲ್ಲವನ್ನೂ ನಿರ್ಧರಿಸುತ್ತವೆ ಎಂದು ಐತಿಹಾಸಿಕ ಭೌತವಾದ ತಿಳಿಸುವುದರಿಂದ, ಅರ್ಥಕ್ಕೆ ಈ ಮಿತಿಮೀರಿದ ಪ್ರಾಧಾನ್ಯತೆ ಮಾರ್ಕ್ಸ್‌ವಾದದಲ್ಲಿ ಅಡಗಿರುವ ದೋಷವಾಗಿದೆ ಎಂದು ಮತ್ತೆ ಕೆಲವರ ಟೀಕೆಯಾಗಿದೆ.

ಆರ್ಥಿಕ ಅಂಶ ಎಲ್ಲವನ್ನೂ ನಿರ್ಧರಿಸುತ್ತದೆ ಎಂದು ಮಾರ್ಕ್ಸ್-ಏಂಗೆಲ್ಸರು ಹೇಳಿರುವುದು ನಿಜ. ಆದರೆ ಆರ್ಥಿಕ ಅಂಶ ಹೇಗೆ ಮತ್ತು ಯಾವ ಪ್ರಮಾಣದಲ್ಲಿ ನಿರ್ಧರಿಸುತ್ತದೆ ಎಂಬುದರ ಬಗ್ಗೆ ವಿವರಣೆಯನ್ನೂ ಇತ್ತಿದ್ದಾರೆ. ಆರ್ಥಿಕ ಅಂಶ ಎಲ್ಲವನ್ನು ನಿರ್ಧರಿಸುತ್ತದೆ ಎಂಬ ಹೇಳಿಕೆಯ ಸಂಪೂರ್ಣ ಅರ್ಥವನ್ನು ಗ್ರಹಿಸದೆ, ಅರೆತೆರೆದ ದೃಷ್ಟಿಯಿಂದ ನಿರ್ಧಾರವಾದವನ್ನು ಸಂಕುಚಿತಗೊಳಿಸಿ ಅರ್ಥಮಾಡುವುದಾದರೆ ಎಲ್ಲವೂ ಪ್ರಮಾದವಾಗುತ್ತದೆ ಮತ್ತು ಅಪಾರ್ಥವಾಗುತ್ತದೆ.

ನಿರ್ಧಾರದ ಪ್ರಶ್ನೆಯ ಬಗ್ಗೆ ಮಾರ್ಕ್ಸ್-ಏಂಗೆಲ್ಸರು ಈ ಕೆಳಕಂಡ ವಿವರಣೆಯನ್ನಿತ್ತಿದ್ದಾರೆ:

ಮೊದಲನೆಯದಾಗಿ, ಐತಿಹಾಸಿಕ ಭೌತವಾದವನ್ನು ಹಲವರು ಪ್ರಯೋಗದಲ್ಲಿ ತರಲು ಯತ್ನಿಸಿರುವಂತೆ ಕೇವಲ ಅದು ಒಂದು ನಾಮಾಂಕಿತವಲ್ಲ (as a mere phrase). ಕಂಡಿದ್ದೆಲ್ಲವನ್ನೂ ನುಡಿದಿದ್ದೆಲ್ಲವನ್ನೂ ದೀರ್ಘ ವಿಮರ್ಶೆಗೆ ಒಳಪಡಿಸದೆ, ಈ ನಾಮಾಂಕಿತದಿಂದ ಎಲ್ಲ ಸಮಸ್ಯೆಗಳಿಗೂ ಉತ್ತರ ದೊರಕುತ್ತದೆ ಎಂದು ಹೇಳುವುದು ತಪ್ಪಾಗುತ್ತದೆ.

ಎರಡನೆಯದಾಗಿ, ಐತಿಹಾಸಿಕ ಭೌತವಾದ ಇತಿಹಾಸವನ್ನು ಅರ್ಥಮಾಡಿಕೊಳ್ಳಲು ಒಂದು ಸಾಧನ ಮಾತ್ರವಾಗಿದೆ (our conception of history is above all a guide to study). ಎಲ್ಲ ದೇಶಗಳ ಇತಿಹಾಸವನ್ನು ಆಮೂಲಾಗ್ರವಾಗಿಯೂ ಪ್ರತ್ಯೇಕ ಪ್ರತ್ಯೇಕವಾಗಿಯೂ

ವ್ಯಾಸಂಗಮಾಡಿಯೇ ತೀರಬೇಕು. ಪ್ರತಿ ಸಮಾಜ ದಾಟಿಬಂದಿರುವ ಆರ್ಥಿಕ ಘಟ್ಟವನ್ನೂ ಮತ್ತು ಅದು ಇರುವ ಪ್ರಸ್ತುತ ಆರ್ಥಿಕ ಘಟ್ಟವನ್ನೂ ಪತ್ತೆಹಚ್ಚಬೇಕು. ತರುವಾಯ ಆಯಾ ಮಟ್ಟಕ್ಕೆ ಹೊಂದಿಕೊಂಡಿರುವ ರಾಜಕೀಯ ಮತ್ತು ಶಾಸನಗಳನ್ನು, ಮತೀಯ ಮತ್ತು ದಾರ್ಶನಿಕ ತತ್ತ್ವಗಳನ್ನು, ಭಾವನೆಗಳನ್ನು ತರ್ಕಿಸಲು ಆರಂಭಿಸಬೇಕು. ಆದರೆ ಇಂತಹ ಕೂಲಂಕಷವಾದ ಪರೀಕ್ಷೆ ಬಹು ಸ್ವಲ್ಪಮಟ್ಟಿಗೆ ಆಗಿದೆ.

ಮೂರನೆಯದಾಗಿ, ಐತಿಹಾಸಿಕ ಭೌತವಾದದ ಪ್ರಕಾರ ಕಟ್ಟಕಡೆಯದಾಗಿ ಇತಿಹಾಸವನ್ನು ನಿರ್ಧರಿಸುವ ಅಂಶವೆಂದರೆ (the determining element in history) ವಾಸ್ತವಿಕ ಜೀವನದಲ್ಲಿ ನಡೆಯುತ್ತಿರುವ ಉತ್ಪಾದನೆ ಮತ್ತು ಮರು ಉತ್ಪಾದನೆಯಾಗಿದೆ (is ultimately the production and reproduction in real life).

ಇಷ್ಟು ಮಾತ್ರವೇ ಹೊರತು ಐತಿಹಾಸಿಕ ಭೌತವಾದ ಇನ್ನೇನನ್ನೂ ಹೇಳಿಲ್ಲ. ಆದುದರಿಂದ ಯಾರಾದರೂ ಅಪಾರ್ಥಮಾಡಲು ಯತ್ನಿಸಿ ಆರ್ಥಿಕಾಂಶವೇ ಎಲ್ಲವನ್ನೂ ನಿರ್ಧರಿಸುವ ಸಂಗತಿ ಎಂದು ತಿಳಿಸುವುದಾದರೆ ಅವರುಗಳು ಐತಿಹಾಸಿಕ ಭೌತವಾದವನ್ನು ಅರ್ಥವಿಲ್ಲದ ಅಸಂಬದ್ಧ ಪ್ರಲಾಪಕ್ಕೆ ಇಳಿಸುತ್ತಿದ್ದಾರೆ ಎಂದು ಹೇಳಬಹುದು.

ನಾಲ್ಕನೆಯದಾಗಿ, ಆರ್ಥಿಕ ಪರಿಸ್ಥಿತಿ ಆಧಾರ ಸ್ವರೂಪವಾಗಿದೆ. ಹೊದಿಕೆಯ ರೂಪದಲ್ಲಿರುವ ಅನೇಕ ಅಂಶಗಳಾದ (the various elements of the superstructure) ವರ್ಗ ಹೋರಾಟದ ರಾಜಕೀಯ ರೂಪಗಳು ಮತ್ತು ಅದರಿಂದಾದ ಪರಿಣಾಮಗಳು, ಹೋರಾಟದಲ್ಲಿ ವಿಜಯವನ್ನು ಗಳಿಸಿ ವರ್ಗಗಳು ಜಾರಿಗೆ ತಂದ ಸಂವಿಧಾನಗಳು, ಮತ್ತು ವಿವಿಧ ಶಾಸನಗಳು, ಮತ್ತು ಹೋರಾಟದಲ್ಲಿ ಭಾಗವಹಿಸಿರುವ ವರ್ಗಗಳ ಮನಸ್ಸಿನಲ್ಲಿ ಉಂಟಾದ ಪ್ರತಿಕ್ರಿಯೆಗಳು, ರಾಜಕೀಯ, ನ್ಯಾಯ ಮತ್ತು ದಾರ್ಶನಿಕ ತತ್ತ್ವಗಳು, ಮತೀಯ ಭಾವನೆಗಳು ಮತ್ತು ಇವುಗಳು ಬೆಳವಣಿಗೆ ಹೊಂದಿ ಆದ ಒಂದು ಪಂಥ ಅಥವಾ ಸಿದ್ಧಾಂತ — ಇವುಗಳೂ ಸಹ ಇತಿಹಾಸದ ಮುಂದೋಟದ ಮೇಲೆ ತಮ್ಮ ಪ್ರಭಾವವನ್ನು ಬೀರಿವೆ ಮತ್ತು ಅನೇಕ ಸಂಧರ್ಭಗಳಲ್ಲಿ ಇತಿಹಾಸದ ರೂಪವನ್ನು (form) ನಿರ್ಧರಿಸುವುದರಲ್ಲೂ ಹೆಚ್ಚು ಪಾತ್ರತಾಳಿವೆ. ಈ ಅಂಶ

ಗಳೆಲ್ಲದರ ಪ್ರತಿಸ್ಪರ್ಧಾರವೂ ಸಹ ಇರುತ್ತದೆ. ಇಷ್ಟಾದರೂ, ಮಧ್ಯೆ ಮಧ್ಯೆ ಆಕಸ್ಮಾತ್ತಾಗಿ ತಲೆಹಾಕುವ ಅಂಶಗಳಿದ್ದರೂ, ಆರ್ಥಿಕ ಬೆಳವಣಿಗೆ ಕಟ್ಟಕಡೆಯದಾಗಿ, ಅನಿವಾರ್ಯದ ರೀತಿಯಲ್ಲಿ ತನ್ನ ಇರುವಿಕೆಯನ್ನು ಪ್ರದರ್ಶಿಸಿಕೊಳ್ಳುತ್ತದೆ.[1]

ಈ ವಿವರಣೆ ಆರ್ಥಿಕ ನಿರ್ಧಾರವಾದದ ಬಗ್ಗೆ ಸಂದೇಹವನ್ನು ನಿವೃತ್ತಿಗೊಳಿಸುತ್ತದೆ ಮತ್ತು ಆದರ ಅನ್ವಯದ ಬಗ್ಗೆ ಮಾರ್ಕ್ಸ್-ಏಂಗೆಲ್ಸರು ಕೊಟ್ಟಿರುವ ಎಚ್ಚರಿಕೆಯೂ ಗಮನಾರ್ಹವಾಗಿದೆ.

ಐತಿಹಾಸಿಕ ಭೌತವಾದ ವೈಜ್ಞಾನಿಕ ಅಥವಾ ಆಧುನಿಕ ಸಮಾಜವಾದದ ಅಡಿಗಲ್ಲು. ಸಮಾಜವಾದದ ಆವಶ್ಯಕತೆಯನ್ನು ಒಪ್ಪಿ, ಐತಿಹಾಸಿಕ ಭೌತವಾದವನ್ನು ಒಪ್ಪದಿದ್ದರೆ, ಅಡಿಪಾಯವಿಲ್ಲದ ಗೃಹವನ್ನು ಪ್ರವೇಶಮಾಡಿದಂತಾಗುತ್ತದೆ. ಕಲ್ಪನಾಸಮಾಜವಾದ ಎಲ್ಲಾ ಬಾಗಿಲುಗಳಿಂದಲೂ ಪ್ರವೇಶಮಾಡುತ್ತದೆ. ಬಂಡವಾಳಶಾಹಿ ವ್ಯವಸ್ಥೆ, ರಾಜಕೀಯ ಮತ್ತು ಶೋಷಣೆ ಮುಂದುವರಿಯಲು ಅವಕಾಶವಾಗುತ್ತದೆ.

---

(1) ಬ್ಲಾಕ್, ಶ್ಮಿಟ್ ಮತ್ತು ಸ್ಟಾರ್ಕೆನ್‌ಬರ್ಗ್ ಇವರಿಗೆ ಏಂಗೆಲ್ಸ್ ಬರೆದ ಕಾಗದಗಳಿಂದ (ಮಾರ್ಕ್ಸ್-ಏಂಗೆಲ್ಸರ ಆರಿಸಲ್ಪಟ್ಟ ಬರೆಹಗಳು, ಪುಟ 441, 443, 457, ಮಾಸ್ಕೋ ಸಂಪುಟ, 1951).

ಅಧ್ಯಯನ:

Selected works of Lenin : Vol. 7, Part 1, L & W 1937.
On the Problems of Leninism : Stalin : Pages 39-48, F. L. P. H. M. 1945.
Soviet Socialist State : G Glezerman : F. L. P. H. M.
Marxism and Democratic Tradition : Landis.
Human Nature : Vernon Venable : Dennis Dobson, London.
Essay on Religion : G. Thomson : L & W.
Lenin on Religion : Little Lenin Library. Vol. VII.
Anti-Dhuring : Engels : F. L. P. H. M.
Letters on Historical Materialism : Marx-Engels ; Vol. I. Pages 372-391, Marx-Engels S. W. Adoratsky, Ed.

ಸಮಾಜವಾದ ಮತ್ತು ಭಾರತ

ಅಧ್ಯಾಯ 10

ಆಧುನಿಕ ಕಾಲದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಇತಿಹಾಸದಲ್ಲಿ ವೈಜ್ಞಾನಿಕ ಸಮಾಜವಾದ ನಿರ್ವಿವಾದವಾದ ಮತ್ತು ನಿರ್ದಿಷ್ಟವಾದ ಸ್ಥಾನವನ್ನು ಗಳಿಸಿದೆ. ಪ್ರಪಂಚದ ⅓ ಭಾಗದಲ್ಲಿ ವೈಜ್ಞಾನಿಕ ಸಮಾಜವಾದ ಕಾರ್ಯಗತವಾಗಿ ವ್ಯವಸ್ಥೆ ಹೊಂದುತ್ತಲಿದೆ. ಮಿಕ್ಕ ಕಡೆಗಳಲ್ಲಿ ಸಮಾಜವಾದದ ಮುಂದೋಟದ ಅಲೆಗಳು ಕಾಣಿಸಿಕೊಂಡಿವೆ. ವೈಜ್ಞಾನಿಕ ಸಮಾಜವಾದ (ಮಾರ್ಕ್ಸ್‌ವಾದ) ನಿರ್ವೀರ್ಯದ ವಾದ, ಸುಳ್ಳುವಾದ, ಗತಿಸಿಹೋದ ವಾದ ಎಂದು ಹೇಳಿಕೆಗಳು ಬರುತ್ತಿದ್ದಷ್ಟೂ ಈ ಹೇಳಿಕೆಗಳ ನಡುನಡುವೆಯೇ ಅದರ ಮುಂದೋಟ ಸಾಗುತ್ತಿದೆ. ಹೆಚ್ಚು ಹೆಚ್ಚು ಜನರು ವೈಜ್ಞಾನಿಕ ಸಮಾಜವಾದ ಸೂಚಿಸಿರುವ ಮುಕ್ತಿ ಮಾರ್ಗದ ಅನುಯಾಯಿಗಳಾಗುತ್ತಿದ್ದಾರೆ.

ವೈಜ್ಞಾನಿಕ ಸಮಾಜವಾದ ಇಷ್ಟು ಜನಪ್ರಿಯವಾಗಲು, ಇಷ್ಟು ಮುಂದೋಟ ಸಾಗಿಸಲು, ಈ ವಾದದಲ್ಲಿ ಅಡಗಿರುವ ಸತ್ಯ ನಿರೂಪಣೆಯೇ ಕಾರಣವಾಗಿದೆ. ಐತಿಹಾಸಿಕ ಭೌತವಾದ, ಹೆಚ್ಚಿಗೇ ಮೌಲ್ಯ, ವರ್ಗಗಳ ಇರುವಿಕೆ ಮತ್ತು ವರ್ಗಹೋರಾಟ ಇವುಗಳನ್ನು ಇತಿಹಾಸದ ಪದರಗಳಿಂದ ಸಂಶೋಧಿಸಿ ಸಮಾಜ ವಿಜ್ಞಾನವನ್ನು ಮಾರ್ಕ್ಸ್‌ವಾದ ಪ್ರತಿಪಾದಿಸಿದೆ ಜನಸಮುದಾಯದ ಕಲ್ಯಾಣಕ್ಕಾಗಿ ಮಾರ್ಕ್ಸ್–ಏಂಗೆಲ್ಸರು ಬಿಟ್ಟುಹೋಗಿರುವ ವಿಮರ್ಶಾಸಾಧನಗಳಿಂದ ಕಳೆದ ಮತ್ತು ಈಗಿನ ಸಮಾಜದ ಸ್ವರೂಪವನ್ನು ಅರಿಯುವುದಕ್ಕೂ, ವರ್ಗರಹಿತ, ಶೋಷಣಾರಹಿತ ಸಮಾಜವನ್ನು ಸ್ಥಾಪಿಸಲು ಶ್ರಮಿಸುವುದಕ್ಕೂ ಆದೇಶ ಸಿಕ್ಕಿದೆ ಬಂಡವಾಳಶಾಹಿ ವ್ಯವಸ್ಥೆಯಿಂದ ಉಂಟಾಗಿರುವ ಕ್ಷೋಭೆಯಿಂದ ಜನಸಮುದಾಯ ಎಚ್ಚೆತ್ತಿದೆ; ಕಾರ್ಮಿಕವರ್ಗ ಜಾಗೃತಿಗೊಂಡು ಕಾರ್ಯೋನ್ಮುಖರಾಗಿದ್ದಾರೆ; ಸಂಘಟನೆಗೊಂಡು ಚಳವಳಿಯನ್ನು ಹೂಡಿದ್ದಾರೆ.

ಮಾರ್ಕ್ಸ್–ಏಂಗೆಲ್ಸರ ವಾದ ಜನರ ಆಶೋತ್ತರಗಳನ್ನು ಪ್ರತಿಬಿಂಬಿಸಿರುವುದಲ್ಲದೆ, ಶೋಷಣೆಯಿಂದ ವಿಮುಕ್ತರಾಗುವುದಕ್ಕೂ ಮಾರ್ಗ

ಸೂಚಿಸಿದೆ. ಶೋಷಣೆಯಿಂದ ಪಾರಾಗಬೇಕಾದರೆ ಕಾರ್ಮಿಕರು ಕಾರ್ಯ ನಿರತರಾಗಬೇಕು, ಸಂಘಟನೆ ಸಾಧಿಸಬೇಕು ಎಂದು ತಿಳಿಸಿದೆ. ರಾಜಕೀಯದಿಂದ ದೂರಸರಿಯದೆ ಕಾರ್ಮಿಕವರ್ಗ ರಾಜಕೀಯದಲ್ಲಿ ಪ್ರವೇಶಿಸಬೇಕೆಂದು ಸೂಚಿಸಿದೆ. ಕಾರ್ಯಾಚರಣೆ ಏತಕ್ಕಾಗಿ, ಹೇಗೆ ನಡೆಸಬೇಕು ಮತ್ತು ಕಾರ್ಯದ ಗುರಿ ಏನು ಎಂಬುದನ್ನು ವಿಶದಪಡಿಸಿದೆ. ಕಾರ್ಯಾಚರಣೆ ವಿಸ್ತಾರಗೊಂಡಂತೆ, ಚಳವಳಿ ಮುಂದೆ ಸಾಗಿದಂತೆ, ಸ್ಥಳ, ಕಾಲ ಮತ್ತು ಸನ್ನಿವೇಶಗಳಿಗೆ ಅನುಗುಣವಾಗಿ ತತ್ತ್ವವನ್ನು ರೂಪಿಸಿಕೊಳ್ಳಬೇಕೆಂದು ತಿಳಿಸಿದೆ.

ವೈಜ್ಞಾನಿಕ ಸಮಾಜವಾದದ ಅನ್ವಯದಬಗ್ಗೆ ಹಲವರು ಮಾರ್ಕ್ಸ್-ಏಂಗೆಲ್ಸರ ವಾದಸರಣಿಯಲ್ಲಿ ಒಂದು ದೋಷವಿದೆ ಎಂದು ವಾದಿಸಿದ್ದಾರೆ. ಇವರ ವಾದಸರಣಿ ಈರೀತಿ ಇದೆ: ಬಂಡವಾಳಶಾಹಿ ಉತ್ಪಾದನಾಕ್ರಮ ಎಡೆಕೊಟ್ಟಿರುವ ವಿರಸಗಳೇ ಸಮಾಜವಾದದ ಆಗಮವನ್ನು ಅನಿವಾರ್ಯವನ್ನಾಗಿ ಮಾಡಿವೆ ಎಂದೂ, ಮತ್ತು ಕೈಗಾರಿಕಾ ಕಾರ್ಮಿಕವರ್ಗ ಸಮಾಜವಾದದ ಆಗಮನದ ಕರ್ತೃಗಳಾಗಿದ್ದಾರೆಂದೂ ಮಾರ್ಕ್ಸ್-ಏಂಗಲ್ಸರು ತಿಳಿಸಿದ್ದಾರೆ.[1] ವ್ಯವಸಾಯವೇ ಪ್ರಾಧಾನ್ಯವಾಗಿ ಉಳ್ಳ ಹಿಂದುಳಿದ ದೇಶಗಳಲ್ಲಿ ಕೈಗಾರಿಕಾ ಉದ್ಯಮಗಳಾಗಲೀ ಅಥವಾ ಕೈಗಾರಿಕಾ ಕಾರ್ಮಿಕವರ್ಗವಾಗಲೀ ಇಲ್ಲದಿರುವುದರಿಂದ ಸಮಾಜವಾದದ ಪ್ರಶ್ನೆಯೇ ಉದ್ಭವಿಸುವುದಿಲ್ಲ.

ಎರಡನೆಯದಾಗಿ, ಬಂಡವಾಳಶಾಹಿ ವ್ಯವಸ್ಥೆ ಅಭಿವೃದ್ಧಿ ಹೊಂದಿರುವ ದೇಶಗಳಾದ ಅಮೆರಿಕಾ, ಇಂಗ್ಲೆಂಡ್, ಫ್ರಾನ್ಸ್ ಮತ್ತು ಇತರ ದೇಶಗಳಲ್ಲಿ ಸಮಾಜವಾದ ಅನಿವಾರ್ಯವಾಗಿ ಆಗಮಿಸಿಯೂ ಇಲ್ಲ ಮತ್ತು ಕಾರ್ಮಿಕವರ್ಗವನ್ನು ಮಾರ್ಕ್ಸ್‌ವಾದ ಆಕರ್ಷಿಸಿಯೂ ಇಲ್ಲ. ಆದುದರಿಂದ ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ಮಾರ್ಕ್ಸ್-ಏಂಗೆಲ್ಸರು ಮಾಡಿರುವ ವಿಮರ್ಶೆ ತಪ್ಪಾಗಿದೆ ಮತ್ತು ಅವರು ನುಡಿದಂತೆ ಸಮಾಜವಾದದ ಆಗಮನ ಅನಿವಾರ್ಯವಾಗಿಲ್ಲ.

ಮೇಲೆ ಹೇಳಿದ ವಾದದಲ್ಲಿ ತಿರುಳಿಲ್ಲ. ಮಾರ್ಕ್ಸ್-ಏಂಗಲ್ಸರು ತಮ್ಮ ಕಾಲದ ಬಂಡವಾಳಶಾಹಿ ವ್ಯವಸ್ಥೆಯನ್ನು ವಿಮರ್ಶೆಗೆ ಗುರಿಮಾಡಿ ಸಮಾಜ

---

(1) 4 ನೇ ಅಧ್ಯಾಯ ನೋಡಿ.

ವಾದದ ಆಗಮನ ಅನಿವಾರ್ಯವೆಂದು ಹೇಳಿದ್ದು ನಿಜ. ಹಾಗೆಯೇ ಬಂಡವಾಳಶಾಹಿ ವ್ಯವಸ್ಥೆ ಹೇಗೆ ಪತನಹೊಂದುತ್ತದೆ ಎಂಬುದರ ಬಗ್ಗೆ ವಿವರಣೆಯಿತ್ತು, ಅದು ಕಾರ್ಮಿಕವರ್ಗದ ಸಂಘಟನೆ, ರಾಜಕೀಯ ಜಾಗೃತಿ, ಐಕ್ಯಮತ್ಯ, ಅವರು ಹೂಡುವ ಕ್ರಾಂತಿಕಾರಿ ಚಳವಳಿ ಇವುಗಳಿಂದ ಸಮಾಜವಾದೀ ವ್ಯವಸ್ಥೆ ಬರುತ್ತದೆಂದು ತಿಳಿಸಿದ್ದಾರೆ. ಸಮಾಜವಾದೀ ವ್ಯವಸ್ಥೆ ಕಳಿತಫಲ ಜಾರಿ ಬೀಳುವಂತೆ ತಟ್ಟನೆ ಒಂದು ದಿವಸ ಉದ್ಭವಿಸುವುದಿಲ್ಲ. ಕಾರ್ಮಿಕವರ್ಗದ ಸಂಘಟಿತ ಹೋರಾಟವಿಲ್ಲದೆ ಬಂಡವಾಳವರ್ಗ ಉರುಳುವುದಿಲ್ಲ; ಹೋರಾಟ ಅಗತ್ಯವಾಗಿದೆ. ಆದರೆ ಅನೇಕವೇಳೆ ಕಾರ್ಮಿಕವರ್ಗ ಹೂಡುವ ಚಳವಳಿ ಸಫಲವಾಗದೇ ಇರಬಹುದು. ಬಂಡವಾಳವರ್ಗದಿಂದ ಬರುವ ಬಲವಾದ ಪ್ರತಿಭಟನೆಯನ್ನು ಎದುರಿಸಲು ಅಶಕ್ತವಾಗಿ ಕಾರ್ಮಿಕವರ್ಗ ಅನೇಕವೇಳೆ ಸೋತಿದೆ.

ಬಂಡವಾಳಶಾಹಿ ರಾಷ್ಟ್ರಗಳಲ್ಲಿರುವ ವಾಸ್ತವಿಕ ಆರ್ಥಿಕ ಪರಿಸ್ಥಿತಿ ಕಾರ್ಮಿಕವರ್ಗದ ಚಳವಳಿಯನ್ನು ನಿರ್ಧರಿಸುತ್ತದೆ. ಜೊತೆಗೆ, ಬಂಡವಾಳಶಾಹಿ ರಾಷ್ಟ್ರಗಳು ಹೊಂದಿರುವ ವಸಾಹತುಗಳು, ಲಾಭದಾಯಕ ಉದ್ಯಮ, ಗಳಿಸಿರುವ ಸಂಪತ್ತು ಇವುಗಳು ಬಂಡವಾಳಶಾಹಿ ವ್ಯವಸ್ಥೆಗೆ ಕಾರ್ಮಿಕವರ್ಗದಿಂದ ಬರುವ ಪ್ರತಿಭಟನೆಯನ್ನು ಮುರಿಯಲು ಸಹಾಯಕ್ಕೆ ಬರುತ್ತವೆ. ಸ್ವಲ್ಪ ಹೆಚ್ಚು ಕೂಲಿ ಮತ್ತು ಇತರ ಸುಧಾರಣೆಗಳು ಕಾರ್ಮಿಕ ವರ್ಗದಲ್ಲಿ ತೃಪ್ತಿ ಮನೋಭಾವವನ್ನು ತರುತ್ತವೆ; ವರ್ಗವೈಷಮ್ಯದ ತೀಕ್ಷ್ಣತೆಯನ್ನು ಕಡಿಮೆ ಮಾಡುತ್ತವೆ. ಕಾರ್ಮಿಕವರ್ಗ ಸುಧಾರಕ ತತ್ತ್ವಕ್ಕೆ ಮನಸೋಲುತ್ತದೆ ಮತ್ತು ಕ್ರಾಂತಿಕಾರಿ ಚಳವಳಿಯ ಪಥದಿಂದ ದೂರ ಸರಿಯುತ್ತದೆ.[1] ಇದರಿಂದಾಗಿ ಬಂಡವಾಳಶಾಹಿ ವ್ಯವಸ್ಥೆಯ ಪತನ ಸ್ವಲ್ಪಕಾಲದವರೆಗೆ ಮುಂದಕ್ಕೆ ತಳ್ಳುತ್ತದೆ. ಆದರೆ ಬಂಡವಾಳಶಾಹಿ ವ್ಯವಸ್ಥೆ ಜನ್ಮವಿತ್ತಿರುವ ವಿರಸಗಳು ಬಂಡವಾಳಶಾಹಿ ವ್ಯವಸ್ಥೆಯನ್ನು ಬಿಕ್ಕಟ್ಟಿಗೆ ಸಿಕ್ಕಿಸುತ್ತಲೇ ಇರುತ್ತವೆ. ಎಲ್ಲೆಲ್ಲಿ ಬಂಡವಾಳಶಾಹಿ ವ್ಯವಸ್ಥೆ ಬಿಕ್ಕಟ್ಟಿನ ಪರಿಸ್ಥಿತಿಯಿಂದ ಪಾರಾಗಲು ಅಸಮರ್ಥವಾಗಿದೆಯೋ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ವಿರುದ್ಧ ಎದ್ದಿರುವ ಕಾರ್ಮಿಕರ ಚಳವಳಿ

(1) ಪುಟ ೧೪೪ ನೋಡಿ.

ಯನ್ನು ಅಡಗಿಸಲು ಬಂಡವಾಳವರ್ಗ ಅಶಕ್ತವಾಗಿದೆಯೋ ಮತ್ತು ಸಮಾಜವಾದಿ ವ್ಯವಸ್ಥೆಯನ್ನು ಸ್ಥಾಪಿಸಲು ಧ್ಯೇಯಪೂರಿತವಾದ ವ್ಯವಸ್ಥಿತ ಕಾರ್ಮಿಕವರ್ಗದ ಸಂಘಟನೆ ಇರುವುದೋ ಅಲ್ಲೆಲ್ಲಾ ಸಮಾಜವಾದೀ ಚಳವಳಿ ವಿಜಯಗಳಿಸುತ್ತದೆ. ಉಳಿದಕಡೆ ಕಮ್ಯೂನಿಸ್ಟ್ ಪಕ್ಷ ಬಂಡವಾಳವರ್ಗದ ಎದುರು ಶಕ್ತಿಯಾಗಿ ನಿಲ್ಲುತ್ತದೆ.

ವೈಜ್ಞಾನಿಕ ಸಮಾಜವಾದ ಕೇವಲ ಕೈಗಾರಿಕೆಯಲ್ಲಿ ಮುಂದುವರಿದಿರುವ ಬಂಡವಾಳಶಾಹಿ ರಾಷ್ಟ್ರಗಳಿಗೆ ಮಾತ್ರ ಅನ್ವಯವಾಗುತ್ತದೆ ಎಂಬವಾದ ಮಾರ್ಕ್ಸ್‌ವಾದವನ್ನು ಸಂಕುಚಿತಗೊಳಿಸುವ, ಬಂಡವಾಳಶಾಹಿ ವ್ಯವಸ್ಥೆಯ ಚಲನವಲನೆಗಳ ಬಗ್ಗೆ (the law of motion) ಮಾರ್ಕ್ಸ್–ಏಂಗ್ಸಲರು ಇತ್ತಿರುವ ವಿವರಣೆಯನ್ನು ನಿರ್ಲಕ್ಷಿಸುವ ಮತ್ತು ಮಾರ್ಕ್ಸ್–ಏಂಗೆಲ್ಸರ ವಾದದ ಪ್ರತಿಪಾದನಾನಂತರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉಂಟಾಗಿರುವ ಬದಲಾವಣೆಗಳನ್ನು ಪರಿಗಣಿಸುವ ದೃಷ್ಟಿಕೋನವಾಗುತ್ತದೆ.

ಮೊದಲನೆಯದಾಗಿ, ಬಂಡವಾಳಶಾಹಿ ವ್ಯವಸ್ಥೆಯ ಲಕ್ಷಣಗಳು ಕೈಗಾರಿಕೆಯಲ್ಲಿ ಮುಂದುವರಿದ ಮತ್ತು ಕಾರ್ಮಿಕವರ್ಗ ಇರುವ ಆರ್ಥಿಕವ್ಯವಸ್ಥೆಗೇ ಮೀಸಲಲ್ಲ. ದುಡಿಮೆಯುವರಿಂದ ಉತ್ಪಾದನೆ ನಡೆದು ಲಾಭದೃಷ್ಟಿಯಿಂದ ಮತ್ತು ಮಾರುಕಟ್ಟೆಯ ದೃಷ್ಟಿಯಿಂದ ಸರಕುಗಳು ಎಲ್ಲೆಲ್ಲಿ ತಯಾರಾಗುತ್ತಿವೆಯೋ ಅಲ್ಲೆಲ್ಲಾ ಬಂಡವಾಳಶಾಹಿ ವ್ಯವಸ್ಥೆಯ ಲಕ್ಷಣಗಳು ಇವೆ. ಆಧುನಿಕ ಬೇಸಾಯ ಬಂಡವಾಳಶಾಹಿ ಬೇಸಾಯದ ರಂಗವಾಗಿದೆ. ಮಾರುಕಟ್ಟೆಯ ದೃಷ್ಟಿಯಿಂದ ಉತ್ಪಾದನೆ ನಡೆಯುತ್ತಿದೆ. ಉತ್ಪಾದನಾ ಸಾಧನವಾದ ಭೂಮಿ ಜಮೀನ್ದಾರವರ್ಗಕ್ಕೆ ಸೇರಿದ್ದಾಗಿ, ಶೋಷಣೆಗೆ ಸಿಲುಕಿರುವ ಅಗಾಧ ರೈತಸ್ತೋಮವಿದೆ.

ಎರಡನೆಯದಾಗಿ, ಕೈಗಾರಿಕಾ ರಾಷ್ಟ್ರಗಳು ಕೈಗಾರಿಕಾ ರಾಷ್ಟ್ರಗಳಾಗಿಯೇ ಜನಿಸಿದವು ಮತ್ತು ಮುಂದೂ ಇರುವುವು; ವ್ಯವಸಾಯವೇ ಪ್ರಾಧಾನ್ಯವಾಗಿವುಳ್ಳ ರಾಷ್ಟ್ರಗಳು ಮತ್ತು ಹಿಂದುಳಿದ ರಾಷ್ಟ್ರಗಳು ಮುಂದೆಯೂ ಸಹ ಹಾಗೇ ಇರುವುವು–ಎಂಬ ತಪ್ಪು ಭಾವನೆ ಮಾರ್ಕ್ಸ್‌ವಾದವನ್ನು ಅಪಾರ್ಥಮಾಡಿಕೊಳ್ಳುವುದಕ್ಕೆ ಕಾರಣವಾಗಿದೆ. ಈ ತಪ್ಪು ವಿವಿಧದೇಶಗಳಲ್ಲಿರುವ ‘ಅಸಮ ಬೆಳವಣಿಗೆ’ (The law of uneven development) ನಿಯಮವನ್ನು ನಿರ್ಲಕ್ಷಿಸುವಂತೆ ಮಾಡಿದೆ. ಯಾವ ರಾಷ್ಟ್ರವೂ

ಆರಂಭದಿಂದ ಕೈಗಾರಿಕಾರಾಷ್ಟ್ರವಾಗಿರಲಿಲ್ಲ; ಕ್ರಮೇಣ ಕೈಗಾರಿಕಾ ಮುಂದೋಟ ಮತ್ತು ಕೈಗಾರಿಕಾ ಬಂಡವಾಳಶಾಹಿ ವ್ಯವಸ್ಥೆ ಕೆಲವು ದೇಶಗಳಲ್ಲಿ ಬಂದಿತು. ಕೆಲವು ಶತಮಾನಗಳ ಹಿಂದೆ ಪ್ರಪಂಚದ ಎಲ್ಲಾ ರಾಷ್ಟ್ರಗಳ ಮುಖ್ಯ ಕಸಬು ವ್ಯವಸಾಯವೇ ಆಗಿ ಉಳಿದಿತ್ತು. ಈಗ ನೋಡುವುದಾದರೆ ವ್ಯವಸಾಯವೇ ಪ್ರಧಾನ್ಯವಾಗಿರುವ ಮತ್ತು ಹಿಂದುಳಿದ ರಾಷ್ಟ್ರಗಳಲ್ಲೂ ಸಹ ಕೈಗಾರಿಕೆ ಮುಂದುವರಿದು ಕೈಗಾರಿಕಾ ಬಂಡವಾಳಶಾಹಿ ವ್ಯವಸ್ಥೆ ಆಚರಣೆಗೆ ಬಂದಿದೆ.

ಅಲ್ಲದೆ, ಮಾರಾಟದ ದೃಷ್ಟಿಯಿಂದ ಸರಕುಗಳ ತಯಾರಿಕೆ, ಪೈಪೋಟಿಯ ವ್ಯಾಪಾರ, ಲಾಭದಾಹ, ವಸಾಹತು ಮತ್ತು ಮಾರುಕಟ್ಟೆಗಾಗಿ ಬೇಟೆ, ಲಾಭದ ದೃಷ್ಟಿಯಿಂದ ಬಂಡವಾಳದ ರಫ್ತು ಎಲ್ಲಾರಾಷ್ಟ್ರಗಳನ್ನೂ ಒಂದೇ ಬಂಡವಾಳ ಆರ್ಥಿಕವ್ಯವಸ್ಥೆಯ ಸರಪಣಿಗೆ ಕೊಂಡಿಗಳಂತೆ ಬೆಸೆದಿವೆ. ಕೆಲವು ಶತಮಾನಗಳ ಹಿಂದೆ ರಾಷ್ಟ್ರಗಳ ಆರ್ಥಿಕವ್ಯವಸ್ಥೆಯಲ್ಲಿ ಇದ್ದ ಸ್ವಯಂಪೂರ್ಣತೆ ಮತ್ತು ಇತರ ರಾಷ್ಟ್ರಗಳೊಡನೆ ಇದ್ದ ಅಲ್ಪ ಸ್ವಲ್ಪದ ವ್ಯಾಪಾರ ಸಂಬಂಧ ಇವುಗಳು ನಶಿಸಿವೆ. ಬಂಡವಾಳಶಾಹಿ ವ್ಯವಸ್ಥೆ ತನ್ನ ಚಲನವಲನಗಳಿಂದ ಪ್ರಪಂಚದ ಎಲ್ಲಾ ರಾಷ್ಟ್ರಗಳನ್ನೂ ಒಂದಾಗಿ ಮಾಡಿದೆ. ಒಂದು ಬಂಡವಾಳಶಾಹಿ ರಾಷ್ಟ್ರದಲ್ಲಿ, ಬಂಡವಾಳಶಾಹಿ ಉತ್ಪಾದನಾಕ್ರಮದಲ್ಲಿ ಉಂಟಾಗುವ ಪರಿಣಾಮಗಳು ಎಲ್ಲಾ ರಾಷ್ಟ್ರಗಳಿಗೂ ತಟ್ಟುತ್ತವೆ. ಒಂದು ಬಂಡವಾಳಶಾಹಿ ರಾಷ್ಟ್ರ ಮುಳುಗುವ ಸ್ಥಿತಿಗೆ ಬಂದರೆ, ಅದು ಮುಳುಗುವುದರ ಜೊತೆಗೆ ಇತರ ಬಂಡವಾಳಶಾಹಿ ರಾಷ್ಟ್ರಗಳನ್ನೂ ಸಹ ಎಳೆದುಕೊಂಡು ಮುಳುಗುತ್ತದೆ.

ಮಾರ್ಕ್ಸ್-ಏಂಗಲ್ಸರು ಬಂಡವಾಳಶಾಹಿ ವ್ಯವಸ್ಥೆಯ ಬಗ್ಗೆ ತಮ್ಮ ವಿಮರ್ಶೆಯನ್ನು ಪ್ರಕಟಿಸಿದಾಗ ಕೈಗಾರಿಕಾ ಬಂಡವಾಳಶಾಹಿ ವ್ಯವಸ್ಥೆ (Industrial Capitalisim) ಅಷ್ಟಾಗಿ ಪ್ರಪಂಚದ ಎಲ್ಲ ಕಡೆಯಲ್ಲೂ ಪ್ರಸರಿಸಿರಲಿಲ್ಲ. ಮೊಟ್ಟಮೊದಲನೆಯಬಾರಿಗೆ ಇಂಗ್ಲೆಂಡಿನಲ್ಲಿ ಅವತರಣಕೆ ಹೊಂದಿದ್ದ ಕೈಗಾರಿಕಾ ಬಂಡವಾಳಶಾಹಿ ವ್ಯವಸ್ಥೆಯ ವಿಮರ್ಶೆ ಅವರ ಕರ್ತವ್ಯವಾಯಿತು. ತಮ್ಮ ವಿಮರ್ಶೆಯ ಮೂಲಕ ಬಂಡವಾಳಶಾಹಿ ವ್ಯವಸ್ಥೆಯ ಚಲನಾನಿಯಮವನ್ನು ಪತ್ತೆಹಚ್ಚಿದರು. ಕೈಗಾರಿಕಾ ಬಂಡವಾಳಶಾಹಿ ವ್ಯವಸ್ಥೆ ವಿರಸಪೂರಿತವಾದದ್ದೆಂದೂ ಕಾರ್ಮಿಕವರ್ಗದ ಶೋಷ

ಣೆಗೆ ಮತ್ತು ದುಃಸ್ಥಿತಿಗೆ ಬಂಡವಾಳಶಾಹಿ ವ್ಯವಸ್ಥೆಯೇ ಕಾರಣವೆಂದೂ ತೀರ್ಮಾನಕ್ಕೆ ಬಂದರು. ವಸಾಹತುಗಳಿಗಾಗಿ ಬೇಟೆ, ಪೈಪೋಟಿ, ಬಂಡವಾಳದ ರಫ್ತು ಮತ್ತು ಯುದ್ಧಗಳು ಇವೇ ಬಂಡವಾಳಶಾಹಿ ವ್ಯವಸ್ಥೆ ವಿರಸಗಳಿಂದ ಪಾರಾಗಲಿಕ್ಕೆ ಹುಡುಕುವ ಮಾರ್ಗವಾಗುವುದೆಂದರು. ಜನಸಮುದಾಯದ ನಿತ್ಯಜೀವನ ದಿನೇ ದಿನೇ ಅಧೋಗತಿಗೆ ಇಳಿದು ಕಾರ್ಮಿಕವರ್ಗದ ಕ್ರಾಂತಿಕಾರಕ ಹೋರಾಟ ಮೂಡುವುದೆಂದರು; ಹಾಗೆಯೇ ಸಮಾಜವಾದದ ಆಗಮನವೂ ಅನಿವಾರ್ಯವೆಂದರು.

19 ನೇ ಶತಮಾನದ ಬಂಡವಾಳಶಾಹಿ ವ್ಯವಸ್ಥೆಯ ಇತಿಹಾಸ ಮಾರ್ಕ್ಸ್-ಏಂಗಲ್ಸರ ವಿಮರ್ಶೆಯನ್ನು ಸಮರ್ಥಿಸಿದೆ. ಬಂಡವಾಳಶಾಹಿ ವ್ಯವಸ್ಥೆ ಎಲ್ಲ ದೇಶಗಳಿಗೂ ವಿಸ್ತರಿಸದಂತೆ ವಿರಸಗಳೂ ಅದನ್ನು ಹಿಂಬಾಲಿಸಿವೆ. ವ್ಯವಸಾಯ ಮತ್ತು ಕೈಗಾರಿಕೆ ಈ ಎರಡು ಕ್ಷೇತ್ರಗಳಲ್ಲೂ ಬಂಡವಾಳಶಾಹಿ ಉತ್ಪಾದನಾ ಕ್ರಮವು ಬಂದಿದೆ. ಬಂಡವಾಳ ವ್ಯವಸ್ಥೆ ಜನ್ಮ ಇತ್ತಿರುವ ಕೈಗಾರಿಕಾ ಕಾರ್ಮಿಕವರ್ಗ, ಭೂಮಿ ಇಲ್ಲದ ನಿರ್ಗತಿಕ ರೈತಾಪಿ ವರ್ಗ ತಮ್ಮ ಶೋಷಣೆಯನ್ನು ಕಂಡಿವೆ. ಬಂಡವಾಳವರ್ಗ ಮತ್ತು ಕಾರ್ಮಿಕವರ್ಗ ವರ್ಗವೈಷಮ್ಯವನ್ನು ತಾಳಿ ಎದುರು ಬದರಾಗಿ ನಿಂತಿವೆ. ಉತ್ಪಾದನಾ ಸಾಧನಗಳಲ್ಲಿರುವ ಖಾಸಗೀ ಸ್ವಾಮ್ಯದ ವಿರುದ್ಧ ಕಾರ್ಮಿಕ ವರ್ಗ ಚಳವಳಿಯನ್ನು ಹೂಡಿದೆ; ಬಂಡವಾಳವರ್ಗ ಸ್ವಾಮ್ಯದ ರಕ್ಷಣೆಗಾಗಿ ನಿಂತಿದೆ. 17–18ನೇ ಶತಮಾನಗಳಲ್ಲಿ ನಿರಂಕುಶ ಪ್ರಭುತ್ವದ ವಿರುದ್ಧ ಮುಂದಾಳುತ್ವ ವಹಿಸಿದ್ದ ಬಂಡವಾಳವರ್ಗ ಪ್ರತಿಗಾಮಿಯಾಗಿದೆ. ಕಾರ್ಮಿಕವರ್ಗ ಸಮಾಜವಾದೀ ಪತಾಕೆಯನ್ನು ಹಾರಿಸಿದೆ.

ಮಾರ್ಕ್ಸ್-ಏಂಗಲ್ಸರನಂತರ ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಉಂಟಾಗಿರುವ ಬದಲಾವಣೆಗಳನ್ನು ನಿರ್ದೇಶಿಸಿ ವೈಜ್ಞಾನಿಕ ಸಮಾಜವಾದದ ವಿಶ್ವವ್ಯಾಪ್ತಿ ಸ್ವರೂಪವನ್ನು ಲೆನಿನ್ ವಿಶದಪಡಿಸಿದನು.[1] ಇಪ್ಪತ್ತನೇ ಶತಮಾನದಲ್ಲಿ ವಿರಸಪೂರಿತವಾಗಿರುವ ಬಂಡವಾಳಶಾಹಿ ವ್ಯವಸ್ಥೆ ಸಾಮ್ರಾಜ್ಯವಾದೀ ಬಂಡವಾಳಶಾಹಿ ವ್ಯವಸ್ಥೆಯಾಗಿ (Imperialism-The Highest stage of capitalism) ಮಾರ್ಪಾಟು ಹೊಂದಿ ಎಲ್ಲಾ

(1) ಲೆನಿನ್ನನ:—' ಸಾಮ್ರಾಜ್ಯಶಾಹಿ—ಬಂಡವಾಳಶಾಹಿ ವ್ಯವಸ್ಥೆಯ ಅತ್ಯುನ್ನತ ಮಟ್ಟ' ಎಂಬ ಬರೆಹ.

ಬಂಡವಾಳಶಾಹಿ ರಾಷ್ಟ್ರಗಳನ್ನೂ ಪರಸ್ಪರವಾಗಿ ಬಂಧಿಸಿರುವುದಾಗಿ ತಿಳಿಸಿದನು. ಆರ್ಥಿಕ ವಿರಸಗಳಿಂದ ಪಾರಾಗಲಿಕ್ಕೆ ಯುದ್ಧ ಸಿದ್ಧತೆ ಅಥವಾ ಯುದ್ಧ ಸಾಮ್ರಾಜ್ಯವಾದಿ ಬಂಡವಾಳಶಾಹಿ ವ್ಯವಸ್ಥೆಗೆ ಉಳಿದಿರುವ ಒಂದೇ ಮಾರ್ಗವೆಂದು ತಿಳಿಸಿದನು. ಸಾಮ್ರಾಜ್ಯವಾದೀ ಯುದ್ಧ 19ನೇ ಶತಮಾನದಲ್ಲಿದ್ದಂತೆ ಒಂದೆರಡು ಬಂಡವಾಳಶಾಹಿ ರಾಷ್ಟ್ರಗಳಿಗೆ ಸಂಬಂಧಿಸಿರುವ ಪ್ರಾದೇಶಿಕ ಯುದ್ಧವಾಗದೆ ಪ್ರಪಂಚದ ಎಲ್ಲಾ ಬಂಡವಾಳಶಾಹಿ ರಾಷ್ಟ್ರಗಳನ್ನು ಸುತ್ತುವರಿದು ವಿಶ್ವಯುದ್ಧವಾಗಿರುವುದಾಗಿ ತಿಳಿಸಿದನು. ಬೇಸತ್ತ ಕಾರ್ಮಿಕವರ್ಗ, ರೈತವರ್ಗ ಮತ್ತು ಪ್ರಾಜ್ಞರವರ್ಗ ಬಂಡವಾಳಶಾಹಿ ವ್ಯವಸ್ಥೆಯ ನಿರ್ಮೂಲಕ್ಕಾಗಿ ಕ್ರಾಂತಿಕಾರಕ ಪ್ರತಿಭಟನೆಯನ್ನು ಹೂಡುವುದೆಂದನು. ಇಂತಹ ಕ್ರಾಂತಿಕಾರಕ ಸನ್ನಿವೇಶದಲ್ಲಿ ಜನಸಮುದಾಯವು ಕಾರ್ಮಿಕವರ್ಗದ ಮುಂದಾಳತ್ವದಲ್ಲಿ ಬಂಡವಾಳಶಾಹಿ ವ್ಯವಸ್ಥೆಯನ್ನು ವಿನಾಶಗೊಳಿಸುವುದು ಎಲ್ಲೆಡೆಯಲ್ಲಿಯೂ ಸಾಧ್ಯ. ಹಿಂದುಳಿದ ರಾಷ್ಟ್ರ ಅಥವಾ ಮುಂದುವರಿದಿರುವ ರಾಷ್ಟ್ರ ಎಂಬ ವ್ಯತ್ಯಾಸವನ್ನು ಸಾಮ್ರಾಜ್ಯವಾದಿ ಬಂಡವಾಳಶಾಹಿ ವ್ಯವಸ್ಥೆ ತೊಡೆದುಹಾಕಿದೆ. ಸಾಮ್ರಾಜ್ಯವಾದಿ ಬಂಡವಾಳಶಾಹಿ ವ್ಯವಸ್ಥೆಯ ಸರಪಣಿಯಲ್ಲಿ ಅತಿ ಬಲಹೀನ ಕೊಂಡಿಯು ಕಿತ್ತು ಕಾರ್ಮಿಕವರ್ಗದ ಕ್ರಾಂತಿ ವಿಜಯವಾಗಲು ಸಾಧ್ಯವಿದೆ. ಹಿಂದುಳಿದ ಮತ್ತು ವ್ಯವಸಾಯವೇ ಪ್ರಾಧಾನ್ಯವಾಗಿದ್ದ ರಷ್ಯಾದೇಶದಲ್ಲಿ ಕಾರ್ಮಿಕವರ್ಗ ನಡೆಸಿದ ಮಹಾಕ್ರಾಂತಿ ಲೆನಿನ್ನನ ವಿಮರ್ಶೆಯನ್ನು ಸಮರ್ಥಿಸಿದೆ. ಲೆನಿನ್ನನ ಅನುಯಾಯಿ ಸ್ಟಾಲಿನ್ ಲೆನಿನ್ ವಾದವನ್ನು ಮುಂದುವರಿಸಿ ಏಕಮಾತ್ರ ದೇಶದಲ್ಲಿ ಸಮಾಜವಾದೀ ವ್ಯವಸ್ಥೆಯ ಸ್ಥಾಪನೆ ಮತ್ತು ಅದರ ಅಭಿವೃದ್ಧಿ ಸಾಧ್ಯವೆಂಬುದನ್ನು ಸೋವಿಯಟ್ ಸಮಾಜವಾದಿ ರಾಷ್ಟ್ರದ ನಿರ್ಮಾಣದ ಮೂಲಕ ಪ್ರದರ್ಶಿಸಿದನು.[1]

ಪೌರ್ವಾತ್ಯ ದೇಶಗಳಲ್ಲಿ ವೈಜ್ಞಾನಿಕ ಸಮಾಜವಾದದ ಸ್ಥಾಪನೆಯ ಬಗ್ಗೆ ಕೆಲವು ವೃತ್ತಗಳಲ್ಲಿ ಜಿಜ್ಞಾಸೆ ಇದೆ. ಅದೇನೆಂದರೆ ವೈಜ್ಞಾನಿಕ ಸಮಾಜವಾದ ಬಂಡವಾಳಶಾಹಿ ವ್ಯವಸ್ಥೆಗೆ ಪ್ರತೀಕಾರ ರೂಪದಲ್ಲಿದ್ದು ಪಾಶ್ಚಾತ್ಯ ದೇಶಗಳಲ್ಲಿ ಉದ್ಭವಿಸಿದ್ದಾಗಿದೆ. ಆದ್ದರಿಂದ ಸಮಾಜವಾದದ

(1) ಸ್ಟಾಲಿನ್ನನ 'ಲೆನಿನ್‌ವಾದದ ಸಮಸ್ಯೆಗಳು' ಎಂಬ ಬರೆಹಗಳು ; ಮಾಸ್ಕೊ ಸಂಪುಟ, 1945.

ವ್ಯಾಪನೆ ಪೌರ್ವಾತ್ಯ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಇರುವಿಕೆಯನ್ನು ಅವಲಂಬಿಸಿದೆ. ಆದರೆ ಪೌರ್ವಾತ್ಯ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆ ರೂಪುಗೊಂಡಿಲ್ಲ; ಒಂದು ಪಕ್ಷ ಬಂಡವಾಳವಶಾಹಿ ವ್ಯವಸ್ಥೆ ಪೌರ್ವಾತ್ಯದೇಶಗಳಲ್ಲಿ ಇರವುದಾದರೂ, ಪೌರ್ವಾತ್ಯ ದೇಶಗಳ ಸಾಂಸ್ಕೃತಿಕ ಹಿನ್ನಲೆ ಮತ್ತು ಆಧ್ಯಾತ್ಮಿಕ ಮನೋಭಾವ (Spiritual out-look) ಬಂಡವಾಳಶಾಹಿ ವ್ಯವಸ್ಥೆ ತನ್ನ ವಿರಸಗಳನ್ನು ಬಿತ್ತಲು ಅವಕಾಶವಿಲ್ಲದ ಹಾಗೆ ಮಾಡಿವೆ. ಎರಡನೆಯದಾಗಿ, ಸಮಾಜವಾದ ತತ್ತ್ವವು ಪೌರ್ವಾತ್ಯ ಸಾಂಸ್ಕೃತಿಕ ಇತಿಹಾಸದಲ್ಲಿ ಹೊಸದಲ್ಲ; ಬಹಳ ಹಳೆಯದು. ಪಾಶ್ಚಾತ್ಯ ದೇಶಗಳಲ್ಲಿ ಈಗ ಅದರ ಆವಶ್ಯಕತೆಯ ಬಗ್ಗೆ ಜಿಜ್ಞಾಸೆಗಳಾಗುತ್ತಿದ್ದರೆ, ಸಮಾಜವಾದೀ ಮನೋಭಾವ, ಸಮಾಜವಾದೀ ವ್ಯವಸ್ಥೆ ಪೌರ್ವಾತ್ಯ ದೇಶಗಳಲ್ಲಿ ಅನಾದಿಕಾಲದಿಂದಲೂ ಇವೆ. ಪೌರ್ವಾತ್ಯ ಜನಜೀವನದಲ್ಲಿ ಸಮಾಜವಾದ ರಕ್ತಗತವಾಗಿರುವಾಗ ಅದರ ಆವಶ್ಯಕತೆಯ ಬಗ್ಗೆ ಪುನಃ ಈಗ ಉಪದೇಶ ನಡೆಯುವುದು ಅನಾವಶ್ಯಕವಾಗಿದೆ. ಮೂರನೆಯದಾಗಿ, ಒಂದು ಪಕ್ಷ, ಸಮಾಜವಾದೀ ತತ್ತ್ವದ ಉಪದೇಶ ಆವಶ್ಯಕವಾಗಿ ಕಂಡು ಬಂದರೂ ಮಾರ್ಕ್ಸ್-ಏಂಗಲ್ಸರು ಪ್ರತಿಪಾದಿಸಿರುವ ಭೌತಿಕಾತ್ಮಿಕ ಸಮಾಜವಾದಕ್ಕೆ ಸ್ಥಳವೇ ಇಲ್ಲ. ಪೌರ್ವಾತ್ಯ ದೇಶಗಳಲ್ಲಿ, ಅದರಲ್ಲೂ ಭಾರತದಲ್ಲಿ, ಆಗಬೇಕಾಗಿದೆ ಶಿಥಿಲವಾಗಿರುವ ಧರ್ಮದ ಪುನರುಜ್ಜೀವನದ ಕೆಲಸ ಮಾತ್ರ. ಗಾಂಧೀಜಿಯವರು ಈ ಧರ್ಮದ ಸ್ವರೂಪವನ್ನು ಮತ್ತೆ ಪ್ರಸಾರ ಮಾಡಿದ್ದಾರೆ. ಭಾರತದ ಧರ್ಮಕ್ಕೆ ಅನುಗುಣವಾಗಿರುವಂತಹ ಸಮಾಜವಾದೀ ತತ್ತ್ವವನ್ನು ಅನುಷ್ಠಾನಕ್ಕೆ ತರುವುದು ಮಾತ್ರ ಉಳಿದಿದೆ.

ಪೌರ್ವಾತ್ಯ ದೇಶಗಳಲ್ಲಿ, ಅದರಲ್ಲೂ ಭಾರತದಲ್ಲಿ, ಬಂಡವಾಳಶಾಹಿ ವ್ಯವಸ್ಥೆ ಇದೆಯೇ ಅಥವಾ ಇಲ್ಲವೇ ಮತ್ತು ಭಾರತದಲ್ಲಿ ಅನಾದಿಕಾಲದಿಂದಲೂ ಸಮಾಜವಾದೀ ತತ್ತ್ವ ಮತ್ತು ವ್ಯವಸ್ಥೆ ಇದ್ದವೇ ಎಂಬ ಪ್ರಶ್ನೆಗಳಿಗೆ ಉತ್ತರ ಬೇಕಾಗಿದೆ. ಉತ್ಪಾದನಾ ವಸ್ತುಗಳಲ್ಲಿ ಖಾಸಗೀ ಸ್ವಾಮ್ಯ, ಮಾರುಕಟ್ಟೆಯಲ್ಲಿ ವಿಕ್ರಯಿಸಲು ಸರಕುಗಳ ತಯಾರಿಕೆ ಮತ್ತು ಮಾರಾಟ, ಹಾಗೆ ತಯಾರಿಸಲು ಇತರರನ್ನು ಕೂಲಿಗಾಗಿ ನೇಮಿಸಿಕೊಳ್ಳುವುದು, ಲಾಭ, ಪೈಪೋಟಿ ಇವುಗಳು ಬಂಡವಾಳಶಾಹಿ ವ್ಯವಸ್ಥೆ ಎಂದು ಕರೆಯಲು ನಿರ್ದೇಶಿಸುವ ಲಕ್ಷಣಗಳಾಗಿವೆ. ಅತ್ಯಂತ ಅನಾಗರಿಕಕಾಲದ ಸಮಾಜ ವ್ಯವಸ್ಥೆಯನ್ನು ಬಿಟ್ಟರೆ,

ಅಂದಿನಿಂದ ಇಲ್ಲಿಯವರೆಗೆ ಉತ್ಪಾದನಾ ವಸ್ತುಗಳಲ್ಲಿ ಖಾಸಗೀ ಸ್ವಾಮ್ಯ ಭಾರತದ ಆರ್ಥಿಕ ವ್ಯವಸ್ಥೆಯ ಲಕ್ಷಣವಾಗಿದೆ. ಭಾರತದ ಪ್ರಾಚೀನ ಮತ್ತು ಮಧ್ಯಮ ಕಾಲಗಳಲ್ಲಿ ಸ್ವಯಂಪೂರ್ಣತೆಯ ಕೃಷಿ, ಸ್ವಯಂಪೂರ್ಣತೆಯ ದುಡಿಮೆ, ಅದಲು- ಬದಲಿನ ವ್ಯಾಪಾರ, ಗೃಹಕೈಗಾರಿಕೆ ಇವೇ ಭಾರತದ ಆರ್ಥಿಕ ವ್ಯವಸ್ಥೆಯ ಆಧಾರಗಳಾಗಿದ್ದವು. ಆದರೆ 20 ನೇ ಶತಮಾನಾನಂತರ ಈ ವ್ಯವಸ್ಥೆ ನಾಗಾಲೋಟದಿಂದ ಮುಂದುವರೆದು ಬಂಡವಾಳಶಾಹಿ ವ್ಯವಸ್ಥೆಯ ಸ್ವರೂಪವನ್ನು ತಾಳಿತು.[1] ಸಂಚಾರ ಸೌಕರ್ಯ ಮತ್ತು ವ್ಯಾಪಾರ, ಆಮದು ರಫ್ತು, ದೇಶಕ್ಕೆಲ್ಲ ಅನ್ವಯವಾಗುವ ರೀತಿಯ ಪದಾರ್ಥದ ಬೆಲೆ, ಮಾರುಕಟ್ಟೆ, ಮಾರುಕಟ್ಟೆಯ ಪರಿಸ್ಥಿತಿಗನುಗುಣವಾಗಿ ಉತ್ಪಾದನೆ, ಬಂಡವಾಳ ಶೇಖರಣೆ, ಖಾಸಗೀ ಕೈಗಾರಿಕೋದ್ಯಮಗಳು, ಕೂಲಿಗಾರವರ್ಗ, ಕೇವಲ ಮಾರಾಟಕ್ಕಾಗಿ ಮತ್ತು ಲಾಭದ ದೃಷ್ಟಿಯಿಂದ ಬೆಳೆಯಲ್ಪಡುವ ಫಸಲುಗಳು, ಪೈಪೋಟಿ, ಬ್ಯಾಂಕುಗಳು ಎಲ್ಲವೂ ಆಗಮಿಸಿವೆ. ನಮ್ಮ ಆರ್ಥಿಕವ್ಯವಸ್ಥೆಯನ್ನು ಪಾಶ್ಚಾತ್ಯ ದೇಶಗಳ ಆರ್ಥಿಕ ವ್ಯವಸ್ಥೆಯೊಡನೆ ಹೋಲಿಸಿದರೆ ಕೈಗಾರಿಕಾ ರಂಗದಲ್ಲಿ ಪಾಶ್ಚಾತ್ಯ ದೇಶಗಳು ಗಳಿಸಿರುವ ಮುಂದೋಟ ಹೊರತು ಮಿಕ್ಕೆಲ್ಲ ಲಕ್ಷಣಗಳೂ ಒಂದೇ ಆಗಿವೆ. ಪಾಶ್ಚಾತ್ಯ ದೇಶಗಳಲ್ಲಿ ಬಂಡವಾಳಶಾಹಿ ವ್ಯವಸ್ಥೆ ಕ್ರಮೇಣ ವಿರಸಗಳನ್ನು ಪ್ರದರ್ಶಿಸಿದ್ದರೆ, ಭಾರತದಲ್ಲೂ ಸಹ ಬಂಡವಾಳಶಾಹಿ ವ್ಯವಸ್ಥೆ ಕ್ರಮೇಣ ವಿರಸಗಳನ್ನು ಪ್ರದರ್ಶಿಸುತ್ತಲಿದೆ.

ಉತ್ಪಾದನಾ ವಸ್ತುಗಳಲ್ಲಿ ಖಾಸಗೀ ಸ್ವಾಮ್ಯ ಭಾರತದಲ್ಲಿ ಬಹುಪೂರ್ವ ಕಾಲದಿಂದಲೂ ಕಂಡುಬಂದಿರುವುದರಿಂದ ಆಧುನಿಕ ಸಮಾಜವಾದಿ ತತ್ತ್ವ ಅಥವಾ ಸಮಾಜವಾದೀ ವ್ಯವಸ್ಥೆ ಭಾರತದಲ್ಲಿ ಇತ್ತೆಂದು ಪ್ರತಿವಾದಿಸುವುದು ಪ್ರಮಾದವಾಗುತ್ತದೆ. ಹಿಂದೆ ಸಮಾಜವಾದದ ಇತಿಹಾಸವನ್ನು ಈಕ್ಷಿಸುವಾಗ[1] ಹೇಳಿದಂತೆ ಭಾರತದಲ್ಲಿ ಇದ್ದದ್ದು ಕಲ್ಪನಾಸಮಾಜವಾದ ಮಾತ್ರ.

---

(1) ಭಾರತೀಯ ಇತಿಹಾಸದ ಬಗ್ಗೆ ಹೆಚ್ಚು ಪರಿಶೋಧನೆಯ ಅಗತ್ಯ ಬಹಳವಿದೆ. ಅಲ್ಪಸ್ವಲ್ಪ ನಡೆದಿರುವ ಪರಿಶೋಧನೆಯೂ, ಇತಿಹಾಸದ ಪುಸ್ತಕಗಳೂ ಮತ್ತು ಇತ್ತೀಚಿಗೆ ಭಾರತೀಯ ದೃಷ್ಟಿಯಿಂದ ಬರೆಯಲಾಗಿದೆ ಎಂದು ಹೇಳಲಾದ ಇತಿಹಾಸ ಪುಸ್ತಕಗಳೂ 'ಪ್ರಾಚೀನ' ಮತ್ತು 'ಮಧ್ಯಮ' ಕಾಲಗಳ ಆರ್ಥಿಕ ವ್ಯವಸ್ಥೆ, ಉತ್ಪಾದನಾ ಕ್ರಮ ಮತ್ತು ಉತ್ಪಾದನಾ ಸಂಬಂಧಗಳ ಬಗ್ಗೆ

ಗಮನವನ್ನೇ ಕೊಟ್ಟಿಲ್ಲ. ಭಾರತೀಯ ಸಂಸ್ಕೃತಿಯ ಹಿರಿಮೆಯನ್ನು ಚಿತ್ರಿಸುವುದರಲ್ಲೇ ಭಾರತೀಯ ಇತಿಹಾಸಜ್ಞರು ತಲ್ಲೀನರಾಗಿ ಜನಜೀವನದ ಆರ್ಥಿಕ ಅಡಿಪಾಯದ ಬಗ್ಗೆ ವಿವರಣೆಯೇ ಇಲ್ಲ. ಇವುಗಳ ಫಲವಾಗಿ ಪ್ರಾಚೀನ ಭಾರತದ ಆರ್ಥಿಕ ವ್ಯವಸ್ಥೆಯ ಲಕ್ಷಣಗಳನ್ನು ವಿವರವಾಗಿ ಹೇಳುವುದಕ್ಕೆ ಕಷ್ಟವಾಗಿದೆ.

ಈಗ ವಾಡಿಕೆಯಲ್ಲಿರುವಂತೆ ಕೇವಲ ಕಾಲದೃಷ್ಟಿಯಿಂದ ಅಥವ ಆಳಿದ ರಾಜ ಮಹಾರಾಜರುಗಳ ಮಾತಾಂಧಾರದಮೇಲೆ (Religions affiliation) ಭಾರತೀಯ ಇತಿಹಾಸವನ್ನು ಪ್ರಾಚೀನಕಾಲದ ಇತಿಹಾಸ (ಹಿಂದೂ), ಮಧ್ಯಮ ಕಾಲದ ಇತಿಹಾಸ (ಮಹಮ್ಮದೀಯ), ಆಧುನಿಕಕಾಲದ ಇತಿಹಾಸ (ಬ್ರಿಟಿಷ್) ಎಂದು ವಿಂಗಡಿಸುವುದು ಸರ್ವಥಾ ತಪ್ಪು. ಹಿಂದೂ ಮತ್ತು ಮಹಮ್ಮದೀಯ ಕಾಲದ ಇತಿಹಾಸದಲ್ಲಿ ಹಲವು ಕೆಲವು ವ್ಯತ್ಯಾಸಗಳಿದ್ದರೂ, ರಾಜ್ಯವ್ಯವಸ್ಥೆ, ನ್ಯಾಯ ವ್ಯವಸ್ಥೆ, ಜನಜೀವನ, ಇತ್ಯಾದಿ ಒಟ್ಟಿನಲ್ಲಿ ಒಂದೇ ಲಕ್ಷಣವನ್ನು ವ್ಯಕ್ತಪಡಿಸುತ್ತವೆ ಹಿಂದೂ ಸಂಸ್ಕೃತಿಯುಳ್ಳ ಜನರೊಡನೆ ಪರಕೀಯ ಸಂಸ್ಕೃತಿಯುಳ್ಳ ಮಹಮ್ಮದೀಯ ಜನರು ಕಲೆತನಂತರವೂ ಸಹ, ಕೆಲವು ಮಾರ್ಪಾಡುಗಳನ್ನೊಳಗೊಂಡ ಹಳೆಯ ಛಾಯಾವಿನ್ಯಾಸಗಳೇ ಮುಂದುವರೆಯುತ್ತವೆ. ಬಂಡವಾಳಶಾಹಿ ಉತ್ಪಾದನಾಕ್ರಮ 19-20 ನೇ ಶತಮಾನಗಳಲ್ಲಿ ಆರಂಭವಾಗುವವರೆಗೂ ಜನರ ಆರ್ಥಿಕ ಜೀವನ ಪ್ರಾಚೀನಕಾಲದ ಆರ್ಥಿಕವ್ಯವಸ್ಥಾರೂಪದ್ದೋ ಅಥವ ಮಾರ್ಪಾಡುಗಳಿಗೆ ಒಳಪಟ್ಟ ಪ್ರಾಚೀನಕಾಲದ ಆರ್ಥಿಕವ್ಯವಸ್ಥಾರೂಪದ್ದೋ (ಊಳಿಗಮಾನ್ಯದ ಆರ್ಥಿಕವ್ಯವಸ್ಥೆ) ಆಗಿದೆ. ಆದುದರಿಂದ ಬಂಡವಾಳಶಾಹಿ ವ್ಯವಸ್ಥೆಗೆ ಮುನ್ನ ಭಾರತದಲ್ಲಿದ್ದ ಆರ್ಥಿಕ ಸಾಮಾಜಿಕ ಮತ್ತು ರಾಜಕೀಯ ವ್ಯವಸ್ಥೆಗಳ ಆಧಾರದ ಮೇಲೆ ಭಾರತೀಯ ಇತಿಹಾಸ ಪರಂಪರೆಯನ್ನು ವಿಂಗಡಿಸಬೇಕು.

ಪ್ರಾಚೀನ ಭಾರತದ ಇತಿಹಾಸವನ್ನು ಮಾರ್ಕ್ಸ್‌ವಾದದ ದೃಷ್ಟಿಯಿಂದ ಪ್ರಥಮಬಾರಿಗೆ ಶ್ರೀ ಡಾಂಗೇ ಅವರು ತಮ್ಮ ಪುಸ್ತಕವಾದ "ಭಾರತ-ಅನಾಗರಿಕ ಕಮ್ಯೂನಿಸಂನಿಂದ ದಾಸ್ಯಕ್ಕೆ" ಎಂಬುದರಲ್ಲಿ ಯತ್ನಿಸಿದ್ದಾರೆ. ಹಾಗೆಯೇ ಶ್ರೀ ಕೋಸಾಂಬೀ ಅವರೂ ಯತ್ನಿಸಿದ್ದಾರೆ. (ಶ್ರೀ ರಾಹುಳ ಸಂಕೃತ್ಯಾಯನರ "ಓಲ್ಗಾದಿಂದ ಗಂಗಾನದಿಗೆ" ಎಂಬ ಪುಸ್ತಕವನ್ನೂ ಮತ್ತು ಪ್ರಬುದ್ಧ ಕರ್ಣಾಟಕದ ಸಂಚಿಕೆಗಳಲ್ಲಿ (ಸಂಪುಟ 36 ; ಸಂಚಿಕೆ 1, 2, 3 ಮತ್ತು 4 ; 1954) ಪ್ರಕಟವಾಗಿರುವ 'ಸಂಸ್ಕೃತಿ ಮತ್ತು ಅದರ ಪುನರುದ್ಧಾರ' ಎಂಬ ಲೇಖನ ಮಾಲೆಯನ್ನೂ ಸಹ ಈ ಸಂದರ್ಭದಲ್ಲಿ ಓದಬಹುದು)

ಮಾರ್ಕ್ಸ್ ಯೂರೋಪು ಖಂಡದ ಲಿಖಿತ ಇತಿಹಾಸವನ್ನು ವಿಮರ್ಶೆಗೆ ಒಳಪಡಿಸಿ, ಅದು ಪ್ರಾಚೀನ, ಊಳಿಗಮಾನ್ಯ ಮತ್ತು ಬಂಡವಾಳಶಾಹಿ ವ್ಯವಸ್ಥೆಯ ಘಟ್ಟಗಳಿಂದ ಕೂಡಿರುವುದೆಂದೂ, ಒಂದೊಂದು ಘಟ್ಟವೂ ಕ್ರಮೇಣ ಉದ್ಭವಿಸಿದ್ದಾಗಿದೆ ಎಂದೂ, ಪ್ರತಿ ಘಟ್ಟದಲ್ಲಿರುವ ಉತ್ಪಾದನಾ ಕ್ರಮವೇ ಒಂದನ್ನು ಇನ್ನೊಂದರಿಂದ ವಿಂಗಡಿಸುವುದಕ್ಕೆ ಸಾಧ್ಯಮಾಡಿಕೊಟ್ಟಿದೆ ಎಂದೂ,

ಸಮಾಜ ವಿಕಾಸದಲ್ಲಿ ಬಂಡವಾಳಶಾಹಿ ಉತ್ಪಾದನಾ ಕ್ರಮ ಕಟ್ಟಕಡೆಯ ಘಟ್ಟವಾಗಿದೆ ಎಂದೂ, ಬಂಡವಾಳಶಾಹಿ ವ್ಯವಸ್ಥೆಯೂ ಸಹ ಇತರ ಘಟ್ಟಗಳು ನಶಿಸಿದಂತೆ ಇದೂ ನಶಿಸುತ್ತದೆಂದೂ, ಅದು ಹಾಗೆ ನಶಿಸಲು ಅದು ಎಡೆಕೊಟ್ಟಿರುವ ವಿರಸಗಳೇ ಕಾರಣವಾಗಿದೆ ಎಂದೂ, ತನ್ನ ಅಂತ್ಯವನ್ನು ತಾನೇ ತಂದುಕೊಳ್ಳುತ್ತಿದೆ ಎಂದೂ, ಬಂಡವಾಳಶಾಹಿ ವ್ಯವಸ್ಥೆಯ ಅಂತ್ಯ ಸಮಾಜವಾದೀ ವ್ಯವಸ್ಥೆಯ ಆಗಮನಕ್ಕೆ ನಾಂದಿ ಎಂದೂ ತಿಳಿಸಿದನು. ಅದರಂತೆ, ಶ್ರೀ ಡಾಂಗೇ ಮತ್ತು ಶ್ರೀ ಕೋಸಾಂಬೀ ಅವರು ಉತ್ಪಾದನಾಕ್ರಮ ಎಡೆಕೊಡುವ ಆರ್ಥಿಕವ್ಯವಸ್ಥೆಯ ಆಧಾರದಮೇಲೆ ಪ್ರಾಚೀನ, ಊಳಿಗಮಾನ್ಯ ಮತ್ತು ಬಂಡವಾಳಶಾಹಿ ಘಟ್ಟಗಳು ಭಾರತದ ಇತಿಹಾಸದಲ್ಲೂ ಕಂಡುಬರುತ್ತವೆಂದು ವಾದಿಸಿದ್ದಾರೆ.

ಮೇಲ್ಕಂಡ ವಾದಕ್ಕೆ ಸಮರ್ಥನೆಯೂ ಸಿಗುತ್ತದೆ. ಕೌಟಿಲ್ಯನ 'ಅರ್ಥಶಾಸ್ತ್ರ'ವನ್ನು ಓದಿದರೆ ಪ್ರಾಚೀನ ಭಾರತದ ಆರ್ಥಿಕವ್ಯವಸ್ಥೆಯಲ್ಲಿ ದಾಸ್ಯಪದ್ಧತಿ ಇತ್ತೆಂಬುದು ವ್ಯಕ್ತವಾಗಿ ಕಾಣುತ್ತದೆ. (ಕೌಟಿಲ್ಯನ 'ಅರ್ಥಶಾಸ್ತ್ರ', ಡಾ. ಶ್ಯಾಮಶಾಸ್ತ್ರೀಗಳು ಸಂಪುಟ 1951, ಪುಟ 131, 137, XIII ನೇ ಅಧ್ಯಾಯ ಮತ್ತು ಪುಟ 253, 255, 260). ಆದರೆ ಈ ದಾಸ್ಯಪದ್ಧತಿ ಯೂರೋಪಿನಲ್ಲಿ ಗುಲಾಮಗಿರಿ ಇದ್ದಂತೆ ಇದ್ದಿತೇ, ದಾಸ್ಯಕ್ಕೂ ಜಾತಿ ಪದ್ಧತಿಗೂ ಏನು ಸಂಬಂಧವಿತ್ತು, ದಾಸ್ಯ ಯಾವ ಕಾಲದಲ್ಲಿ ಕೊನೆಗೊಂಡಿತು, ದಾಸ್ಯಕೊನೆಗೊಂಡ ಮೇಲೆ ಯಾವ ಆರ್ಥಿಕ ಸಂಬಂಧಗಳು ಬಂದವು, ಭಾರತದಲ್ಲಿ ಊಳಿಗಮಾನ್ಯಪದ್ಧತಿ ಯೂರೋಪು ಖಂಡದಲ್ಲಿ ಇದ್ದಂತೆ ಇತ್ತೇ ಅಥವಾ ಬೇರೆ ಯಾವ ರೂಪದಲ್ಲಿ ಇದ್ದಿತು, ಎಂದು ಆರಂಭವಾಯಿತು, ಇತ್ಯಾದಿಗಳ ಬಗ್ಗೆ ಖಚಿತ ವಿವರಗಳು ಇನ್ನೂ ದೊರೆಯಬೇಕಾಗಿವೆ. ಆದುದರಿಂದ 20 ನೇ ಶತಮಾನಕ್ಕೆ ಹಿಂದೆ ಇದ್ದ ಆರ್ಥಿಕವ್ಯವಸ್ಥೆಯ ಬಗ್ಗೆ ನಿರ್ವಿವಾದದ ಕೆಲವು ಲಕ್ಷಣಗಳನ್ನು ಮಾತ್ರ ಇಲ್ಲಿ ತಿಳಿಸಲಾಗಿದೆ. ಒಟ್ಟಿನಲ್ಲಿ ಹೇಳುವುದಾದರೆ, ಉತ್ಪಾದನೆಯು ಬಹು ಹಿಂದುಳಿದ ಉಪಕರಣಗಳ ಸಹಾಯದಿಂದ ನಡೆಯುತ್ತಲಿದ್ದಿತು. ಗುಲಾಮರು (ದಾಸ) ಮತ್ತು ಶೂದ್ರರು ಉತ್ಪಾದನೆ ಮಾಡುತ್ತಿದ್ದರು. ಭೂಮಿ ಖಾಸಗೀ ಸ್ವಾಮ್ಯಕ್ಕೆ ಒಳಪಟ್ಟಿದ್ದಿತು ಸ್ವಾವಲಂಬೀ ಆರ್ಥಿಕ ವ್ಯವಸ್ಥೆ ಇದ್ದಿತು. ರಾಜನಿಗೆ ಸಲ್ಲುತ್ತಿದ್ದ ಭಾಗ ಮತ್ತು ಹೆಚ್ಚುವರೀ ಉತ್ಪಾದನೆ ಸರಕುಗಳಾಗಿ ಮಾರುಕಟ್ಟೆಯನ್ನು ಪ್ರವೇಶಿಸುತ್ತಿದ್ದಿತು. ಈ ರೀತಿಯ ಉತ್ಪಾದನಾವ್ಯವಸ್ಥೆ 10 ಮತ್ತು 11 ನೇ ಶತಮಾನಗಳವರೆಗೂ ಮುಂದುವರೆಯಿತು. ತದನಂತರ ಪರಕೀಯರಿಂದ ಧಾಳಿ, ಧಾಳಿಯ ಫಲವಾಗಿ ದೇಶದಲ್ಲಿ ವಿಪ್ಲವ, ಅವ್ಯವಸ್ಥೆ ಮತ್ತು ಪಾಳೆಯಗಾರಿಕೆ ಇವು ಉತ್ಪಾದನಾ ಸಂಬಂಧಗಳಲ್ಲಿ ಹಲವು ಬದಲಾವಣೆಗಳನ್ನು ತಂದವು. ಸಣ್ಣ ಪುಟ್ಟ ರಾಜರುಗಳು ಮತ್ತು ಪಾಳೆಯಗಾರರು ಭೂ ಮಾಲೀಕರಾದರು. ಜೊತೆಗೆ, ಜೋಡಿ, ಇನಾಂ, ಅಗ್ರಹಾರ, ಜಹಗೀರ್, ಇತ್ಯಾದಿ ರೂಪಗಳಲ್ಲಿ ಹಲವರು ಭೂಮಿಯನ್ನು ಪಡೆದು ಜಮೀನ್

ಭಾರತದಲ್ಲಿ ಆಧುನಿಕ ಅಥವಾ ವೈಜ್ಞಾನಿಕ ಸಮಾಜವಾದ ಮೂಡಲು ಪ್ರಬುದ್ಧಾವಸ್ಥೆಗೆ ಬಂದಿದ್ದ ಬಂಡವಾಳಶಾಹಿ ವ್ಯವಸ್ಥೆಯಾಗಲೀ ಅಥವಾ ಅದರ ಆವಶ್ಯಕತೆಯಾಗಲೀ ಇರಲಿಲ್ಲ.[1] ಆದರೆ ಈಗ ಬಂಡವಾಳಶಾಹಿ ಉತ್ಪಾದನಾಕ್ರಮದ ಮುಂದೋಟದೊಡನೆ ದೇಶ ವಿದೇಶಗಳ ಬಂಡವಾಳಶಾಹಿ ವ್ಯವಸ್ಥೆ ವಿಶ್ವ ಬಂಡವಾಳಶಾಹಿ ವ್ಯವಸ್ಥೆಯ ಒಂದು ಭಾಗವಾಗಿದೆ; ಆಧುನಿಕ ಸಮಾಜವಾದ ಅದರ ಪಾಶ್ಚಾತ್ಯತೆಯನ್ನು ಕಳೆದುಕೊಂಡು ಅಂತರರಾಷ್ಟ್ರೀಯ ವ್ಯಾಪ್ತಿಯನ್ನು ತಾಳಿದೆ; ಮಾರ್ಕ್ಸ್-ಏಂಗಲ್ಸರವಾದ ಎಲ್ಲಾ ದೇಶಗಳಿಗೂ ಅನ್ವಯವಾಗುತ್ತದೆ. ಕಮ್ಯೂನಿಸ್ಟ್ ಚಳವಳಿಯು ದೇಶೀಯ ಚಳವಳಿ ಮತ್ತು ಅಂತರರಾಷ್ಟ್ರೀಯ ಚಳವಳಿ ಎರಡೂ ಆಗುತ್ತದೆ. ಭಾರತದಲ್ಲಿ ಕಮ್ಯೂನಿಸ್ಟ್ ಚಳವಳಿ ರಾಷ್ಟ್ರೀಯ

ದಾರರಾದರು. ಈ ಹಲವು ಮಾರ್ಪಾಡುಗಳಿಂದ ಕೂಡಿದ್ದಾಗಿ ಉತ್ಪಾದನಾಕ್ರಮ ಮತ್ತು ವ್ಯವಸ್ಥೆ ಮೊದಲಿನಂತೆಯೇ ಹತ್ತೊಂಭತ್ತನೇ ಶತಮಾನದ ಅಂತ್ಯದ ವರೆಗೂ ಮುಂದುವರೆಯಿತು. ಈಗಲೂ ಸಹ ಪೂರ್ಣವಾಗಿ ನಶಿಸಿಲ್ಲ.

ಐತಿಹಾಸಿಕ ಭೌತವಾದದ ದೃಷ್ಟಿಯಲ್ಲಿ ಭಾರತದ ಆರ್ಥಿಕ ಇತಿಹಾಸ ಆಸಮಬೆಳವಣಿಗೆಯ ನಿಯಮಕ್ಕೆ ಒಳಪಟ್ಟಿದ್ದಾಗಿಯೂ, ವ್ಯವಸಾಯವೇ ಪ್ರಾಧಾನ್ಯವಾಗುಳ್ಳ ದೇಶವಾಗಿಯೂ, ಉತ್ಪಾದನಾ ರೀತಿ ಅತಿ ಹಿಂದುಳಿದ ಉತ್ಪಾದನಾ ಸಾಧನೋಪಾಯಗಳಿಂದ (The Technique of production) ನಡೆಯುತ್ತಿರುವ ದೇಶವಾಗಿಯೂ ಇದೆ. ಮಾರ್ಕ್ಸ್-ಏಂಗೆಲ್ಸರು ಭಾರತದ ಆರ್ಥಿಕ ವ್ಯವಸ್ಥೆಯನ್ನು ಬಹಳಕಾಲ ನಿಂತೆಡೆಯಲ್ಲಿ ನಿಂತಿರುವ (Stagnatory and vegetative life) ವ್ಯವಸ್ಥೆ ಎಂದು ತಿಳಿಸಿದ್ದಾರೆ. (ಮಾರ್ಕ್ಸ್-ಏಂಗೆಲ್ಸರ ಆರಿಸಲ್ಪಟ್ಟ ಬರೆಹಗಳು, ಪುಟ 517). ಇಂತಹ ವ್ಯವಸ್ಥೆಯಲ್ಲಿ ಸಾಮಾಜಿಕ ಕ್ರಾಂತಿಯು ಬ್ರಿಟಿಷ್ ವ್ಯಾಪಾರಿಗಳು ತಮ್ಮ ಲಾಭದಾಹ ದೃಷ್ಟಿಯಿಂದ ತಂದ ಹಬೆಯಂತ್ರ ಮತ್ತು ಅನಿರ್ಬಂಧಿತವ್ಯಾಪಾರ (Free Trade) ಗಳಿಂದ ಉಂಟಾಗಿದೆ ಎಂದು ತಿಳಿಸಿದ್ದಾರೆ (ಪುಟ 517).

20 ನೇ ಶತಮಾನಾನಂತರ ಭಾರತದ ಅತಿ ಹಿಂದುಳಿದ ಉತ್ಪಾದನಾ ರೀತಿ ಬದಲಾವಣೆಗೆ ಒಳಗಾಗಿದೆ. ಬಂಡವಾಳ ಆರ್ಥಿಕವ್ಯವಸ್ಥೆಯ ಲಕ್ಷಣಗಳು ವ್ಯವಸಾಯವನ್ನೇ ಪ್ರಾಧಾನ್ಯವಾಗಿ ಹೊಂದಿದ್ದ ದೇಶದ ಆರ್ಥಿಕವ್ಯವಸ್ಥೆಯನ್ನು ಆವರಿಸಿವೆ. ಬಂಡವಾಳಶಾಹಿ ಕೈಗಾರಿಕಾ ಕ್ಷೇತ್ರವೂ ಸಹ ಜೊತೆಯಲ್ಲೇ ಬೆಳೆಯುತ್ತಾ ಬಂದಿದೆ.

(1) 2 ನೇ ಅಧ್ಯಾಯ ನೋಡಿ.

ಮನೋಭಾವವನ್ನು ಹೊಂದಿಲ್ಲವೆಂದು ದೂರುವವರು ಅದರ ಅಂತರ ರಾಷ್ಟ್ರೀಯತೆಯನ್ನು ಅರ್ಥಮಾಡಿಕೊಳ್ಳಲು ಇಷ್ಟವಿಲ್ಲದವರಾಗಿದ್ದಾರೆ. 'ವಿವಿಧ ದೇಶಗಳ ಕಾರ್ಮಿಕರೇ ಒಂದುಗೂಡಿ' ಎಂದು ಮಾರ್ಕ್ಸ್ ನುಡಿ ದನು. ಕಾರ್ಮಿಕವರ್ಗದ ಚಳವಳಿ ಎಲ್ಲೇ ಇರಲಿ ಅದರ ಸ್ವರೂಪ ಒಂದೇ.

ಬಂಡವಾಳಶಾಹಿ ವ್ಯವಸ್ಥೆಯ ವಿರಸಗಳನ್ನು ನಿರ್ಮೂಲಮಾಡಲು ಮಾರ್ಕ್ಸ್–ಏಂಗೆಲ್ಸರು ಸೂಚಿಸಿರುವ ವೈಜ್ಞಾನಿಕ ಸಮಾಜವಾದದ ಮಾರ್ಗ ದಿಂದ ಅಥವಾ ಬೇರೊಂದು ವಿಧದ ಸಮಾಜವಾದದ ಮೂಲಕ ಸಾಧ್ಯವೇ-ಧರ್ಮ ಸಮಾಜವಾದ, ಆಧ್ಯಾತ್ಮಿಕ ಸಮಾಜವಾದ, ಪ್ರಜಾಸತ್ತೆ ಸಮಾಜ ವಾದ, ಗಾಂಧೀ ಸಮಾಜವಾದ, ಸರ್ವೋದಯ — ಎಂಬ ಪ್ರಶ್ನೆ ಉಳಿದಿದೆ. ಐತಿಹಾಸಿಕ ಭೌತವಾದ, ಹೆಚ್ಚಿಗೇ ಮೌಲ್ಯ, ವರ್ಗಹೋರಾಟ, ಕಾರ್ಮಿಕವರ್ಗದ ಕ್ರಾಂತಿಕಾರಕ ಚಳವಳಿ, ಬಂಡವಾಳಶಾಹಿ ಆರ್ಥಿಕ ಮತ್ತು ರಾಜಕೀಯ ವ್ಯವಸ್ಥೆಯ ಮೂಲೋತ್ಪಾಟನೆ, ಕಾರ್ಮಿಕ ವರ್ಗದ ಏಕೈಕ ಪ್ರಭುತ್ವ ಮಾರ್ಕ್ಸ್ ವಾದದ ಲಕ್ಷಣಗಳಾಗಿವೆ. ಉತ್ಪನ್ನ ಸಾಧನಗಳ ಸಮಾಜೀಕರಣ, ಬಂಡವಾಳವರ್ಗದ ನಿರ್ಮೂಲ, ಬಂಡವಾಳವರ್ಗದಿಂದ ಬರುವ ಪ್ರತಿಭಟನೆಯನ್ನು ಮುರಿಯಲಿಕ್ಕಾಗಿ ಇರುವ ಕಾರ್ಮಿಕವರ್ಗದ ಏಕೈಕ ಪ್ರಭುತ್ವ, ವರ್ಗರಹಿತ ಮತ್ತು ಶೋಷಣಾರಹಿತ ಸಮಾಜವ್ಯವಸ್ಥೆ, ಉತ್ಪಾದನೆ ಹೆಚ್ಚಿಸಲು ಯೋಜನೆಗಳು, ಸಮಾಜ ಸಮಸ್ಯೆಗಳ ಬಗ್ಗೆ ವೈಜ್ಞಾ ನಿಕಮನೋಭಾವ, ವಿಜ್ಞಾನದ ಬಳಕೆ, ತಾಂತ್ರಿಕಮುಂದೋಟ ಇವೇ ಸಮಾಜವಾದೀ ವ್ಯವಸ್ಥೆಯಾಗಿವೆ. ಬಂಡವಾಳಶಾಹಿ ವ್ಯವಸ್ಥೆಯ ವಿರಸ ಗಳು ಸಮಾಜವಾದೀ ವ್ಯವಸ್ಥೆಯನ್ನು ಆವಶ್ಯಕವಾಗಿಯೂ ಅನಿವಾರ್ಯ ವಾಗಿಯೂ ಮಾಡಿವೆ.

ಆದುದರಿಂದ ಸಮಾಜವಾದೀ ವ್ಯವಸ್ಥೆಯ ಸ್ಥಾಪನೆ ಬೇರೆ ಯಾವ ಹೆಸರಿನಲ್ಲೇ ನಡೆಯಲಿ–ಸಮಾಜವಾದೀ ಮಾದ ರಿಯ ಸಮಾಜ ರಚನೆ ಎಂದೇ ಇರಲಿ–ಉತ್ಪಾದನಾ ವಸ್ತು ಗಳ ಮೇಲಿರುವ ಖಾಸಗೀ ಸ್ವಾಮ್ಯದ ಬಗ್ಗೆ ಮತ್ತು ಬಂಡವಾಳ ವರ್ಗದ ನಿರ್ಮೂಲದ ಬಗ್ಗೆ ಯಾವ ಧೋರಣೆಯನ್ನು ಮತ್ತು ಕಾರ್ಯಕ್ರಮವನ್ನು ಅಧಿಕಾರದಲ್ಲಿರುವ ವರ್ಗ ಕೈಗೊಳ್ಳುತ್ತ ದೆಂಬುದು ಮುಖ್ಯವಾದದ್ದು. ಈ ವಿಷಯಗಳ ಬಗ್ಗೆ ಖಚಿತ ಅಭಿ

ಪ್ರಾಯವನ್ನು ವ್ಯಕ್ತಪಡಿಸದೆ, ಕೇವಲ ವರ್ಗರಹಿತ ಮತ್ತು ಶೋಷಣಾ ರಹಿತ ಸಮಾಜ ವ್ಯವಸ್ಥೆಯ ರಚನೆ ನಮ್ಮ ಗುರಿಯೂ ಸಹ ಆಗಿದೆ ಎಂದು ಉದ್ಘೋಷಿಸಿದರೆ ಸಾಲದು.[1] **ಬಯಕೆ ಸಮಾಜವಾದೀ ವ್ಯವಸ್ಥೆಯನ್ನು ತರುವುದಿಲ್ಲ. ಕಾರ್ಯಕ್ಷೇತ್ರದಲ್ಲಿ ಮತ್ತು ಕಾರ್ಯರಂಗದಲ್ಲಿ ಕೈಗೊಳ್ಳುವ ಆರ್ಥಿಕನೀತಿ ಉತ್ಪಾದನಾಸಾಧನಗಳ ಸಮಾಜೀಕರಣವನ್ನೂ, ಬಂಡವಾಳವರ್ಗದ ನಿರ್ಮೂಲವನ್ನೂ ತರುತ್ತದೆಯೇ ಅಥವಾ ಇಲ್ಲವೇ ಎಂಬುದೇ ತಿರುಳು, ಮತ್ತು ಇದನ್ನು ತರಬಲ್ಲ ಕ್ರಾಂತಿಕಾರ ಕಾರ್ಮಿಕವರ್ಗ ಅಧಿಕಾರದಲ್ಲಿದೆಯೇ ಎಂಬುದು ಮುಖ್ಯವಾದದ್ದು.** ಹಾಗಲ್ಲದೆ ಧರ್ಮದ ಚ್ಯುತಿಯಿಂದ, ದಾನ ಧರ್ಮಗಳು ಇಲ್ಲದಿರುವುದರಿಂದ, ಬಂಡವಾಳವರ್ಗ ಇತರರ ಪರವಾಗಿ ಸ್ವಾಮ್ಯವನ್ನು ಹೊಂದಿದೆ ಎಂಬುದನ್ನುಅದು ಮರೆತಿರುವುದರಿಂದ, ಅಜ್ಞಾನದಿಂದ, ಅತಿಯಾಸೆಯಿಂದ ಲೋಪಗಳು ಬಂದಿವೆ ಎಂದು ಹೇಳುವುದಾದರೆ ಬಂಡವಾಳಶಾಹಿ ವ್ಯವಸ್ಥೆ ಸ್ವಲ್ಪವೂ ಕದಲದೆ ಮುಂದುವರಿಯುವುದರಲ್ಲಿ ಸಂದೇಹವೇ ಇಲ್ಲ. ಮೇಲಾಗಿ ಸಮಾಜವಾದವನ್ನು ಧರ್ಮಚ್ಯುತಿಗೆ, ದಾನ ಧರ್ಮಗಳ ಚ್ಯುತಿಗೆ ಇಳಿಸುವುದಾದರೆ ಅದು 'ಕಲ್ಪನಾ' ಸಮಾಜವಾಗುತ್ತದೆ. ಭಾರತಕ್ಕೆ ಆ ವಾದ ವಿಾಸಲಾದದ್ದೇ ಆಗಿರದೆ ಅದರ ಛಾಯಾ ವಿನ್ಯಾಸಗಳು ಪಾಶ್ಚಾತ್ಯ ದೇಶಗಳಲ್ಲೂ ಕಂಡುಬಂದಿದೆ. ಕಲ್ಪನಾ ಸಮಾಜವಾದದ ನಿಷ್ಪ್ರಯೋಜಕತೆ ಮತ್ತು ಅಸಹಾಯಕತೆ ಈಗಾಗಲೇ ಬಯಲಾಗಿವೆ. ಶೋಷಣೆಗೆ ಮತ್ತು ವರ್ಗವಿರಸಕ್ಕೆ ಆವಾಸಸ್ಥಾನವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ನಿರ್ಮೂಲಗೊಳಿಸಲು ಕಾರ್ಮಿಕವರ್ಗ ಕೈಗೊಳ್ಳುವ ಕ್ರಾಂತಿಕಾರಕ ಚಳವಳಿಯಿಂದ ಮಾತ್ರ ಸಾಧ್ಯವೆಂದು ತಿಳಿಸಲು ವೈಜ್ಞಾನಿಕ ಸಮಾಜವಾದ ಜನಿಸಿದೆ.

(1) ಭಾರತದಲ್ಲಿ ಸಮಾಜವಾದೀ ಮಾದರಿಯ ಸಮಾಜವ್ಯವಸ್ಥೆಯ ಸ್ಥಾಪನೆ ತನ್ನ ಗುರಿ ಎಂದು ಕಾಂಗ್ರೆಸ್‌ಪಕ್ಷ ಘೋಷಿಸಿದೆ, ಮತ್ತು ಸಮಾಜವಾದೀ ತತ್ತ್ವದ ಬಗ್ಗೆ ವಿವರಣೆಯನ್ನೂ ಕೊಡಲಾಗಿದೆ. ಈ ವಿವರಣೆ ಈರೀತಿ ಇದೆ: ಸಮಾಜದ ಉತ್ಪಾದನಾ ಸಾಧನಗಳಲ್ಲಿ ಖಾಸಗೀ ಸ್ವಾಮ್ಯ ಇಲ್ಲದಿರುವ ಅರ್ಥಿಕವ್ಯವಸ್ಥೆಯೇ ಸಮಾಜವಾದೀ ವ್ಯವಸ್ಥೆ ಎಂದು ನಾವು ಭಾವಿಸುವುದು ತಪ್ಪು. ಆರ್ಥಿಕ ಅಸಮಾನತೆ (Economic inequality), ಬಡತನ, ನಿರುದ್ಯೋಗ, ಶೋಷಣೆ, ಇವುಗಳನ್ನು ನಾಶಪಡಿಸುವುದು ಮಾರ್ಕ್ಸ್‌ವಾದಿಗಳ ಧ್ಯೇಯ ಎನ್ನುವುದಾದರೆ, ಅದು

ಎಲ್ಲರ ಧ್ಯೇಯವೂ ಆಗಿದೆ. ಇವುಗಳ ವಿನಾಶ ಅಗತ್ಯವೆಂದು ಸ್ಪಷ್ಟಗೊಳಿಸುವ ಮಾರ್ಕ್ಸ್ ತತ್ತ್ವದಲ್ಲಿ ಯಾವ ವಿಶೇಷತೆಯೂ ಇಲ್ಲ. ಆರ್ಥಿಕ ಅಸಮಾನತೆಯನ್ನು ಶ್ರೀಮಂತ ಮತ್ತು ನಿರ್ಗತಿಕ ಎಂಬ ವ್ಯತ್ಯಾಸವನ್ನು ಕಡಿಮೆಮಾಡುವುದರ ಮೂಲಕ, ಬಡತನವನ್ನು ಅಧಿಕ ಉತ್ಪಾದನೆಯನ್ನು ಕೈಗೊಂಡು ಸಂಪತ್ತನ್ನು ಹೆಚ್ಚಿಸುವುದರ ಮೂಲಕ, ನಿರುದ್ಯೋಗವನ್ನು ಉದ್ಯೋಗವನ್ನು ಕಲ್ಪಿಸುವುದರ ಮೂಲಕ, ಶೋಷಣೆಯನ್ನು ಕೆಲಸದ ಅವಧಿ, ಕೂಲಿಯ ನಿಗಧಿ, ಇತ್ಯಾದಿಗಳನ್ನು ಕಟ್ಟು ನಿಟ್ಟಾಗಿ ಗೊತ್ತುಪಡಿಸುವುದರ ಮೂಲಕ, ಸರಿಪಡಿಸುವುದಕ್ಕೆ ಸಾಧ್ಯವಿದೆ ಸರಿ ಪ್ರಮಾಣದಲ್ಲಿ ವಿನಿಯೋಗ (Distribution) ಇಲ್ಲದಿರುವುದು, ಸ್ವಾರ್ಥ, ಮತ್ತು ಸ್ವಾಮ್ಯವುಳ್ಳವರು ತಾವು ಹೊಂದಿರುವ ಸ್ವಾಮ್ಯ ಇತರರ ಪರವಾಗಿ ಎಂಬ (in trust) ಮನೋಭಾವ ಕ್ಷೀಣಿಸಿರುವುದು ಸಮಾಜದ ಆರ್ಥಿಕ ಅವ್ಯವಸ್ಥೆಗೆ ಮುಖ್ಯಕಾರಣಗಳಾಗಿವೆ. ಆದುದರಿಂದ ಸೂಕ್ತ ಆರ್ಥಿಕ ಮತ್ತು ಮನಬದಲಾವಣೆಯ ಕಾರ್ಯಕ್ರಮದ ಮೂಲಕ ಮಾರ್ಕ್ಸ್‌ವಾದಿಗಳು ಎಂತಹ ಕ್ಷೇಮಕರ ವ್ಯವಸ್ಥೆಯ ಆಗಮನಕ್ಕಾಗಿ ಹಂಬಲಿಸುತ್ತಿರುವರೋ ಅಂತಹ ವ್ಯವಸ್ಥೆಯನ್ನೇ ತರಬಹುದಾಗಿದೆ. ಇಂತಹ ಮಾರ್ಗದಲ್ಲಿ ಉತ್ಪಾದನಾ ಸಾಧನಗಳಲ್ಲಿರುವ ಖಾಸಗೀ ಸ್ವಾಮ್ಯದ ನಾಶ ಒಂದು ವಿಧದ ಸಾಧನೋಪಾಯವೇ ಹೊರತು ಅದೇ ಮುಖ್ಯವಲ್ಲ.

ಎರಡನೆಯದಾಗಿ, ಸಮಾಜದಲ್ಲಿ ವರ್ಗಗಳಾಗಲೀ ಅಥವ ವರ್ಗವೈಷಮ್ಯವಾಗಲೀ ಇಲ್ಲ. ಮಾರ್ಕ್ಸ್‌ವಾದಿಗಳು ಇಲ್ಲದಿದ್ದನ್ನು ಬೆಟ್ಟದಾಕಾರ ಮಾಡಿದ್ದಾರೆ. ಎಲ್ಲರಲ್ಲೂ ಸಾಕಷ್ಟು ಪ್ರಮಾಣದಲ್ಲಿ ಧರ್ಮಬುದ್ಧಿ, ತ್ಯಾಗ ಬುದ್ಧಿ ಮತ್ತು ವಿವೇಕ ಬುದ್ಧಿ ಇವೆ; ಇವುಗಳನ್ನು ಪ್ರಕಾಶಮಾನಕ್ಕೆ ತರುವ ಕೆಲಸ ಮಾತ್ರ ಹಿಂದೆ ಬಿದ್ದಿದೆ. ಹಿಂಸೆ, ಕ್ರಾಂತಿ, ಬಲಾತ್ಕಾರ ಮತ್ತು ಹೋರಾಟ ಇವುಗಳ ಆರಾಧನೆ ಜನರಲ್ಲಿ ದೈತ್ಯಗುಣಗಳನ್ನು ಪ್ರಚೋದನೆಗೊಳಿಸುತ್ತವೆ. ಆದುದರಿಂದ ಭಾರತದ ಸಾಂಸ್ಕೃತಿಕ ಹಿನ್ನೆಲೆಗೆ ಅನುಗುಣವಾಗಿರುವ ಧಾರ್ಮಿಕ ಮತ್ತು ಅಹಿಂಸಾತ್ಮಕ ಮಾರ್ಗ ಭಾರತೀಯ ಮಾರ್ಗವಾಗಿದೆ.

ಮೂರನೆಯದಾಗಿ, ಕಲ್ಯಾಣಸಮಾಜ ಅಥವ ಸರ್ವೋದಯ ಸಮಾಜಕ್ಕೂ ಸಮಾಜವಾದೀ ಸಮಾಜಕ್ಕೂ ಯಾವ ವ್ಯತ್ಯಾಸವೂ ಇಲ್ಲ. ಹೆಸರು ಬೇರೆಯಾಗಿವೆಯೇ ಹೊರತು ವಾಸ್ತವವಾಗಿ ಎರಡೂ ಒಂದೇ ಆಗಿವೆ. ಸಮಾಜವಾದೀ ಸಮಾಜದ ಧ್ಯೇಯ ಸಕಲರಿಗೂ ಕ್ಷೇಮವನ್ನು ಉಂಟುಮಾಡುವುದಾದರೆ, ಕಲ್ಯಾಣ ಸಮಾಜದ ಹೆಗ್ಗುರಿಯೂ ಅದೇ ಆಗಿದೆ. ಕಲ್ಯಾಣ ಸಮಾಜ ಅಥವ ಸರ್ವೋದಯ ಸಮಾಜವನ್ನು ಸಮಾಜವಾದೀ ಸಮಾಜವೆಂದಾದರೂ ಕರೆಯಬಹುದು ಅಥವಾ ಅದನ್ನು ಹೋಲುವ ಸಮಾಜವೆಂದಾದರೂ ಕರೆಯಬಹುದು. (See : Marx and Gandhi, by K. G. Mashruwala).

ಮೇಲ್ಕಂಡ ವಿವರಣೆಯಿಂದ ಮಾರ್ಕ್ಸ್‌ವಾದಕ್ಕೂ ಭಾರತದಲ್ಲಿ ಈಗ ಪ್ರಚಾರದಲ್ಲಿರುವ ಸಮಾಜವಾದಕ್ಕೂ ಇರುವ ವ್ಯತ್ಯಾಸಗಳು ಎದ್ದು ಕಾಣುತ್ತವೆ. ಮಾರ್ಕ್ಸ್‌ವಾದ ಬಂಡವಾಳಶಾಹಿ ವ್ಯವಸ್ಥೆಯನ್ನು ವಿಮರ್ಶೆಗೆ ಒಳಪಡಿಸಿ, ಅದು ವಿರಸಪೂರಿತವಾದದ್ದೆಂದೂ, ವಿರಸಗಳಿಂದ ಅದು ಪಾರಾಗಲಿಕ್ಕೆ ಸಾಧ್ಯವೇ ಇಲ್ಲವೆಂದೂ, ಅದರ ವಿನಾಶವನ್ನು ಅದೇ ಸಿದ್ಧಗೊಳಿಸಿಕೊಂಡಿದೆ ಎಂದೂ, ಅದು ಜನನವಿತ್ತಿರುವ ಕಾರ್ಮಿಕವರ್ಗ ಅದರ ವಿನಾಶಕವೆಂದೂ, ಉತ್ಪಾದನಾ ಸಾಧನಗಳಲ್ಲಿರುವ ಖಾಸಗೀ ಸ್ವಾಮ್ಯದ ನಾಶ ವಿರಸಗಳನ್ನು ತೊಡೆಯಲಿಕ್ಕೆ ಅಗತ್ಯವೆಂದೂ, ಖಾಸಗೀ ಸ್ವಾಮ್ಯದ ನಾಶ ಹೊಸ ವ್ಯವಸ್ಥೆಗೆ ನಾಂದಿ ಎಂದೂ ತಿಳಿಸಿದೆ. ಕಾಂಗ್ರೆಸ್‌ಪಕ್ಷ ಸುಧಾರಣಾ ಕಾರ್ಯಕ್ರಮದಲ್ಲಿ ಸಮಾಜವಾದೀ ವ್ಯವಸ್ಥೆಯ ಆಗಮನ ಅಡಗಿರುವುದಾಗಿ ತಿಳಿಸಿದೆ. ಎರಡನೆಯದಾಗಿ, ಮಾರ್ಕ್ಸ್‌ವಾದದಲ್ಲಿ ಬಂಡವಾಳಶಾಹಿ ವ್ಯವಸ್ಥೆಯ ಹುಟ್ಟು, ಬೆಳವಣಿಗೆ ಮತ್ತು ಅದರ ಐತಿಹಾಸಿಕ ಪಾತ್ರ ಇವುಗಳ ವಿವರಣೆ ಇದೆ. ಸಮಾಜ ವಿಕಾಸದಲ್ಲಿ ಬಂಡವಾಳಶಾಹಿ ವ್ಯವಸ್ಥೆ ಆಗಮಿಸುವವರೆಗೂ ಸಮಾಜದ ಉತ್ಪಾದನಾಸಾಧನಗಳ ಸಮಾಜೀಕರಣದ ಅವಶ್ಯಕತೆ ಬರುವುದಿಲ್ಲವೆಂದು ಹೇಳಿದೆ. ಸುಧಾರಣಾ ಕಾರ್ಯಕ್ರಮ ಸರ್ವಕಾಲಕ್ಕೂ ಅನ್ವಯವಾಗುವ ರೀತಿಯಲ್ಲಿದ್ದು ಸಮಾಜವಾದದ ಆಗಮನ ಬಂಡವಾಳಶಾಹಿ ವ್ಯವಸ್ಥೆಯ ಕಾಲಕ್ಕೆ ಮಾತ್ರವೇ ಮೀಸಲಲ್ಲವೆಂದು ತಿಳಿಸಿದೆ.

ಒಂದು ಮಾತಿನಲ್ಲಿ ಮಾರ್ಕ್ಸ್‌ವಾದಕ್ಕೂ ಇತರ ಸಮಾಜವಾದಗಳಿಗೂ ಇರುವ ವ್ಯತ್ಯಾಸವನ್ನು ಹೇಳುವುದಾದರೆ ವೈಜ್ಞಾನಿಕ ಮಾರ್ಗಕ್ಕೂ ಕಲ್ಪನೆಯ ಮಾರ್ಗಕ್ಕೂ ಇರುವ ವ್ಯತ್ಯಾಸವಾಗಿದೆ. ಇತಿಹಾಸದಲ್ಲಿ ವ್ಯಕ್ತಪಟ್ಟ ವಾಸ್ತವ ಪರಿಸ್ಥಿತಿಗಳನ್ನು ಪರಿಶೀಲಿಸುವುದರ ಮೂಲಕ ಸಮಾಜವ್ಯವಸ್ಥೆಯಲ್ಲಿ ವಿಕಾಸವನ್ನೂ ಮತ್ತು ಸಮಾಜವಾದದ ಅನಿವಾರ್ಯತೆಯನ್ನೂ ಮಾರ್ಕ್ಸ್‌ವಾದ ಚಿತ್ರಿಸಿದ್ದರೆ, ಇನ್ನೊಂದರ ಮಾರ್ಗ ಆದರ್ಶ ಸಮಾಜವನ್ನು (Ideal Society) ಕಲ್ಪಿಸಿಕೊಳ್ಳುವುದಾಗಿದೆ. ಇಂತಹ ಸಮಾಜ ವ್ಯವಸ್ಥೆಯಲ್ಲಿ ಬಡತನ, ನಿರುದ್ಯೋಗ, ಶೋಷಣೆ, ಇತ್ಯಾದಿ ಇರಕೂಡದಾದ್ದರಿಂದ ಇವುಗಳನ್ನು ತೊಡೆಯಲು ಸುಧಾರಣೆಯನ್ನು ಕೈಗೊಳ್ಳಬೇಕು. ಅಂತಹ ಮಾರ್ಗದಲ್ಲಿ ಖಾಸಗೀ ಸ್ವಾಮ್ಯದ ವಿನಾಶ ಒಂದು. ಈ ಗುರಿಯನ್ನು ಮುಟ್ಟಲು ಶ್ರಮಿಸಬೇಕು

ಕಾಂಗ್ರೆಸ್‌ಪಕ್ಷ ಕೈಗೊಂಡಿರುವ ಸುಧಾರಣೆಯ ಕಾರ್ಯಕ್ರಮ ಸಮಾಜವಾದದ ಇತಿಹಾಸದಲ್ಲಿ ಹೊಸದೇನೂ ಅಲ್ಲ. ಸುಧಾರಣೆಗಳ ಮೂಲಕ ಸಮಾಜವಾದೀ ವ್ಯವಸ್ಥೆಯನ್ನು ತರಲೆತ್ನಿಸಿದ ಇಂಗ್ಲಿಷ್ ಮತ್ತು ಇತರ ಸುಧಾರಕ ಪಕ್ಷಗಳ ರೀತಿ ನೀತಿಗಳನ್ನು ಈಗಾಗಲೇ ನೋಡಿದ್ದೇವೆ. (ದ. ಅಧ್ಯಾಯ 7 ಮತ್ತು 8, ನೋಡಿ).

ಬಡತನ, ಶೋಷಣೆ ಇವುಗಳನ್ನು ಖಂಡಿಸಲಿಕ್ಕಾಗಿ ಉಪಯೋಗಿಸುವ ಕನಿಕರದ ಮಾತುಗಳು ಸಮಾಜವಾದವಾಗುವುದಿಲ್ಲ. ಭ್ರಾತೃ ಪ್ರೇಮ, ಮಾನವ ಪ್ರೇಮ, ಸಮಾಜ ಪ್ರೇಮ ಮತ್ತು ಅನುಕಂಪ ಇವುಗಳೇ ಸಮಾಜವಾದೀ ವ್ಯವಸ್ಥೆಗೆ ಮಾರ್ಗ ತೋರಿಸಲಾರವು. ಸಮಾಜವಾದವಾಗುವುದಕ್ಕೆ ಮತ್ತು ಸಮಾಜವಾದೀ ವ್ಯವಸ್ಥೆಯ ಆವಶ್ಯಕತೆಯನ್ನು ತೋರಿಸಲಿಕ್ಕೆ ಆರ್ಥಿಕ ವ್ಯವಸ್ಥೆಯಲ್ಲಿ ಅಡಗಿರುವ ವಿರಸಗಳು ಸಮಾಜವಾದೀ ವ್ಯವಸ್ಥೆಯ ಆಗಮನವನ್ನು ಅನಿವಾರ್ಯವನ್ನಾಗಿ ಮಾಡಿವೆ ಎಂದು ತೋರಿಸಬೇಕು; ಮತ್ತು ಈ ಅನಿವಾರ್ಯತೆಯನ್ನು ಸ್ಪಷ್ಟಪಡಿಸಲಿಕ್ಕಾಗಿ ಆಧುನಿಕ ಬಂಡವಾಳಶಾಹಿ

ಸುಧಾರಣಾ ಕಾರ್ಯಕ್ರಮ ಸಮಾಜವಾದೀ ಕಾರ್ಯಕ್ರಮವಲ್ಲ ಮತ್ತು ಈ ಕಾರ್ಯಕ್ರಮ ಸಮಾಜವಾದೀ ವ್ಯವಸ್ಥೆಯನ್ನು ತರುವುದೂ ಇಲ್ಲ. ಸಮಾಜವಾದೀ ತತ್ತ್ವವನ್ನು ಮತ್ತು ಸಮಾಜವಾದೀ ವ್ಯವಸ್ಥೆಯ ಆಗಮನವನ್ನು ಸುಧಾರಣಾ ಕಾರ್ಯಕ್ರಮಕ್ಕೆ ಇಳಿಸುವುದಾದರೆ, ಸ್ವಾಮ್ಯವರ್ಗ ಕೈಗೊಳ್ಳಬಹುದಾದ ಸುಧಾರಣಾ ಕಾರ್ಯಕ್ರಮವೂ ಸಹ ಸಮಾಜವಾದೀ ವ್ಯವಸ್ಥೆಯ ಆಗಮನವನ್ನು ಸಿದ್ಧಗೊಳಿಸುತ್ತದೆ.

ಸುಧಾರಣಾ ಕಾರ್ಯಕ್ರಮ ಖಾಸಗೀ ಸ್ವಾಮ್ಯಕ್ಕೆ ರಕ್ಷಣೆಕೊಟ್ಟು, ಅದರ ರಕ್ಷಣಾರ್ಥವಾಗಿ ಮಧ್ಯಮವರ್ಗವನ್ನು ಬಲಪಡಿಸುವ ಕಾರ್ಯಕ್ರಮವಾಗಿದೆ. ಸರ್ವೋದಯದ ನೀತಿಯೂ ಸಹ ಸ್ವಾಮ್ಯಾಧಾರವಾದಮೇಲೆ ಆರ್ಥಿಕ ಅಸಮಾನತೆಯನ್ನು ಸರಿಪಡಿಸುವ ಕಾರ್ಯಕ್ರಮವಾಗಿದೆ. ಭೂಮಾಲೀಕರಿಂದ ಭೂಮಿಯನ್ನು ದಾನದ ರೂಪದಲ್ಲಿ ಕೊಡುವಂತೆ ಅವರ ಧರ್ಮ ಬುದ್ಧಿಗೆ ವಿಜ್ಞಾಪಿಸಿಕೊಳ್ಳುವುದು. ಅವರು ಎಷ್ಟುಬೇಕಾದರೂ ಕೊಡಬಹುದು. ಹೀಗೆ ಸಂಗ್ರಹಣವಾದ ಭೂಮಿಯನ್ನು ಭೂಮಿ ಇಲ್ಲದವರಿಗೆ ಕೊಡುವುದು. ಇದರಿಂದಾಗಿ, ಭೂಮಿ ಇಲ್ಲದವರು ಎಂಬ ವರ್ಗ ಹೋಗುತ್ತದೆ; ಸಮಾಜದಲ್ಲಿ ಆರ್ಥಿಕ ಅಸಮಾನತೆ ಕಡಿಮೆಯಾಗುತ್ತದೆ; ಅತಿ ಹೆಚ್ಚು ಪ್ರಮಾಣದಲ್ಲಿ ಭೂಮಿಯನ್ನು ಯಾರೂ ಹೊಂದಿಲ್ಲದವರಾಗುತ್ತಾರೆ; ಎಲ್ಲರೂ ಸಣ್ಣ ಪುಟ್ಟ ಪ್ರಮಾಣದಲ್ಲಿ ಭೂಮಿಯನ್ನು ಹೊಂದಿರುವವರಾಗುತ್ತಾರೆ. ದಾನದ ಪಾತ್ರ ಈ ಅಸಮಾನತೆಯನ್ನು ತೊಡೆಯುವುದಾಗಿದೆ. ಆದರೆ ಈ ಆರ್ಥಿಕ ನೀತಿ ಹಳೆಯದಲ್ಲಿ ಹಳೆಯದು. ವಿಪ್ಲವರಹಿತ ಸಮಾಜ ವ್ಯವಸ್ಥೆಯನ್ನು ಆಶಿಸಿದ ಅರಿಸ್ಟಾಟಲನವಾದ ಇದೇ ಆಗಿತ್ತು. ಸುಧಾರಣಾ ಕಾರ್ಯಕ್ರಮ ಮತ್ತು ಧರ್ಮ ಬುದ್ಧಿಯ ಪ್ರಚೋದನೆ ಇವುಗಳ ಮೂಲಕ ಸಮಾಜವಾದ ಆಗಮಿಸುವುದಾಗಿದ್ದಿದ್ದರೆ, ಸಮಾಜವಾದ ಎಂದೋ ಆಗಮಿಸುತ್ತಿತ್ತು. (ಪುಟ ೧೪೬ ಮತ್ತು ೧೪೭ ನೋಡಿ)

ವ್ಯವಸ್ಥೆಯ ಚಲನೆಯ ಬಗ್ಗೆ, ಅದು ಎಡೆಕೊಡುವ ವಿರಸಗಳ ಬಗ್ಗೆ ಮತ್ತು ಉತ್ಪಾದನಾಸಾಧನಗಳ ಸಮಾಜೀಕರಣವನ್ನು ಈ ವಿರಸಗಳು ಅಗತ್ಯಗೊಳಿಸಿರುವುದರ ಬಗ್ಗೆ ಖಚಿತವಾದ ವಿವರಣೆ ಬೇಕು. ಗಾಂಧೀವಾದ, ದಾನವಾದ, ಸರ್ವೋದಯ, ಗ್ರಾಮ್ಯವಾದ ಇವುಗಳೆಲ್ಲದರಲ್ಲಿ ಈ ವಿವರಣೆ ಇಲ್ಲ ಆಧುನಿಕ ಸಮಾಜವಾದದ ಮುಂಪೋಟದಲ್ಲಿ ಇವುಗಳು ಕ್ಷಣಿಕ ಮತ್ತು ಅಸಹಾಯಕತೆಯ ವಾದಗಳಾಗಿವೆ. ವೈಜ್ಞಾನಿಕ ಸಮಾಜವಾದ ಮಾರ್ಗ ತೋರಿಸಿದೆ. ಬಂಡವಾಳಶಾಹಿ ವ್ಯವಸ್ಥೆಯ ವಿರಸಗಳು ಜನಸಮುದಾಯವನ್ನು ವೈಜ್ಞಾನಿಕ ಸಮಾಜವಾದದ ಕಡೆಗೆ ಕರೆದೊಯ್ಯುತ್ತಿವೆ. ದಿನೇ ದಿನೇ ರೂಪಗೊಳುತ್ತಿರುವ ಕಾರ್ಮಿಕವರ್ಗದ ಸಂಘಟನೆ ಮತ್ತು ಕ್ರಾಂತಿಕಾರಿ ಚಳವಳಿ ಮಾರ್ಕ್ಸ್‌ವಾದದ (ಆಧುನಿಕ ಅಥವಾ ವೈಜ್ಞಾನಿಕ ಸಮಾಜವಾದ) ವೀರ್ಯ ಮತ್ತು ಸತ್ವವನ್ನು ವ್ಯಕ್ತಪಡಿಸುತ್ತಲಿವೆ.

ಅಧ್ಯಯನ :

Imperialism : Lenin : (with New Data), P.P.H.B., 1945.
On the Problems of Leninism : Stalin : Pages 13-92. F.R.P.H. 1945.
Marx and Engels on India : Ed. M. R. Anand : Socialist Book Club : Allahabad.
The Transition from Feudalism to Capitalism : Symposium Fore Publications, London.
The Social Background of Indian Nationalism : Desai : Bombay School Publications.
India Today : R. P. Dutt : P. P. H. Bombay.
Stages of Indian History : D. D. Kosambi : Iscus, Vol. I, No. 1, 1954.

ಅಕಾರಾದಿ ಸೂಚಿ.

ಅಂತರರಾಷ್ಟ್ರೀಯ—ಮೊದಲನೆಯ : 81, 88;
ಎರಡನೆಯ : 89; ಮೂರನೆಯ : 92;
"ಅಂತರರಾಷ್ಟ್ರೀಯ ಕಾರ್ಮಿಕರ ಸಮೂಹ" : 80;
ಅರ್ಥಶಾಸ್ತ್ರ—ಬಂಡವಾಳಶಾಹಿ : 17, 18; ಇದರ
ಮರುವಿಮರ್ಶೆ 114, 139;
ಸಾಮ್ರಾಜ್ಯವಾದಿ : 92, 93;
ಇದರ ಸ್ಥಾಪನೆ : 95;
ಅರ್ಥಶಾಸ್ತ್ರಜ್ಞರು—ಬಂಡವಾಳಶಾಹಿ : ಇವರ ಧೋರಣೆ
65, 114, 139, 146;
ಅನಿವಾರ್ಯ—ಸಮಾಜವಾದದ : 35, 36, 47, 57,
58, 78, 96, 176;
ಯುದ್ಧದ : 71, 155, 156;
ಅಬಸೀನಿಯ—121;
ಅಮೆರಿಕ—97, 111, 120, 121, 129, 134, 135,
136, 147, 150;
ಅರಾಜಕವಾದ—117;
ಅರಿಸ್ಟಾಟಲ್—146, 191;
ಅಸ್ತಿಭಾರ—ಸಮಾಜದ 50; ಇದರ ಮೇಲೆ ಜನಿಸುವ
ಮನೋಭಾವಗಳು 50; ಇದರ ಬದಲಾವಣೆಯಿಂದ
ಆಗುವ ಪರಿಣಾಮಗಳು 51;
'ಅಸಮ ಬೆಳವಣಿಗೆ'ಯ ತತ್ತ್ವ—178;
ಆರ್ಥಿಕ ಅಸ್ತಿಭಾರ—'ಅಸ್ತಿಭಾರ' ದ ನೋಡಿ
ಆರ್ಥಿಕ ನೀತಿ—ಬಂಡವಾಳಶಾಹಿ ಪ್ರಜಾಸತ್ತೆ ರಾಷ್ಟ್ರಗಳ 138, 140;
ಮಧ್ಯಮ ಮಾರ್ಗದ 141, 148, 157;
ಸಮಾಜವಾದೀ 157 ;

ಆರ್ಥಿಕ ಮುಗ್ಗಟ್ಟು—1926 ರ 118;
ಆರ್ಥಿಕ ವ್ಯವಸ್ಥೆ—ಯಾವುದು : 53; ಇದರಲ್ಲಿ
ಬದಲಾವಣೆಗಳು 54; ಕಾರಣ 55;
ಬಂಡವಾಳಶಾಹಿಯ ಉದಯ 56;
ಇದರ ಲಕ್ಷಣಗಳು ; 58 ; ಇದರ ಅಂತ್ಯದ
ದರ್ಶನ 56 : ಆಗುವ ರೀತಿ ; 77;
ಸಮಾಜವಾದಿ : ಯಾವುದು 77, 157 ;
ಆರ್ಥಿಕಾಂಶಕ್ಕೆ ಮಾರ್ಕ್ಸ್-ಏಂಗೆಲ್ಸರು ಕೊಟ್ಟಿರುವ
ಪ್ರಾಧಾನ್ಯತೆಯ ಬಗ್ಗೆ ವಿವರಣೆ 172;
ಆರ್ಥಿಕ ಕ್ಷೇತ್ರ—ಸರ್ಕಾರಿ ಮತ್ತು ಖಾಸಗೀ : 139, 141, 146;
ಆರ್ಥಿಕ ಸಮಾನತೆ—'ಸಮಾನತೆ' ದ. ನೋಡಿ.
ಅಲ್ಬೇನಿಯ—132, 133;
ಆಸ್ಟ್ರಿಯ—112, 119;
ಅಥೆನ್ಸ್—7;
ಇತಿಹಾಸ—ಇದರ ಕಟ್ಟಕಡೆಯ ನಿರ್ಧಾರಕ ಅಂಶ 173;
ಇದರ ವಿಜ್ಞಾನ 36; ಭಾರತೀಯ ಇತಿಹಾಸದ
ಬಗ್ಗೆ ಪರಿಶೋಧನೆಯ ಅಗತ್ಯ 183, 186;
ಇತಿಹಾಸ ದೃಷ್ಟಿ—ಭಾವಾತ್ಮಕ 45;
ಭೌತಾತ್ಮಕ 45;
ಇತಿಹಾಸ ವಿಜ್ಞಾನ—36;
ಇರಾನ್—142;
ಇಂಡೋಚೈನಾ—136;
ಇಟಲಿ—84, 112, 119, 129, 134, 135,
142, 150, 151;
ಇಂಗ್ಲೆಂಡ್—6, 11, 15, 16, 43, 46, 49, 61, 63,
81, 82, 84, 90, 97, 111, 117, 120, 121,
122, 128, 129, 131, 136, 144, 148, 151;
ಈಜಿಪ್ಟ್—5;

ಉತ್ಪಾದನೆ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ 58, 66, 73, 76;
ಖಾಸಗೀ 58;
ಸ್ವಾವಲಂಬಿ : ಇದಕ್ಕೂ ಬಂಡವಾಳಶಾಹಿ ವ್ಯವಸ್ಥೆಗೂ ಇರುವ ಸಂಬಂಧ 59; ಇದರ ಪತನ 61, 75, 77, ಭಾರತದಲ್ಲಿ 59; ಸಾಮೂಹಿಕ : 29, 73–75, 156;
ಉತ್ಪಾದನಾ ಕ್ರಮ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ : 73, 147, 155, 157;
ಉತ್ಪಾದನಾ ಕಾರ್ಯ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ: 155;
ಉತ್ಪಾದನಾ ಸಾಧನಗಳು—ಬಂಡವಾಳಶಾಹಿ ವ್ಯವಸ್ಥೆಯಲ್ಲಿ 60, 73, 74, 75, 147;
ಇವುಗಳ ಸಮಾಜೀಕರಣ 157;
ಉತ್ಪಾದನಾ ಶಕ್ತಿಗಳು—ಯಾವುವು 49; ಸಮಾಜವ್ಯವಸ್ಥೆಯ ಬದಲಾವಣೆಯಲ್ಲಿ ಇವುಗಳ ಪಾತ್ರ 51, 156;
ಉತ್ತರಕೊರಿಯ—132;
ಉತ್ತರ ಆಫ್ರಿಕ—136;
ಊಳಿಗಮಾನ್ಯ ಸಮಾಜ—ಇದರಲ್ಲಿರುವ ವರ್ಗಗಳು 36; ಭಾರತದಲ್ಲಿ 184,185;
ಊಳಿಗಮಾನ್ಯದ ಸಮಾಜವಾದ—32;
ಎಲಿಯಟ್—114;
ಎಡ್ವರ್ಡ್—17;
ಏಂಗೆಲ್ಸ್—ಈತನ ಹೊಸ ಸಮಾಜವಾದ 19, 34, 35;
ಈತನ ಜೀವನ ಚಿತ್ರ 22;
ಈತನ ಬರೆಹಗಳು 28;
ಏಸೂಕ್ರಿಸ್ತ—10, 113;
'ಒಪ್ಪಿಗೆಯ ತತ್ತ್ವ'—149, 158;
ಒವೆನ್ ರಾಬರ್ಟ್—16
ಕ್ಯಾಂಟ್—44;
ಕ್ರಾಂತಿ—ಇಂಗ್ಲಿಷ್ (1640) 11, 81;

ಫ್ರೆಂಚ್ (1789) 14, 81;
ಕೈಗಾರಿಕಾ 15;
1848 ರ 82;
1871 ರ 83, 88, 90;
1917 ರ ಸಮಾಜವಾದೀ 95, 97;
ಸಮಾಜದಲ್ಲಿ ಕ್ರಾಂತಿಯ ಆರಂಭ 50, ಇದರ ಪಾತ್ರ 164;
ಕೆನ್ಯಾ—136;
ಕ್ರಾಬಿ—114;
ಕೌಟಿಲ್ಯ—5, 185;
ಕಾಟಸ್ಕೀ, ಕಾರ್ಲ್—89, 111;
ಕಣಾದಋಷಿ—46;
ಕನ್‌ಫ್ಯೂಷಿಯಸ್—10;
ಕಮ್ಯೂನಿಸಂ— ಪ್ಲೇಟೋವಿನ 8; ಮಾರ್ಕ್ಸ್–ಏಂಗೆಲ್ಸರ 9, 29, 34, 38; ಶಬ್ದಾರ್ಥ 28; ಮಾರ್ಕ್ಸ್ ಏಂಗೆಲ್ಸರಿಂದ ಶಬ್ದಪ್ರಯೋಗ 29; ('ಸಮಾಜವಾದ' ದ. ನೋಡಿ.)
ಕಾರ್ಮಿಕವರ್ಗ—ಸಮಾಜವಾದದ ಆಗಮನದಲ್ಲಿ ಇದರ ಪಾತ್ರ 37, 37; ಇದಕ್ಕೂ ಸಮಾಜವಾದಕ್ಕೂ ಇರುವ ಸಂಬಂಧ 47; ಚಳವಳಿಗೆ ಕಾರಣ 47; ಇದರ ಜನನ 62; ಇದರ ಗುರಿ 77; ಕರ್ತವ್ಯಗಳು 79; ಅಧಿಕಾರಕ್ಕೆ ಬರಲು ಯತ್ನ 81; ಇದರ ವಿಮೋಚನೆ 86; 1871 ರ ಕ್ರಾಂತಿಯಲ್ಲಿ ಇದರ ಪಾತ್ರ 83; 1917 ರ ಕ್ರಾಂತಿಯಲ್ಲಿ ಇದರ ಪಾತ್ರ 95, 97;
ಕೋಸಾಂಬಿ—184, 185;
ಕೀನ್ಸ್, ಜೆ. ಎಮ್—114;
ಕೋಲ್, ಜಿ. ಡಿ ಎಚ್.—116;
ಕ್ಲೈಸ್ಥನೀಸ್—5;
ಕಾಂಗ್ರೆಸ್‌ಪಕ್ಷ—188, 190;

ಅಕಾರಾದಿ ಸೂಚಿ

ಗಾಂಧೀಜಿ—7, 182; ಗಾಂಧೀ ಸಮಾಜವಾದ 187,192;
ಗುಲಾಮರು— ಪ್ರಾಚೀನ ಸಮಾಜಗಳಲ್ಲಿ 5; ಭಾರತದಲ್ಲಿ 185;
ಗ್ರೀಸ್—142;
ಗ್ರಾಟಿಮಾಲ—5, 46, 134, 142;
ಗ್ರಾಮ್ಯವಾದ—192;
ಚೀಣಾ—121, 132, 133;
ಚೈತನ್ಯ—10;
ಚೆರ್‌ನಾವ್—111;
ಚಲನಾನಿಯಮ—ಬಂಡವಾಳಶಾಹಿ ವ್ಯವಸ್ಥೆಯ 56;
ಚಾರ್‌ಟಿಸ್ಟರ ಚಳವಳಿ—25, 82;
ಜಕೋಸ್ಲಾವಿಯ—121, 132, 133;
ಜಾತಿಪದ್ಧತಿ—ಭಾರತದಲ್ಲಿ 5, 161;
ಜನತಾಪ್ರಜಾಸತ್ತೆ—ಚೀಣಾದಲ್ಲಿ 133; ಇತರ ಸಮಾಜವಾದೀ ರಾಷ್ಟ್ರಗಳಲ್ಲಿ 133;
ಜಪಾನ್—129;
ಜಪಾನೀ ಬಂಡವಾಳವರ್ಗ—121;
ಜರ್ಮನಿ—6, 16, 21, 43, 84, 89, 90, 111, 112, 119, 128, 129, 134;
ಜರಾಲ್ಡ್ ವಿನ್‌ಸ್ಟಾನ್‌ಲೆ—12;
ಜವನ್ಸ್—115;
ಟುರಾಟಿ—111;
ಡಿಡರೋ—46;
ಡಾನ್‌ಸ್ಕೋಟಸ್—46;
ಡೆಮೊಕ್ರಿಟಸ್—46;
ಡಾಂಗೇ—184, 185;
ತಾರ್ಕಿಕಕ್ರಮ—ಹೆಗಲ್ಲನ 44;
ತೀರ್ಥಂಕರರು—ಜೈನ: 161;

ತುಳಸೀದಾಸ್—10;
ಥಾಮಸ್ ಮೋರ್ 11;
ದುಡಿಮೆ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ : 58;
ಪದಾರ್ಥಗಳ ಮೌಲ್ಯ ನಿರ್ಣಯದಲ್ಲಿ ಇದರ ಪಾತ್ರ: 17, 48 ;
ಬಂಡವಾಳಶಾಹಿ ಉತ್ಪಾದನಾಕ್ರಮದಲ್ಲಿ ಇದರ ಸ್ವರೂಪ 58, 73, 74, 75 ;
ದ್ಕಾರಿದ್ರ್ಯ—ಸಂಮೃದ್ಧಿಯ ಮಧ್ಯದಲ್ಲಿ: 69 ;
ದೈವಭಾವನೆ—171 ;
ದಂಗೆ—ಗುಲಾಮರ : 5; ರೈತರ : 6 ;
ಧಾರಾಳ ಮನೋಭಾವ—148 ;
ನೈತಿಕ ಚ್ಯುತಿ—ಸಮಾಜದ ಕುಂದು ಕೊರತೆಗಳಲ್ಲಿ ಇದರ ಪಾತ್ರ: 170;
ನಿಯಮ—ಸಮಾಜದ ಚಲನೆಯ : 49, 119, 120 ;
ಸರಬರಾಜು ಮತ್ತು ಗಿರಾಕಿಯ : 65, 146;
ನಿರುದ್ಯೋಗ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ : 49, 62, 65;
ಬಂಡವಾಳಶಾಹಿ ಉತ್ಪಾದನೆಯಲ್ಲಿ ಇದರ ಪಾತ್ರ : 67, 68, 69, 73, 98, 99;
ಇದರ ಶಾಶ್ವತಸ್ವರೂಪ : 70 ;
ನ್ಯೂಗಿನಿ—142 ;
ಪಕ್ಷಗಳು—ಬ್ರಿಟಿಷ್ ಲೇಬರ್ ಪಕ್ಷ: 90, 148, 149 ;
ಕಮ್ಯೂನಿಸ್ಟ್ ಪಕ್ಷ: 96, 97, 123, 128, 150, 161;
ಕನ್‌ಸರ್‌ವೇಟಿವ್ ಪಕ್ಷ: 145, 148, 149 ;
ರಷ್ಯಾದಲ್ಲಿ: 104, 153;
ಬಂಡವಾಳಶಾಹಿ ಪ್ರಜಾಸತ್ತೆಯಲ್ಲಿ: 152, 153;
ಫ್ಯಾಸಿಸ್ಟ್ ರಾಷ್ಟ್ರಗಳಲ್ಲಿ : 126 ;
ಪ್ರಭುತ್ವ—ಸಾಂಕುಶ : 12, 85, 95 ;
ನಿರಂಕುಶ : 14, 85, 165 ;

ಪ್ರಜಾ : ಇದರಬಗ್ಗೆ ಮಾರ್ಕ್ಸ್‌ವಾದದ ಧೋರಣೆ: 158;
ಬಂಡವಾಳಶಾಹಿ : 102-103, 105, 151, 152;
ಇದರಲ್ಲಿ ಜನಸಾಮಾನ್ಯರ ಪರಿಸ್ಥಿತಿ;
ಸೋವಿಯಟ್ ಪ್ರಜಾ : 102-103, 104, 107;
ಕಾರ್ಮಿಕರ ಏಕೈಕ: 86, 96, 107, 164;
ಪಾರ್ಲಿಯಮೆಂಟರೀ: 151, 153;
ಪ್ಲೇಟೋ—7;
ಪ್ರಣಾಳಿಕೆ—ಸಮವಾದಿಗಳ : 21 ;
ಪೆಂಟ—116 ;
ಪೈಪೋಟಿ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ : 60; ಇವರ ಪಾತ್ರ 70-71;
ಸಾಮ್ರಾಜ್ಯವಾದೀ ಅವಸ್ಥೆಯಲ್ಲಿ : 93 ;
ಪ್ರತಿಗಾಮಿ—82, 86;
ಪುರಂದರದಾಸ್—10 ;
" ಪಾರಿಸ್ ಕಮ್ಯೂನ್"—83;
ಪರಿಹಾರದ್ರವ್ಯ—144, 146;
ಪೋಲೆಂಡ್—121, 128, 132, 133 ;
ಫ್ರಾಂಕೋ—120 ;
ಫ್ರಾಡೋ—15, 24, 146;
ಫೇಬಿಯನ್‌ಸಂಘ—90 ;
ಫೇಬಿಯನ್ ಸಮಾಜವಾದಿಗಳು—115, 146 ;
ಫ್ಯಾಸಿಸ್ಟ್‌ಸರ್ಕಾರಗಳು—ಇದರ ಉದಯ : 119; ಇವುಗಳ ಬಗ್ಗೆ
ಬಂಡವಾಳಶಾಹಿ ಸರ್ಕಾರಗಳ ಧೋರಣೆ : 122; ಇವುಗಳ
ಆರ್ಥಿಕ ಮತ್ತು ರಾಜಕೀಯ ನೀತಿಗಳು : 125 ;
ಫಾರಿಯರ್—15 ;
ಫ್ರಾನ್ಸ್—6, 14, 15, 16, 21, 25, 26, 43, 46, 47, 81, 82,
83, 84, 85, 88, 90, 97, 111, 120, 121,
122, 128, 129, 131, 134, 135, 136,
142, 150, 151 ;

ಬೇಕನ್—46 ;
ಬ್ಲಾಂಕ್ವೀ—116;
ಬ್ರಹ್ಮ—45;
ಬಂಡವಾಳಶಾಹಿ ವ್ಯವಸ್ಥೆ—ಇದರ ಉದಯ 56, ಇಂಗ್ಲೆಂಡಿನಲ್ಲಿ 61 ; ಇದರ ಲಕ್ಷಣಗಳು 58 ; ಇದರ ಚಲನಾ ನಿಯಮ 56; ಇದು ಎಡೆಕೊಡುವ ವರ್ಗಗಳು 36 ; ಇದರಲ್ಲಿ ಉತ್ಪಾದನೆಯ ಸ್ವರೂಪ 38, 73-76 ; ಶೋಷಣೆ ನಡೆಯುತ್ತಿರುವ ರೀತಿ 48 ; 66; ಲಾಭದ ಪಾತ್ರ: 48; ಇದು ಎಡೆಕೊಡುವ ವಿರಸಗಳು ; 58, 72 ಮತ್ತು ಪರಿಣಾಮಗಳು 61; ಇದು ಎಡೆಕೊಡುವ ವೈಪರೀತ್ಯಗಳು: 65, 73; ಒಂದನೇ ಮಹಾಯುದ್ಧಾನಂತರ ಇದರ ಪರಿಸ್ಥಿತಿ 124; ಭಾರತದಲ್ಲಿ: 182; ಇದರಲ್ಲಿ ಸರ್ಕಾರದ ಕರ್ತವ್ಯ 64, ಬಂಡವಾಳದ ಕೇಂದ್ರೀಕರಣ 49, 67, 140, ಇದು ಸುಗಮವಾಗಿ ಇರಲು ಸಾಧ್ಯವೇ ? 63, ಮೃತಪ್ರಾಯ 131, ಸಾಮ್ರಾಜ್ಯವಾದೀ 92, 93, 180 ;
ಬೆಬ್ಲ್ಯಾಫ್—14, 25 ;
ಬದುಕು—ಇದರ ತಳಹದಿ : 53,
ಬದಲಾವಣೆ—ಸಮಾಜದಲ್ಲಿ : ಆರಂಭ 50, ಕಾರಣ 50, ಎಂದು ಸಾಧ್ಯ 51;
ಬರ್ನಾರ್ಡ್‌ಶಾ, ಜಾರ್ಜ್ : 115 ;
ಬರ್ನ್‌ಸ್ಟೈನ್—111, 113 ;
ಬಲ್ಗಾರಿಯ—132, 133 ;
ಬಾರ್‌ಕರ್—114 ;
ಬಸವಣ್ಣ—161 ;
ಬುದ್ಧ—161 ;
ಬೌದ್ಧ ಸುಧಾರಕರು—5 ;
ಬೆಲ್ಜಿಯಂ—16, 131, 135 ;

ಭಾರತ—7, 9, 10, ಇಲ್ಲಿ ನಡೆದ ಧಾರ್ಮಿಕ ಕ್ರಾಂತಿಗಳು 161, ವೈಜ್ಞಾನಿಕ ಸಮಾಜವಾದದ ವ್ಯಾಪನೆಯಬಗ್ಗೆ ಜಿಜ್ಞಾಸೆ 182;

ಭೌತವಾದ—46,

ಐತಿಹಾಸಿಕ—37, 47, 172-173 ;

ಯಾಂತ್ರಿಕ—46 ;

ತಾರ್ಕಿಕ—46 ;

ಭಾವ—45 ;

ಭಾವವಾದ—44 ;

ಭದ್ರತೆ – ಸಾಮೂಹಿಕ : 121 ;

ಮಾರ್ಕ್ಸ್—ಈತನ ಹೊಸ ಪ್ರಣಾಳಿಕೆ – 21, 27; ಪ್ರಣಾಳಿಕೆಯನ್ನು 'ಕಮ್ಯೂನಿಸ್ಟ್' ಎಂದು ಕರೆಯಲು ಕಾರಣ 28, ಜೀವನಚಿತ್ರ 21, ಬರೆಹಗಳು 28, ಈತನ ಹೊಸವಾದ 19, 34-35, ಹೊಸ ಸಿದ್ಧಾಂತದ ಆಧಾರ ಸೂತ್ರಗಳು 36-38, ಅದರ ಸ್ವರೂಪ ಹೊಸ ಸಿದ್ಧಾಂತಕ್ಕೆ ಸಹಾಯ ವೆಸಗಿದ ಮೂರು ಆಧಾರ ಭಾಗಗಳು 40, 41 43, ಸಮಾಜದ ಚಲನವಲನೆಗಳ ಬಗ್ಗೆ ನಿಯಮದ ಮಂಡಸೆ 49, ಪರಿಶೋಧನೆಯ ಪರಮೋದ್ದೇಶ 56, ಕಾರ್ಮಿಕರು ಅನುಸರಿಸಬೇಕಾದ ತತ್ತ್ವ ಮತ್ತು ಕಾರ್ಯದ ಬಗ್ಗೆ ವಿವರಣೆ 79, ಇದರ ಸ್ವರೂಪ 34-35, 38 ;

ಮಾರ್ಕ್ಸ್‌ವಾದ—ಚೈತನದಾಯಕದ 94, ಕ್ರಾಂತಿಕಾರಕ 95, ರಷ್ಯದಲ್ಲಿ ಮಾರ್ಕ್ಸ್‌ವಾದದ ದಿಗ್ವಿಜಯ 95, ಇದರಲ್ಲಿ ಸಮಾನತೆಗೆ ಇರುವ ಅರ್ಥ 101, ಒಂದನೇ ಮಹಾ ಯುದ್ಧಾನಂತರ ಇದರ ವಿರುದ್ಧ ಎದ್ದ ವಾದಗಳು 112, ಮಾರ್ಕ್ಸ್‌ವಾದದ ಸತ್ಯತೆಯ ಪ್ರದರ್ಶನ 129, ಎರಡನೇ ಮಹಾ ಯುದ್ಧಾನಂತರ ಇದರ ಮುಂದೋಟ 131; ಇಂಗ್ಲೆಂಡಿನಲ್ಲಿ ಇದು ಬೇರೂರಲು ಬಂದ ಅಡಚಣೆಗಳು

ವರ್ಗವೈಷಮ್ಯ—5, 36, 37, 147;
ವಿಕಾಸ—ಸಮಾಜ ವ್ಯವಸ್ಥೆಯಲ್ಲಿ: 36;
ವ್ಯಕ್ತಿಸ್ವಾತಂತ್ರ್ಯ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ 166; ರಷ್ಯಾದಲ್ಲಿ 101; ಇದರ ಸ್ವರೂಪ. 167;
ವೆಬ್, ಸಿಡ್ನೀ—115;
ವಾನ್‌ಡರ್‌ವೆಲ್ಡೀ—111;
ವಿನಿಯೋಗ—146, 147;
ವಿರಸಗಳು—ಬಂಡವಾಳಶಾಹಿ ವ್ಯವಸ್ಥೆಯಲ್ಲಿ. 35, 37, 58; ಉತ್ಪಾದನಾ ಶಕ್ತಿಗಳು ಉತ್ಪಾದನಾಕ್ರಮದೊಡನೆ ತಾಳುವ ವಿರಸಗಳು 50, 72; ಇವುಗಳ ಅಂತ್ಯ. 52, 76; ಸಾಮ್ರಾಜ್ಯವಾದೀ ಅವಸ್ಥೆಯಲ್ಲಿ. 92–93; ಒಂದನೇ ಮಹಾಯುದ್ಧಾನಂತರ. 118-119; ವಿರಸಗಳನ್ನು ತಡೆಗಟ್ಟಲಿಕ್ಕೆ ಕೈಗೊಂಡಕ್ರಮ—ಫ್ಯಾಸಿಸಂ : 120, 124, 126; ಎರಡನೇ ಮಹಾಯುದ್ಧಾನಂತರ 136 ; ಇದನ್ನು ತಡೆಗಟ್ಟಲಿಕ್ಕೆ ಕೈಗೊಂಡಕ್ರಮ 138, 141;
ವಿಶ್ವಸಂಸ್ಥೆ—121;
ವಿಯಟ್‌ಮಿನ್ಹಾ—132;
ಶೋಷಣೆ—ಪ್ರಾಚೀನ ಸಮಾಜದಲ್ಲಿ 2, 3; ಆಧುನಿಕ ಸಮಾಜದಲ್ಲಿ 2; ವಿವಿಧ ಕಾಲದಲ್ಲಿ ಇದರ ರೂಪಗಳು 3-4; ಇದಕ್ಕೆ ತೋರಿದ ಪ್ರತಿಭಟನಾ ರೂಪಗಳು 7, 9, 10, 11, 14, 16; ಮತ್ತು ಖಾಸಗೀಸ್ವಾಮ್ಯ : 18; ಮತ್ತು ಆರ್ಥಿಕ ಅಸಮಾನತೆ 18; ಹೆಚ್ಚಿಗೇ ಮೌಲ್ಯನಿರ್ಣಯ ತತ್ತ್ವದ ಸಹಾಯದಿಂದ ಶೋಷಣೆಯ ಮರ್ಮದ ಬಯಲು 37; ಇದು ಆಗುತ್ತಿರುವ ರೀತಿ 47; ಇದರ ವಿನಾಶ 76;
ಸರ್ಕಾರ—ಬಂಡವಾಳಶಾಹಿ ವ್ಯವಸ್ಥೆಯಲ್ಲಿ 64; ಬಂಡವಾಳಶಾಹಿ ಪ್ರಜಾಸತ್ತೆ 122, 123, 124; ಏಕಪಕ್ಷದ 104; ಫ್ಯಾಸಿಸ್ಟ್

ಸಂಘ—ನ್ಯಾಯವಾದಿಗಳ 26;
ಸಾಧು-ಸಂತರು—ಪಾಶ್ಚಿಮಾತ್ಯದೇಶಗಳಲ್ಲಿ—9; ಪೌರ್ವಾತ್ಯದೇಶಗಳಲ್ಲಿ 9, 10, 113;
ಸೈಮನ್, ಸೈಂಟ್—15;
ಸಂಸ್ಥಾರಾಜ್ಯವ್ಯವಸ್ಥೆ—125;
ಸನ್-ಯಾಟ್-ಸನ್—132;
ಸ್ಪಾರ್ಟಾಕಸ್—5;
ಸ್ವಾತಂತ್ರ್ಯ—ಸಮಾಜವಾದೀ 102;
ಸೂತ್ರ ಸಮಾಜ—36
ಸರ್ವಾಧಿಕಾರೀ ತತ್ವ—ರಷ್ಯಾದಲ್ಲಿ ಇದರ ಸ್ವರೂಪ 107; ಫ್ಯಾಸಿಸ್ಟ್‌ರಾಷ್ಟ್ರಗಳಲ್ಲಿ 119, 123; ಮಾರ್ಕ್ಸ್‌ವಾದದಲ್ಲಿ 86, 94, 158, 164;
ಸ್ವರ್ಣಯುಗ—7;
ಸೋಯಿಕ್ಸ್—10;
ಸೊರೆಲ್, ಜಾರ್ಜಸ್—117;
ಸೋಲನ್—5;
ಸಮವಾದಿಗಳ ಪ್ರೇಕ್ಷಾಳಿಕೆ—21, 27;
ಸಮವಾದಿಗಳ ಸಮೂಹ—27
ಸಮಾಜ—ನ್ಯಾಯ 14, 18; ಪ್ರಾಚೀನ 2, 5; ಸಮಾನ 15; ರಾವ ರಾಜ್ಯದ್ರೋಹವಾದಿಯ 7; ವರ್ಗ 15, 36; ವ್ಯವಸ್ಥೆಯಲ್ಲಿ ವಿಕಾಸ 36; ಚಲನವಲನೆ ಗಳ ಬಗ್ಗೆ ನಿಯಮ 49; ಸಮಾಜ ವ್ಯವಸ್ಥೆ ಗತಿಸುವ ಬಗೆ 51; ಸಮಾಜಪರಿವರ್ತನೆ ಎಂದರೇನು? 55; ಸಮಾಜವಾದೀ 29; ಇದರ ತಳಹದಿ 87; ಸ್ವರೂಪ 87; ಸಮವಾದೀ: ಇದರ ಸ್ವರೂಪ 87, 100;
ಸಮಾಜವಾದೀ ವ್ಯವಸ್ಥೆ—ಇದರ ಸ್ಥಾಪನೆ 98; ಇದರ ವೈಶಿಷ್ಟ್ಯ ಪ್ರದರ್ಶನ 99; ವರ್ಗರಹಿತ 87, 88; ರಷ್ಯಾದಲ್ಲಿ ಇದರ ಸ್ವರೂಪ 102; ವ್ಯಕ್ತಿಗಳ ಸ್ಥಾನಮಾನಗಳು 103-108; ಇದನ್ನು ನಿರ್ಧರಿಸುವ ಲಕ್ಷಣಗಳು 155, 157;

ಸಮಾಜವಾದ— ಇದರ ಜನನ 18; 1848ರ ಹೊತ್ತಿಗೆ ಇದ್ದ ಬಗೆಬಗೆಯ ಸಮಾಜವಾದಗಳು 23-24; ಸಿದ್ಧಾಂತದಲ್ಲಿ ಗೊಂದಲ 23,25; ವೈಜ್ಞಾನಿಕ: ಇದರ ಮಂಡನೆ 19; ಎಂದರೇನು? 29, 34-35, 37, 38; ಇದರ ಉದಯದಲ್ಲಿ ಬಂಡವಾಳಶಾಹಿ ವ್ಯವಸ್ಥೆಯಲ್ಲಿರುವ ವಿರಸಗಳಪಾತ್ರ 36, 72; ಇದರ ಸೂತ್ರಗಳ ರಚನೆ 36-38; ಇದರ ಸ್ವರೂಪ 40-41; ಇದಕ್ಕೆ ಆಧಾರವಾಗಿರುವ ತತ್ತ್ವತ್ರಯಗಳು 43; ರಷ್ಯಾದಲ್ಲಿ ಉದಯ 78; ಒಂದನೇ ಮತ್ತು ಎರಡನೇ ಮಹಾಯುದ್ಧಾನಂತರ ಇದರ ವಿರುದ ಎದ್ದವಾದಗಳು 112, 141, 144; ಇದರ ಸಕ್ಯತೆಯ ಪ್ರದರ್ಶನ ಮತ್ತು ಮುಂಪೋಟ 129, 131, 154; ಇವನ್ನು ತಡೆಗಟ್ಟುವುದರಲ್ಲಿ ಅಮೆರಿಕದ ಪಾತ್ರ 135-136; ಪ್ರಜಾಪ್ರಭುತ್ವದ ಬಗ್ಗೆ ಧೋರಣೆ 158; ವ್ಯಕ್ತಿ ಸ್ವಾತಂತ್ರ್ಯದ ಬಗ್ಗೆ ವಿವರಣೆ 165; ದೈವಭಾವನೆಯ ಬಗ್ಗೆ ಧೋರಣೆ 171; ಬಂಡವಾಳಶಾಹಿ ರಾಷ್ಟ್ರಗಳಲ್ಲಿ ಮತ್ತು ಹಿಂದುಳಿದ ದೇಶಗಳಲ್ಲಿ ಇದರ ಅನ್ವಯದ ಬಗ್ಗೆ ಭಿನ್ನಮತ 176; ಪಾಶ್ಚಾತ್ಯ ದೇಶಗಳಲ್ಲಿ ಇದರ ವ್ಯಾಪನೆಯ ಬಗ್ಗೆ ಜಿಜ್ಞಾಸೆ 181; ಭಾರತದಲ್ಲಿ 182; ಕಾಲ್ಪನಿಕ: ಇದರ ಸ್ವರೂಪ 18-19, ಇದರ ರೂಪಾಂತರಗಳು: ಸುಧಾರಿತ ಸಮಾಜ, ಧಾರ್ಮಿಕ ಸಮಾಜ 31, ಊಳಿಗಮಾನ್ಯದ ಸಮಾಜವಾದ 32, ಭಾವಪ್ರಧಾನದ ಸಮಾಜವಾದ 32, ಇದರ ಬಗ್ಗೆ ಮಾರ್ಕ್ಸ್-ಎಂಗೆಲ್ಸರಿಂದ ಟೀಕೆ 30-33, ಇದರ ಹುಟ್ಟಿಗೆ ಕಾರಣ 33, ಇದಕ್ಕೂ ಮಾರ್ಕ್ಸ್‌ವಾದಕ್ಕೂ ಇರುವ ಮೂಲ ವ್ಯತ್ಯಾಸ 38, ಇದರ ಮರುಉದಯ ಮತ್ತು ವಿವಿದ ರೂಪಗಳು: ಕ್ರೈಸ್ತ ಸಮಾಜವಾದ 113, ಧರ್ಮದರ್ಶಿ ಸಮಾಜವಾದ 113, ವಿಕಾಸ ಸಮಾಜವಾದ 113, ಫೇಬಿಯನ್ ಸಮಾಜ

ವಾದ 115, ಗಿಲ್ಡ್ ಸಮಾಜವಾದ 116, ಸಿಂಡಿಕ ಸಮಾಜವಾದ 116, ಎರಡನೇ ಮಹಾಯುದ್ಧಾನಂತರ ಸುಧಾರಕ ಸಮಾಜವಾದದ ಆರ್ಥಿಕನೀತಿ 138-141, ಲೇಬರ್ ಸಮಾಜವಾದ 144-149, ಆಧ್ಯಾತ್ಮಿಕ ಸಮಾಜವಾದ 187, ಧರ್ಮ ಸಮಾಜವಾದ 187; ಗಾಂಧೀ ಸಮಾಜವಾದ 187, ಸರ್ವೋದಯ ಸಮಾಜ ವಾದ 187, 191, 192;

ಸುಧಾರಕ ಸಮಾಜವಾದಿಗಳು—89-91; ಇವರ ವಿವಿಧವಾದಗಳು 112-116; ಮುಖಭಂಗ ಮತ್ತು ನಿಷ್ಕ್ರಿಯೋಜತೆಯ ಪ್ರದರ್ಶನ 117-118, 144-149; ಭಾರತದಲ್ಲಿ 183;

ಸಮಾನತೆ—ಆರ್ಥಿಕ: ಇಂಗ್ಲಿಷ್ ಕ್ರಾಂತಿಯಕಾಲದಲ್ಲಿ 11, ಫ್ರೆಂಚ್ ಕ್ರಾಂತಿಯನಂತರ 15, ಸಮಾಜವಾದೀ ಸಮಾಜದಲ್ಲಿ, ಸಮಾನತೆಗೆ ಇರುವ ಅರ್ಥ 100–102;

ಸಾಮ್ರಾಜ್ಯವಾದ-92, ಇದರ ಸ್ವರೂಪ 93, 180;

ಸಮಾಜೀಕರಣ – ಉತ್ಪಾದನಾಸಾಧನಗಳ: 38, 87, 102, 147, 155 157, 166;

ಸಮಾಜವಾದೀ ಮಾದರಿಯಸಮಾಜ—187, 188;

ಸಂಕಿನಾಯ್ಸ್, ರಾಹುಳ – 184;

ಮ್ಯಾಮ್—17, 14 ;

ಸ್ಟೈಲಿನ್—ಸಮಾನತೆಯ ಬಗ್ಗೆ ಈತ ಇತ್ತ ವಿವರ 100, ಈತನ ಸಂವಿಧಾನ–109, 181;

ಸರ್ವೋದಯ—187, 191, 192;

ಹಿಂಡ್‌ಮನ್—111;

ಹಂಗೇರಿ—112, 132, 133;

ಹಾಲೆಂಡ್—131, 135, 136;

ಹೆಗೆಲ್—43, ಈತನ ಇತಿಹಾಸದೃಷ್ಟಿ ಮತ್ತು ತರ್ಕ 44, 45
ಹಾಬಸನ್—116;
ಹಾಬ್ಸ್—46;
ಹಿಟ್ಲರ್—120, 127, 128, 129;
ಹಿಂದುಳಿದ ದೇಶಗಳು—ಆರ್ಥಿಕವಾಗಿ: ಬಂಡವಾಳಶಾಹಿ ವ್ಯವಸ್ಥೆಯಲ್ಲಿ ಇವುಗಳಪಾತ್ರ 71, ಹಿಂದುಳಿದ ದೇಶಗಳಲ್ಲಿ ಸಮಾಜವಾದೀ ವ್ಯವಸ್ಥೆಯ ಸ್ಥಾಪನೆಯ ಸಾಧ್ಯತೆ 96, 178;
ಹೆಚ್ಚಿಗೇ ಮೌಲ್ಯ—37, 48;
ಹೊದಿಕೆಗಳು—ಇವುಗಳ ಸ್ವರೂಪ ಮತ್ತು ಇವುಗಳ ಬದಲಾವಣೆಗೆ ಕಾರಣ 50–51;
ಹೊಂದಾಣಿಕೆ—ಸ್ವಯಂ: ಬಂಡವಾಳಶಾಹಿ ವ್ಯವಸ್ಥೆಯಲ್ಲಿ 65;
ಹಿಡಿತಗಳು—139;
ಹೋರಾಟ—ವರ್ಗ: 25, 87, 94;
ಹಿಲ್‌ಫರ್‌ಡಿಂಗ್—111;
ಹಾಲ್‌ಬಾಕ್—46;
ಹೆಲ್‌ವೀಹಿಯಸ್—46;